ಬುಧವಾರ, ಮೇ 1, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 121 | ಪುಟ 18

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಸೋಷಿಯಲ್ ಮೀಡಿಯಾಗೆ ವಿರೋಧಿಯಾದ ಆ್ಯಪ್ ಒಂದು ಈಗ ಬಂದಿದೆಯಂತೆ!

ಆಳ-ಅಗಲ
ಕೋವಿಶೀಲ್ಡ್‌ನಿಂದ ಗಂಭೀರ ಅಡ್ಡಪರಿಣಾಮ

ಕಾರ್ಮಿಕರ ದಿನದ ಶುಭಾಶಯಗಳು

ಮೆವಾನಿ ಸಹಾಯಕ ಸೇರಿ ಇಬ್ಬರ ಬಂಧನ 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
74,482	22,604	₹74,600 (ಬೆಂಗಳೂರು)	₹82,900 (ಬೆಂಗಳೂರು)	83.43

ಕ್ಷಮಾಪಣೆಯಲ್ಲಿ ಸುಧಾರಣೆ: ಕೋರ್ಟ್

ನವದೆಹಲಿ (ಪಿಟಿಐ): ಯೋಗ ಗುರು ಬಾಬಾ ರಾಮದೇವ, ಅವರ ಆಪ್ತ ಆಚಾರ್ಯ ಬಾಲಕೃಷ್ಣ ಮತ್ತು ಪತಂಜಲಿ ಆಯುರ್ವೇದ್ ಲಿಮಿಟೆಡ್ ಕಂಪನಿಯು ತಪ್ಪುದಾರಿಗೆ ಎಳೆಯುವ ಜಾಹೀರಾತುಗಳ ಪ್ರಕರಣದಲ್ಲಿ ಪತ್ರಿಕೆಗಳ ಮೂಲಕ ಕೋರಿರುವ ಬಹಿರಂಗ ಕ್ಷಮಾಪಣೆಯಲ್ಲಿ ಎದ್ದು-ಕಾಣುವಂತಹ ಸುಧಾರಣೆ ಇದೆ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಹೇಳಿದೆ. 7

ಚಿನಕುರುಳಿ

ಪ್ರಕಾಶ್ ಶೆಟ್ಟಿ



24 ಗಂಟೆಯೊಳಗೆ ಹಾಜರಾಗಲು ಸೂಚನೆ ●18 ಸಿಬ್ಬಂದಿಯ ತಂಡ ರಚನೆ

ರೇವಣ್ಣ, ಪ್ರಜ್ವಲ್‌ಗೆ ನೋಟಿಸ್

ಪ್ರಜಾವಾಣಿ ವಾರ್ತೆ


ಪ್ರಜ್ವಲ್ ರೇವಣ್ಣ

ಬೆಂಗಳೂರು: ಮನೆ ಕೆಲಸದ ಮಹಿಳೆ ಹಾಗೂ ಅವರ ಮಗಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವ ಪ್ರಕರಣದ ಆರೋಪಿಗಳಾದ ಜೆಡಿಎಸ್ ಶಾಸಕ ಎಚ್‌.ಡಿ. ರೇವಣ್ಣ ಹಾಗೂ ಅವರ ಮಗ, ಹಾಲಿ ಸಂಸದ ಪ್ರಜ್ವಲ್ ಅವರಿಗೆ ಎಸ್‌ಐಟಿ (ವಿಶೇಷ ತನಿಖಾ ತಂಡ) ಅಧಿಕಾರಿಗಳು ಮಂಗಳವಾರ ನೋಟಿಸ್ ನೀಡಿದ್ದು, 24 ಗಂಟೆಯೊಳಗೆ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿದ್ದಾರೆ.

ಹೊಳೆನರಸೀಪುರ ಟೌನ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಎಸ್‌ಐಟಿ ಅಧಿಕಾರಿಗಳು, ಸಂತ್ರಸ್ತೆಯರ ಹೇಳಿಕೆ ದಾಖಲಿಸಿಕೊಂಡಿದ್ದಾರೆ. ಜೊತೆಗೆ, ಪ್ರಕರಣಕ್ಕೆ ಸಂಬಂಧಪಟ್ಟಂತೆ ಹಲವು ಪುರಾವೆಗಳನ್ನು ಕಲೆ ಹಾಕುತ್ತಿದ್ದಾರೆ.

‘ಲೈಂಗಿಕ ದೌರ್ಜನ್ಯದ ಬಗ್ಗೆ ಸಂಬಂಧಪಟ್ಟವರಿಂದ ಹೇಳಿಕೆ ಪಡೆಯಲಾಗುತ್ತಿದೆ. ಹಾಸನ ಎಸ್‌ಪಿ ಹಾಗೂ ಪೊಲೀಸ್ ಸಿಬ್ಬಂದಿಯಿಂದಲೂ ಮಾಹಿತಿ ಪಡೆಯಲಾಗಿದೆ. ಜೊತೆಗೆ, ಪ್ರಕರಣದಲ್ಲಿ ಆರೋಪಿಗಳ ಹೇಳಿಕೆ ಅಗತ್ಯವಿದೆ. ಹೀಗಾಗಿ, ಸಿಆರ್‌ಪಿಸಿ 41 (ಎ) ಅಡಿ ಎಚ್‌.ಡಿ. ರೇವಣ್ಣ ಹಾಗೂ ಪ್ರಜ್ವಲ್‌ಗೆ ನೋಟಿಸ್ ಜಾರಿ ಮಾಡಲಾಗಿದೆ’ ಎಂದು ಎಸ್‌ಐಟಿ ಮೂಲಗಳು ಹೇಳಿವೆ.

> ಪ್ರಜ್ವಲ್ ಪ್ರಕರಣದ ಕುರಿತು ಎಸ್‌ಐಟಿ ವರದಿಯೇ ಅಂತಿಮ. ವರದಿ ಬಂದ ಮೇಲೆ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಲಿದೆ. ಅಲ್ಲಿಯವರೆಗೆ ಪ್ರತಿಕ್ರಿಯಿಸುವುದಿಲ್ಲ
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

> ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಇದೆ. ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಈ ತನಕ ಕ್ರಮ ಏಕೆ ಕೈಗೊಂಡಿಲ್ಲ? ರಾಜ್ಯದ ಕಾನೂನು ಸುವ್ಯವಸ್ಥೆಯಲ್ಲಿ ಕೇಂದ್ರ ಕೈ ಹಾಕಲಾಗದು
> **ಅಮಿತ್ ಶಾ,** ಕೇಂದ್ರ ಗೃಹ ಸಚಿವ

6ನೇ ಪುಟ ನೋಡಿ

ಪ್ರಜ್ವಲ್ ಅಮಾನತು

ಹುಬ್ಬಳ್ಳಿ: ಹಾಸನ ಲೋಕಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಪ್ರಜ್ವಲ್ ರೇವಣ್ಣ ಅವರನ್ನು ಪಕ್ಷದಿಂದ ಅಮಾನತು ಮಾಡಲಾಗಿದೆ.

ಪಕ್ಷದ ಪ್ರಮುಖರ ಸಮಿತಿ ಅಧ್ಯಕ್ಷ ಜಿ.ಟಿ. ದೇವೇಗೌಡ ಮತ್ತು ರಾಜ್ಯ ಅಧ್ಯಕ್ಷ ಎಚ್‌.ಡಿ. ಕುಮಾರಸ್ವಾಮಿ ಉಪಸ್ಥಿತಿಯಲ್ಲಿ ಮಂಗಳವಾರ ನಡೆದ ಸಭೆಯಲ್ಲಿ ಈ ಬಗ್ಗೆ ತೀರ್ಮಾನ ಕೈಗೊಂಡು, ರಾಷ್ಟ್ರೀಯ ಅಧ್ಯಕ್ಷ ಎಚ್‌.ಡಿ. ದೇವೇಗೌಡರಿಗೆ ಶಿಫಾರಸು ಮಾಡ ಲಾಯಿತು. ದೇವೇಗೌಡರ ಅನುಮೋದನೆ ಮೇರೆಗೆ ಅಮಾನತು ಆದೇಶ ಹೊರಬಿದ್ದಿತು.

ಮಹಿಳಾ ಆಯೋಗ ನೋಟಿಸ್

ಪ್ರಜ್ವಲ್ ರೇವಣ್ಣ ನಡೆಸಿರುವ ಲೈಂಗಿಕ ದೌರ್ಜನ್ಯ ಪ್ರಕರಣದ ತನಿಖಾ ಪ್ರಗತಿಯ ಬಗ್ಗೆ 3 ದಿನಗಳಲ್ಲಿ ವರದಿ ಸಲ್ಲಿಸುವಂತೆ ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ ಅವರಿಗೆ ರಾಷ್ಟ್ರೀಯ ಮಹಿಳಾ ಆಯೋಗದ ಅಧ್ಯಕ್ಷೆ ರೇಖಾಶರ್ಮ ಸೂಚಿಸಿದ್ದಾರೆ. ಆರೋಪಿ ಅಪ್ರಾಪ್ತ ವಯಸ್ಕರನ್ನು ಬಳಸಿಕೊಂಡಿರುವ ಬಗ್ಗೆ ಅನುಮಾನಗಳಿದ್ದು, ಈ ಬಗ್ಗೆ ವರದಿ ನೀಡುವಂತೆ ರಾಜ್ಯ ಮಕ್ಕಳ ಹಕ್ಕುಗಳ ಆಯೋಗವು, ಎಸ್‌ಐಟಿಗೆ ಪತ್ರ ಬರೆದಿದೆ.

ಪೆನ್‌ಡ್ರೈವ್ ಬಹಿರಂಗ: ಪರಸ್ಪರ ಆರೋಪ

ಪೆನ್‌ಡ್ರೈವ್ ಬಹಿರಂಗಗೊಳಿಸಿದ ವಿಷಯ ಕಾಂಗ್ರೆಸ್–ಜೆಡಿಎಸ್ ನಾಯಕರ ಮಧ್ಯೆ ವಾಕ್ಸಮರಕ್ಕೆ ಕಾರಣವಾಗಿದೆ. ‘ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿಗಳನ್ನು ಸೋಲಿಸಲೆಂದೇ ಮಹಾನಾಯಕರು ಪೆನ್‌ಡ್ರೈವ್ ಹಂಚಿದ್ದಾರೆ’ ಎಂದು ಡಿ.ಕೆ. ಶಿವಕುಮಾರ್ ಹೆಸರು ಹೇಳದೇ, ಎಚ್‌.ಡಿ. ಕುಮಾರಸ್ವಾಮಿ ಆರೋಪಿಸಿದರು. ‘ಅಂತಹ ಚಿಲ್ಲರೆ ಕೆಲಸ ನಾನು ಮಾಡುವುದಿಲ್ಲ’ ಎಂದು ಪ್ರತಿಕ್ರಿಯಿಸಿರುವ ಶಿವಕುಮಾರ್, ಈ ಬಗ್ಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ, ಕುಮಾರಸ್ವಾಮಿ ಜತೆ ಚರ್ಚಿಸಿದ್ದರಲ್ಲವೇ ಎಂದು ಕೆಣಕಿದ್ದಾರೆ.

ಮೂಲ ವಿಡಿಯೊ ಹೊಂದಿದ್ದರು ಎನ್ನಲಾಗುತ್ತಿರುವ ಪ್ರಜ್ವಲ್ ಅವರ ಕಾರಿನ ಚಾಲಕರಾಗಿದ್ದ ಕಾರ್ತಿಕ್ ಎಂಬವರು, ವಿಡಿಯೊ ಹರಿಬಿಟ್ಟಿದ್ದು, ‘ವಿಡಿಯೊವನ್ನು ಬಿಜೆಪಿ ಮುಖಂಡ ದೇವರಾಜಗೌಡರಿಗೆ ಮಾತ್ರ ಕೊಟ್ಟಿದ್ದೆ. ಕಾಂಗ್ರೆಸ್‌ನವರಿಗೆ ಕೊಟ್ಟಿಲ್ಲ’ ಎಂದು ಹೇಳಿಕೊಂಡಿದ್ದಾರೆ.

ಇದಕ್ಕೆ ಪ್ರತಿಕ್ರಿಯಿಸಿರುವ ದೇವರಾಜೇಗೌಡ, ‘ಹಾಸನದ ಕಾಂಗ್ರೆಸ್ ಅಭ್ಯರ್ಥಿ ಶ್ರೇಯಸ್ ಪಟೇಲ್ ಅವರ ಸಾಮಾಜಿಕ ಜಾಲತಾಣದ ಉಸ್ತುವಾರಿ ಹೊತ್ತಿದ್ದ ಕಾರ್ತಿಕ್, ವಿಡಿಯೊಗಳನ್ನು ಕಾಂಗ್ರೆಸ್‌ನವರಿಗೆ ಕೊಟ್ಟಿದ್ದಾನೆ’ ಎಂದಿದ್ದಾರೆ.

ವಿವರ 05

₹27.46 ಕೋಟಿ ಜಿಎಸ್‌ಟಿ ಬಾಕಿ: ಪತಂಜಲಿಗೆ ನೋಟಿಸ್

ನವದೆಹಲಿ (ಪಿಟಿಐ): ಪತಂಜಲಿ ಫುಡ್ಸ್‌ಗೆ ₹27.46 ಕೋಟಿ ಹೂಡುವಳಿ ತೆರಿಗೆ ಜಮೆ (ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್) ಬಾಕಿಗೆ ಸಂಬಂಧಿಸಿದಂತೆ ಜಿಎಸ್‌ಟಿ ಗುಪ್ತಚರ ಇಲಾಖೆಯು ಷೋಕಾಸ್ ನೋಟಿಸ್ ನೀಡಿದೆ.

ಯೋಗ ಗುರು ರಾಮದೇವ ನೇತೃತ್ವದ ಪತಂಜಲಿ ಆಯುರ್ವೇದ ಸಮೂಹಕ್ಕೆ ಸೇರಿದ ಈ ಸಂಸ್ಥೆಯು ಖಾದ್ಯ ತೈಲ ವ್ಯವಹಾರ ನಡೆಸುತ್ತಿದೆ. ಚಂಡೀಗಢ ವಲಯದ ಜಿಎಸ್‌ಟಿ ಗುಪ್ತಚರ ಮಹಾ ನಿರ್ದೇಶನಾಲಯದಿಂದ ನೋಟಿಸ್ ಸ್ವೀಕರಿಸಲಾಗಿದೆ ಎಂದು ಕಂಪನಿಯು, ಷೇರುಪೇಟೆಗೆ ಮಾಹಿತಿ ನೀಡಿದೆ.

ಬಡ್ಡಿಸಹಿತ ಈ ಬಾಕಿ ತೆರಿಗೆಯನ್ನು ಏಕೆ ವಸೂಲಿ ಮಾಡಬಾರದು ಹಾಗೂ ಈ ಮೊತ್ತಕ್ಕೆ ದಂಡವನ್ನು ಏಕೆ ವಿಧಿಸಬಾರದು ಎಂಬ ಬಗ್ಗೆ ಕಾರಣ ನೀಡುವಂತೆ ನೋಟಿಸ್‌ನಲ್ಲಿ ಪ್ರಸ್ತಾಪಿಸ-ಲಾಗಿದೆ ಎಂದು ತಿಳಿಸಿದೆ.

ಕೇಂದ್ರ ಸರಕು ಮತ್ತು ಸೇವಾ ಕಾಯ್ದೆ 2017ರ ಸೆಕ್ಷನ್ 74, ಉತ್ತರಾಖಂಡ ರಾಜ್ಯ ಸರಕು ಮತ್ತು ಸೇವಾ ಕಾಯ್ದೆ 2017ರ ಸೆಕ್ಷನ್ 20 ಹಾಗೂ ಸಮಗ್ರ ಜಿಎಸ್‌ಟಿ (ಐಜಿಎಸ್‌ಟಿ) ಕಾಯ್ದೆಯಡಿ ಈ ನೋಟಿಸ್ ನೀಡಲಾಗಿದೆ.

‘ನೋಟಿಸ್‌ಗೆ ಸಂಬಂಧಿಸಿದಂತೆ ಸಕ್ಷಮ ಪ್ರಾಧಿಕಾರದ ಮುಂದೆ ಸೂಕ್ತ ವಿವರಣೆಯನ್ನು ಸಲ್ಲಿಸಲಾಗುವುದು’ ಎಂದು ಪತಂಜಲಿ ಫುಡ್ಸ್ ತಿಳಿಸಿದೆ.

‘ಚುನಾವಣೆ ಸಮಯದಲ್ಲೇಕೆ ಕೇಜ್ರಿವಾಲ್ ಬಂಧನ?’

ನವದೆಹಲಿ: ಸಾರ್ವತ್ರಿಕ ಚುನಾವಣೆಗೆ ಮುಂಚೆ ತಮ್ಮನ್ನು ಬಂಧಿಸಿರುವುದು ಏಕೆ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಎತ್ತಿರುವ ಪ್ರಶ್ನೆಗೆ ಉತ್ತರ ನೀಡುವಂತೆ ಜಾರಿ ನಿರ್ದೇಶನಾಲಯಕ್ಕೆ ಸುಪ್ರೀಂ ಕೋರ್ಟ್ ಮಂಗಳವಾರ ಸೂಚಿಸಿದೆ.

‘ಪ್ರತಿ ವ್ಯಕ್ತಿಯ ಸ್ವಾತಂತ್ರ್ಯ ಮತ್ತು ಬದುಕು ಬಹು ಮುಖ್ಯ’ ಎಂದು ಹೇಳಿದ ಸುಪ್ರೀಂ ಕೋರ್ಟ್, ಮೇ 3ರ ಒಳಗಾಗಿ ಪ್ರತಿಕ್ರಿಯೆ ಸಲ್ಲಿಸುವಂತೆ ಇ.ಡಿ ಪರ ಹಾಜರಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್‌.ವಿ.ರಾಜು ಅವರಿಗೆ ಸೂಚಿಸಿತು. ‘ಕೇಜ್ರಿವಾಲ್ ಅವರನ್ನು ಮಾರ್ಚ್ 21ರಂದು ಬಂಧಿಸಲಾಗಿದೆ. ವಿಶೇಷವಾಗಿ, ಕೇಜ್ರಿವಾಲ್ ಅವರನ್ನು ಬಂಧಿಸಿರುವ ಸಮಯ ಕುರಿತು ಅವರ ಪರ ವಕೀಲ ಅಭಿಷೇಕ್ ಸಿಂಘ್ವಿ ತಕರಾರು ಎತ್ತಿದ್ದಾರೆ. ಈ ಬಗ್ಗೆ ವಿವರಣೆ ನೀಡಿ’ ಎಂದು ಎಸ್‌.ವಿ.ರಾಜು ಅವರಿಗೆ ನ್ಯಾಯಪೀಠ ಸೂಚಿಸಿತು.

7ನೇ ಪುಟ ನೋಡಿ

JOB OPPORTUNITIES

Teachers/ Professors

NCIPS
SHAPING MINDS FOR THE REAL WORLD
NEW CAMBRIDGE INTERNATIONAL PUBLIC SCHOOL
CA Site No. 6 (P), WDC Road, II Stage, Mahalakshmipuramk Bangalore-450086
Email ID : info@ncips.in
Contact: 8660136247/ 9845087439
Required Female P.E Teacher
(B.PEd/M.PEd) With Minimum 5 years Experience
- ★ Social teacher with B.Ed to teach CBSE Min 5 year Exp. handling High School
- ★ Admission Counselor with any Degree & fluent in English
- ★ Shadow teacher for Nursery
- ★ Day Care Teacher

SREE SARASWATHI VIDYA MANDIRA
No.9, Vani Vilas Road, VV Puram, Bangalore-04
Ph:080 41277700/ 41324223
Website: www.ssvm.ac.in
Walk-in Interview on
6th May 2024 (Mon)
betn 9.30 am & 2 pm
REQUIRE qualified, trained & experienced **TEACHERS** *for*
CBSE
1. ALL SUBJECTS & P.E. TEACHERS for High School
STATE
1. ALL SUBJECTS & P.E. TEACHERS for High School
For SOMANAHALLI(State Board)
Maths, Physics, Chemistry Biology, Computer Science, Hindi, P.E. Teacher & Office Clerk

HOLY Angel's High School, Hampinagar, Vijayanagar, Bengaluru-560104. Phone: 23404465/23202042 holyangels.highschoolr pclayout@gmail.com Requires Experienced Trained Teachers for the Academic year 2024-2025 for Nursery, Primary, High-School, Music Teacher & P.E.Teacher. STATE & ICSE. Qualification: B.A/B.Sc.,B.Ed. M.A/M.Sc.,M.Ed, N.T.T. CP.Ed. Only English medium candidates need to apply.

GOLDEN VALLEY SCHOOL Requires Experienced TEACHERS for all Subjects (Pre-Kg To 10th Std) Qualification: Graduates/ Post Graduates D.Ed, B.Ed, M.Ed. Offering Attractive Salary. Walk-in from 02/05/2024. Address: Srichakranagara Andrahalli Bangalore-91 9620456205, 9742707779

Om Sai Ram

NEW BALDWIN GROUP OF INSTITUTIONS
* BANASWADI * MANDUR * T.C PALYA * ANEKAL * ANEKAL TOWN * CHANDAPUR * ATTIBELE
NEW BRANCHES AT: *HSR & *(KODATIGATE) SARJAPURA
TEACHERS / LECTURERS FOUNDATION COURSE / NEET
Candidates required having experience in training Physics, Chemistry, Biology, Maths for Grade 11th & 12th PUC / CBSE & Teachers for Foundation Course in a reputed Institutions.
Remuneration: at par with the institutional standard. With additional facilities like food & transport in the gross package.
APPLY IMMEDIATELY
Applying candidates should clearly specify the Position Applied for, branch Opted with updated resume
Contact: 98860 84799 / 78990 83463
hrcentral.nbgi@gmail.com www.newbaldwininstitutions.org

SHREE SHRINIVAS VIDHYA VIHAR
Address: SURVEY NO 699/2, Gr- SONKHEDI, INDORE ROAD, KANNOD
CBSE School Need qualified and dedicated teachers interested to relocate immediately with in a week
Primary and pre primary we LKG and UKG teachers (Nursery to 2nd) English, Maths, Science, Social Science. GK/ Life Skill program Computer Teacher PE Teacher specialisation (Basket Ball) One South Indian Veg Cook for staff.
Contact: **9826877709**
Mail ID: admin@ssvv.co.in

MOUNT CARMEL PU COLLEGE, #58, Palace Road, Bengaluru-52. mails@mcpuc.edu.in requires LIBRARIAN, Ladies only, MLISc LECTURERS for all SUBJECTS of SCIENCE, COMMERCE, HUMANITIES, all LANGUAGES and FRENCH and PHYSICAL EDUCATION B.P.Ed and M.P.Ed. Apply before 10/05/2024

KARNATAKA REDDYJANA SANGHA®
KRJS GROUP OF INSTITUTIONS
REQUIRES
VEMANA INSTITUTE OF TECHNOLOGY
i) ASSISTANT PROFESSORS:- CSE -1, ECE - 5, ISE- 5, AI&ML -3, CIVIL - 2, Data Science - 3.
ii) TECHNICAL STAFF:- CSE - 2, ECE -3, ISE - 2, AI&ML -1, Data Science - 1. Basic Science - 1, Director to Placement Office -1, System Engineer -1, Instructor-1, PA to Principal-1, FDC - 4, Attenders - 4, Male Warden-1, Female Warden -1.
RJS & INSTITUTE OF MANAGEMENT STUDIES
Lab Instructor -1, Library Assistant -1, Lift Operator -1, Male Attender -1
RJS FIRST GRADE COLLEGE
Computer Science Lecturer -1, Maths Lecturer -1.
RJS EVENING COLLEGE
Principal -1
DBM & RJS SCHOOL
Principal -1, Hindi Teacher -1, Primary School Teacher- 2 Pre-Primary - 1 and PT Master -1
RJS SCHOOL, DODDANEKKUNDI
Nursery Teacher -1
KRJS HEAD OFFICE
Civil Engineers -2, Project Engineer -1, Accounts Officer -1, Admin Manager -1, Administrative Officer -1, Asst. Manager -1 (Legal work) & Stenographer -1 (Both Kannada and English).
Note: Age limit is below 60 years for Non-Teaching Staff.
Salary as per KRJS / AICTE norms
Apply within 10 days to: The General Secretary, KRJS for more details:
E-Mail : krjsest@gmail.com
website: www.reddyjanasangha.org.
Contact : 9945450345 or 080 - 25534194

WANTED ENGLISH Medium Trained Graduates for High School to teach English/ Social and lady graduates for Primary to teach Maths/ Science/ Hindi. Age limit- not above 40 years. Salary with P.F. and E.S.I facilities. Contact in person- Secretary, Deccan Educational Society(R), No. 95, 3rd cross, Srirampuram, Bengaluru-21 (Near Sampige Theatre, Malleswaram)

WANTED LADY Teachers for Primary & High School Apply Immediately Little Flower High School No.47, 2nd Cross, Saibaba Nagar, Sriramapuram, Bangalore-21 Contact: 8867010188/ 080- 23126330

WANTED EXPERIENCED Teachers for Nursery, Primary and High School (Science). Vijayanagar, Bangalore. Contact: 8431812577/ 080-23306496.

MORNING STAR School Ramachandrapuram, Rajajinagar Entrance Bangalore Require TCH/ D.Ed, BA/ MA. B.Ed (English, Social) B.Sc/ MSc, B.Ed (Science, Mathematics) Lady Teachers Contact: 9845018480

SESHADRIPURAM INSTITUTIONS
27, Nagappa Street, Seshadripuram Bengaluru-560 020. Phone: 22955350
Website: www.set.edu.in E-mail : info@set.edu.in
Require
Principal / Teaching & Non-teaching Staff for Seshadripuram English School (State Board)
CA - 04, Melekote-Veerasagara Layout Gangasandra Main Road, Tumakuru.

PRINCIPAL
Eligibility: Trained Graduate / Post Graduate with B.Ed. Dynamic and result-oriented persons with at least 15 years teaching & administrative experience in a reputed school.

PRIMARY TEACHERS & HIGH SCHOOL TEACHERS
Kannada * English * Social * Hindi * Sanskrit B.A./M.A. B. Ed. with at least one year experience
Mathematics * Science B. Sc./M. Sc. B. Ed. with at least one year experience
Computer Science BCA / MCA / 3 years Diploma in Computer Science / B.Sc. (Cs.) / M.Sc. Computer Science / PGDCA with at least one year experience
Drawing * Art & Craft Bachelor Degree in Fine Arts / Diploma in Fine Arts with at least one year experience
Physical Education Teacher B.P.Ed. with one year experience

LIBRARY ASSISTANT
Diploma Course offered by the Board of Technical Education Minimum 1 year working experience in an Academic Library. Basic knowledge of using computer in Library working system.

MONTESSORI TEACHERS
PUC/Degree with NTT or MTT with at least one year experience

ACCOUNTANT
B. Com with at least 2 years experience with Computer knowledge and Tally

COMPUTER PROGRAMMER
BCA/MCA/3 years Diploma in Computer Science / B.Sc. (Cs.) / M.Sc. Computer Science / PGDCA with at least one year Experience

OFFICE ASSISTANT
Graduate with at least 2 years experience with Computer knowledge

WALK-IN-INTERVIEW on Tuesday, 7th May 2024 @ 9.30 a. m.
Venue: Seshadripuram English School, CA – 04, Melekote-Veerasagara Layout Gangasandra Main Road, Tumakuru.
Eligible candidates should bring handwritten application along with resume, photos & copies of testimonials at the time of Interview.

N. R. Pandith Aradhya, President
Dr. Wooday P. Krishna, Honorary General Secretary

"WANTED PREP & Primary Teachers for a School near K.R.Puram & Whitefield. Call or WhatsApp Resume: 70222 55677"

REQUIRED EXPERIENCED B.Ed Teachers for Social/ Hindi/ NTT & Principal/ Vice Principal minimum 5 years Experience. Walk-in Interviews on 03/05/2024, 9:00 to 3:00. ESI+PF Available. Abhay School, Bannerghatta Road. Contact: 9448344014/ 8088837317.

WE ARE HIRING Hockey COACHES for basic training of hockey to children of government schools in the city and outskirts of Bangalore. Competitive pay. Ct:8310967180 mail: reachus@yesforhockey.com A 'YES FOR HOCKEY! INITIATIVE'

GIET
Ghousia Polytechnic for Women Hostel
Near Dairy Circle, DRC Post, Hosur Road, Bangalore –560029
WANTED
RESIDENTIAL WOMEN HOSTEL WARDEN
With Minimum 3 years of Experience in the same field
Please mail your resume to admissionghousia@gmail.com
Contact Mobile No. **9845954481**

WANTED OFFICE DRIVER & OFFICE ASSISTANTS/ Helper (Male) Bommanahalli (Bangalore) Ph: 9980140661/ 08025631755 Mail: starsilks@gmail.com

WANTED EXPERIENCED top management executives,vliasoning persons for executing residential projects in Bangalore De Royale Developers.Ph: 9739990666. Email: deroyaleventures365@gmail.com

Accounts & Finance

SENIOR ACCOUNTANT Having Minimum 10yrs Experience Required For A Reputed Construction Company`at Vijayabank Layout off-Bannerghatta Road Call:9880594643

REQUIRED B.COM Graduate, 5 years experience with IT, GST filing and English drafting knowledge. mail: pgiriraju@yahoo.com. Mobile:9448083424

Marketing & Sales

REQUIRED SALES EXECUTIVES/ OFFICERS- Age 25- 35 years. Qualification: PUC/ DEGREE onwards. Experience: 3- 5 years in electrical for business. Required for Project sales- salary commensurate with experience and skill. 2 wheeler a must. Contact: 9743701700.

Multiple Vacancy

REQUIRED GAS Plants Karnataka male/female (8th tograduate) Supervisor, xman, Driver, Dataentry, Gard Salary 25k above +All facility shivamgasservises07@gmail.com, 7052138505, 8112322104

Part-Time Jobs

PART TIME/FULL Time job Opportunity for Retired/Housewives from Reputed MNC in Bangalore. Call: 9206187228, 9916485500

TOP CENTRAL Govt Licensed Required Retd/ Vrs, Home Makers Age 35 To 70 Yrs Part Time Job Earn 35k To 50k: 9886641282/ 7019215243

Wanted

REQUIRED SHOWROOM & Field Sales Executive For Swastik Ceramics Co Jayanagar 5th Block Contact:9741040290

BUSINESS

Business to Business

Business

WE LOOKING for investment to our Mosquito Repellent and Spray project in Bangalore. Good returns on investment assured. we consider as cofounder of the company. Contact for discussion : 9353420785 / 6362731681 (Whatapp)

Engg/ Production Technical

PEENYA BASED MSME Manufacturing ELECTRICAL CONTROL PANELS requires ELECTRICAL ENGINEERS, ELECTRICIANS, FITTERS and HELPERS. Contact: 8548054584/ nirmalams153@gmail.com

General

EMPLOYEE NEEDED! Business Development Office for property developer company No investment, age above 30 years experienced required. Earning Rs. 50,000/- per month Retired persons are eligible. Contact:- 9845334751.


"TEACHING IS NOT MY WORK. IT'S MY PASSION"
Sairam INSTITUTIONS
WE ARE LOOKING FOR YOU!
PROFESSORS | ASSOCIATE PROFESSORS | ASSISTANT PROFESSORS
CSE / ECE / EEE / MECH / ISE / AI & ML
CSE (IoT, Cyber Security including Blockchain Technology)

ASSISTANT PROFESSOR : PHYSICS / KANNADA
M.Sc., / M.A. First class with Teaching Experience

LAB INSTRUCTORS : EEE / ISE / AI & ML
Diploma / B.E. with relevant experience

FOREMAN : EEE / MECH
M.E. / M.Tech with relevant experience

PLACEMENT OFFICER
M.E. / M.Tech First Class & MBA (HR) with relevant experience

ASSISTANT PLACEMENT OFFICER
B.E. / B.Tech First Class & MBA (HR) with relevant experience

PHYSICAL EDUCATION DIRECTOR & ASSISTANT PHYSICAL EDUCATION DIRECTOR
B.P.Ed. / M.P.Ed. with relevant Experience.
Yoga specialists will be preferred.

GRAPHIC DESIGNER
Professional Designer with Basic Degree or Certification to Create Digital Creatives. Candidates with Video Editing Skills will be preferred.

PAY SCALE : AICTE Scale of Pay / State Govt. norms

Sri **SAIRAM COLLEGE OF ENGINEERING**
Sai Leo Nagar, Guddanahalli
ANEKAL, BENGALURU

Eligible Candidates may apply with a week at
http://careers.sairamce.edu.in

Sairam RAISE — Inspiring PEOPLE | Sairam EOMS — Improving PROCESS | Sairam SDG ACTION — Instilling PURPOSE

Dr. B. Shadaksharappa, Principal
Dr. Sai Prakash LeoMuthu, Chairman & CEO

ST LAWRENCE High School, Avalahalli, Mysore Road (Near Sattelight busstop/ Gririnagar), Bangalore26. Wanted High School SCIENCE and MATHS. Salary 27-35K PHYSICAL EDUCATION Primary Lady Salary 20- 25K Walk-in 02.05.2024 between 10.30- 3 contact 97401-54959/ 80738-57671

SHREYA'S PUBLIC SCHOOL Near JP.Nagar Metro Station Bangalore-78 TEACHERS WANTED for Higher Primary and High School who are capable of Teaching English, Science, Social, Computer and Physical Education- 080-42054347/ 9901403325

WANTED FOR Management and Science College in Kanakapura Road. Principal 5- 8 years experience with PhD Faculties -Commerce, Computers, Accountant- 5 years, PE teachers 5 years, Civil Engineer 5- 10 Years with experience in Building large Layouts. Contact: 9845900062 or email: rmsinstitution@gmail.com

WANTED MONTESSORI Teachers and Science for PMS High School Bettahalasur near Yelahanka Contact:- 9632329017, 9880113895

REQUIRED TRAINED & Exp Lady Teachers For Nursery,Primary & High School Teachers for all Subjects (P.E. Male) Hebbal, Kempapura. Contact: 9008981637 svsres21@gmail.com

WANTED HEADMISTRESS with Maths/Science Qualifications, Teachers for all Subjects. PT/Yoga. 3rd Phase,J.P.Nagar. 9845042249/ 26590773.


MORE Classifieds Ads on Subsequent Pages

ಕ್ಲಾಸಿಫೈಡ್ಸ್
ADMISSION CORNER

BHARATH EDUCATION SOCIETY®
B.E.S. Pre-University College of Science, Commerce & Arts
27, 16th Main Road, Jayanagar 4th Block, Bengaluru-560011
Email: principalas018@gmail.com
Website: www.besinstitutions.edu.in
✆ 080-26637018 / 99459 75240


Sri S.T. Somashekhar
Hon. President, Bharath Education Society
MLA, Yashwantpur Constituency,
Former Minister, Govt of Karnataka

Free Integrated Course NEET, JEE, K-CET, COMED-K
Affordable Fee for I & II PUC Science


Sri B.L. Lakkegowda
Founder
B.E.S Institutions

COURSES OFFERED FOR : 2024-25
PUC — PCMB | PCMC | HEBA | SEBA | CEBA | HEPS
Languages Offered: English, Kannada, Hindi & Sanskrit


B.E.S. EVENING P.U. COLLEGE OF COMMERCE & ARTS
✆ 080-26533736 / 98861 82019 Email: beseveningpucollege@gmail.com
PUC — HEBA | HEPS

Sri Nirmal Kumar K.R.	Prof N.S. Vijaya	Sri M. Krishna Das	Sri H.C. Thammanna Gowda	Sri Vaijanath K.
President	Vice President	Secretary	Principal	Principal
Bharath Education Society	Bharath Education Society	Bharath Education Society	BES Day PU College	BES Evening PU College

HOSTEL FACILITY AVAILABLE FOR GIRLS

BES-24504

BHARATH EDUCATION SOCIETY®
27, 16th Main Road, Jayanagar 4th Block, Bengaluru-560011


Sri S.T. Somashekhar
Hon. President, Bharath Education Society
MLA, Yashwantpur Constituency,
Former Minister, Govt of Karnataka

SHAPE YOUR CAREER WITH INTEGRATED SKILL ENHANCEMENT PROGRAMMES


Sri B.L. Lakkegowda
Founder
B.E.S Institutions

B.E.S. INSTITUTE OF TECHNOLOGY
Recognised by Govt. of Karnataka & Approved by AICTE, New Delhi
16th Main, 4th Block, Jayanagar, Bangalore - 560 011
Email: principal@besit.edu.in Website: www.besit.edu.in
✆ 080-26651497 / 90087 74748

ADMISSIONS OPEN FOR 2024-25
1. Electronics & Communication Engg
2. Computer Science Engg
3. Civil Engg (General)
4. Mechanical Engg (General)

Eligibility: SSLC: 3 Years Course ♦ PUC (Science) or I.T.I: 2 Years.
HOSTEL FACILITY AVAILABLE FOR GIRLS

Sri..Nirmal Kumar K.R.	Prof N.S. Vijaya	Sri M. Krishna Das	Sri Vinay B.
President	Vice President	Secretary	Principal
Bharath Education Society	Bharath Education Society	Bharath Education Society	BES Polytechnic

BES-24515

V.V.N. DEGREE COLLEGE
(A Unit of Vasavi Vidyanikethan Trust)
Permanently Affiliated to Bengaluru City University
NAAC Accredited B+ Grade with 2.75 CGPA
Website :vvndegreecollege.in
ADMISSIONS OPEN
B.COM & BCA
Exclusively for GIRLS
Our Achievers


PRAJWALA KULKARNI J 96%


VINDHYA V 95.5%


YASHASHWINI R 95.5%


DIVYA S 95%

28 Students Secured Above 90% & 98 Students Secured First Class
Scholarship for Meritorious Students
For Details Contact: Vasavi College
9945446185/7411093009
3, Vani Vilas Road, V.V. Puram, Bengaluru-04

ಕಾಂತೇಶ್ ದಾವೆ: ಅಶ್ಲೀಲ ವಿಡಿಯೊ ಪ್ರಸಾರಕ್ಕೆ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ ಅವರ ಪುತ್ರ ಕೆ.ಇ. ಕಾಂತೇಶ್ ಅವರಿಗೆ ಸಂಬಂಧಿಸಿದ ಅಶ್ಲೀಲ ಫೋಟೊ, ವಿಡಿಯೊ, ಸ್ಕ್ರೀನ್ ಶಾಟ್ ಅಥವಾ ಆಡಿಯೊ ಪ್ರಸಾರ, ಪ್ರಕಟಣೆ ವಿರುದ್ಧ ಮಾಧ್ಯಮಗಳಿಗೆ ನಿರ್ಬಂಧ ಹೇರಿ ನಗರದ 6ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ಕೋರ್ಟ್ ಮಧ್ಯಂತರ ನಿರ್ಬಂಧಕಾಜ್ಞೆ ಮಾಡಿದೆ.

ಕಾಂತೇಶ್ ಸಲ್ಲಿಸಿದ್ದ ಅಸಲು ದಾವೆ ವಿಚಾರಣೆ ನಡೆಸಿದ ನ್ಯಾಯಾಲಯ ಇದೇ 27ರಂದು ಈ ಆದೇಶ ಹೊರಡಿಸಿದೆ.

ದಾವೆಯಲ್ಲಿ ಪ್ರತಿವಾದಿಗಳಾಗಿರುವ ವಿವಿಧ ಮಾಧ್ಯಮಗಳಿಗೆ ಸಮನ್ಸ್ ಜಾರಿಗೊಳಿಸಲು ಆದೇಶಿಸಲಾಗಿದ್ದು, ವಿಚಾರಣೆಯನ್ನು 2024ರ ಆಗಸ್ಟ್ 3ಕ್ಕೆ ಮುಂದೂಡಲಾಗಿದೆ.

ದಾವೆಯಲ್ಲಿ ಏನಿದೆ?: 'ಲೋಕಸಭೆ ಚುನಾವಣೆ ಸಂದರ್ಭದಲ್ಲಿ ಕೆಲ ಮಾಧ್ಯಮಗಳು ನನ್ನ ಘನತೆ, ಗೌರವ ಮತ್ತು ಮಾನಹಾನಿ ಮಾಡಲು ಪ್ರಯತ್ನಿಸುತ್ತಿವೆ. ನನ್ನ ನಕಲು ಮಾಡಿದ ಅಶ್ಲೀಲ ಫೋಟೊ, ವಿಡಿಯೊ ಮತ್ತು ಆಡಿಯೊಗಳನ್ನು ಪ್ರಸಾರ ಮಾಡಲು ಯತ್ನಿಸುತ್ತಿವೆ.

ಒಂದೊಮ್ಮೆ ಅಂತಹ ಆಕ್ಷೇಪಾರ್ಹ ವಿಡಿಯೊ, ಫೋಟೊಗಳು ಪ್ರಸಾರಗೊಂಡರೆ ಅಥವಾ ಪ್ರಕಟವಾದರೆ ನನ್ನ ಮಾನಹಾನಿ ಯಾಗುತ್ತದೆ. ಆದ್ದರಿಂದ, ಮಾಧ್ಯಮಗಳ ವಿರುದ್ಧ ಮಧ್ಯಂತರ ನಿರ್ಬಂಧಕಾಜ್ಞೆ ಆದೇಶ ನೀಡಬೇಕು' ಎಂದು ಕಾಂತೇಶ್ ದಾವೆಯಲ್ಲಿ ಕೋರಿದ್ದಾರೆ.

ನೀತಿ ಸಂಹಿತೆ, ಬಿಸಿಲ ಬೇಗೆಯಿಂದಾಗಿ ಜನಪದ ಸೇರಿ ವಿವಿಧ ಕಲಾವಿದರಿಗೆ ಸಿಗದ ಕಾರ್ಯಕ್ರಮ

'ಲಯ' ತಪ್ಪಿದ ಕಲಾವಿದರ ಬದುಕು

• ವರುಣ ಹೆಗಡೆ

ಬೆಂಗಳೂರು: ನಗರದಲ್ಲಿ ಅತಿಯಾದ ಉಷ್ಣಾಂಶ ಹಾಗೂ ಲೋಕಸಭೆ ಚುನಾವಣೆ ನೀತಿ ಸಂಹಿತೆಯಿಂದಾಗಿ ಸಾಂಸ್ಕೃತಿಕ ಸಂಘ–ಸಂಸ್ಥೆಗಳು ಕಾರ್ಯಕ್ರಮಗಳ ಆಯೋಜನೆಗೆ ನಿರಾಸಕ್ತಿ ತಾಳಿವೆ. ಇದರಿಂದಾಗಿ ಕಲೆಯನ್ನೇ ನಂಬಿಕೊಂಡಿದ್ದವರ ಬದುಕು 'ಲಯ' ತಪ್ಪಿದಂತಾಗಿದೆ.

ಏಪ್ರಿಲ್–ಮೇ ತಿಂಗಳಲ್ಲಿ ಮಕ್ಕಳಿಗೆ ಬೇಸಿಗೆ ರಜೆ ಇರುವುದರಿಂದ ಪ್ರತಿ ವರ್ಷ ಈ ಅವಧಿಯಲ್ಲಿ ತಿಂಗಳು ಪೂರ್ತಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿದ್ದವು. ಆದರೆ, ಈ ಬಾರಿ ಈ ಎರಡೂ ತಿಂಗಳು ನೀತಿ ಸಂಹಿತೆ ಜಾರಿಯಲ್ಲಿ ಇರುವುದರಿಂದ, ಬಿಸಿಲಿನ ತಾಪವೂ ಹೆಚ್ಚಾಗಿರುವುದರಿಂದ ಸಂಘ–ಸಂಸ್ಥೆಗಳು ದೊಡ್ಡ ಮಟ್ಟದ ಕಾರ್ಯಕ್ರಮಗಳಿಗೆ ಆಸಕ್ತಿ ತೋರುತ್ತಿಲ್ಲ.

ಇದರಿಂದ ಜನಪದ ಸೇರಿ ವಿವಿಧ ಕಲಾವಿದರಿಗೆ ಕಳೆದೊಂದು ತಿಂಗಳಿನಿಂದ ಅಷ್ಟಾಗಿ ಅವಕಾಶಗಳು ಸಿಗದಂತಾಗಿದೆ. ಕಲಾವಿದರು ವ್ಯಾಪಾರ ಸೇರಿದಂತೆ ವಿವಿಧ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದಾರೆ.

ನೀತಿ ಸಂಹಿತೆಯಿಂದಾಗಿ ಜಯಂತಿಗಳಂತಹ ವಾರ್ಷಿಕ ಕಾರ್ಯಕ್ರಮಗಳನ್ನೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸರಳವಾಗಿ ನಡೆಸುತ್ತಿದೆ. ಏಪ್ರಿಲ್ ತಿಂಗಳಲ್ಲಿ ದೇವರ ದಾಸಿಮಯ್ಯ ಜಯಂತಿ, ಭಗವಾನ್ ಮಹಾವೀರ ಜಯಂತಿ, ಅಕ್ಕಮಹಾದೇವಿ ಜಯಂತಿ, ಮೇ ತಿಂಗಳಲ್ಲಿ ಬಸವ ಜಯಂತಿ, ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಜಯಂತಿ, ಶಂಕರಾಚಾರ್ಯ ಜಯಂತಿ ಹಾಗೂ ಭಗೀರಥ ಜಯಂತಿ ನಿಗದಿಯಾಗದ್ದವು. ನೀತಿ ಸಂಹಿತೆ ಜಾರಿಯಲ್ಲಿ ಇರುವುದರಿಂದ ಜಯಂತಿಗಳನ್ನು ಸರಳ ಹಾಗೂ ಸಾಂಕೇತಿಕವಾಗಿ ಆಚರಿಸಲಾಗುತ್ತಿದೆ. ಇದರಿಂದಾಗಿ ಕಲಾವಿದರಿಗೆ ಅವಕಾಶಗಳು ಇಲ್ಲದಂತಾಗಿವೆ.



ಕಾರ್ಯಕ್ರಮವೊಂದರಲ್ಲಿ ವೀರಗಾಸೆ ಕಲಾವಿದರು –ಸಾಂಕೇತಿಕ ಚಿತ್ರ

ಕಾರ್ಯಕ್ರಮಕ್ಕಿಲ್ಲ ಅನುದಾನ: ಸಂಸ್ಕೃತಿ ಇಲಾಖೆ ಈ ಬಾರಿ ಧನಸಹಾಯವನ್ನು ಸಂಘ–ಸಂಸ್ಥೆಗಳಿಗೆ ಕಂತು ರೂಪದಲ್ಲಿ ಬಿಡುಗಡೆ ಮಾಡಿತ್ತು. ಪರಿಶಿಷ್ಟ ಜಾತಿ ಉಪಯೋಜನೆಯಡಿ ಆಯ್ಕೆಯಾದ ಸಂಘ–ಸಂಸ್ಥೆಗಳಿಗೆ ಶೇ 31ರಷ್ಟು, ಪರಿಶಿಷ್ಟ ಪಂಗಡ ಉಪಯೋಜನೆಯಡಿ ಆಯ್ಕೆಯಾದವರಿಗೆ ಶೇ 33ರಷ್ಟು ಹಾಗೂ ಸಾಮಾನ್ಯ ವರ್ಗದಲ್ಲಿ ಆಯ್ಕೆ ಆದವರಿಗೆ ಶೇ 40ರಷ್ಟು ಅನುದಾನ ಒದಗಿಸಿತ್ತು. ಇನ್ನುಳಿದ ಹಣ ಯಾವಾಗ ಬರುತ್ತದೆ ಎಂಬ ಖಚಿತತೆ ಇಲ್ಲವಾದ್ದರಿಂದ ಸಂಘ–ಸಂಸ್ಥೆಗಳೂ ಕಲಾವಿದರನ್ನು ಆಹ್ವಾನಿಸಿ, ಕಾರ್ಯಕ್ರಮಗಳನ್ನು ನೀಡಲು ಮುಂದಾಗುತ್ತಿಲ್ಲ.

ಬೆಳಿಗ್ಗೆ, ಸಂಜೆ ಮಾತ್ರ ಪ್ರದರ್ಶನ

ನಗರದಲ್ಲಿ ಏಪ್ರಿಲ್ ತಿಂಗಳ ಬಹುತೇಕ ದಿನಗಳು ಗರಿಷ್ಠ ಉಷ್ಣಾಂಶ 37 ಡಿಗ್ರಿ ಸೆಲ್ಸಿಯಸ್‌ನಷ್ಟು ವರದಿಯಾಗಿದೆ. ನಿರೀಕ್ಷಿತ ಮಳೆ ಬಾರದಿದ್ದರಿಂದ ದಿನದ ಬಹುತೇಕ ಅವಧಿ ಉಷ್ಣ ವಾತಾವರಣದಿಂದ ಕೂಡಿದ್ದು, ಬಿಸಿ ಗಾಳಿ ಕಾಣಿಸಿಕೊಳ್ಳುತ್ತಿದೆ. ಮಧ್ಯಾಹ್ನದ ಅವಧಿಯಲ್ಲಿ ಉಷ್ಣಾಂಶ 38 ಡಿಗ್ರಿ ಸೆಲ್ಸಿಯಸ್ ದಾಟುತ್ತಿದೆ. ಇದರಿಂದಾಗಿ ಡೊಳ್ಳು ಕುಣಿತ, ಪಟ ಕುಣಿತ, ಗೊರವರ ಕುಣಿತ, ಪೂಜಾ ಕುಣಿತದಂತಹ ಜನಪದ ಕಲಾವಿದರು ಬೆಳಿಗ್ಗೆ ಹಾಗೂ ಸಂಜೆಯ ಅವಧಿಯಲ್ಲಿ ಮಾತ್ರ ಹೊರಾಂಗಣ ಪ್ರದರ್ಶನಕ್ಕೆ ಸಮ್ಮತಿ ಸೂಚಿಸುತ್ತಿದ್ದಾರೆ. ಮಧ್ಯಾಹ್ನದ ಅವಧಿಯಲ್ಲಿ ಉಷ್ಣಾಂಶ ಅಧಿಕ ಇರುವುದರಿಂದ ಬಹಿರಂಗ ಕಾರ್ಯಕ್ರಮಗಳಿಗೆ ಕಲಾವಿದರು ಹಿಂದೇಟು ಹಾಕುತ್ತಿದ್ದಾರೆ.

ಈ ವರ್ಷ ಬಿಸಿಲು ಜಾಸ್ತಿ. ಮಧ್ಯಾಹ್ನದ ಅವಧಿಯಲ್ಲಿ ಕಾರ್ಯಕ್ರಮ ನೀಡಲು ಆಗುತ್ತಿಲ್ಲ. ಚುನಾವಣೆ ನೀತಿ ಸಂಹಿತೆ ಕಾರಣ ಕಾರ್ಯಕ್ರಮಗಳೂ ಬರುತ್ತಿಲ್ಲ

ಸಂಕೀರ್ತ,
ಹುಲಿವೇಷ ಕಲಾವಿದ

ಪ್ರತಿ ವರ್ಷ ಈ ಅವಧಿಯಲ್ಲಿ ತಿಂಗಳಿಗೆ ಕನಿಷ್ಠ ಹತ್ತು ಕಾರ್ಯಕ್ರಮಗಳಾದರೂ ಸಿಗುತ್ತಿದ್ದವು. ಈ ವರ್ಷ ಅಷ್ಟಾಗಿ ಸಿಗುತ್ತಿಲ್ಲ. ಬಿಸಿಲು, ನೀತಿ ಸಂಹಿತೆಯಿಂದ ಸಮಸ್ಯೆಯಾಗಿದೆ

ಮಲ್ಲೇಶ್ ಎಂ.,
ಗೊರವರ ಕುಣಿತ ಕಲಾವಿದ

'ಕಾರ್ಯಕ್ರಮಗಳು ಅಷ್ಟಾಗಿ ನಡೆಯದೇ ಎರಡು ತಿಂಗಳಿಂದ ಅವಕಾಶಗಳು ದೊರೆಯುತ್ತಿಲ್ಲ. ಇದರಿಂದ ಆರ್ಥಿಕ ಸಮಸ್ಯೆಯಾಗಿದೆ' ಎಂದು ಕಲಾವಿದರು ಬೇಸರ ವ್ಯಕ್ತಪಡಿಸಿದರು.

'ಈ ಸಂದರ್ಭದಲ್ಲಿ ಸಂಸ್ಕೃತಿ ಇಲಾಖೆಯಿಂದಲೂ ಸೂಕ್ತ ಪ್ರೋತ್ಸಾಹ ಸಿಗುತ್ತಿಲ್ಲ. ಧನಸಹಾಯವನ್ನು ಕಂತು ರೂಪದಲ್ಲಿ ನೀಡಿದ್ದರಿಂದ ಕಲಾವಿದರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಕಾರ್ಯಕ್ರಮಗಳ ಆಯೋಜನೆ ಬಗ್ಗೆ ಸಾಂಸ್ಕೃತಿಕ ಸಂಘ–ಸಂಸ್ಥೆಗಳು ಗೊಂದಲದಲ್ಲಿವೆ' ಎಂದು ಕಲಾವಿದ ಜಯಸಿಂಹ ಎಸ್. ಬೇಸರ ವ್ಯಕ್ತಪಡಿಸಿದರು.

ಸುದ್ದಿ 2 ನಿಮಿಷ

ಅಯೋಧ್ಯೆ ರಾಮಮಂದಿರಕ್ಕೆ ರಾಷ್ಟ್ರಪತಿ ಮೊದಲ ಭೇಟಿ ಇಂದು

ನವದೆಹಲಿ: ರಾಷ್ಟ್ರಪತಿ ದ್ರೌಪತಿ ಮುರ್ಮು ಇದೇ ಮೊದಲ ಬಾರಿಗೆ ಬುಧವಾರ ಅಯೋಧ್ಯೆಯ ರಾಮ ಮಂದಿರಕ್ಕೆ ಭೇಟಿ ನೀಡಲಿದ್ದಾರೆ.

ಆದಿವಾಸಿ ಎಂಬ ಕಾರಣಕ್ಕೆ ಬಾಲರಾಮನ ಪ್ರಾಣಪ್ರತಿಷ್ಠಾಪನಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಮೋದಿ ನೇತೃತ್ವದ ಕೇಂದ್ರ ಸರ್ಕಾರ ಅವರಿಗೆ ಅವಕಾಶ ನೀಡಿರಲಿಲ್ಲ ಎಂದು ಕಾಂಗ್ರೆಸ್ ಟೀಕಿಸುತ್ತಿರುವ ಈ ಸಂದರ್ಭದಲ್ಲಿ ರಾಷ್ಟ್ರಪತಿ ಮಂದಿರ ಭೇಟಿ ಮಹತ್ವದ್ದಾಗಿದೆ.

ಶ್ರೀ ಹನುಮಾನ್ ಗಢಿ ದೇವಸ್ಥಾನ, ಪ್ರಭು ಶ್ರೀರಾಮ ದೇವಸ್ಥಾನ, ಕುಬೇರ್ ಟೀಲಾಗೆ ಭೇಟಿ ನೀಡಲಿರುವ ಮುರ್ಮು ಅವರು ದರ್ಶನ ಪಡೆದು, ಆರತಿ ನೆರವೇರಿಸುವರು ಎಂದು ರಾಷ್ಟ್ರಪತಿ ಭವನದ ಪ್ರಕಟಣೆ ತಿಳಿಸಿದೆ.

ನೂತನ ಸಂಸತ್ ಭವನ ಉದ್ಘಾಟನೆಯಾದಾಗ ಹಾಗೂ ಬಾಲರಾಮನ ಪ್ರತಿಷ್ಠಾಪನೆ ವೇಳೆ ರಾಷ್ಟ್ರಪತಿ ಅವರನ್ನು ಪ್ರಧಾನಿ ಮೋದಿ ನೇತೃತ್ವದ ಸರ್ಕಾರ ಆಹ್ವಾನಿಸಿರಲಿಲ್ಲ. ಅವರು ಆದಿವಾಸಿ ಎನ್ನುವುದೇ ಇದಕ್ಕೆ ಕಾರಣ ಎಂದು ಕಾಂಗ್ರೆಸ್ ಇತ್ತೀಚಿನ ಚುನಾವಣಾ ಭಾಷಣಗಳಲ್ಲೂ ಟೀಕಿಸಿತ್ತು.

ನವೋದಯ ವಿದ್ಯಾಲಯ ಕ್ರೀಡಾ ಸಂಕೀರ್ಣ ಉದ್ಘಾಟನೆ



ಯಲಹಂಕ: ಬ್ಯಾಟರಾಯನಪುರ ಕ್ಷೇತ್ರದ ಬಾಗಲೂರಿನ ಜವಾಹರ್ ನವೋದಯ ವಿದ್ಯಾಲಯದಲ್ಲಿ ನೂತನವಾಗಿ ನಿರ್ಮಿಸಿರುವ ಕ್ರೀಡಾ ಸಂಕೀರ್ಣವನ್ನು ಮಂಗಳವಾರ ಉದ್ಘಾಟಿಸಲಾಯಿತು.

ಒಟ್ಟು 2,400 ಚದರಡಿ ವಿಸ್ತೀರ್ಣದಲ್ಲಿ ಶಿಕ್ಷಕ–ಪೋಷಕರ ಸಂಘದ ವತಿಯಿಂದ ₹ 25 ಲಕ್ಷ ವೆಚ್ಚದಲ್ಲಿ ನಿರ್ಮಿಸಿರುವ ಈ ಕ್ರೀಡಾ ಸಂಕೀರ್ಣದಲ್ಲಿ ಮಲ್ಟಿ ಜಿಮ್ ಹಾಗೂ ಶಟಲ್ ಕೋರ್ಟ್‌ಗಳನ್ನು ಸ್ಥಾಪಿಸಲಾಗಿದೆ.

ಈ ವೇಳೆ ಮಾತನಾಡಿದ ಪ್ರಾಂಶುಪಾಲ ಎಸ್.ಕಣ್ಣನ್, 'ಒತ್ತುವರಿಯಾಗಿದ್ದ ಶಾಲೆಯ ಜಾಗವನ್ನು ಮರುಸರ್ವೆ ಮಾಡಿಸಿ, ಒತ್ತುವರಿ ತೆರವುಗೊಳಿಸಿ, ಶಾಲೆಗೆ ಮತ್ತೆ ಜಾಗವನ್ನು ಮಂಜೂರು ಮಾಡಿಸಲಾಯಿತು. ಇದಕ್ಕೆ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಜೆ.ಮುನೇಗೌಡ, ಬೆಂಗಳೂರು ಉತ್ತರ ಉಪವಿಭಾಗಾಧಿಕಾರಿಗಳು ಸಹಕಾರ ನೀಡಿದರು' ಎಂದರು.

ಶಾಲೆಯಲ್ಲಿ 750 ವಿದ್ಯಾರ್ಥಿಗಳು ಓದುತ್ತಿದ್ದಾರೆ. ಮಕ್ಕಳಿಗೆ ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳೂ ಅತ್ಯಗತ್ಯ ಎಂದು ಹೇಳಿದರು.

ಬಾಗಲೂರು ಗ್ರಾಮಪಂಚಾಯಿತಿ ಮಾಜಿ ಅಧ್ಯಕ್ಷ ಜೆ.ಮುನೇಗೌಡ, ಉಪಪ್ರಾಂಶುಪಾಲರಾದ ಸುಂದರ್‌ಕುಮಾರ್.ಪಿ, ನವೀನ್‌ಕುಮಾರ್ ಭಕ್ತ, ಶಿಕ್ಷಕ ಪ್ರಹ್ಲಾದ್. ಎಂ, ಶಿಕ್ಷಕ–ಪೋಷಕರ ಸಂಘದ ಪದಾಧಿಕಾರಿಗಳಾದ ಬೈರೇಗೌಡ, ರಾಘವೇಂದ್ರ, ಬಸವರಾಜ್ ಮತ್ತಿತರರು ಉಪಸ್ಥಿತರಿದ್ದರು.

'ಝೀರೊ ಬ್ಯಾಕ್ಟೀರಿಯಲ್' ನೀರು ಪೂರೈಕೆ

ದೇಶೀಯ ತಂತ್ರಜ್ಞಾನದಿಂದ ಸಂಸ್ಕರಣೆ: ಐಐಎಸ್‌ಸಿ ವಿಜ್ಞಾನಿಗಳ ಸಹಯೋಗದಲ್ಲಿ ಮಹತ್ವದ ನಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ವಿಜ್ಞಾನ ಸಂಸ್ಥೆಯ ವಿಜ್ಞಾನಿಗಳ ಸಹಯೋಗದಲ್ಲಿ ತ್ಯಾಜ್ಯ ನೀರಿನ ಸಂಸ್ಕರಣೆಗೆ ದೇಶೀಯ ತಂತ್ರಜ್ಞಾನ ಅಭಿವೃದ್ಧಿಪಡಿಸಿರುವ ಜಲಮಂಡಳಿ, ಪ್ರತಿ ದಿನ ಒಂದು ಕೋಟಿ ಲೀಟರ್ 'ಝೀರೊ ಬ್ಯಾಕ್ಟೀರಿಯಲ್' ನೀರನ್ನು ಸರಬರಾಜು ಮಾಡುತ್ತಿದೆ.

ಪರಿಸರ ಸ್ನೇಹಿ, ಅತ್ಯಾಧುನಿಕ ತಂತ್ರಜ್ಞಾನವನ್ನು ಎರಡು ವಾರಗಳ ಹಿಂದೆ ಅಳವಡಿಸಿಕೊಂಡಿದ್ದ ಜಲಮಂಡಳಿ, ಬ್ಯಾಕ್ಟೀರಿಯಾ ಮುಕ್ತ ನೀರನ್ನು ಪ್ರತಿದಿನವೂ ಪೂರೈಸುತ್ತಿದೆ. ಅಗರ, ಕೆ.ಸಿ. ವ್ಯಾಲಿ ಮತ್ತು ಬೆಳ್ಳಂದೂರು ಎಸ್‌ಟಿಪಿಗಳಲ್ಲಿ ಈ ದೇಶೀಯ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲಾಗಿದೆ.

ತ್ಯಾಜ್ಯ ನೀರು ನಿರ್ವಹಣಾ ಘಟಕಗಳ ಮೂಲಸೌಲಭ್ಯಗಳನ್ನು ಬಳಸಿಕೊಂಡು, ಕಡಿಮೆ ವೆಚ್ಚದಲ್ಲಿ ದೇಶೀಯ ತಾಂತ್ರಿಕತೆಯಿಂದ ಅತ್ಯುತ್ತಮ ಗುಣಮಟ್ಟದಲ್ಲಿ ತ್ಯಾಜ್ಯ ನೀರನ್ನು ಶುದ್ಧೀಕರಣ ಮಾಡುವ ಮೂಲಕ 'ಝೀರೊ ಬ್ಯಾಕ್ಟೀರಿಯಲ್' ಸಂಸ್ಕರಿಸಿದ ನೀರು ಉತ್ಪಾದಿಸಲಾಗುತ್ತಿದೆ. ಮಾಲಿನ್ಯ ನಿಯಂತ್ರಣ ಮಂಡಳಿಯ ಮಾನದಂಡಗಳ ಆಧಾರದ ಮೇಲೆ ಬೇರೆ ತಂತ್ರಜ್ಞಾನದ ಮೂಲಕ ಸಂಸ್ಕರಣೆ ಆಗುವಂತಹ ನೀರಿನಲ್ಲಿ ಕೆಲವು ಪ್ರಮಾಣದಲ್ಲಿ ಬ್ಯಾಕ್ಟೀರಿಯಾಗಳು ಇರುತ್ತವೆ. ಈ 'ಝೀರೊ ಬ್ಯಾಕ್ಟೀರಿಯಲ್' ನೀರಿನಲ್ಲಿ ಯಾವುದೇ ಬ್ಯಾಕ್ಟೀರಿಯಾಗಳೂ ಇರುವುದಿಲ್ಲ. ಆದ್ದರಿಂದ ಈ ನೀರು ಕುಡಿಯುವುದಕ್ಕೆ ಹೊರತುಪಡಿಸಿ ಬೇರೆ ಕಾರಣಗಳಿಗೆ ಯಾವುದೇ ಹಿಂಜರಿಕೆ ಇಲ್ಲದೆ ಬಳಸಬಹುದಾಗಿದೆ ಎಂದು ಜಲಮಂಡಳಿ ಅಧ್ಯಕ್ಷ ಡಾ. ವಿ.ರಾಮ್‌ಪ್ರಸಾತ್ ಮನೋಹರ್ ಮಾಹಿತಿ ನೀಡಿದ್ದಾರೆ.



ಕೆ.ಸಿ ವ್ಯಾಲಿಯಲ್ಲಿ 'ಝೀರೊ ಬ್ಯಾಕ್ಟೀರಿಯಲ್' ನೀರನ್ನು ವೀಕ್ಷಿಸಿದ ಜಲಮಂಡಳಿ ಅಧ್ಯಕ್ಷ ಡಾ. ವಿ. ರಾಮ್‌ಪ್ರಸಾತ್ ಮನೋಹರ್

ಜಲಮಂಡಳಿಯ ಹೊಸ ಮೈಲುಗಲ್ಲು!

'ಸಂಸ್ಕರಿಸಿದ ನೀರಿನ ಬಳಕೆಯನ್ನು ಹೆಚ್ಚಿಸುವುದರಿಂದ ಕಾವೇರಿ ನೀರಿನ ಮೇಲೆ ಒತ್ತಡವನ್ನು ಬಹಳಷ್ಟು ಕಡಿಮೆ ಮಾಡಬಹುದಾಗಿದೆ. ಈ ಸಂಸ್ಕರಣೆಯಲ್ಲಿ ಸುಧಾರಿತ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವ ನಿಟ್ಟಿನಲ್ಲಿ ಐಐಎಸ್‌ಸಿ ವಿಜ್ಞಾನಿಗಳೂ ಜಲಮಂಡಳಿ ಜೊತೆ ಕೈಜೋಡಿಸಿದ್ದು, 'ಝೀರೊ ಬ್ಯಾಕ್ಟೀರಿಯಲ್' ಗುಣಮಟ್ಟದ ಸಂಸ್ಕರಿಸಿದ ನೀರು ಪಡೆಯಲು ಸಾಧ್ಯವಾಗಿದೆ.

ಇದು ಜಲಮಂಡಳಿಯ ಇತಿಹಾಸದಲ್ಲಿ ಹೊಸದೊಂದು ಮೈಲುಗಲ್ಲಾಗಿದೆ. ಸಂಸ್ಕರಿಸಿದ ನೀರಿನ ಬಳಕೆಯಲ್ಲಿ ಜನರ ಮನಃಸ್ಥಿತಿಯನ್ನು ಬದಲಾಯಿಸುವಲ್ಲಿ ಇದು ಸಹಕಾರಿಯಾಗಲಿದೆ' ಎಂದು ಜಲಮಂಡಳಿ ಅಧ್ಯಕ್ಷ ಡಾ. ವಿ ರಾಮ್‌ಪ್ರಸಾತ್ ಮನೋಹರ್ ಹೇಳಿದ್ದಾರೆ

ಐಐಎಸ್‌ಸಿಯಿಂದ ದೃಢೀಕರಣ: ಸುಧಾರಿತ ದೇಶೀಯ ತಂತ್ರಜ್ಞಾನ ಅಳವಡಿಕೆಯಿಂದ ಹೊರಬರುವಂತಹ 'ಝೀರೊ ಬ್ಯಾಕ್ಟೀರಿಯಲ್' ನೀರನ್ನು ಭಾರತೀಯ ವಿಜ್ಞಾನ ಸಂಸ್ಥೆ ಪ್ರಮಾಣೀಕರಿಸಿದೆ. ಎಸ್‌ಟಿಪಿಗಳಿಂದ ಹೊರಬರುವ ನೀರನ್ನು ವಿಜ್ಞಾನಿಗಳು ಪ್ರಯೋಗಾಲಯದಲ್ಲಿ ಪರೀಕ್ಷೆ ನಡೆಸಿ, ಗುಣಮಟ್ಟದ ನೀರು ಎಂದು ದೃಢೀಕರಿಸಿದ್ದಾರೆ.

ಪೂರ್ವಭಾಗದಲ್ಲಿ ಬಳಕೆ: ನಗರ ಪೂರ್ವಭಾಗದಲ್ಲಿರುವ ವಿಪ್ರೊ, ಎಚ್‌ಎಎಲ್ ಸೇರಿದಂತೆ ಹಲವಾರು ಐಟಿ ಕಂಪನಿಗಳು ಈಗಾಗಲೇ 'ಝೀರೊ ಬ್ಯಾಕ್ಟೀರಿಯಲ್' ನೀರಿಗೆ ಬೇಡಿಕೆಯಿಟ್ಟಿದ್ದಾರೆ. ಸ್ವಚ್ಛತೆ, ಏರ್ ಕಂಡೀಷನಿಂಗ್ ಕೂಲಿಂಗ್ ಸೇರಿದಂತೆ ಹಲವಾರು ಕಾರ್ಯಗಳಿಗೆ ಇದನ್ನು ಬಳಸಬಹುದಾಗಿದೆ. ಬೇಡಿಕೆಯಿರುವ ಸ್ಥಳಗಳಿಗೆ ಜಲಮಂಡಳಿ ಈ ಸಂಸ್ಕರಿಸಿದ ನೀರನ್ನು ಸರಬರಾಜು ಮಾಡಲಿದೆ' ಎಂದು ರಾಮ್‌ಪ್ರಸಾತ್ ತಿಳಿಸಿದ್ದಾರೆ.

ತರಬೇತಿಗೆ ಅರ್ಜಿ ಆಹ್ವಾನ

ಬೆಂಗಳೂರು: ಕೃಷಿಕ್ ಸರ್ವೋದಯ ಫೌಂಡೇಷನ್ ಸ್ಪರ್ಧಾತ್ಮಕ ಪರೀಕ್ಷಾ ಸಂಸ್ಥೆಯು ಪ್ರೊಬೇಷನರ್ ಆಫೀಸರ್ಸ್ ಮತ್ತು ಸ್ಪೆಷಲಿಸ್ಟ್ (ಐಪಿಬಿಎಸ್) ಹುದ್ದೆಗಳಿಗೆ ಬ್ಯಾಂಕಿಂಗ್ ತರಬೇತಿಗೆ ಮತ್ತು ಮಾರ್ಗದರ್ಶನಕ್ಕೆ ಅರ್ಜಿ ಆಹ್ವಾನಿಸಿದೆ.

ಮೇ 2ನೇ ವಾರದಿಂದ (ಆನ್‌ಲೈನ್/ಆಫ್‌ಲೈನ್) ತರಗತಿಗಳು ಪ್ರಾರಂಭವಾಗಲಿವೆ. ಆಸಕ್ತ ಅಭ್ಯರ್ಥಿಗಳು ಮೇ 7ರೊಳಗೆ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ http://www.ksfkarnataka.comಗೆ ಭೇಟಿ ನೀಡಿ ಅಥವಾ 080–25202299/76250 00990ಗೆ ಸಂಪರ್ಕಿಸಲು ಪ್ರಕಟಣೆ ತಿಳಿಸಿದೆ.

84 ಮಂದಿಗೆ ವಿದ್ಯಾರ್ಥಿವೇತನ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಮಯ್ಯ ಯೂನಿವರ್ಸಿಟಿ ಆಫ್ ಅಪ್ಲೈಡ್ ಸೈನ್ಸಸ್‌ನಿಂದ 2023–24ನೇ ಸಾಲಿನಲ್ಲಿ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಲ್ಲಿ ಸಾಧನೆ ಮಾಡಿರುವ 84 ವಿದ್ಯಾರ್ಥಿಗಳಿಗೆ 'ರಾಮಯ್ಯ ಸ್ಮಾರಕ ವಿದ್ಯಾರ್ಥಿವೇತನ'ವನ್ನು ವಿತರಿಸಲಾಯಿತು.

ರಾಮಯ್ಯ ಯೂನಿವರ್ಸಿಟಿಯ ಸಂಸ್ಥಾಪಕ ಅಧ್ಯಕ್ಷರಾಗಿದ್ದ ಡಾ.ಎಂ.ಎಸ್. ರಾಮಯ್ಯ ಅವರ ಸ್ಮರಣಾರ್ಥವಾಗಿ ಈ ವಿದ್ಯಾರ್ಥಿವೇತನ ಯೋಜನೆಯನ್ನು ಪರಿಚಯಿಸಲಾಗಿದೆ. ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಈ ವಿದ್ಯಾರ್ಥಿವೇತನ ನೀಡಲಾಗುತ್ತಿದೆ. ಈ ವರ್ಷದಿಂದ ಯೋಜನೆಯನ್ನು ಆರಂಭಿಸಲಾಗಿದೆ.

ವಿದ್ಯಾರ್ಥಿಗಳು ಹಿಂದಿನ ಶೈಕ್ಷಣಿಕ ವರ್ಷದಲ್ಲಿ ಮಾಡಿದ ಸಾಧನೆ, ಜೆಇಇ, ಕೆ–ಸಿಇಟಿ, ಸಿಎಟಿ, ಎಕ್ಸ್‌ಎಟಿ, ಎಂಎಟಿ ಪರೀಕ್ಷೆಗಳಲ್ಲಿ ಗಳಿಸಿದ ಶ್ರೇಯಾಂಕ, ಶೇಕಡಾವಾರು ಅಂಕ, ಜತೆಗೆ ಕ್ರೀಡೆಯಲ್ಲಿ ಮಾಡಿದ ಸಾಧನೆ ಪರಿಗಣಿಸಿ ವಿದ್ಯಾರ್ಥಿ ವೇತನಕ್ಕೆ ಆಯ್ಕೆ ಮಾಡಲಾಗುತ್ತದೆ ಎಂದು ರಾಮಯ್ಯ ವಿಶ್ವವಿದ್ಯಾಲಯದ ಉಪಕುಲಪತಿ ಕುಲದೀಪ್ ಕುಮಾರ್ ರೈನಾ ಹೇಳಿದರು.



ಎಂ.ಆರ್. ಜಯರಾಮ್ ಅವರು(ಎಡದಿಂದ ಮೂರನೆಯವರು) ವಿದ್ಯಾರ್ಥಿನಿಯೊಬ್ಬರಿಗೆ ವಿದ್ಯಾರ್ಥಿವೇತನ ವಿತರಿಸಿದರು.

'ರಾಮಯ್ಯ ಯೂನಿವರ್ಸಿಟಿ ಆಫ್ ಅಪ್ಲೈಡ್ ಸೈನ್ಸಸ್‌ನ ಕುಲಪತಿ ಎಂ.ಆರ್. ಜಯರಾಮ್ ಅವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಎಂಜಿನಿಯರಿಂಗ್, ಫಾರ್ಮಸಿ, ಫಿಸಿಯೋಥೆರಪಿ, ನರ್ಸಿಂಗ್, ಮ್ಯಾನೇಜ್‌ಮೆಂಟ್ ಆ್ಯಂಡ್ ಕಾಮರ್ಸ್, ಕಾನೂನು, ಲೈಫ್ ಆ್ಯಂಡ್ ಅಲೈಡ್ ಹೆಲ್ತ್ ಸೈನ್ಸಸ್, ಹಾಸ್ಪಿಟಾಲಿಟಿ ಮ್ಯಾನೇಜ್‌ಮೆಂಟ್, ಶುದ್ಧ ವಿಜ್ಞಾನ ವಿಭಾಗದ 84 ವಿದ್ಯಾರ್ಥಿಗಳಿಗೆ 'ರಾಮಯ್ಯ ಸ್ಮಾರಕ ವಿದ್ಯಾರ್ಥಿ ವೇತನ'ವನ್ನು ವಿತರಿಸಲಾಯಿತು' ಎಂದು ಅವರು ತಿಳಿಸಿದರು.

ಗೋಕುಲ ಎಜುಕೇಷನ್ ಫೌಂಡೇಷನ್ (ವೈದ್ಯಕೀಯ) ಮುಖ್ಯಾಧಿಕಾರಿ ಎಂ.ಆರ್. ಶ್ರೀನಿವಾಸ್, ಉಪಕುಲಪತಿ (ಸಂಶೋಧನೆ) ಗೋವಿಂದ್ ಆರ್. ಕಡಂಬಿ, ಕುಲಪತಿ (ಆರೋಗ್ಯ ವಿಜ್ಞಾನ) ಡಾ. ಓಂಪ್ರಕಾಶ್ ಕರಬಂದ, ಕ್ವಾಲಿಟಿ ಅಶುರೆನ್ಸ್ ಆ್ಯಂಡ್ ಎಕ್ಸಲೆನ್ಸ್‌ನ ಪುಷ್ಪತಿನಾಥ್ ರಾಜ್ದಾನ್, ಶೈಕ್ಷಣಿಕ ವಿಭಾಗದ ಡೀನ್ ಮೇಧಾ ವೈ. ರಾವ್ ಭಾಗವಹಿಸಿದ್ದರು.

ವಿಜಯ್ ಮಲ್ಯ–ಗೋಪಿನಾಥ್ ವಿರುದ್ಧ ತನಿಖೆ ರದ್ದು

ಬೆಂಗಳೂರು: 'ಕಿಂಗ್ ಫಿಷರ್ ಮತ್ತು ಏರ್ ಡೆಕ್ಕನ್ ವಿಲೀನ ಪ್ರಕ್ರಿಯೆಯಲ್ಲಿ ಮೋಸ ನಡೆದಿದೆ' ಎಂಬ ಆರೋಪಕ್ಕೆ ಸಂಬಂಧಿಸಿದಂತೆ, ಉದ್ಯಮಿ ವಿಜಯ್ ಮಲ್ಯ ಹಾಗೂ ಏರ್ ಡೆಕ್ಕನ್ ಸಂಸ್ಥಾಪಕ ಕ್ಯಾಪ್ಟನ್ ಜಿ.ಆರ್.ಗೋಪಿನಾಥ್ ವಿರುದ್ಧ, 'ಗಂಭೀರ ವಂಚನೆಯ ತನಿಖಾ ಕಚೇರಿ' (ಸೀರಿಯಸ್ ಫ್ರಾಡ್ ಇನ್ವೆಸ್ಟಿಗೇಷನ್ ಆಫೀಸ್–ಎಸ್ಎಫ್ಐಒ) ನಡೆಸುತ್ತಿದ್ದ ತನಿಖಾ ಪ್ರಕ್ರಿಯೆಗಳನ್ನು ಹೈಕೋರ್ಟ್ ರದ್ದುಗೊಳಿಸಿದೆ.

ಈ ಸಂಬಂಧ ಕ್ಯಾಪ್ಟನ್ ಜಿ.ಆರ್. ಗೋಪಿನಾಥ್ ಮತ್ತಿತರರು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಹೇಮಂತ್ ಚಂದನ ಗೌಡರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

ಪ್ರಕರಣವೇನು?: ಏರ್ ಡೆಕ್ಕನ್ ಅನ್ನು ವಶಕ್ಕೆ ಪಡೆಯುವಾಗ ಕಿಂಗ್ ಫಿಷರ್ ಕಂಪನಿ ನಷ್ಟದಲ್ಲಿತ್ತು. ಆಗ 'ಸಂಭಾವ್ಯ ಬಂಡವಾಳದ ಲಾಭ, ಅದರ ಮೇಲಿನ ತೆರಿಗೆ ತಪ್ಪಿಸಲು ಮತ್ತು ಅರ್ಹತಾ ಷರತ್ತು ಪೂರೈಸಿಲ್ಲ' ಎಂಬ ಆರೋಪದಡಿ ಎಸ್ಎಫ್ಐಒ ತನಿಖೆ ಆರಂಭಿಸಿತ್ತು.

ನಗರದಲ್ಲಿ ಇಂದು

ನಮ್ಮ ನೆರವು ಸೇವಾ ಟ್ರಸ್ಟ್ ವಾರ್ಷಿಕೋತ್ಸವ, ಸರ್ವ ಸದಸ್ಯರ ಮಹಾಸಭೆ: ಉದ್ಘಾಟನೆ: ಪಂಚನಾಥನ್, ಅಧ್ಯಕ್ಷತೆ: ಮುನಿದಾಸಪ್ಪ ಎಸ್., ಅತಿಥಿಗಳು: ಸಂಪತ್ ಕುಮಾರ್, ಮಂಜುನಾಥ್ ಎಚ್., ರೇಣುಕಾ ಲಕ್ಷ್ಮೇಶ್ವರ, ಸ್ಥಳ: ರೋಟರಿ ಬೆಂಗಳೂರು ಉದ್ಯೋಗ ಭವನ, ಪೀಣ್ಯ 2ನೇ ಹಂತ, ಬೆಳಿಗ್ಗೆ 9ರಿಂದ

ಕುರುಬ ಸಮಾಜದ ಯುಪಿಎಸ್‌ಸಿ ಸಾಧಕರಿಗೆ ಅಭಿನಂದನಾ ಸಮಾರಂಭ: ಸಾನ್ನಿಧ್ಯ: ಸಿದ್ಧರಾಮಾನಂದ ಸ್ವಾಮೀಜಿ, ಕಾರ್ಯಾಗಾರದ ಉದ್ಘಾಟನೆ: ಕೆ.ಎ. ದಯಾನಂದ್, ಅಧ್ಯಕ್ಷತೆ: ಮಲ್ಲಿಕಾರ್ಜುನ ಬಾಲದಂಡಿ, ಅತಿಥಿಗಳು: ಬಿ. ಶಿವಸ್ವಾಮಿ, ಪಿ. ರೇವಣ್ಣ, ಬಸವರಾಜು, ಎಂ.ಕೆ. ಜಗದೀಶ್, ಅಮರೇಶ್, ಬಿ. ಕುಪ್ಪರಲಿಂಗಯ್ಯ, ಆಯೋಜನೆ: ಕನಕ ಎಕ್ಸ್‌ಪ್ರೆಸ್ ಮೀಡಿಯಾ ಗ್ರೂಪ್ಸ್, ಸ್ಥಳ: ಕನಕ ಭವನ, ಚಂದ್ರಾ ಲೇಔಟ್, ಬೆಳಿಗ್ಗೆ 9

365 ದಿನಗಳ ನಿರಂತರ ಭಜನೋತ್ಸವದ (2019–20) ಸಮಾರೋಪ ಸಮಾರಂಭ: ಅಧ್ಯಕ್ಷತೆ: ತಿಪ್ಪೇಸ್ವಾಮಿ, ಭಾಷಣ: ಜಿ.ಎಸ್. ಉಮಾಪತಿ, ಸಾನ್ನಿಧ್ಯ: ಮಧುಸೂದನಾನಂದಪುರಿ ಸ್ವಾಮಿ, ಶಿವರುದ್ರ ಸ್ವಾಮೀಜಿ, ಚಂದ್ರೇಶಾನಂದ, ಅತಿಥಿಗಳು: ತೇಜಸ್ವಿನಿ ಅನಂತಕುಮಾರ್, ಮಮತಾ ದೇವರಾಜ್, ಆಯೋಜನೆ: ಅಖಿಲ ಕರ್ನಾಟಕ ಭಜನಾ ಪರಿಷತ್ತು, ಸ್ಥಳ: ಓಂಕಾರಾಶ್ರಮ ಉತ್ತರಹಳ್ಳಿ ಮುಖ್ಯರಸ್ತೆ, ಶ್ರೀನಿವಾಸಪುರ, ಕೆಂಗೇರಿ, ಬೆಳಿಗ್ಗೆ 9.30

ಮೇ ದಿನಾಚರಣೆ: ಆಯೋಜನೆ: ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ, ಸ್ಥಳ: ಸ್ವಾತಂತ್ರ್ಯ ಉದ್ಯಾನ, ಬೆಳಿಗ್ಗೆ 10

ದೇಸಾಯಿಗೌಡ ಮತ್ತು ಮಡಿವಾಳಪ್ಪಗೌಡ ಪೊಲೀಸ್ ಪಾಟೀಲ ದರ್ಶನಾಪುರ ದತ್ತಿ: ಅಧ್ಯಕ್ಷತೆ: ಸಿ. ಸೋಮಶೇಖರ್, ಅತಿಥಿ: ವೈ.ಸಿ. ಕಮಲ, 'ಮಡಿವಾಳ ಮಾಚಿದೇವರ ಬದುಕು ಮತ್ತು ಕಾಯಕ ಸಂದೇಶ' ಕುರಿತು ಉಪನ್ಯಾಸ: ರುದ್ರೇಶ್ ಅದರಂಗಿ, ಉಪಸ್ಥಿತಿ: ಬಾಪುಗೌಡ ಪಾಟೀಲ, ಆಯೋಜನೆ: ಶರಣ ಸಾಹಿತ್ಯ ಪರಿಷತ್ತು ಮೈಸೂರು, ಸ್ಥಳ: ಶಿವರಾತ್ರಿ ರಾಜೇಂದ್ರ ಚಿಂತನ ಮಂಟಪ, ಜಯನಗರ 8ನೇ ವಿಭಾಗ, ಬೆಳಿಗ್ಗೆ 11

ವಿಶ್ವ ನೃತ್ಯ ದಿನಾಚರಣೆ, ಮಾಯಾರಾವ್ ಸ್ಮರಣಾರ್ಥ ಕಥಕ್ ಉತ್ಸವ, 'ಸೃಷ್ಟಿ ರಾಷ್ಟ್ರೀಯ ನೃತ್ಯ ಪರಿಣೀತಿ' ಪ್ರಶಸ್ತಿ ಪ್ರದಾನ: ನೃತ್ಯ ಪ್ರದರ್ಶನ: ನಿತ್ಯಾ, ರಶ್ಮಿ ವಿಜಯ, ಶ್ರೀದೇವಿ, ಶ್ರೀವಾಣಿ, ಸೌಮ್ಯ ಕುಚಿಪುಡಿ, ಶೋಭಾರಾಣಿ ಬೋಳಾರ್, ನಿಮಿಷಾ ಪ್ರಕಾಶ್, ಸೌಮ್ಯ ರಂಗಸ್ವಾಮಿ, ರಶ್ಮಿ ಅಗರವಾಲ್, ರೇಖಾ ಜಗದೀಶ್ ಮತ್ತು ತಂಡ, ಶ್ರೀಲಕ್ಷ್ಮಿ ಮತ್ತು ತಂಡ, ಅನುಪಮಾ ಭೂಷಣ್, ಶರ್ಮಿಳಾ ಗುಪ್ತಾ ಮತ್ತು ತಂಡ, ನಂದಿನಿ ಮೆಹ್ತಾ, ಪ್ರಶಸ್ತಿ ಪ್ರದಾನ: ಪ್ರಮೋದಾ ದೇವಿ ಒಡೆಯರ್, ಪ್ರಶಸ್ತಿ ಪುರಸ್ಕೃತರು: ಲಕ್ಷ್ಮಿ ಗೋಪಾಲಸ್ವಾಮಿ, ಅತಿಥಿಗಳು: ರಾಧಾ ಶ್ರೀಧರ್, 'ಬಾಜಾ ಗೋವಿಂದಂ' ನೃತ್ಯ ನಿರ್ದೇಶನ: ಎ.ವಿ. ಸತ್ಯನಾರಾಯಣ, ಆಯೋಜನೆ: ಸೃಷ್ಟಿ ಅಭಿನಯ ಕಲಾವಿದರ ಕೇಂದ್ರ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಮಧ್ಯಾಹ್ನ 3ರಿಂದ

ಹಾರ್ಮೋನಿಯಂ ಹಬ್ಬ: ಹಾರ್ಮೋನಿಯಂ: ಸೂರಜ್ ಪದರಿಯ, ಶಾರಂಗಧರ್ ಸಾಠ, ಹಾರ್ಮೋನಿಯಂ–ರೆಜೋನಿಯಂ: ಓಂಕಾರ್ ಅಗ್ನಿಹೋತ್ರಿ, ಗಾಯನ: ವಾಸುದೇವ್ ಶರ್ಮ, ಜುಗಲ್‌ಬಂದಿ: ರವಿಂದ್ರ ಕಾಟೋಟಿ, ಸಮೀರ್ ರಾವ್, ತಬಲಾ: ಮೇಘಶ್ಯಾಮ್ ಕೇಶವ್, ಹಾರ್ಮೋನಿಯಂ: ನೀತಾ ಅಜಯ್, ಆಯೋಜನೆ: ಬಿಜಾಪುರೆ ಹಾರ್ಮೋನಿಯಂ ಫೌಂಡೇಷನ್, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಸಂಜೆ 4

ರಾಮನವಮಿ ಸಂಗೀತೋತ್ಸವ: ಗಾಯನ: ರಾಧಾ ಕಣ್ಣನ್, ಪಿಟೀಲು: ಸನತ್ ಕುಮಾರ್ ನೈಭಿ, ಮೃದಂಗ: ಶ್ರೀವತ್ಸ ಎಸ್., ಗಾಯನ: ಪ್ರಿನ್ಸ್ ರಾಮ ವರ್ಮ, ಪಿಟೀಲು: ಎಸ್.ಆರ್. ಅವನೀಶ್ವರಮ್ ವಿನು, ಮೃದಂಗ: ತ್ರಿಚಿ ಬಿ. ಹರಿಕುಮಾರ್, ಮೋರ್ಸಿಂಗ್: ಭಾರದ್ವಾಜ್ ಆರ್. ಸಾತವಳ್ಳಿ, ಆಯೋಜನೆ ಮತ್ತು ಸ್ಥಳ: ಶ್ರೀವಾಣಿ ಕಲಾ ಕೇಂದ್ರ, ಬಸವೇಶ್ವರನಗರ, ಸಂಜೆ 4.15ರಿಂದ

ರಾಮನವಮಿ ಸಂಗೀತೋತ್ಸವ–2024: ವಿಶೇಷ ಸಂಗೀತ ಕಛೇರಿ: ಶ್ರೇಯಾ ವಿ. ಮೂರ್ತಿ ಮತ್ತು ತಂಡ, ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ: ಪ್ರಿಯಾ ಸಹೋದರಿಯರು, ಮೈಸೂರು ಶ್ರೀಕಾಂತ್, ಸಾಯಿ ಗಿರಿಧರ್, ಮಧಿಪಕ್ಕಂ ಮುರಳಿ, ಆಯೋಜನೆ: ಶ್ರೀರಾಮ ಸೇವಾ ಮಂಡಲಿ, ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಮೈದಾನ, ಚಾಮರಾಜಪೇಟೆ, ಸಂಜೆ 5ರಿಂದ

'ಕಾಯಕ' ದಿನಾಚರಣೆ: ಉದ್ಘಾಟನೆ: ಸಿಂ.ರಾ. ಹೊನ್ನಲಿಂಗಯ್ಯ, ಕಾಯಕ ದಿನ ಗೌರವ ಸಮರ್ಪಣೆ: ಜೆ. ಲೋಕೇಶ್, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಉಪಸ್ಥಿತಿ: ಚೆನ್ನಕೇಶವ ಮೂರ್ತಿ, ಬಸವಣ್ಣ, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಸ್ಥಳ: ಪೂರ್ಣಚಂದ್ರ ತೇಜಸ್ವಿ ರಂಗಮಂದಿರ, ಡಿ ಗ್ರೂಪ್ ಬಡಾವಣೆ ನಾಗರಬಾವಿ ರಸ್ತೆ, ಸಂಜೆ 5.30

'ನಾಯಿ ಕಳೆದಿದೆ' ನಾಟಕ ಪ್ರದರ್ಶನ: ನಿರ್ದೇಶನ: ರಾಜೇಂದ್ರ ಕಾರಂತ್, ಆಯೋಜನೆ: ನಮ್ದೆ ನಟನೆ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಕೆಳಗಿನ ಇ–ಮೇಲ್‌ಗೆ ಕಳುಹಿಸಿ
nagaradalli_indu@prajavani.co.in

ಉಪನಗರ ರೈಲು ಯೋಜನೆ: ಒಂದೇ ಹಂತದಲ್ಲಿ ನಿಲ್ದಾಣ ನಿರ್ಮಾಣಕ್ಕೆ ದೊರೆಯದ ಸ್ಪಂದನ

2 ಹಂತದಲ್ಲಿ ನಿಲ್ದಾಣ ನಿರ್ಮಾಣಕ್ಕೆ ನಿರ್ಧಾರ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಬೆಂಗಳೂರು ಉಪನಗರ ರೈಲು ಯೋಜನೆಯ (ಬಿಎಸ್‌ಆರ್‌ಪಿ) ಕಾರಿಡಾರ್‌–2 ಮಾರ್ಗದಲ್ಲಿ ನಿಲ್ದಾಣಗಳ ನಿರ್ಮಾಣಕ್ಕಾಗಿ ಕರೆದಿದ್ದ ಟೆಂಡರ್‌ನಲ್ಲಿ ಭಾಗವಹಿಸಲು ಬಿಡ್‌ದಾರರು ನಿರಾಸಕ್ತಿ ತೋರಿದ್ದಾರೆ. ಹೀಗಾಗಿ, ಎರಡು ಭಾಗಗಳನ್ನಾಗಿ ಮಾಡಿ ಟೆಂಡರ್‌ ಕರೆಯಲು ಬಿಎಸ್‌ಆರ್‌ಪಿ ನಿರ್ಧರಿಸಿದೆ.

ಚಿಕ್ಕಬಾಣಾವರ–ಬೆನ್ನಿಗಾನಹಳ್ಳಿ ವರೆಗೆ 25 ಕಿ.ಮೀ. ದೂರದ ಕಾರಿಡಾರ್‌ (ಮಲ್ಲಿಗೆ ಮಾರ್ಗ) ಇದಾಗಿದೆ. ಅದರಲ್ಲಿ 16.5 ಕಿ.ಮೀ. ನೆಲಮಟ್ಟದಲ್ಲಿದ್ದು, 8.5 ಕಿ.ಮೀನಷ್ಟು ಎತ್ತರಿಸಿದ (ಎಲಿವೇಟೆಡ್‌) ಮಾರ್ಗವನ್ನು ಒಳಗೊಂಡಿದೆ. 14 ನಿಲ್ದಾಣಗಳು ನಿರ್ಮಾಣಗೊಳ್ಳಬೇಕಿವೆ. ಅದಕ್ಕಾಗಿ ಉಪನಗರ ರೈಲು ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವ ಕೆ–ರೈಡ್‌ ಟೆಂಡರ್‌ ಕರೆದಿತ್ತು.

‘ಬಿಡ್‌ದಾರರಿಂದ ಸರಿ ಯಾಗಿ ಪ್ರತಿಕ್ರಿಯೆ ಬಾರದಿರುವುದರಿಂದ ಟೆಂಡರ್‌ ರದ್ದುಗೊಳಿಸಲಾದೆ. ಎತ್ತರಿಸಿದ ಮಾರ್ಗಗಳಲ್ಲಿ 6 ನಿಲ್ದಾಣಗಳಿಗೆ ಮತ್ತು ನೆಲಮಟ್ಟದ 8 ನಿಲ್ದಾಣಗಳಿಗೆ ಪ್ರತ್ಯೇಕವಾಗಿ ಟೆಂಡರ್‌ ಕರೆಯಲು ತೀರ್ಮಾನಿಸಲಾಗಿದೆ. ರೈಲ್ವೆ ಮಂಡಳಿಯ ಅನುಮೋದನೆಗೆ ಕಾಯುತ್ತಿದ್ದೇವೆ’ ಎಂದು ಕೆ–ರೈಡ್‌ ಅಧಿಕಾರಿಗಳು ತಿಳಿಸಿದ್ದಾರೆ.

ಚಿಕ್ಕಬಾಣಾವರ, ಮ್ಯಾಡರಹಳ್ಳಿ, ಶೆಟ್ಟಿಹಳ್ಳಿ, ಜಾಲಹಳ್ಳಿ, ಯಶವಂತಪುರ ನಿಲ್ದಾಣಗಳು ನಿರ್ಮಾಣವಾಗಿ ಸಿಗ್ನಲಿಂಗ್‌ ಇನ್ನಿತರ ತಾಂತ್ರಿಕ ಕಾರ್ಯಗಳು ಪೂರ್ಣಗೊಂಡರಷ್ಟೇ ಉಪನಗರ ಯೋಜನೆಯ ಮೊದಲ ರೈಲು ಸಂಚರಿಸಲಿದೆ.



ಬೆಂಗಳೂರು ಉಪನಗರ ರೈಲು ಯೋಜನೆಯ ಕಾರಿಡಾರ್‌–2 ನಿರ್ಮಾಣ ಕಾಮಗಾರಿ ನಡೆಯುತ್ತಿದೆ

ಹಳಿ ಅಳವಡಿಸಲು ಟೆಂಡರ್‌: ಕಾರಿಡಾರ್‌–2ರಲ್ಲಿ 2025ರ ಡಿಸೆಂಬರ್‌ ಒಳಗೆ ಚಿಕ್ಕಬಾಣಾವರ–ಯಶವಂತಪುರ ನಡುವೆ 7.4 ಕಿ.ಮೀ. ಮಾರ್ಗದಲ್ಲಿ ರೈಲು ಸಂಚಾರ ಆರಂಭಿಸಬೇಕು ಎಂಬ ಗುರಿಯನ್ನು ಕೆ–ರೈಡ್‌ ಇಟ್ಟುಕೊಂಡಿದೆ. ಪ್ರಾಥಮಿಕ ಹಂತದ ಕಾಮಗಾರಿಗಳು ಬಹುತೇಕ ಪೂರ್ಣಗೊಂಡಿವೆ. ಆದರೆ, ಹಳಿ ಅಳವಡಿಸುವ, ವಿದ್ಯುದೀಕರಣ ಕಾರ್ಯಗಳು ಆಗಿಲ್ಲ.

ಹಳಿ ಅಳವಡಿಸುವ, ವಿದ್ಯುದೀಕರಣ ಕಾರ್ಯಗಳಿಗೆ ಶೀಘ್ರದಲ್ಲೇ ಟೆಂಡರ್‌ ಕರೆಯಲಾಗುತ್ತದೆ. 7.4 ಕಿ.ಮೀಗಷ್ಟೇ ಅಲ್ಲದೇ, ಎಲ್ಲ 25 ಕಿ.ಮೀಗೆ ಒಂದೇ ಟೆಂಡರ್‌ ಕರೆಯಲಾಗುತ್ತದೆ. ಲೋಕಸಭಾ ಚುನಾವಣೆಯ ನೀತಿ ಸಂಹಿತೆಯಿಂದ ಟೆಂಡರ್‌ಗಳನ್ನು ಕರೆಯಲು ಆಗಿರಲಿಲ್ಲ. ಚುನಾವಣೆ ಮುಗಿದ ಕೂಡಲೇ ಒಂದೊಂದೇ ಟೆಂಡರ್‌ ಪ್ರಕ್ರಿಯೆಗಳು ನಡೆಯಲಿವೆ.

ಹಳಿ ಅಳವಡಿಸುವ ಕಾರ್ಯ ಶುರುವಾದ ಮೇಲೆ ಸಿಗ್ನಲಿಂಗ್‌ ಮತ್ತು ಟೆಲಿಕಮ್ಯುನಿಕೇಶನ್‌ ಟೆಂಡರ್‌, ರೋಲಿಂಗ್‌ ಸ್ಟಾಕ್‌ (ಕೋಚ್‌ಗಳು) ಟೆಂಡರ್‌ ಪ್ರಕ್ರಿಯೆ ಆರಂಭಗೊಳ್ಳಲಿದೆ. ಮುಂದಿನ ವರ್ಷ ಡಿಸೆಂಬರ್‌ ಒಳಗೆ ಚಿಕ್ಕಬಾಣಾವಾರ–ಯಶವಂತಪುರ ನಡುವೆ, 2026ರ ಜೂನ್‌ ಒಳಗೆ ಯಶವಂತಪುರ–ಬೆನ್ನಿಗಾನಹಳ್ಳಿ ನಡುವೆ (17.5 ಕಿ.ಮೀ.) ಉಪ ನಗರ ರೈಲು ಸಂಚರಿಸಲಿದೆ ಎಂದು ಕೆ–ರೈಡ್‌ ಅಧಿಕಾರಿಗಳು ವಿಶ್ವಾಸ ವ್ಯಕ್ತಪಡಿಸಿದ್ದಾರೆ.



‘ನಿಗದಿತ ಸಮಯದಲ್ಲಿ ಆರಂಭ ಕಷ್ಟ’

‘ಕಾರಿಡಾರ್‌–2ರಲ್ಲಿ 2025ರ ಡಿಸೆಂಬರ್‌ ಒಳಗೆ ಉಪನಗರ ರೈಲು ಸಂಚಾರ ಆರಂಭಗೊಳ್ಳಲಿದೆ ಎಂದು ಅಧಿಕಾರಿಗಳು ಎಷ್ಟೇ ಭರವಸೆ ನೀಡುತ್ತಿದ್ದಾರೆ. ಪಿಲ್ಲರ್‌, ಗರ್ಡರ್‌, ಹಳಿ ಅಳವಡಿಸಿದ ಕೂಡಲೇ ರೈಲು ಆರಂಭಿಸಲು ಆಗುವುದಿಲ್ಲ. ಸ್ಟೇಷನ್‌ ನಿರ್ಮಾಣಕ್ಕೆ ಇನ್ನೂ ಟೆಂಡರ್‌ ಆಗಿಲ್ಲ. ಸ್ಟೇಷನ್‌ ನಿರ್ಮಾಣವಾದ ಮೇಲೆ ಸಿಗ್ನಲಿಂಗ್‌ ಮತ್ತು ಟೆಲಿಕಮ್ಯುನಿಕೇಷನ್‌ ಕಾರ್ಯಗಳಾಗಬೇಕು ಎಂದು ಸಿಟಿಜನ್ಸ್‌ ಫಾರ್‌ ಸಿಟಿಜನ್ಸ್‌ ಸಂಸ್ಥಾಪಕ ರಾಜಕುಮಾರ್‌ ದುಗರ್‌ ತಿಳಿಸಿದರು.

ರೈಲು ಕೋಚ್‌ಗಳಿಗೆ (ರೋಲಿಂಗ್‌ ಸ್ಟಾಕ್‌) ಟೆಂಡರ್‌ ಆದ ಮೇಲೆ ಕೋಚ್‌ಗಳನ್ನು ತಯಾರು ಮಾಡಿ ಕಂಪನಿಗಳು ಪೂರೈಸುವುದು. ಹಾಗಾಗಿ ಇವತ್ತು ಆದೇಶ ಮಾಡಿದರೆ ನಾಳೆ ಸಿಗುವುದಿಲ್ಲ. ರೈಲು ಕೋಚ್‌ಗಳಿಗೆ ಟೆಂಡರ್‌ ಆಗಬೇಕಿದೆ. ಚುನಾವಣೆಗೂ ಕಾಮಗಾರಿಗಳಿಗೂ ಸಂಬಂಧವಿಲ್ಲದ್ದರೂ ಟೆಂಡರ್‌ ಪ್ರಕ್ರಿಯೆಗಳು ನಡೆದಿಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಎಫ್‌ಕೆಸಿಸಿಐಗೆ ‘ಕಸಾಪ ದತ್ತಿ ಪ್ರಶಸ್ತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ 2024ನೇ ಸಾಲಿನ ‘ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ ದತ್ತಿ ಪ್ರಶಸ್ತಿ’ಗೆ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ (ಎಫ್‌ಕೆಸಿಸಿಐ) ಆಯ್ಕೆಯಾಗಿದೆ.

ಪರಿಷತ್ತಿನ ಕಾರ್ಯದರ್ಶಿಗಳಾದ ಪದ್ಮಿನಿ ನಾಗರಾಜು, ನೇ.ಭ.ರಾಮಲಿಂಗ ಶೆಟ್ಟಿ ಮತ್ತು ಸಂಶೋಧಕ ತಲಕಾಡು ಚಿಕ್ಕರಂಗೇಗೌಡ ಅವರನ್ನು ಒಳಗೊಂಡ ಸಮಿತಿ ಈ ಆಯ್ಕೆ ಮಾಡಿದೆ. ಪ್ರಶಸ್ತಿಯು ₹51 ಸಾವಿರ ನಗದು ಹಾಗೂ ಫಲಕವನ್ನು ಒಳಗೊಂಡಿದೆ.

ಕೈಗಾರಿಕೆ, ಶಿಕ್ಷಣ, ಕೃಷಿ, ನೀರಾವರಿ, ವಿದ್ಯುಚ್ಛಕ್ತಿ, ಹಿಂದುಳಿದ ವರ್ಗದ ಕಲ್ಯಾಣ, ಸಾಮಾಜಿಕ ನ್ಯಾಯ, ಮಹಿಳಾ ಸಬಲೀಕರಣ, ವೈದ್ಯಕೀಯದಂತಹ ಕ್ಷೇತ್ರಗಳಲ್ಲಿ ಗಣನೀಯ ಕೊಡುಗೆಗಳನ್ನು ನೀಡಿದ ವ್ಯಕ್ತಿ ಅಥವಾ ಸಂಸ್ಥೆಗೆ ಈ ಪ್ರಶಸ್ತಿ ನೀಡಲಾಗುತ್ತದೆ. ಇದೇ ಮೊದಲ ಬಾರಿ ಸಂಸ್ಥೆಗೆ ಈ ಪುರಸ್ಕಾರವನ್ನು ನೀಡಲಾಗುತ್ತಿದೆ.

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾ ಸಂಸ್ಥೆಯನ್ನು ಭಾರತರತ್ನ ಸರ್‌.ಎಂ.ವಿಶ್ವೇಶ್ವರಯ್ಯ ಅವರು 1916ರ ಮೇ 8ರಂದು ಸ್ಥಾಪಿಸಿದರು. ಕೈಗಾರಿಕೆಯ ವಿಷಯದಲ್ಲಿ ಮಾರ್ಗದರ್ಶಕ ಎನಿಸಿಕೊಂಡಿರುವ ಸಂಸ್ಥೆಯು, ರಾಜ್ಯ ಮತ್ತು ಕೇಂದ್ರ ಸರ್ಕಾರ ಹಾಗೂ ವಿವಿಧ ಕೈಗಾರಿಕಾ ಸಂಸ್ಥೆಗಳ ನಡುವೆ ಸೇತುವೆಯಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಕಸಾಪ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ.

ಚಿತ್ರಾವಳಿ



ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲಬ್ರೇಷನ್‌ ಟ್ರಸ್ಟ್‌ ನಗರದ ಕೋಟೆ ಪ್ರೌಢಶಾಲೆ ಆವರಣದಲ್ಲಿ ಹಮ್ಮಿಕೊಂಡಿರುವ ‘86ನೇ ಶ್ರೀ ರಾಮನವಮಿ ಸಂಗೀತೋತ್ಸವ’ದಲ್ಲಿ ಎಚ್‌.ಕೆ.ವೆಂಕಟ್‌ ರಾಮ್‌ ಮತ್ತು ಅಶ್ವಾನಿ ಶಂಕರ್‌ ಅವರು ಹಿಂದೂಸ್ತಾನಿ ಸಂಗೀತ ಜುಗಲ್‌ಬಂದಿಯನ್ನು ಮಂಗಳವಾರ ಪ್ರಸ್ತುತಪಡಿಸಿದರು
–ಪ್ರಜಾವಾಣಿ ಚಿತ್ರ



ಜೆ.ಪಿ. ನಗರದ ಎಂ.ಎಲ್‌.ಆರ್‌. ಕನ್ವೆನ್ಷನ್‌ ಸೆಂಟರ್‌ನಲ್ಲಿ ಇತ್ತೀಚೆಗೆ ನಡೆದ ಕಾರ್ಯಕ್ರಮದಲ್ಲಿ ಬಸಂತ್‌ ಚಂದ್ರಶೇಖರ್‌ ಅವರು ಮ್ಯಾಂಡೊಲಿನ್‌ ಕಛೇರಿ ನಡೆಸಿಕೊಟ್ಟರು. ಮೈಸೂರು ದಯಾಕರ್‌ (ಪಿಟೀಲು), ಬೆಂಗಳೂರು ವಿ. ಪ್ರವೀಣ್‌ (ಮೃದಂಗ), ಪ್ರವೀಣ್‌ ನಾರಾಯಣನ್‌ (ತಬಲಾ), ಸಾಯಿಹರಿ (ಘಟ) ಸಾಥ್‌ ನೀಡಿದರು.

ಡಿಜಿಪಿ ಪ್ರತಾಪ್‌ ರೆಡ್ಡಿಗೆ ಬೀಳ್ಕೊಡುಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಆಂತರಿಕ ಭದ್ರತಾ ವಿಭಾಗದ (ಐಎಸ್‌ಡಿ) ಪೊಲೀಸ್‌ ಮಹಾನಿರ್ದೇಶಕರಾಗದ್ದ (ಡಿಜಿಪಿ) ಸಿ.ಎಚ್‌. ಪ್ರತಾಪ್‌ ರೆಡ್ಡಿ ಸ್ವಯಂ ನಿವೃತ್ತಿಯಾಗಿದ್ದು, ಪೊಲೀಸ್‌ ಇಲಾಖೆಯಿಂದ ಪಥಸಂಚಲನದ ಮೂಲಕ ಅವರನ್ನು ಮಂಗಳವಾರ ಬೀಳ್ಕೊಡಲಾಯಿತು.

ನಗರದ ಕೋರಮಂಗಲದಲ್ಲಿರುವ ಕೆಎಸ್‌ಆರ್‌ಪಿ ಮೈದಾನದಲ್ಲಿ ಮಂಗಳವಾರ ಆಯೋಜಿಸಿದ್ದ ಪಥಸಂಚಲನದಲ್ಲಿ ಪೊಲೀಸ್‌ ಇಲಾಖೆಯ ವಿವಿಧ ಪಡೆಗಳು ಪಾಲ್ಗೊಂಡಿದ್ದವು. ಪಡೆಗಳ ಸದಸ್ಯರು, ಪ್ರತಾಪ್‌ ರೆಡ್ಡಿ ಅವರಿಗೆ ಗೌರವ ವಂದನೆ ಸಲ್ಲಿಸಿದರು. ಪೊಲೀಸ್‌ ಇಲಾಖೆಯಿಂದ ಸ್ಮರಣಿಕೆ ನೀಡಿ ಪ್ರತಾಪ್‌ ರೆಡ್ಡಿ ಅವರನ್ನು ಗೌರವಿಸಲಾಯಿತು.

ಗೌರವ ವಂದನೆ ಸ್ವೀಕರಿಸಿ ಮಾತನಾಡಿದ ಪ್ರತಾಪ್‌ ರೆಡ್ಡಿ, ‘ಪೊಲೀಸ್‌ ಇಲಾಖೆಯಲ್ಲಿ ಸಿಬ್ಬಂದಿ ಒತ್ತಡದಲ್ಲಿ ಕೆಲಸ ಮಾಡುತ್ತಿದ್ದಾರೆ. ಪ್ರತಿಯೊಬ್ಬರೂ ತಮ್ಮ ಆರೋಗ್ಯ ಕಾಪಾಡಿಕೊಳ್ಳಬೇಕು’ ಎಂದರು.

‘ನಾನು ಸೇವೆಗೆ ಸೇರಿದ್ದ ದಿನಗಳಲ್ಲಿ ಇಲಾಖೆಯ ಕೆಲಸಗಳು ಜಟಿಲವಾಗಿರಲಿಲ್ಲ. ಇತ್ತೀಚಿನ ದಿನಗಳಲ್ಲಿ ಪೊಲೀಸರ ಕೆಲಸ ಜಟಿಲವಾಗಿದೆ. ಮುಂದಿನ 10 ವರ್ಷಗಳಲ್ಲಿ ಮತ್ತಷ್ಟು ಕಠಿಣವಾಗಬಹುದು. ಇದಕ್ಕೆ ಸಿಬ್ಬಂದಿ ತಯಾರಾಗಬೇಕು. ಅಗತ್ಯವಿರುವ ತರಬೇತಿ ಪಡೆಯಬೇಕು’ ಎಂದು ಹೇಳಿದರು.

ರಾಜ್ಯ ಪೊಲೀಸ್‌ ಮಹಾನಿರ್ದೇಶಕ ಅಲೋಕ್‌ ಮೋಹನ್‌, ಡಿಜಿಪಿಗಳಾದ ಕಮಲ್‌ ಪಂತ್‌, ಎಂ.ಎ. ಸಲೀಂ,ಮಾಲಿನಿ ಕೃಷ್ಣಮೂರ್ತಿ, ಕೆಎಸ್‌ಆರ್‌ಪಿ ಎಡಿಜಿಪಿ ಉಮೇಶ್‌ಕುಮಾರ್‌ ಇದ್ದರು.



ಸ್ವಯಂ ನಿವೃತ್ತಿಯಾದ ಡಿಜಿಪಿ ಪ್ರತಾಪ್‌ ರೆಡ್ಡಿ ಅವರಿಗೆ ಸ್ಮರಣಿಕೆ ನೀಡಿ ಗೌರವಿಸಲಾಯಿತು

ಆಂಧ್ರಪ್ರದೇಶ ಗುಂಟೂರು ಜಿಲ್ಲೆಯ ಪ್ರತಾಪ್‌ ರೆಡ್ಡಿ, ಬಿ.ಟೆಕ್‌ ಪದವೀಧರರು. 1991ನೇ ಬ್ಯಾಚ್‌ ಐಪಿಎಸ್‌ ಅಧಿಕಾರಿ. ಬೆಂಗಳೂರಿನ ಪೊಲೀಸ್‌ ಕಮಿಷನರ್‌ ಆಗಿ ಕೆಲಸ ಮಾಡಿದ್ದರು. ಅವರ ಸೇವಾವಧಿ ಜೂನ್‌ 30 ರವರೆಗಿತ್ತು. ಸ್ವಯಂ ನಿವೃತ್ತಿ ಕೋರಿದ್ದ ಅವರು ಜ.22ರಂದು ಸರ್ಕಾರಕ್ಕೆ ಪತ್ರ ಬರೆದಿದ್ದರು. ಫೆ.17ರಂದು ರಾಜೀನಾಮೆ ಅಂಗೀಕರವಾಗಿತ್ತು. ಏಪ್ರಿಲ್‌ 30 ಕೆಲಸದ ಕೊನೆ ದಿನವಾಗಿತ್ತು.

‘ಜೋಯಾಲುಕ್ಕಾಸ್‌’ನಿಂದ ಅಕ್ಷಯ ತೃತೀಯಕ್ಕೆ ವಿಶೇಷ ಕೊಡುಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಪ್ರಮುಖ ಆಭರಣ ಬ್ರ್ಯಾಂಡ್‌ ಆಗಿರುವ ಜೋಯಾಲುಕ್ಕಾಸ್‌, ಅಕ್ಷಯ ತೃತೀಯ ಹಬ್ಬದ ಅಂಗವಾಗಿ ಗ್ರಾಹಕರಿಗೆ ವಿಶೇಷ ಕೊಡುಗೆಗಳನ್ನು ಪ್ರಕಟಿಸಿದೆ.

₹50 ಸಾವಿರ ಹಾಗೂ ಅದಕ್ಕಿಂತ ಹೆಚ್ಚು ಮೌಲ್ಯದ ವಜ್ರಗಳು, ಅನ್‌ಕಟ್‌ ವಜ್ರಗಳು ಮತ್ತು ಬೆಲೆ ಬಾಳುವ ರತ್ನಾಭರಣಗಳ ಖರೀದಿಯ ಮೇಲೆ ₹2 ಸಾವಿರ ಮೌಲ್ಯದ ಉಚಿತ ಗಿಫ್ಟ್‌ ವೋಚರ್‌ ನೀಡಲಿದೆ.

₹50 ಸಾವಿರ ಹಾಗೂ ಅದಕ್ಕಿಂತ ಅಧಿಕ ಮೌಲ್ಯದ ಚಿನ್ನಾಭರಣ ಖರೀದಿಸುವ ಗ್ರಾಹಕರಿಗೆ ₹1 ಸಾವಿರ ಮೌಲ್ಯದ ಗಿಫ್ಟ್‌ ವೋಚರ್‌ ನೀಡಲಿದೆ. ₹10 ಸಾವಿರ ಮೌಲ್ಯದ ಬೆಳ್ಳಿ ಆಭರಣಗಳನ್ನು ಖರೀದಿಸಿದರೆ ₹500 ಮೌಲ್ಯದ ಗಿಫ್ಟ್‌ ವೋಚರ್‌ ದೊರೆಯಲಿದೆ ಎಂದು ತಿಳಿಸಿದೆ.

ಮೇ 3ರಿಂದ 12ರ ವರೆಗೆ ಜೋಯಾಲುಕ್ಕಾಸ್‌ನ ಎಲ್ಲಾ ಮಳಿಗೆಗಳಲ್ಲಿ ಈ ಹಬ್ಬದ ಕೊಡುಗೆಯು ಗ್ರಾಹಕರಿಗೆ ದೊರೆಯಲಿದೆ.

‘ಅಕ್ಷಯ ತೃತೀಯ ಅಂಗವಾಗಿ ಗ್ರಾಹಕರ ಅನುಕೂಲಕ್ಕಾಗಿ ಈ ವಿಶೇಷ ಕೊಡುಗೆ ಪ್ರಕಟಿಸಲಾಗಿದ್ದು, ಇದರ ಪ್ರಯೋಜನ ಪಡೆದುಕೊಳ್ಳಬೇಕು’ ಎಂದು ಜೋಯಾಲುಕ್ಕಾಸ್‌ ಸಮೂಹದ ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕ ಜೋಯ್‌ ಅಲುಕ್ಕಾಸ್‌ ತಿಳಿಸಿದ್ದಾರೆ.

11ಕ್ಕೆ ‘ತ್ರಿಂಶತಿ ವೈಭವ’ ಆಟೋಟ ಸ್ಪರ್ಧೆ

ಬೆಂಗಳೂರು: ಹಿತೈಶಿ ಮಹಿಳಾ ಮನರಂಜನೆ ಮಂಡಳಿಯು ಮೇ 11ರಂದು ಮಲ್ಲೇಶ್ವರದ ಸೇವಾಸದನದಲ್ಲಿ ‘ತ್ರಿಂಶತಿ ವೈಭವ’ ಆಟೋಟ ಸ್ಪರ್ಧೆ ಹಮ್ಮಿಕೊಂಡಿದೆ. ಬೆಳಿಗ್ಗೆ 10.30ರಿಂದ ಸಂಜೆ 4.30ರವರೆಗೆ ಸ್ಪರ್ಧೆಗಳು ನಡೆಯಲಿವೆ. 18 ವರ್ಷ ಮೇಲ್ಪಟ್ಟ ಮಹಿಳೆಯರು ಹಾಗೂ ಪುರುಷರು ಸ್ಪರ್ಧೆಯಲ್ಲಿ ಭಾಗವಹಿಸಬಹುದು. ವೇಷಭೂಷಣ ಸ್ಪರ್ಧೆ ಹಾಗೂ ಇತರ ಆಟಗಳ ಬಗ್ಗೆ ಸ್ಥಳದಲ್ಲಿ ತಿಳಿಸಲಾಗುತ್ತದೆ. ಸ್ಪರ್ಧೆಯಲ್ಲಿ ತೀರ್ಪುಗಾರರ ನಿರ್ಧಾರವೇ ಅಂತಿಮವಾಗಿರುತ್ತದೆ.

ಆಸಕ್ತರು ಮೇ 7ರೊಳಗೆ ನೋಂದಣಿ ಮಾಡಿಕೊಳ್ಳಬೇಕು ಎಂದು ಮಂಡಳಿಯ ಅಧ್ಯಕ್ಷೆ ರಂಗಮಣಿ ಬಿ.ಎಸ್‌. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಪರ್ಕಕ್ಕೆ: 9632127127 ಅಥವಾ 9880716220

‘ಹೂಡಿಕೆ’ ವಂಚನೆ: ತನಿಖೆಗೆ ವಿಶೇಷ ತಂಡ

ಕಡಿಮೆ ಸಮಯದಲ್ಲಿ ದುಪ್ಪಟ್ಟು ಲಾಭದ ಆಮಿಷ • ₹20 ಕೋಟಿ ವಂಚನೆ • 4 ತಿಂಗಳಿನಲ್ಲಿ 1 ಸಾವಿರ ಪ್ರಕರಣ

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ‘ಕಡಿಮೆ ಸಮಯದಲ್ಲಿ ದುಪ್ಪಟ್ಟು ಲಾಭ ಗಳಿಸಿ’ ಎಂಬ ಆಮಿಷವೊಡ್ಡಿ ಹೂಡಿಕೆ ಹೆಸರಿನಲ್ಲಿ ಜನರಿಂದ ಕೋಟ್ಯಂತರ ರೂಪಾಯಿ ಪಡೆದು ವಂಚಿಸಿರುವ ಬಗ್ಗೆ ನಾಲ್ಕು ತಿಂಗಳಿನಲ್ಲಿ ಒಂದು ಸಾವಿರಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ. ಇಂಥ ಕೃತ್ಯ ಎಸಗುತ್ತಿರುವ ಜಾಲ ಭೇದಿಸಲು ಸಿಸಿಬಿ ಪೊಲೀಸರ ವಿಶೇಷ ತಂಡ ಕಾರ್ಯಾಚರಣೆಗೆ ಇಳಿದಿದೆ.

ಉದ್ಯಮಿಗಳು, ವ್ಯಾಪಾರಿಗಳು, ಖಾಸಗಿ ಕಂಪನಿ ಉದ್ಯೋಗಿಗಳು, ಸರ್ಕಾರಿ ನೌಕರರು ಹಾಗೂ ಬ್ಯಾಂಕ್ ಖಾತೆಗಳಲ್ಲಿ ಹೆಚ್ಚಿನ ಹಣ ಇಟ್ಟಿರುವ ವ್ಯಕ್ತಿಗಳನ್ನು ಗುರಿಯಾಗಿಸಿಕೊಂಡು ವಂಚಿಸುತ್ತಿರುವುದು ಪೊಲೀಸರ ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ.

ಷೇರು ಮಾರುಕಟ್ಟೆ ಹಾಗೂ ಕ್ರಿಪ್ಟೊ ಕರೆನ್ಸಿ ಹೂಡಿಕೆ ವಂಚನೆಗೆ ಸಂಬಂಧಪಟ್ಟಂತೆ ನಗರದ ಕಾನೂನು ಸುವ್ಯವಸ್ಥೆ ಹಾಗೂ ಸೈಬರ್ ಕ್ರೈಂ ಠಾಣೆಗಳಲ್ಲಿ 2023ರ ಜನವರಿಯಿಂದ ಏಪ್ರಿಲ್ 30ರವರೆಗಿನ ಅವಧಿಯಲ್ಲಿ 1 ಸಾವಿರಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ. ಇವುಗಳ ತನಿಖೆ ನಡೆಸಿದ್ದ ಆಯಾ ಠಾಣೆ ಪೊಲೀಸರು, ‘ಇದೊಂದು ವ್ಯವಸ್ಥಿತ ಕೃತ್ಯ. ಬೇರೆಯವರ ಹೆಸರಿನಲ್ಲಿ ಬ್ಯಾಂಕ್ ಖಾತೆ ತೆರೆದು ಹಾಗೂ ಸಿಮ್ ಕಾರ್ಡ್‌ಗಳನ್ನು ಖರೀದಿಸಿ ಆರೋಪಿಗಳು ಕೃತ್ಯ ಎಸಗುತ್ತಿರುವ ಶಂಕೆ ಇದೆ’ ಎಂದು ಅಭಿಪ್ರಾಯಪಟ್ಟಿದ್ದಾರೆ.

ಹೂಡಿಕೆ ವಂಚನೆ ಜಾಲ ಭೇದಿಸಲು ವಿಶೇಷ ತಂಡ ರಚಿಸಲಾಗಿದ್ದು, ತನಿಖೆ ಪ್ರಗತಿಯಲ್ಲಿದೆ. ಇಂಥ ವಂಚನೆಗಳ ಬಗ್ಗೆ ಜನರು ಜಾಗ್ರತೆ ವಹಿಸಬೇಕು

ಚಂದ್ರಗುಪ್ತ
ಹೆಚ್ಚುವರಿ ಪೊಲೀಸ್ ಕಮಿಷನರ್ (ಅಪರಾಧ)

1930 / 112
ಸೈಬರ್ ಕ್ರೈಂ ಸಹಾಯವಾಣಿ

ಅಪರಾಧ ಸುದ್ದಿ



ಹೂಡಿಕೆ ವಂಚನೆ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿರುವ ಪೊಲೀಸ್ ಕಮಿಷನರ್ ಬಿ. ದಯಾನಂದ್, ಸಿಸಿಬಿಯ ಹೆಚ್ಚುವರಿ ಕಮಿಷನರ್ ಚಂದ್ರಗುಪ್ತ ನೇತೃತ್ವದಲ್ಲಿ ವಿಶೇಷ ತಂಡ ರಚಿಸಿದ್ದಾರೆ. ವಂಚನೆ ಮಾಡುತ್ತಿರುವವರು ಯಾರು? ಅವರ ಜಾಲದಲ್ಲಿ ಯಾರೆಲ್ಲ ಇದ್ದಾರೆ? ಎಂಬುದರ ಬಗ್ಗೆ ತನಿಖೆ ನಡೆಸುವಂತೆ ಸೂಚಿಸಿದ್ದಾರೆ.

‘ಜನರು ಕಡಿಮೆ ಸಮಯದಲ್ಲಿ ಹೆಚ್ಚು ಹಣ ಸಂಪಾದಿಸಲು ಯೋಚಿಸುತ್ತಿದ್ದಾರೆ. ಇಂಥ ಜನರನ್ನೇ ಗುರಿಯಾಗಿಸಿಕೊಂಡು ವಂಚಿಸುವ ಜಾಲ ಸಕ್ರಿಯವಾಗಿದೆ. ಪ್ರಾಥಮಿಕ ಮಾಹಿತಿ ಪ್ರಕಾರ, ಪ್ರಸಕ್ತ ವರ್ಷದ ಜನವರಿಯಿಂದ ಏಪ್ರಿಲ್‌ವರೆಗೆ ಸುಮಾರು ₹20 ಕೋಟಿ ವಂಚನೆಯಾಗಿರುವುದು ಗೊತ್ತಾಗಿದೆ. ಸಮಗ್ರ ತನಿಖೆ ನಡೆದ ಬಳಿಕ, ವಂಚನೆಯ ನಿಖರ ಮೊತ್ತ ತಿಳಿಯಲಿದೆ’ ಎಂದು ಹಿರಿಯ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ಜನರ ಹೆಸರಿನಲ್ಲೇ ಬ್ಯಾಂಕ್ ಖಾತೆ: ‘ವಂಚನೆಯ ಹಿಂದೆ ವ್ಯವಸ್ಥಿತ ಜಾಲವಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ಬಡವರಿಗೆ ಹಣದ ಆಮಿಷವೊಡ್ಡಿ ವೈಯಕ್ತಿಕ ದಾಖಲೆಗಳನ್ನು ಸಂಗ್ರಹಿಸಲಾಗುತ್ತಿದೆ. ಅದೇ ದಾಖಲೆ ಬಳಸಿ, ಆನ್‌ಲೈನ್ ಮೂಲಕ ಹಲವು ಬ್ಯಾಂಕ್‌ಗಳಲ್ಲಿ ಖಾತೆ ತೆರೆಯಲಾಗುತ್ತಿದೆ’ ಎಂದು ಅಧಿಕಾರಿ ಹೇಳಿದರು.

‘ಜನರನ್ನು ವಂಚಿಸಿ ಸಂಗ್ರಹಿಸುವ ಹಣವನ್ನು ಆರೋಪಿಗಳು, ಮೊದಲಿಗೆ ತಾವೇ ತೆರೆದಿರುತ್ತಿದ್ದ ಖಾತೆಗೆ ಜಮೆ ಮಾಡಿಕೊಳ್ಳುತ್ತಿದ್ದಾರೆ. ನಂತರ, ಬೇರೆ ಬೇರೆ ಖಾತೆಗಳಿಗೆ ಹಣ ವರ್ಗಾಯಿಸಿಕೊಂಡು ಡ್ರಾ ಮಾಡುತ್ತಿದ್ದಾರೆ. ಬ್ಯಾಂಕ್ ಖಾತೆ ವಿವರ ಆಧರಿಸಿ ಖಾತೆದಾರರನ್ನು ವಿಚಾರಣೆಗೆ ಒಳಪಡಿಸಿದಾಗ, ತಮಗೂ ಕೃತ್ಯಕ್ಕೂ ಸಂಬಂಧವಿಲ್ಲವೆಂದು ಹೇಳುತ್ತಿದ್ದಾರೆ. ಯಾರೋ ದಾಖಲೆ ಪಡೆದು ತಮಗೂ ವಂಚಿಸಿರುವುದಾಗಿ ಹೇಳಿಕೆ ನೀಡುತ್ತಿದ್ದಾರೆ. ಹೀಗಾಗಿ, ನೈಜ ಆರೋಪಿಗಳನ್ನು ಪತ್ತೆ ಮಾಡುವುದು ಕಷ್ಟವಾಗುತ್ತಿದೆ’ ಎಂದು ವಿವರಿಸಿದರು.

ಆ್ಯಪ್ ಬಗ್ಗೆ ಮಾಹಿತಿ ಸಂಗ್ರಹ: ‘ಹೂಡಿಕೆ ವಂಚನೆಗೆ ಸಂಬಂಧಪಟ್ಟಂತೆ ವಿವಿಧ ಠಾಣೆಗಳಲ್ಲಿ ದಾಖಲಾಗಿರುವ ಪ್ರಕರಣಗಳ ಸಂಪೂರ್ಣ ವಿವರಗಳನ್ನು ವಿಶೇಷ ತಂಡ ಸಂಗ್ರಹಿಸಿದೆ. ದೂರುದಾರರನ್ನು ಆರೋಪಿಗಳು ಯಾವ ರೀತಿ ಸಂಪರ್ಕಿಸಿದ್ದರು ಎಂಬ ಮಾಹಿತಿಯನ್ನಷ್ಟೇ ಅಲ್ಲದೆ ಸಾಮಾಜಿಕ ಮಾಧ್ಯಮದ ಖಾತೆಗಳು ಹಾಗೂ ಆ್ಯಪ್‌ಗಳ ಬಗ್ಗೆಯೂ ವಿವರ ಪಡೆಯಲಾಗಿದೆ’ ಎಂದು ಹಿರಿಯ ಅಧಿಕಾರಿ ಹೇಳಿದರು.

‘ದೂರುದಾರರು, ₹1 ಲಕ್ಷದಿಂದ ₹5 ಕೋಟಿಯವರೆಗೂ ಹಣ ಕಳೆದುಕೊಂಡಿದ್ದಾರೆ. ಯಾವೆಲ್ಲ ಖಾತೆಗಳಿಗೆ ಹಣ ವರ್ಗಾವಣೆ ಆಗಿದೆ? ದೂರುದಾರರನ್ನು ಸಂಪರ್ಕಿಸಲು ಆರೋಪಿಗಳು ಯಾವ ಮೊಬೈಲ್ ಸಂಖ್ಯೆ ಬಳಸಿದ್ದರು ಎಂಬ ಮಾಹಿತಿಯನ್ನು ವಿಶೇಷ ತಂಡ ಸಂಗ್ರಹಿಸುತ್ತಿದೆ. ಆದಷ್ಟು ಬೇಗ, ಜಾಲದ ಕೆಲ ಆರೋಪಿಗಳನ್ನು ಪತ್ತೆ ಮಾಡುವ ವಿಶ್ವಾಸವಿದೆ’ ಎಂದೂ ತಿಳಿಸಿದರು.

ಹೂಡಿಕೆ ವಂಚನೆ ಹೇಗೆ?

‘ಕಡಿಮೆ ಹಣ ಹೂಡಿಕೆ ಮಾಡಿ ಹೆಚ್ಚು ಸಂಪಾದಿಸಿ’ ಎಂಬುದಾಗಿ ಆರೋಪಿಗಳು, ಸಾಮಾಜಿಕ ಮಾಧ್ಯಮ ಹಾಗೂ ಆ್ಯಪ್‌ಗಳಲ್ಲಿ ಜಾಹೀರಾತು ನೀಡುತ್ತಾರೆ. ಕೆಲವರು, ಸಾರ್ವಜನಿಕರ ಮೊಬೈಲ್‌ಗಳಿಗೂ ಸಾಮೂಹಿಕವಾಗಿ ಸಂದೇಶ ಕಳುಹಿಸುತ್ತಿದ್ದಾರೆ. ಅಂಥ ಸಂದೇಶ ನಂಬಿ ಜನರು ವಂಚನೆ ಜಾಲದೊಳಗೆ ಸಿಲುಕುತ್ತಿದ್ದಾರೆ’ ಎಂದು ಪೊಲೀಸ್ ಅಧಿಕಾರಿ ಹೇಳಿದರು.

‘ಜನರ ಮೊಬೈಲ್ ನಂಬರ್ ಪಡೆಯುವ ಆರೋಪಿಗಳು, ವಾಟ್ಸ್‌ಆ್ಯಪ್ ಹಾಗೂ ಟೆಲಿಗ್ರಾಂ ಆ್ಯಪ್‌ಗಳಲ್ಲಿರುವ ತಮ್ಮ ಗ್ರೂಪ್‌ಗಳಿಗೆ ಸೇರಿಸುತ್ತಿದ್ದಾರೆ. ‘ನನಗೆ ಇಂದು ಹೂಡಿಕೆಯಿಂದ ಲಕ್ಷ ಲಕ್ಷ ಲಾಭ ಬಂತು’ ಎಂಬುದಾಗಿ ಹೂಡಿಕೆದಾರರ ಸೋಗಿನಲ್ಲಿ ಆರೋಪಿಗಳೇ ಗ್ರೂಪ್‌ಗಳಲ್ಲಿ ಸಂದೇಶ ಕಳುಹಿಸುತ್ತಾರೆ. ಅದನ್ನು ನಂಬುವ ಜನ, ಹೂಡಿಕೆ ಮಾಡಲು ಸಿದ್ಧರಾಗುತ್ತಿದ್ದಾರೆ. ಆರಂಭದಲ್ಲಿ ಸಾವಿರ ಹಾಗೂ ಲಕ್ಷದ ಲೆಕ್ಕದಲ್ಲಿ ಹೂಡಿಕೆ ಮಾಡುತ್ತಿದ್ದಾರೆ.’

‘ನಿಗದಿತ ದಿನದಂದು ಲಾಭದ ಬಗ್ಗೆ ಆರೋಪಿಗಳನ್ನು ವಿಚಾರಿಸಿದಾಗ, ಮತ್ತಷ್ಟು ಹಣ ಹೂಡಿಕೆ ಮಾಡಿದರೆ ದುಪ್ಪಟ್ಟು ಹಣ ಬರುವುದಾಗಿ ಪುನಃ ಆಮಿಷವೊಡ್ಡುತ್ತಿದ್ದಾರೆ. ಹೆಚ್ಚಿನ ಹಣ ಗಳಿಸುವ ಆಸೆಯಿಂದ ಜನರು ಪುನಃ ಹೂಡಿಕೆ ಮಾಡುತ್ತಿದ್ದಾರೆ. ಇದೇ ರೀತಿಯಲ್ಲಿ ಹಂತ ಹಂತವಾಗಿ ಹೂಡಿಕೆ ಮಾಡಿಸಿಕೊಂಡು, ಆರೋಪಿಗಳು ನಾಪತ್ತೆಯಾಗುತ್ತಿದ್ದಾರೆ’ ಎಂದು ಪೊಲೀಸ್ ಅಧಿಕಾರಿ ತಿಳಿಸಿದರು.

ವಂಚನೆಯ ಕೆಲ ಪ್ರಕರಣಗಳು

- ಷೇರು ವ್ಯವಹಾರದಲ್ಲಿ ಹಣ ಹೂಡಿಕೆ ಮಾಡಿದರೆ ದುಪ್ಪಟ್ಟು ಲಾಭ ಗಳಿಸಬಹುದೆಂದು ಹೇಳಿ ನಗರದ ನಿವಾಸಿಯೊಬ್ಬರಿಂದ ₹5.18 ಕೋಟಿ ಪಡೆದು ವಂಚಿಸಲಾಗಿದ್ದು, ಸೈಬರ್ ಕ್ರೈಂ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.
- ಹೈಗ್ರೌಂಡ್ಸ್ ಠಾಣೆ ವ್ಯಾಪ್ತಿಯಲ್ಲಿ ವಾಸವಿರುವ ವೈದ್ಯರೊಬ್ಬರಿಂದ ₹90 ಲಕ್ಷ ಪಡೆದು ವಂಚಿಸಲಾಗಿದೆ.

ಸುದ್ದಿ 2 ನಿಮಿಷ

4 ಲಕ್ಷ ಮೌಲ್ಯದ ಸೈಕಲ್ ಕಳ್ಳತನ ಭದ್ರತಾ ಸಿಬ್ಬಂದಿ ಬಂಧನ

ಬೆಂಗಳೂರು: ₹ 4 ಲಕ್ಷ ಮೌಲ್ಯದ 17 ಸೈಕಲ್‌ಗಳನ್ನು ಕಳ್ಳತನ ಮಾಡಿದ್ದ ಆರೋಪದಡಿ ಭದ್ರತಾ ಸಿಬ್ಬಂದಿ ಸ್ವಾದೀನ್ ರೌತ್ರಾ (25) ಎಂಬುವವರನ್ನು ರಾಮಮೂರ್ತಿ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಒಡಿಶಾದ ಸ್ವಾದೀನ್, ನಾಲ್ಕು ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದ. ಭದ್ರತಾ ಸಿಬ್ಬಂದಿ ಆಗಿ ಕೆಲಸಕ್ಕೆ ಸೇರಿದ್ದ. ದುಡಿಮೆಯ ವೇತನ ಸಾಲುತ್ತಿರಲಿಲ್ಲ. ಹೀಗಾಗಿ, ದುಬಾರಿ ಬೆಲೆಯ ಸೈಕಲ್‌ಗಳನ್ನು ಕದ್ದು ಮಾರುತ್ತಿದ್ದ’ ಎಂದು ಪೊಲೀಸರು ಹೇಳಿದರು.

‘ಓಎಂಬಿಆರ್ ಲೇಔಟ್‌ನ ಮನೆಯೊಂದರ ಮುಂದೆ ನಿಲ್ಲಿಸಿದ್ದ ಸೈಕಲ್ ಇತ್ತೀಚೆಗೆ ಕಳುವಾಗಿತ್ತು. ಈ ಬಗ್ಗೆ ದಾಖಲಾದ ದೂರು ಆಧರಿಸಿ ತನಿಖೆ ಕೈಗೊಂಡಾಗ, ಆರೋಪಿ ಸಿಕ್ಕಿಬಿದ್ದ’ ಎಂದು ಹೇಳಿದರು.

ಲೋಕಾಯುಕ್ತ ಬಲೆಗೆ ತಾ.ಪಂ ಇಒ



ಶಿಡ್ಲಘಟ್ಟ: ಭೂ ಪರಿವರ್ತಿತ ಜಮೀನಿನ ನಕ್ಷೆ ಮಂಜೂರಾತಿಗೆ ಅನುಮೋದನೆ ನೀಡಲು ₹1.5ಲಕ್ಷ ಲಂಚ ಪಡೆಯುತ್ತಿದ್ದಾಗ ಶಿಡ್ಲಘಟ್ಟ ತಾಲ್ಲೂಕು ಪಂಚಾಯಿತಿ ಇಒ ಜಿ.ಮುನಿರಾಜ ಅವರನ್ನು ಮಂಗಳವಾರ ಚಿಕ್ಕಬಳ್ಳಾಪುರ ಜಿಲ್ಲಾ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿ ಬಂಧಿಸಿದ್ದಾರೆ.

ತಾಲ್ಲೂಕಿನ ಜಂಗಮಕೋಟೆ ಹೋಬಳಿ ಘಟ್ಟಮಾರನಹಳ್ಳಿ ನಂಜೇಗೌಡ ಅವರು ತಮ್ಮ 39 ಗುಂಟೆ ಪರಿವರ್ತಿತ ಜಮೀನಿನ ನಕ್ಷೆ ಮಂಜೂರಾತಿಗೆ ಅರ್ಜಿ ಸಲ್ಲಿಸಿದ್ದರು. ₹2ಲಕ್ಷ ಲಂಚ ನೀಡುವಂತೆ ಬೇಡಿಕೆ ಇಟ್ಟಿದ್ದರು. ಇದರಲ್ಲಿ ₹1.5 ಲಕ್ಷ ಇಒ ಕಚೇರಿಯಲ್ಲೇ ಮುನಿರಾಜ ಅವರಿಗೆ ನೀಡುತ್ತಿದ್ದಾಗ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದ್ದಾರೆ.

ಲೋಕಾಯುಕ್ತ ಎಸ್.ಐ ಮೋಹನ್ ನೇತೃತ್ವದ ತಂಡ ದಾಳಿ ನಡೆಸಿದೆ.

ಸಂಶೋಧನೆಗೆ ಹೆಚ್ಚು ಆದ್ಯತೆ: ಗಾಂಧಿ

ಬೆಂಗಳೂರು: ‘ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ ಪ್ರಸ್ತುತ 23 ವಿಭಾಗಗಳಿದ್ದು, ಮುಂದಿನ ದಿನಗಳಲ್ಲಿ ಸಂಶೋಧನೆ ಮತ್ತು ಪ್ರಕಟಣೆಗಳಿಗೆ ಆದ್ಯತೆ ನೀಡಲಾಗುವುದು’ ಎಂದು ಕುಲಪತಿ ಲಿಂಗಾರಾಜ ಗಾಂಧಿ ಹೇಳಿದರು.

ಬೆಂಗಳೂರು ನಗರ ವಿಶ್ವವಿದ್ಯಾಲಯದ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥರಾದ ಎನ್. ನರಸಿಂಹಮೂರ್ತಿ, ರಸಾಯನಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಪಾಂಡುರಂಗಪ್ಪ, ಸಹಾಯಕ ಕುಲಸಚಿವರಾದ ಕವಿತಾ ಅವರಿಗೆ ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ‘ಮಾನವಿಕ ವಿಷಯಗಳ ಅಧ್ಯಯನ, ಕೌಶಲ ತರಬೇತಿ ಮತ್ತು ಉದ್ಯೋಗವಕಾಶಗಳ ನಿಯುಕ್ತಿಗೆ ವಿಶೇಷ ಪ್ರಾಮುಖ್ಯ ನೀಡಲಾಗುವುದು’ ಎಂದರು.

ಕುಲಸಚಿವರಾದ ಟಿ.ಜವರೇಗೌಡ ಕುಲಸಚಿವ (ಮೌಲ್ಯಮಾಪನ) ಆನಂದ ಕುಮಾರ್, ಆರ್ಥಿಕ ಅಧಿಕಾರಿ ಎಂ.ವಿ. ವಿಜಯಲಕ್ಷ್ಮಿ, ನಿರ್ಮಲಾ, ಹರಿಪ್ರಸಾದ್ ಇದ್ದರು.

ಬಾಲಕನಿಗೆ ಬ್ಲ್ಯಾಕ್‌ಮೇಲ್: 6 ಮಂದಿ ಬಂಧನ

ಆನ್‌ಲೈನ್ ಗೇಮ್ ಚಾಳಿ ತಂದ ಆಪತ್ತು • ₹23.50 ಲಕ್ಷ ನಗದು, 302 ಗ್ರಾಂ ಚಿನ್ನಾಭರಣ ಜಪ್ತಿ

ಪ್ರಜಾವಾಣಿ ವಾರ್ತೆ


ವಿವೇಕ್


ವೇಮನ್


ಕಾರ್ತಿಕ್ ಕುಮಾರ್


ಸುನೀಲ್

ಬೆಂಗಳೂರು: ಆನ್‌ಲೈನ್ ಗೇಮ್ ಆಡುತ್ತಿದ್ದ ಬಾಲಕನನ್ನು ಬ್ಲ್ಯಾಕ್‌ಮೇಲ್ ಮಾಡಿ ಚಿನ್ನಾಭರಣ ದೋಚಿದ್ದ ಆರೋಪದಡಿ ಇಬ್ಬರು ಸ್ನೇಹಿತರು ಸೇರಿ ಆರು ಮಂದಿಯನ್ನು ರಾಜರಾಜೇಶ್ವರಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ರಾಜರಾಜೇಶ್ವರಿನಗರದ ಸಚ್ಚಿದಾನಂದನಗರದ ವೇಮನ್ (19), ಕೆಂಗೇರಿ ಸ್ಯಾಟ್‌ಲೈಟ್ ಟೌನ್‌ನ ಆರ್. ವಿವೇಕ್ (19), ಕೊಪ್ಪಳ ಜಿಲ್ಲೆಯ ಗಂಗಾವತಿಯ ಎಂ. ಕಾರ್ತಿಕ್ ಕುಮಾರ್ (32) ಹಾಗೂ ಸುನೀಲ್ (30) ಬಂಧಿತರು. ಆರೋಪಿಗಳಲ್ಲಿ ಇಬ್ಬರು ಬಾಲಕರಾಗಿದ್ದು, ಹೆಸರು ಬಹಿರಂಗಪಡಿಸಲಾಗದು’ ಎಂದು ಪೊಲೀಸರು ಹೇಳಿದರು.

‘ಸಂತ್ರಸ್ತ ಬಾಲಕನ ತಂದೆ ಕೃತ್ಯದ ಬಗ್ಗೆ ದೂರು ನೀಡಿದ್ದರು. ತನಿಖೆ ಕೈಗೊಂಡು ಆರು ಮಂದಿಯನ್ನು ಸೆರೆ ಹಿಡಿಯಲಾಗಿದೆ. ಬಂಧಿತರಿಂದ ₹ 23.50 ಲಕ್ಷ ನಗದು ಹಾಗೂ ₹ 18 ಲಕ್ಷ ಮೌಲ್ಯದ 302 ಗ್ರಾಂ ತೂಕದ ಚಿನ್ನಾಭರಣ ಜಪ್ತಿ ಮಾಡಲಾಗಿದೆ. ನಾಲ್ವರು ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ, ಹೆಚ್ಚಿನ ವಿಚಾರಣೆಗಾಗಿ 10 ದಿನ ಕಸ್ಟಡಿಗೆ ಪಡೆಯಲಾಗಿದೆ’ ಎಂದು ತಿಳಿಸಿದರು.

ಸ್ನೇಹಿತರ ಸಂಚು: ‘ದೂರುದಾರ, ರಾಜರಾಜೇಶ್ವರಿನಗರ ನಿವಾಸಿ. ಗುತ್ತಿಗೆದಾರರಾಗಿ ಕೆಲಸ ಮಾಡುತ್ತಿದ್ದಾರೆ. ಇವರಿಗೆ ನಾಲ್ವರು ಮಕ್ಕಳಿದ್ದಾರೆ. ಅದರಲ್ಲಿ ಮೂವರು ಹೆಣ್ಣು ಮಕ್ಕಳು. 16 ವರ್ಷ ವಯಸ್ಸಿನ ಒಬ್ಬನೇ ಮಗನಿದ್ದಾನೆ. ಅದೇ ಮಗನನ್ನು ಬ್ಲ್ಯಾಕ್‌ಮೇಲ್ ಮಾಡಿ ಆರೋಪಿಗಳು ಚಿನ್ನಾಭರಣ ದೋಚಿದ್ದರು’ ಎಂದು ಪೊಲೀಸರು ಹೇಳಿದರು.

‘10ನೇ ತರಗತಿಯಲ್ಲಿ ಓದುತ್ತಿದ್ದ ಬಾಲಕ, ಕ್ರಿಕೆಟ್‌ನಲ್ಲಿ ಆಸಕ್ತಿ ಹೊಂದಿದ್ದ. ಹೀಗಾಗಿ, ಆತನನ್ನು ತರಬೇತಿಗೆಂದು ಸಂಸ್ಥೆಯೊಂದಕ್ಕೆ ಸೇರಿಸಲಾಗಿತ್ತು. ಇದರ ನಡುವೆಯೇ ಬಾಲಕ, ಹೆಚ್ಚಾಗಿ ಆನ್‌ಲೈನ್ ಗೇಮ್ ಆಡುತ್ತಿದ್ದ. ಇದಕ್ಕಾಗಿ ತಮ್ಮ ಸ್ನೇಹಿತರ ಮೊಬೈಲ್ ಬಳಸುತ್ತಿದ್ದ. ಈ ಸಂಗತಿ ಪೋಷಕರಿಗೆ ಗೊತ್ತಿರಲಿಲ್ಲ.’

‘ಬಾಲಕನ ಮನೆಗೆ ಆಗಾಗ ಹೋಗಿ ಬರುತ್ತಿದ್ದ ಸ್ನೇಹಿತರಿಬ್ಬರು, ಚಿನ್ನಾಭರಣ ಇರುವುದನ್ನು ನೋಡಿದ್ದರು. ಚಿನ್ನಾಭರಣ ದೋಚಲು ಸಂಚು ರೂಪಿಸಿದ್ದರು. ‘ಆನ್‌ಲೈನ್ ಗೇಮ್ ಆಡುವ ವಿಚಾರವನ್ನು ನಿನ್ನ ತಂದೆ–ತಾಯಿಗೆ ಹೇಳುತ್ತೇವೆ’ ಎಂಬುದಾಗಿ ಬಾಲಕನನ್ನು ಬೆದರಿಸಿದ್ದ ಸ್ನೇಹಿತರು, ತಮಗೆ ಹಣ ಹಾಗೂ ಚಿನ್ನಾಭರಣ ತಂದುಕೊಡುವಂತೆ ಬೇಡಿಕೆ ಇರಿಸಿದ್ದರು’ ಎಂದು ಪೊಲೀಸರು ತಿಳಿಸಿದರು.

‘ಆರಂಭದಲ್ಲಿ ಬಾಲಕ, ಕೆಲ ಚಿನ್ನಾಭರಣ ತಂದುಕೊಟ್ಟಿದ್ದ. ಇದಾದ ನಂತರವೂ ಸ್ನೇಹಿತರು ಪುನಃ ಬೆದರಿಕೆಯೊಡ್ಡಿದ್ದರು. ‘ನಮಗೆ ರೌಡಿಗಳು ಪರಿಚಯ ಇದ್ದಾರೆ. ನಿನ್ನನ್ನು ಹಾಗೂ ನಿನ್ನ ಮನೆಯವರನ್ನು ಸುಮ್ಮನೇ ಬಿಡುವುದಿಲ್ಲ’ ಎಂದು ಹೆದರಿಸಿದ್ದರು. ಅವಾಗಲೂ ಬಾಲಕ ಮತ್ತಷ್ಟು ಚಿನ್ನಾಭರಣ ತಂದುಕೊಟ್ಟಿದ್ದ’ ಎಂದು ಹೇಳಿದರು.

‘ದೂರುದಾರ ಹಾಗೂ ಅವರ ಹೆಣ್ಣುಮಕ್ಕಳು ಇತ್ತೀಚೆಗೆ ಸಂಬಂಧಿಕರೊಬ್ಬರ ಕಾರ್ಯಕ್ರಮಕ್ಕೆ ಹೊರಟಿದ್ದರು. ಚಿನ್ನಾಭರಣ ಧರಿಸಲೆಂದು ಕಬೋರ್ಡ್ ತೆರೆದು ನೋಡಿದ್ದರು. ಆದರೆ, ಕಬೋರ್ಡ್‌ನಲ್ಲಿ ಚಿನ್ನಾಭರಣ ಇರಲಿಲ್ಲ. ಮಗನನ್ನು ವಿಚಾರಿಸಿದಾಗ, ಬ್ಲ್ಯಾಕ್‌ಮೇಲ್ ವಿಷಯ ಗೊತ್ತಾಗಿತ್ತು. ಬಳಿಕವೇ ಅವರು ಠಾಣೆಗೆ ದೂರು ನೀಡಿದ್ದರು’ ಎಂದು ಪೊಲೀಸರು ತಿಳಿಸಿದರು.

ದೋಚಿದ್ದ ಆಭರಣ ಖರೀದಿ: ‘ಬಾಲಕನಿಂದ ದೋಚಿದ್ದ ಆಭರಣಗಳನ್ನು ಸ್ನೇಹಿತರು, ಪರಿಚಯಸ್ಥ ವೇಮನ್‌ಗೆ ನೀಡಿದ್ದರು. ಪ್ರಕರಣದ ಇತರೆ ಆರೋಪಿಗಳು, ವೇಮನ್ ಕಡೆಯಿಂದ ಆಭರಣ ಖರೀದಿಸಿದ್ದರು’ ಎಂದು ಪೊಲೀಸರು ಹೇಳಿದರು.

‘ವಿದೇಶಕ್ಕೆ ಪರಾರಿ-ಏಕೆ ತಡೆಯಲಿಲ್ಲ’

ಪ್ರಜಾವಾಣಿ ವಾರ್ತೆ


ದಿನೇಶ್ ಗುಂಡೂರಾವ್

ಹುಬ್ಬಳ್ಳಿ: ‘ಪ್ರಜ್ವಲ್ ರೇವಣ್ಣ ಮಹಿಳೆಯರ ಮೇಲೆ ನಡೆಸಿದ ಲೈಂಗಿಕ ದೌರ್ಜನ್ಯ ಪ್ರಕರಣ ಮೊದಲೇ ಗೊತ್ತಿದ್ದರೂ ಜೆಡಿಎಸ್ ಜತೆ ಬಿಜೆಪಿ ಹೊಂದಾಣಿಕೆ ಮಾಡಿಕೊಂಡಿದ್ದು ಯಾಕೆ. ಅವರು ವಿದೇಶಕ್ಕೆ ಪರಾರಿಯಾಗುವುದನ್ನು ಏಕೆ ತಡೆಯಲಿಲ್ಲ’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಪ್ರಶ್ನಿಸಿದರು.

‘ಪೆನ್‌ಡ್ರೈವ್ ಕುರಿತು ಹಾಸನದ ಬಿಜೆಪಿ ಮುಖಂಡರೊಬ್ಬರು ಕಳೆದ ಡಿಸೆಂಬರ್‌ನಲ್ಲೇ ಅಮಿತ್ ಶಾ, ಬಿ.ವೈ. ವಿಜಯೇಂದ್ರ ಅವರಿಗೆ ಪತ್ರ ಬರೆದಿದ್ದರು. ಆದರೂ ಏಕೆ ಅವರಿಗೆ ಟಿಕೆಟ್ ನೀಡಲಾಯಿತು? ಪ್ರಧಾನಿ ನರೇಂದ್ರ ಮೋದಿ ಅವರೇ ಬಂದು ಪ್ರಜ್ವಲ್ ಪರ ಪ್ರಚಾರ ನಡೆಸಿದ್ದಾರೆ’ ಎಂದು ಅವರು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

‘ಪ್ರಕರಣವನ್ನು ಸಮರ್ಥಿಸಿಕೊಳ್ಳುವ ಬದಲು ಪ್ರಜ್ವಲ್ ರೇವಣ್ಣಗೆ ವಿದೇಶದಿಂದ ಕರೆಸಿ ಎಸ್‌ಐಟಿ ಎದುರು ಹಾಜರುಪಡಿಸಬೇಕು. ಇಲ್ಲದಿದ್ದರೆ, ಅಮಿತ್ ಶಾ, ಎಚ್.ಡಿ.ಕುಮಾರಸ್ವಾಮಿ, ಪ್ರಲ್ಹಾದ ಜೋಶಿಯವರಿಗೆ ಮಾತನಾಡುವ ನೈತಿಕತೆ ಇರುವುದಿಲ್ಲ’ ಎಂದರು.

ಬಿಜೆಪಿ ಕಚೇರಿ ಮುತ್ತಿಗೆಗೆ ಯುವ ಕಾಂಗ್ರೆಸ್ ಪ್ರಯತ್ನ



ಹಾಸನ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಪ್ರಜ್ವಲ್ ರೇವಣ್ಣ ವಿದೇಶಕ್ಕೆ ಪರಾರಿಯಾಗಲು ಕೇಂದ್ರ ಸರ್ಕಾರ ನೆರವು ನೀಡಿದೆ ಎಂದು ಆರೋಪಿಸಿ, ರಾಷ್ಟ್ರೀಯ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಬಿ.ವಿ. ಶ್ರೀನಿವಾಸ್ ನೇತೃತ್ವದಲ್ಲಿ ಬೆಂಗಳೂರಿನ ಬಿಜೆಪಿ ಕೇಂದ್ರ ಕಚೇರಿಗೆ ಮಂಗಳವಾರ ಮುತ್ತಿಗೆ ಹಾಕಲು ಯತ್ನಿಸಿದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೂರಾರು ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿರುವ ಆರೋಪ ಎದುರಿಸುತ್ತಿರುವ ಹಾಸನ ಸಂಸದ ಪ್ರಜ್ವಲ್ ರೇವಣ್ಣ ವಿದೇಶಕ್ಕೆ ಪರಾರಿಯಾಗಲು ಕೇಂದ್ರ ಸರ್ಕಾರ ನೆರವು ನೀಡಿದೆ ಎಂದು ಆರೋಪಿಸಿ ಯುವ ಕಾಂಗ್ರೆಸ್ ಕಾರ್ಯಕರ್ತರು ಬಿಜೆಪಿ ರಾಜ್ಯ ಘಟಕದ ಕಚೇರಿಗೆ ಮುತ್ತಿಗೆ ಹಾಕಲು ಮಂಗಳವಾರ ಯತ್ನಿಸಿದರು.

ರಾಷ್ಟ್ರೀಯ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಬಿ.ವಿ. ಶ್ರೀನಿವಾಸ್ ನೇತೃತ್ವದಲ್ಲಿ ಘೋಷಣೆ ಕೂಗುತ್ತಾ ಮಲ್ಲೇಶ್ವರದಲ್ಲಿರುವ ಬಿಜೆಪಿ ರಾಜ್ಯ ಘಟಕದ ಕಚೇರಿ ಜಗನ್ನಾಥ ಭವನಕ್ಕೆ ಮುತ್ತಿಗೆ ಹಾಕಲು ಪ್ರತಿಭಟನಕಾರರು ಮುಂದಾದರು. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಪ್ರಜ್ವಲ್ ರಕ್ಷಣೆಗೆ ನಿಂತಿದೆ ಎಂದು ಆರೋಪಿಸಿದ ಯುವ ಕಾಂಗ್ರೆಸ್ ಕಾರ್ಯಕರ್ತರು, ಮೋದಿ ಮತ್ತು ಬಿಜೆಪಿ ವಿರುದ್ಧ ಘೋಷಣೆಗಳನ್ನು ಕೂಗಿದರು.

ತಕ್ಷಣ ಸ್ಥಳಕ್ಕೆ ಧಾವಿಸಿದ ಪೊಲೀಸರು, ಶ್ರೀನಿವಾಸ್ ಸೇರಿದಂತೆ ಹಲವು ಮಂದಿ ಪ್ರತಿಭಟನಕಾರರನ್ನು ವಶಕ್ಕೆ ಪಡೆದು, ಕರೆದೊಯ್ದರು. ಪ್ರತಿಭಟನಕಾರರನ್ನು ಬಸ್ಸಿನಲ್ಲಿ ಕರೆದೊಯ್ಯುವಾಗ ಪೊಲೀಸರು ಮತ್ತು ಯುವ ಕಾಂಗ್ರೆಸ್ ಕಾರ್ಯಕರ್ತರ ಮಧ್ಯೆ ತಳ್ಳಾಟ, ನೂಕಾಟವೂ ನಡೆಯಿತು.

ಎನ್‌ಎಸ್‌ಯುಐನಿಂದಲೂ ಪ್ರತಿಭಟನೆ: ಪ್ರಜ್ವಲ್ ರೇವಣ್ಣ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹಿಸಿ ಕಾಂಗ್ರೆಸ್ ಪಕ್ಷದ ವಿದ್ಯಾರ್ಥಿ ಸಂಘಟನೆ ಎನ್‌ಎಸ್‌ಯುಐ ನೇತೃತ್ವದಲ್ಲೂ ಮಂಗಳವಾರ ಪ್ರತಿಭಟನೆ ನಡೆಯಿತು.

ನಗರದ ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ಆವರಣದಲ್ಲಿ ನಡೆದ ಪ್ರತಿಭಟನೆಯಲ್ಲಿ ನೂರಾರು ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದರು. ಪ್ರಜ್ವಲ್ ವಿರುದ್ಧ ಘೋಷಣೆ ಕೂಗಿದ ಪ್ರತಿಭಟನಕಾರರು ಆಕ್ರೋಶ ವ್ಯಕ್ತಪಡಿಸಿದರು.

ಲೈಂಗಿಕ ದೌರ್ಜನ್ಯ ವಿರೋಧಿಸಿ ಎಎಪಿ ಪ್ರತಿಭಟನೆ

ತಂದೆ– ಮಗನ ಬಂಧನಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ


ಶಾಸಕ ಎಚ್‌.ಡಿ. ರೇವಣ್ಣ ಮತ್ತು ಸಂಸದ ಪ್ರಜ್ವಲ್ ಅವರನ್ನು ಬಂಧಿಸುವಂತೆ ಆಗ್ರಹಿಸಿ ಎಎಪಿ ಕಾರ್ಯಕರ್ತರು ಮಂಗಳವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ಬೆಂಗಳೂರು: ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ಎದುರಿಸುತ್ತಿರುವ ಶಾಸಕ ಎಚ್‌.ಡಿ. ರೇವಣ್ಣ ಮತ್ತು ಅವರ ಪುತ್ರ ಹಾಸನದ ಸಂಸದ ಪ್ರಜ್ವಲ್ ಅವರನ್ನು ಕೂಡಲೇ ಬಂಧಿಸುವಂತೆ ಆಗ್ರಹಿಸಿ ಆಮ್ ಆದ್ಮಿ ಪಕ್ಷದ (ಎಎಪಿ) ಕಾರ್ಯಕರ್ತರು ಮಂಗಳವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು.

‘ಈ ಲೈಂಗಿಕ ಹಗರಣ ರಾಜ್ಯಕ್ಕೆ ಕಳಂಕ ತಂದಿದೆ. ಪ್ರಧಾನಿ ನರೇಂದ್ರ ಮೋದಿ ಅವರಿಗೆ ದೇಶದ ಹೆಣ್ಣುಮಕ್ಕಳ ಬಗ್ಗೆ ಕಾಳಜಿ ಇದ್ದರೆ, ಪ್ರಜ್ವಲ್ ರೇವಣ್ಣ ಎಲ್ಲೇ ಇದ್ದರೂ ಎಳೆದುಕೊಂಡು ಬಂದು ಈ ನೆಲದ ಕಾನೂನಿನಂತೆ ಶಿಕ್ಷೆ ನೀಡಬೇಕು’ ಎಂದು ಎಎಪಿ ರಾಜ್ಯ ಸಂಘಟನಾ ಕಾರ್ಯದರ್ಶಿ ಮೋಹನ್ ದಾಸರಿ ಒತ್ತಾಯಿಸಿದರು.

‘ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಇಬ್ಬರು ಮಹಿಳೆಯರು ದೂರು ನೀಡಿದ್ದಾರೆ. ಸಂತ್ರಸ್ತ ಮಹಿಳೆಯರಿಗೆ ಸೂಕ್ತ ರಕ್ಷಣೆ ನೀಡಬೇಕು’ ಎಂದು ಒತ್ತಾಯಿಸಿದರು.

‘ಪ್ರಜೊಲ್ಲ ರೇಪಣ್ಣ’, ‘ಮೋದಿ ಪರಿವಾರ ದೇಶಕ್ಕೆ ಸಂಚಕಾರ’, ‘ಮೋದಿ ಮಾತನಾಡಬೇಕು’, ‘ಮೋದಿ ಉತ್ತರಿಸಿ’, ‘ಕಾಮ ಪಿಶಾಚಿ ತೊಲಗಬೇಕು’, ‘ಬಲಾತ್ಕಾರಿ ಜನತಾ ಪಕ್ಷಕ್ಕೆ ಧಿಕ್ಕಾರ’, ‘ಬ್ಲೂಜೆಪಿಗೆ ಧಿಕ್ಕಾರ’ ಎಂಬ ಫಲಕಗಳನ್ನು ಹಿಡಿದು ಪ್ರತಿಭಟನೆ ನಡೆಸಿದರು.

ಎಎಪಿ ರಾಜ್ಯ ಉಪಾಧ್ಯಕ್ಷ ಡಾ. ರಮೇಶ್ ಬೆಳ್ಳಂಕೊಂಡ, ರಾಜ್ಯ ಕಾರ್ಯದರ್ಶಿ ಉಷಾ ಮೋಹನ್, ರಾಜ್ಯ ಮಾಧ್ಯಮ ಸಂಚಾಲಕ ಜಗದೀಶ್ ವಿ. ಸದಂ, ಬೆಂಗಳೂರು ಮಹಿಳಾ ಘಟಕದ ಅಧ್ಯಕ್ಷ ವೀಣಾ ಸರಾವು, ಬೆಂಗಳೂರು ನಗರ ಅಧ್ಯಕ್ಷ ಸತೀಶ್ ಕುಮಾರ್, ಯುವ ಘಟಕದ ಅಧ್ಯಕ್ಷ ಲೋಹಿತ್ ಹನುಮಾಪುರ ಭಾಗವಹಿಸಿದ್ದರು.



ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ಎದುರಿಸುತ್ತಿರುವ ಹಾಸನ ಸಂಸದ ಪ್ರಜ್ವಲ್ ರೇವಣ್ಣ ಅವರನ್ನು ಬಂಧಿಸುವಂತೆ ಆಗ್ರಹಿಸಿ ಭಾರತೀಯ ರಾಷ್ಟ್ರೀಯ ವಿದ್ಯಾರ್ಥಿ ಒಕ್ಕೂಟದ (ಎನ್‌ಎಸ್‌ಯುಐ) ನೇತೃತ್ವದಲ್ಲಿ ವಿದ್ಯಾರ್ಥಿಗಳು ನಗರದ ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ಆವರಣದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ಪ್ರಜ್ವಲ್ ಗೆಲ್ಲಿಸಿದ್ದು ಯಾರು?: ಅಶೋಕ

ಹುಬ್ಬಳ್ಳಿ: ‘ಪ್ರಜ್ವಲ್ ಪ್ರಕರಣಕ್ಕೂ ಬಿಜೆಪಿಗೂ ಯಾವುದೇ ಸಂಬಂಧ ಇಲ್ಲ ಎಂದು ಎಚ್.ಡಿ.ಕುಮಾರಸ್ವಾಮಿ ಅವರೇ ಹೇಳಿದ್ದಾರೆ. ಪ್ರಜ್ವಲ್ ಈಗ ಎನ್‌ಡಿಎ ಅಭ್ಯರ್ಥಿ. ಅವರು ಗೆದ್ದ ನಂತರ ಪ್ರಶ್ನಿಸಿದರೆ, ನಾವು ಉತ್ತರಿಸುತ್ತೇವೆ’ ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಆರ್.ಅಶೋಕ ಹೇಳಿದರು.

‘ಕಾಂಗ್ರೆಸ್–ಜೆಡಿಎಸ್ ಮೈತ್ರಿ ಸರ್ಕಾರ ಇದ್ದಾಗ ಪ್ರಜ್ವಲ್ ರೇವಣ್ಣ ಅವರಿಗೆ ಟಿಕೆಟ್ ಕೊಟ್ಟು, ಪ್ರಚಾರ ಮಾಡಿ, ಗೆಲ್ಲಿಸಿದ್ದು ಯಾರು ಎಂಬುದನ್ನು ಕಾಂಗ್ರೆಸ್‌ನವರೇ ಉತ್ತರಿಸಲಿ’ ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ಆಗ್ರಹಿಸಿದರು.

ಅಪ್ರಾಪ್ತ ವಯಸ್ಸಿನವರ ಬಳಕೆ ಶಂಕೆ ವರದಿ ಕೇಳಿದ ಮಕ್ಕಳ ಹಕ್ಕುಗಳ ಆಯೋಗ


ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಸನದ ಸಂಸದ ಪ್ರಜ್ವಲ್ ರೇವಣ್ಣ ಅವರು ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎನ್ನಲಾದ ಪ್ರಕರಣದಲ್ಲಿ ಅಪ್ರಾಪ್ತ ವಯಸ್ಸಿನವರನ್ನು ಬಳಸಿಕೊಂಡಿರುವ ಬಗ್ಗೆ ಮಾಹಿತಿ ತಿಳಿದು ಬಂದಲ್ಲಿ, ಆ ಬಗ್ಗೆ ವರದಿಯನ್ನು ಸಲ್ಲಿಸುವಂತೆ ವಿಶೇಷ ತನಿಖಾ ದಳದ (ಎಸ್‌ಐಟಿ) ಮುಖ್ಯಸ್ಥ ಬಿಜಯ್ ಕುಮಾರ್ ಸಿಂಗ್ ಅವರಿಗೆ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಪತ್ರ ಬರೆದಿದೆ.

ಈ ಬಗ್ಗೆ ಆಯೋಗವು ಬಿಜಯ್ ಕುಮಾರ್ ಸಿಂಗ್ ಅವರಿಗೆ ಪತ್ರ ಬರೆದಿದೆ. ಈ ಪ್ರಕರಣದಲ್ಲಿ ಓರ್ವ ಸಂತ್ರಸ್ತೆಯು ತನ್ನ ಮಗಳೊಂದಿಗೆ ವಿಡಿಯೊ ಕಾಲ್ ಮೂಲಕ ಅಸಭ್ಯವಾಗಿ ವರ್ತಿಸಿದ್ದಾರೆ ಎಂದು ಹೇಳಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ. ಅಲ್ಲದೆ, ಈ ಪ್ರಕರಣದಲ್ಲಿ ಬಾಲಕಿಯರನ್ನೂ ಬಳಸಿಕೊಂಡಿರುವ ಬಗ್ಗೆ ಮೇಲ್ನೋಟಕ್ಕೆ ಅನುಮಾನ ಮೂಡಲಾರಂಭಿಸಿದೆ. ಆದ್ದರಿಂದ ಪ್ರಕರಣದ ವಿಚಾರಣೆ ನಡೆಸಿ, ಬಾಲಕಿಯರನ್ನು ಬಳಸಿಕೊಂಡಿರುವ ಬಗ್ಗೆ ಮಾಹಿತಿ ತಿಳಿದು ಬಂದಲ್ಲಿ ವರದಿಯನ್ನು ನೀಡಿ ಎಂದು ಪತ್ರದಲ್ಲಿ ಕೋರಲಾಗಿದೆ.

‘ಮೋದಿ, ಗೌಡರ ಕುಟುಂಬವೇ ಹೊಣೆ’

ಪ್ರಜಾವಾಣಿ ವಾರ್ತೆ


ಡಿ.ಕೆ. ಸುರೇಶ್

ಬೆಂಗಳೂರು: ಹಾಸನ ಸಂಸದ ಪ್ರಜ್ವಲ್ ರೇವಣ್ಣ ನಡೆಸಿರುವ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣ ದೇಶದಲ್ಲೇ ಅತಿ ದೊಡ್ಡದು. ಇದಕ್ಕೆ ಪ್ರಧಾನಿ ನರೇಂದ್ರ ಮೋದಿ ಮತ್ತು ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡರ ಕುಟುಂಬ ನೇರ ಹೊಣೆ ಎಂದು ಕಾಂಗ್ರೆಸ್ ಸಂಸದ ಡಿ.ಕೆ. ಸುರೇಶ್ ಆರೋಪಿಸಿದರು.

‘ಡಿ.ಕೆ. ಶಿವಕುಮಾರ್ ಮತ್ತು ಡಿ.ಕೆ. ಸುರೇಶ್ ಅವರಿಗೆ ಮೊದಲೇ ಈ ಪ್ರಕರಣದ ಮಾಹಿತಿ ಇತ್ತು’ ಎಂಬ ಜೆಡಿಎಸ್ ನಾಯಕರ ಆರೋಪಗಳ ಕುರಿತು ಸುದ್ದಿಗಾರರಿಗೆ ಮಂಗಳವಾರ ಪ್ರತಿಕ್ರಿಯಿಸಿದ ಅವರು, ‘ಹಾಸನದ ಬಿಜೆಪಿ ನಾಯಕ ದೇವರಾಜೇಗೌಡ ಈ ಬಗ್ಗೆ ಅವರ ಪಕ್ಷದ ನಾಯಕರಿಗೆ ಪತ್ರ ಬರೆದಿದ್ದರು. ಪ್ರಧಾನಿ, ಅವರ ಸಚಿವಾಲಯ, ದೇವೇಗೌಡರ ಕುಟುಂಬಕ್ಕೆ ಎಲ್ಲವೂ ಗೊತ್ತಿತ್ತು. ಆದರೂ ಹಾಸನ ಕ್ಷೇತ್ರದಲ್ಲಿ ಪ್ರಜ್ವಲ್ ಅವರನ್ನು ಮೈತ್ರಿಕೂಟದ ಅಭ್ಯರ್ಥಿಯನ್ನಾಗಿ ಕಣಕ್ಕಿಳಿಸಿ ಕನ್ನಡಿಗರು ಮತ್ತು ಹಾಸನ ಜಿಲ್ಲೆಯ ಮಾನ ಕಳೆದರು’ ಎಂದು ಹೇಳಿದರು.

‘ಈ ಬಗ್ಗೆ ಹಾಸನದಲ್ಲಿ ಗುಸು ಗುಸು ಸುದ್ದಿ ಹಬ್ಬಿತ್ತು. ದಾಖಲೆಗಳು ಇಲ್ಲದೇ ಮಾತನಾಡವುದು ಸೂಕ್ತವಲ್ಲ. ನಮಗೆ ವಿಷಯ ಗೊತ್ತಿದ್ದರೆ ಈ ಪ್ರಕರಣ ಇನ್ನೂ ಮುಂಚೆಯೇ ಹೊರಬರುತ್ತಿತ್ತು. ಆರೋಪ ಮಾಡುವುದಕ್ಕಾಗಿಯೇ ನಮ್ಮ ಹೆಸರನ್ನು ಎಳೆದು ತರಲಾಗುತ್ತಿದೆ’ ಎಂದು ಹೇಳಿದರು.

‘ಪ್ರಜ್ವಲ್ ಮಾಜಿ ಪ್ರಧಾನಿಯವರ ಕುಟುಂಬದ ಸದಸ್ಯ. ಈಗ ನಮ್ಮ ಕುಟುಂಬದ ಸದಸ್ಯರಲ್ಲ ಎಂದು ಹೇಳಬಹುದು. ಲೋಕಸಭಾ ಚುನಾವಣಾ ಪ್ರಚಾರದಲ್ಲೇ ಕುಮಾರಸ್ವಾಮಿ ಅವರು ಪ್ರಜ್ವಲ್ ನನ್ನ ಮಗ ಎಂದಿಲ್ಲವೆ? 500ಕ್ಕೂ ಹೆಚ್ಚು ಮಹಿಳೆಯರ ಮೇಲೆ ದೌರ್ಜನ್ಯ ನಡೆದಿದೆ. ಇಂತಹ ಘೋರ ಕೃತ್ಯದ ಬಗ್ಗೆ ಮಾಹಿತಿ ಇದ್ದರೂ ಮುಚ್ಚಿಟ್ಟಿರುವುದು ಆ ಕುಟುಂಬದ ಮಹಾಪರಾಧ’ ಎಂದು ಸುರೇಶ್ ದೂರಿದರು.

‘ಪ್ರಕರಣದ ತನಿಖೆಗೆ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಲಾಗಿದೆ. ಇದೊಂದು ದೊಡ್ಡ ಪ್ರಕರಣ. ಕರ್ನಾಟಕದಿಂದ ದೆಹಲಿಯವರೆಗೂ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ನಡೆದಿರುವ ಆರೋಪಗಳಿವೆ. ತನಿಖೆಯ ಅವಧಿಯಲ್ಲಿ ಸಂತ್ರಸ್ತ ಮಹಿಳೆಯರಿಗೆ ಸರ್ಕಾರ ರಕ್ಷಣೆ ಒದಗಿಸಬೇಕು. ತಕ್ಷಣವೇ ಆ ಕೆಲಸ ಮಾಡಬೇಕು’ ಎಂದು ಆಗ್ರಹಿಸಿದರು.

ಹಗಲು ಪರಿಷೆ: ಕುರ್ಜು ಬಂಡಿ ಮೆರವಣಿಗೆ

ಪ್ರಜಾವಾಣಿ ವಾರ್ತೆ

ಹೆಸರಘಟ್ಟ: ತೋಟಗೆರೆ ಶ್ರೀಬಸವೇಶ್ವರ ಸ್ವಾಮಿ ಜಾತ್ರೆಯ ನಾಲ್ಕನೇ ದಿನವಾದ ಮಂಗಳವಾರ ನಡೆದ ಹಗಲು ಪರಿಷೆಯಲ್ಲಿ ಕುರ್ಜು ಬಂಡಿ ಮೆರವಣಿಗೆ ನಡೆಯಿತು.

ತೋಟಗೆರೆ, ಹೆಸರಘಟ್ಟ, ಗುಡ್ಡದ ಹಳ್ಳಿ, ದಾಸೇನಹಳ್ಳಿ ಹೊಸಹಳ್ಳಿ ಪಾಳ್ಯ, ಶ್ಯಾಮಭಟ್ಟರಪಾಳ್ಯ ಗ್ರಾಮಗಳಿಂದ ಕುರ್ಜುಗಳು ಮತ್ತು 25ಕ್ಕೂ ಹೆಚ್ಚು ಪಾನಕದ ಬಂಡಿಗಳಿಗೆ ಎತ್ತುಗಳನ್ನು ಕಟ್ಟಿ ಬಸವೇಶ್ವರ ಸ್ವಾಮಿಯ ದೇವಾಲಯದ ಬಳಿ ತೆರಳಿ ಪೂಜೆ ಸಲ್ಲಿಸುವುದು ಹಗಲು ಪರಿಷೆಯ ವಿಶೇಷವಾಗಿದೆ.

ಜೋಡಿ ಎತ್ತುಗಳನ್ನು ಶುಭ್ರಗೊಳಿಸಿ ಅವುಗಳ ಕೊರಳಿಗೆ ದಂಡೆ, ಶಂಖ, ಕಾಲಿಗೆ ಗೆಜ್ಜೆ, ಕೊಂಬುಗಳಿಗೆ ಬಣ್ಣ ಹಚ್ಚಿ, ಟೇಪ್‌ಗಳನ್ನು ಕಟ್ಟಿ ಅಲಂಕರಿಸಿ ಹಾಗೂ ಎತ್ತಿನ ಗಾಡಿಗಳಿಗೆ ಕುರ್ಜುಗಳನ್ನು ಕಟ್ಟಿ ಸಿಂಗರಿಸಲಾಗಿತ್ತು.

ಎತ್ತಿನ ಗಾಡಿಗಳಲ್ಲಿ ಪಾನಕ, ಮಜ್ಜಿಗೆ ಕೋಸಂಬರಿ ಇಟ್ಟುಕೊಂಡು ದೇವಾಲಯಕ್ಕೆ ತೆರಳಿ ಪೂಜೆ ಸಲ್ಲಿಸಿದ ನಂತರ ದೇವಾಲಯದ ಆವರಣದಲ್ಲಿ ಜಾತ್ರೆಗೆ ಆಗಮಿಸಿದ ಭಕ್ತಾದಿಗಳಿಗೆ ವಿತರಿಸಿದರು.


ಹೆಸರಘಟ್ಟ ಸಮೀಪದ ಶ್ರೀ ತೋಟಗೆರೆ ಬಸವೇಶ್ವರ ಸ್ವಾಮಿಯ ಜಾತ್ರಾ ಮಹೋತ್ಸವ ಮಂಗಳವಾರ ನಡೆಯಿತು.

ಚಿಕ್ಕಬಾಣಾವರ ಕೆರೆ: ಚುರುಕುಗೊಂಡ ಕಾಮಗಾರಿ

ಪೀಣ್ಯ ದಾಸರಹಳ್ಳಿ: ಮಳೆಗಾಲ ಆರಂಭವಾಗುವ ಮೊದಲು ಕಾಮಗಾರಿ ಪೂರ್ಣಗೊಳಿಸುವ ಗುರಿ ಇಟ್ಟುಕೊಂಡು ಚಿಕ್ಕಬಾಣಾವರ ಕೆರೆಯ ಪುನರುಜ್ಜೀವನ ಕಾಮಗಾರಿ ಭರದಿಂದ ಸಾಗಿದೆ.

105 ಎಕರೆ ಪ್ರದೇಶದಲ್ಲಿ ವ್ಯಾಪಿಸಿರುವ ಈ ಕೆರೆಯನ್ನು ಬಿಡಿಎ ಮಂಜೂರು ಮಾಡಿರುವ ₹12.60 ಕೋಟಿ ಮತ್ತು ಪುರಸಭೆಯ ₹2 ಕೋಟಿ ಅನುದಾನದಲ್ಲಿ ಅಭಿವೃದ್ಧಿ ಮಾಡಲಾಗುತ್ತಿದೆ.

ಈ ಮೊದಲು ಕೆರೆಯು ಕೊಳಚೆಯಿಂದ ತುಂಬಿಹೋಗಿತ್ತು. ಹೂಳು, ಹೂಳು ಮಿಶ್ರಿತ ಮರಳು ಕೂಡ ತುಂಬಿತ್ತು. ಈಗ ಹೂಳು ತೆಗೆದು ಕೆರೆ ದಂಡೆ ಅಥವಾ ನಿಗದಿತ ಡಂಪ್ ಯಾರ್ಡ್‌ಗಳಲ್ಲಿ ಸಂಗ್ರಹ ಮಾಡಲಾಗುತ್ತದೆ. ಕೆರೆಯ ಸುತ್ತ ವಾಕ್‌ವೇ ಮಣ್ಣಿನ ಒಡ್ಡು ನಿರ್ಮಿಸುವ ಕಾರ್ಯವನ್ನು ಬಿಡಿಎ ಮಾಡುತ್ತಿದೆ. ತ್ಯಾಜ್ಯ ನೀರು ಕೆರೆಗೆ ಹರಿಯದಂತೆ ಚರಂಡಿ ನಿರ್ಮಾಣ ಮಾಡಲಾಗುತ್ತಿದೆ.

‘ಈಗಾಗಲೇ ಕೆರೆಯ ಅಂಗಳದಲ್ಲಿದ್ದ ಜೊಂಡು, ಗಿಡಗಂಟಿಗಳನ್ನು ತೆಗೆಯಲಾಗಿದೆ. ಕೆರೆಯ ಹೂಳು ತೆಗೆದು ವಾಕಿಂಗ್ ಪಾತ್ ನಿರ್ಮಿಸಲಾಗುತ್ತಿದೆ. ಈಗಾಗಲೇ ಶೇ 40ರಷ್ಟು ಕೆಲಸ ಮುಗಿದಿದೆ’ ಎಂದು ಪುರಸಭೆ ಮುಖ್ಯಾಧಿಕಾರಿ ಎಚ್.ಎ. ಕುಮಾರ್ ಮಾಹಿತಿ ನೀಡಿದರು. ‘ಮನೆ, ಕೈಗಾರಿಕೆ, ಅಪಾರ್ಟ್‌ಮೆಂಟ್, ರಾಜಕಾಲುವೆಗಳಿಂದ ಬರುತ್ತಿದ್ದ ಕಲುಷಿತ ನೀರು ಕೆರೆಗೆ ಬಾರದಂತೆ ತಡೆಯಲಾಗಿದೆ. ಕೆರೆ ಮಣ್ಣು, ಕಲುಷಿತ ನೀರು ತೆಗೆದು ಸುತ್ತಲೂ ಸಂರಕ್ಷಣೆ ಮಾಡುತ್ತಿದ್ದಾರೆ’ ಎಂದು ಸ್ಥಳೀಯ ನಿವಾಸಿ ಬಿ.ಎಂ. ಚಿಕ್ಕಣ್ಣ ಮಾಹಿತಿ ನೀಡಿದರು.

‘ಕೆರೆಯ ಮಣ್ಣು ಎತ್ತುವ ಕಾರ್ಯ ಮಾಡಲಾಗುತ್ತದೆ. ಮಳೆಗಾಲ ಬರುವಷ್ಟರಲ್ಲಿ ಬೇಗ ಕಾಮಗಾರಿ ಮುಗಿಯಲಿದೆ’ ಎಂದು ಬಿಡಿಎ ಎಂಜಿನಿಯರ್ ನಿರಂಜನ್ ವಿಶ್ವಾಸ ವ್ಯಕ್ತಪಡಿಸಿದರು.


ಚಿಕ್ಕಬಾಣಾವರ ಕೆರೆ ಅಭಿವೃದ್ಧಿ ಕಾರ್ಯ ನಡೆಯುತ್ತಿದೆ

'ಪಾವತಿಸಿ ಮತ್ತು ನಿಲುಗಡೆ ಮಾಡಿ' ಮಾದರಿಯಲ್ಲಿ ಹೆಚ್ಚಿನ ಹಣ ವಸೂಲಿ • ವಾಹನ ಸವಾರರ ಅಸಮಾಧಾನ

ಸ್ಥಗಿತಗೊಂಡ 'ಸ್ಮಾರ್ಟ್ ಪಾರ್ಕಿಂಗ್ ವ್ಯವಸ್ಥೆ'

• ಖಲೀಲಅಹ್ಮದ ಶೇಖ

ಬೆಂಗಳೂರು: ನಗರದ ಕೇಂದ್ರ ವಾಣಿಜ್ಯ ಪ್ರದೇಶದ ಎಂಟು ರಸ್ತೆಗಳಲ್ಲಿರುವ ಸ್ಮಾರ್ಟ್ ಪಾರ್ಕಿಂಗ್ ವ್ಯವಸ್ಥೆಯನ್ನು ಸ್ಥಗಿತಗೊಳಿಸಲಾಗಿದೆ. ಇಲ್ಲಿ 'ಪಾವತಿಸಿ ಮತ್ತು ನಿಲುಗಡೆ ಮಾಡಿ' ಎಂಬ ಹಳೆಯ ಮಾದರಿಯನ್ನು ಅನುಸರಿಸಲಾಗುತ್ತಿದೆ. ಆದರೆ, ಹಳೆಯ ಮಾದರಿ ಅನುಸರಿಸುತ್ತಿರುವ ಬಗ್ಗೆ ಬಿಬಿಎಂಪಿಗೆ ಯಾವುದೇ ರೀತಿಯ ಮಾಹಿತಿ ಇಲ್ಲ.

ನಗರದಲ್ಲಿ ವರ್ಷದಿಂದ ವರ್ಷಕ್ಕೆ ವಾಹನಗಳ ಸಂಖ್ಯೆ ಹೆಚ್ಚಾಗುತ್ತಿದೆ. ಜೊತೆಗೆ ನಗರದ ಬಹುತೇಕ ಪ್ರದೇಶಗಳಲ್ಲಿ ಸಮರ್ಪಕವಾದ ಪಾರ್ಕಿಂಗ್ ವ್ಯವಸ್ಥೆಯೂ ಇಲ್ಲ. ಮನೆಯಿಂದ ವಾಹನಗಳಲ್ಲಿ ಹೊರಗೆ ಬರುವ ಜನ, ಪಾರ್ಕಿಂಗ್ ಜಾಗಕ್ಕಾಗಿ ಹುಡುಕಾಡುವ ಸ್ಥಿತಿ ಇದೆ. ಇಂತಹ ಸಂದರ್ಭದಲ್ಲಿ 'ಸ್ಮಾರ್ಟ್ ಪಾರ್ಕಿಂಗ್ ವ್ಯವಸ್ಥೆ' ಸ್ಥಗಿತಗೊಂಡಿರುವುದು ವಾಹನ ಸವಾರರ ಆಕ್ರೋಶಕ್ಕೆ ಕಾರಣವಾಗಿದೆ.

'ನಗರದ ಪ್ರಮುಖ ರಸ್ತೆಗಳಲ್ಲಿನ ಪಾರ್ಕಿಂಗ್ ಸಮಸ್ಯೆಗೆ ಪರಿಹಾರವಾಗಿ 2018ರಲ್ಲಿ ಬಿಬಿಎಂಪಿ ವ್ಯಾಪ್ತಿಯ 8 ರಸ್ತೆಗಳಲ್ಲಿ ಸೆಂಟ್ರಲ್ ಪಾರ್ಕಿಂಗ್ ಸರ್ವೀಸಸ್ (ಸಿಪಿಎಸ್) ಸಂಸ್ಥೆಗೆ ಸ್ಮಾರ್ಟ್ ಪಾರ್ಕಿಂಗ್ ವ್ಯವಸ್ಥೆ ಜಾರಿಗೊಳಿಸಲು ಅವಕಾಶ ನೀಡಲಾಗಿತ್ತು. 2020ರ ಸೆ. 19ರಂದು ಮಹಾತ್ಮ ಗಾಂಧಿ ರಸ್ತೆ, ಚರ್ಚ್ ಸ್ಟ್ರೀಟ್, ಬ್ರಿಗೇಡ್ ರಸ್ತೆ, ಮಲ್ಯ ರಸ್ತೆ, ರೆಸಿಡೆನ್ಸಿ ರಸ್ತೆ, ಅಲಿ ಅಸ್ಕರ್ ರಸ್ತೆ, ಸೇಂಟ್ ಮಾರ್ಕ್ಸ್ ರಸ್ತೆ, ಮ್ಯೂಸಿಯಂ ರಸ್ತೆ ಹಾಗೂ ಕನ್ನಿಂಗ್‌ಹ್ಯಾಮ್ ರಸ್ತೆಗಳಲ್ಲಿ ಸಿಪಿಎಸ್ ಸಂಸ್ಥೆಯು ಸ್ಮಾರ್ಟ್ ಪಾರ್ಕಿಂಗ್ ವ್ಯವಸ್ಥೆ ಜಾರಿಗೊಳಿಸಿ, ಶುಲ್ಕ ವಸೂಲಿ ಪ್ರಾರಂಭಿಸಿತ್ತು. ಈಗ ಅದನ್ನು ಸ್ಥಗಿತಗೊಳಿಸಿದೆ' ಎಂದು ಬಿಬಿಎಂಪಿ ಅಧಿಕಾರಿಗಳು ಮಾಹಿತಿ ನೀಡಿದರು.

'ಸ್ಮಾರ್ಟ್ ಪಾರ್ಕಿಂಗ್ ಯೋಜನೆಯಲ್ಲಿ ರಸ್ತೆಗಳನ್ನು ಮೂರು ವರ್ಗಗಳನ್ನಾಗಿ ವಿಂಗಡಿಸಲಾಗಿದೆ. 'ಎ' ವರ್ಗದ ರಸ್ತೆಗಳಲ್ಲಿ ಪ್ರತಿ ಗಂಟೆಗೆ ದ್ವಿಚಕ್ರಕ್ಕೆ ₹15, ಕಾರಿಗೆ ₹30 ನಿಲುಗಡೆ ಶುಲ್ಕವಿದೆ. 'ಬಿ' ವರ್ಗದ ರಸ್ತೆಗಳಲ್ಲಿ ದ್ವಿಚಕ್ರಕ್ಕೆ ₹10, ಕಾರಿಗೆ ₹20 ಹಾಗೂ 'ಸಿ' ವರ್ಗದ ರಸ್ತೆಗಳಲ್ಲಿ ದ್ವಿಚಕ್ರಕ್ಕೆ ₹5, ಕಾರಿಗೆ ₹10 ನಿಗದಪಡಿಸಲಾಗಿತ್ತು. ಇದಕ್ಕಾಗಿ ಆ್ಯಪ್‌ವೊಂದನ್ನು ಅಭಿವೃದ್ಧಿಪಡಿಸಲಾಗಿತ್ತು' ಎಂದು ತಿಳಿಸಿದರು.

'ಸ್ಮಾರ್ಟ್ ಪಾರ್ಕಿಂಗ್ ಇರುವ ರಸ್ತೆಗಳಲ್ಲಿ ಹಳೆ ಮಾದರಿ ಅನುಸರಿಸಿ ಪಾರ್ಕಿಂಗ್ ಶುಲ್ಕ ಪಡೆದುಕೊಳ್ಳುತ್ತಿರುವುದು ನಮ್ಮ ಗಮನಕ್ಕೆ ಬಂದಿಲ್ಲ. ಈ ಬಗ್ಗೆ ಯಾರಾದರೂ ದೂರು ನೀಡಿದರೆ ಕ್ರಮ ಕೈಗೊಳ್ಳಲಾಗುವುದು. ಸಿಪಿಎಸ್ ಸಂಸ್ಥೆ ಹೊರತುಪಡಿಸಿ ಬೇರೆ ಯಾರೂ ಇಲ್ಲಿ ಪಾರ್ಕಿಂಗ್ ಶುಲ್ಕ ಪಡೆದುಕೊಳ್ಳುವಂತಿಲ್ಲ' ಎಂದರು.


'ನಗರದ ಎಂಟು ಪ್ರಮುಖ ರಸ್ತೆಗಳಲ್ಲಿ ಸ್ಮಾರ್ಟ್ ಪಾರ್ಕಿಂಗ್ ವ್ಯವಸ್ಥೆ ಸ್ಥಗಿತಗೊಂಡಿರುವ ಬಗ್ಗೆ ಗೊತ್ತಿಲ್ಲದ ವಾಹನ ಸವಾರರಿಂದ, ಕೆಲವರು ವಾಹನ ನಿಲುಗಡೆ ಶುಲ್ಕ ಪಡೆದುಕೊಳ್ಳುತ್ತಿದ್ದಾರೆ. ದ್ವಿಚಕ್ರ ವಾಹನಗಳಿಗೆ ಪ್ರತಿ ಗಂಟೆಗೆ ₹10–15, ನಾಲ್ಕು ಕಾರಿಗೆ ₹20–30 ಪಡೆದುಕೊಳ್ಳಲಾಗುತ್ತಿದೆ. ಬಿಬಿಎಂಪಿ ಪೇ ಆ್ಯಂಡ್ ಪಾರ್ಕ್ ಎಂದು ನಮೂದಿಸಲಾದ ರಶೀದಿಗಳನ್ನು ನೀಡುತ್ತಿದ್ದಾರೆ' ಎಂದು ದ್ವಿಚಕ್ರ ವಾಹನ ಸವಾರ ಸುಹಾಸ್ ದೂರಿದರು.



ಮಹಾತ್ಮ ಗಾಂಧಿ ರಸ್ತೆಯಲ್ಲಿರುವ ಸ್ಮಾರ್ಟ್ ಪಾರ್ಕಿಂಗ್ ಯಂತ್ರ ಸ್ಥಗಿತಗೊಂಡಿರುವುದು

'ಟೆಂಡರ್ ಕರೆಯಲು ಅನುಮೋದನೆ'

'ಕೇಂದ್ರ ವಾಣಿಜ್ಯ ಪ್ರದೇಶದ ಎಂಟು ರಸ್ತೆಗಳಲ್ಲಿ ಸೆಂಟ್ರಲ್ ಪಾರ್ಕಿಂಗ್ ಸರ್ವೀಸಸ್ (ಸಿಪಿಎಸ್) ಸಂಸ್ಥೆಗೆ 10 ವರ್ಷಗಳ ಅವಧಿಗೆ ಗುತ್ತಿಗೆ ನೀಡಿದೆ. ಎಂಟು ರಸ್ತೆಗಳಲ್ಲಿರುವ ಸ್ಮಾರ್ಟ್ ಪಾರ್ಕಿಂಗ್‌ನಿಂದ ನಿರೀಕ್ಷಿತ ಮಟ್ಟದ ಆದಾಯ ಬರದ ಕಾರಣ, ಪಾರ್ಕಿಂಗ್ ವ್ಯವಸ್ಥೆಯನ್ನು ಸ್ಥಗಿತಗೊಳಿಸಲಾಗಿದೆ. ಪ್ರತಿ ತಿಂಗಳು ಬಿಬಿಎಂಪಿಗೆ ಪಾವತಿಸಬೇಕಾದ ಹಣ ಪಾವತಿಸಿಲ್ಲ. ಆದ್ದರಿಂದ, ಸಂಸ್ಥೆಗೆ ನೋಟಿಸ್ ನೀಡಲಾಗಿದೆ. ಬಾಕಿ ಹಣ ಪಾವತಿಸಿದ ನಂತರ ಹೊಸದಾಗಿ ಟೆಂಡರ್ ಕರೆಯಲು ಅನುಮೋದನೆ ಪಡೆದುಕೊಳ್ಳಲಾಗುವುದು' ಎಂದು ಬಿಬಿಎಂಪಿ ಟ್ರಾಫಿಕ್ ಎಂಜಿನಿಯರಿಂಗ್ ಕೋಶದ (ಟಿಇಸಿ) ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.



ಮಹಾತ್ಮ ಗಾಂಧಿ ರಸ್ತೆಯಲ್ಲಿ ವಾಹನಗಳನ್ನು ನಿಲ್ಲಿಸಿರುವುದು

–ಪ್ರಜಾವಾಣಿ ಚಿತ್ರಗಳು: ಪ್ರಶಾಂತ್ ಎಚ್‌.ಜಿ.

ಕೋಮುದ್ವೇಷದಿಂದ ಕೊಲೆ ನಾಲ್ವರಿಗೆ ಜೀವಾವಧಿ ಶಿಕ್ಷೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಕೋಮುದ್ವೇಷದಿಂದ ಕೊಲೆ ಮಾಡಿದ ನಾಲ್ವರು ಅಪರಾಧಿಗಳಿಗೆ ಇಲ್ಲಿಯ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿದೆ.

ಬಂಟ್ವಾಳ ತಾಲ್ಲೂಕು ಮಂಚಿ ಗ್ರಾಮದ ಮಂಚಿ ಬಾವ ಮನೆಯ ವಿಜೇತ್ ಕುಮಾರ್, ಮಂಗಳೂರು ತಾಲ್ಲೂಕು ಬಡಗ ಉಳಿಪ್ಪಾಡಿ ಗ್ರಾಮದ ಮಳಲಿ ಮಟ್ಟಿ ಮನೆಯ ಕಿರಣ್ ಪೂಜಾರಿ, ಮಂಗಳೂರು ತಾಲ್ಲೂಕು ತಿರುವೈಲು ಗ್ರಾಮದ ಅನೀಶ್ (ಧನು), ಬಂಟ್ವಾಳ ತಾಲ್ಲೂಕು ಮಂಚಿಗುತ್ತು ಮನೆಯ ಅಭಿ (ಅಭಿಜಿತ್) ಶಿಕ್ಷೆಗೊಳಗಾದವರು.

2015ರಲ್ಲಿ ಆಟೊದಲ್ಲಿ ಹೋಗುತ್ತಿದ್ದ ಮೊಹಮ್ಮದ್ ಮುಸ್ತಾಫ್ ಮತ್ತು ನಾಸೀರ್ ಅಲಿಯಾಸ್ ಮೊಹ್ಮದ್ ನಾಸೀರ್ ಅವರ ಮೇಲೆ ಇವರು ತಲವಾರಿನಿಂದ ಹಲ್ಲೆ ಮಾಡಿದ್ದರು. ತೀವ್ರವಾಗಿ ಗಾಯಗೊಂಡಿದ್ದ ನಾಸೀರ್ ಮಂಗಳೂರಿನ ಆಸ್ಪತ್ರೆಯಲ್ಲಿ ಮರುದಿನ ಮೃತಪಟ್ಟಿದ್ದರು.

ಮೊಹಮ್ಮದ್ ಮುಸ್ತಾಫ ಅವರು ತಮ್ಮ ಮಾವನ ಹೆಂಡತಿಯನ್ನು ಆಟೊ ರಿಕ್ಷಾದಲ್ಲಿ ಕರೆದುಕೊಂಡು ಹೆರಿಗೆಗಾಗಿ ಬಂಟ್ವಾಳ ಆಸ್ಪತ್ರೆಗೆ ಬಿಟ್ಟು ರಾತ್ರಿ ಬರುತ್ತಿದ್ದರು. ತಮ್ಮ ಪತ್ನಿಯ ಮನೆಗೆ ಹೋಗುವ ಸಲುವಾಗಿ ನಾಸೀರ್ ಅವರು ಮೆಲ್ಕಾರ್ ಬಳಿ ಈ ಆಟೊ ಹತ್ತಿದ್ದರು. ಮೆಲ್ಕಾರ್‌ನಿಂದ ಮುಡಿಪು ಕಡೆಗೆ ಆಟೊ ರಿಕ್ಷಾ ಹೋಗುತ್ತಿರುವುದನ್ನು ಕಂಡ ಆರೋಪಿಗಳು, ಬೈಕ್‌ನಲ್ಲಿ ಬೆನ್ನಟ್ಟಿ ಅದರಲ್ಲಿ ಇರುವವರು ಮುಸ್ಲಿಮರು ಎನ್ನುವುದನ್ನು ಖಚಿತಪಡಿಸಿಕೊಂಡು ಅವರ ಮೇಲೆ ತಲವಾರಿನಿಂದ ದಾಳಿ ಮಾಡಿದ್ದರು.

ಇದಕ್ಕೂ ಮುನ್ನಾ ದಿನ 2015ರ ಆಗಸ್ಟ್ 5ರಂದು ರಾತ್ರಿ ವಿಟ್ಲ ಪೊಲೀಸ್ ಠಾಣೆ ವ್ಯಾಪ್ತಿಯ ಆಲಬೆ ಎಂಬಲ್ಲಿ ವಿಜೇತ್ ಕುಮಾರ್ ಮತ್ತು ಅಭಿ ಮೇಲೆ ಮುಸ್ಲಿಂ ಸಮುದಾಯದ 4–5 ಯುವಕರು ಹಲ್ಲೆ ಮಾಡಿದ್ದರು. ಇದರಿಂದಾಗಿ ರೊಚ್ಚಿಗೆದ್ದಿದ್ದ ಈ ಇಬ್ಬರು, ತಮ್ಮ ಇನ್ನಿಬ್ಬರು ಮಿತ್ರರನ್ನು ಕರೆಯಿಸಿಕೊಂಡು, ಪಾಣೆ ಮಂಗಳೂರು ಬಳಿ ಮುಸ್ಲಿಂ ಯುವಕನೊಬ್ಬನನ್ನು ಕೊಲೆ ಮಾಡುವ ಉದ್ದೇಶ ಹೊಂದಿದ್ದರು. ಅದರಂತೆ ದಾರಿಯಲ್ಲಿ ಸಿಕ್ಕ ಇವರನ್ನು ಕೊಲೆ ಮಾಡಿದರು ಎಂದು ಪ್ರಕರಣದ ವಿಚಾರಣೆ ನಡೆಸಿದ್ದ ಬಂಟ್ವಾಳ ಠಾಣೆಯ ಇನ್‌ಸ್ಪೆಕ್ಟರ್ ಕೆ.ಯು. ಬೆಳ್ಳಿಯಪ್ಪ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಜಮಖಂಡಿ: ಬಿಸಿಲಿಗೆ ವ್ಯಕ್ತಿ ಸಾವು?

ಪ್ರಜಾವಾಣಿ ವಾರ್ತೆ

ಯಡ್ರಾಮಿ (ಕಲಬುರಗಿ ಜಿಲ್ಲೆ): ತಾಲ್ಲೂಕಿನ ಜಮಖಂಡಿ ಗ್ರಾಮದ ಜಮೀನೊಂದರಲ್ಲಿ ಮಂಗಳವಾರ ವ್ಯಕ್ತಿಯೊಬ್ಬರ ಶವ ಪತ್ತೆಯಾಗಿದ್ದು, ಬಿಸಿಲಿನಿಂದ ಅಸ್ವಸ್ಥಗೊಂಡು ಮೃತಪಟ್ಟಿರಬಹುದು ಎಂದು ಶಂಕಿಸಲಾಗಿದೆ.

ಶಹಾಪುರ ಪಟ್ಟಣದ ಗುತ್ತಿಪೇಟಾ ನಗರ ನಿವಾಸಿ ಬಸವರಾಜ ಮಲ್ಲಪ್ಪ ವಂದಲ್ಮ (68) ಮೃತರು. ಶಹಾಪುರ ತಾಲ್ಲೂಕಿನ ಗೋಗಿ ಗ್ರಾಮದಲ್ಲಿ ದೇವರು ಮಾಡಲು ಬಂದಾಗ ಕಳೆದುಕೊಂಡಿದ್ದರು. ಇತನು ಬುದ್ಧಿಮಾಂದ್ಯದಿಂದ ಹಾಗೂ ಆಗಾಗ ಕುಡಿದು ಮನೆ ಬಿಟ್ಟು ಹೋಗುತ್ತಿದ್ದನು ಎಂದು ತಿಳಿದುಬಂದಿದೆ.

'ಈ ಬಾರಿ ದಾರಿ ತಪ್ಪಿ ಜಮಖಂಡಿಗೆ ಬಂದಿದ್ದಾನೆ. ಬೇಸಿಗೆ ಬಿಸಿಲು ಹಾಗೂ ಝಳಕ್ಕೆ ಮರದ ಕೆಳಗೆ ಮಲಗಿದ್ದಾಗ ತಾಪಮಾನ ತಾಳಲಾರದೆ ಮೃತಪಟ್ಟಿರಬಹುದು' ಎಂದು ಪೊಲೀಸರು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಬೇಸಿಗೆ... ನೆಲಕೆ ಧಗೆಯ ಹಾಸಿಗೆ

'ತಣ್ಣಗಿನ ನಗರಿ' ಎಂದೇ ಎಲ್ಲಿಂದಲೋ ಬಂದವರಿಂದಲೂ ಬೆಂಗಳೂರಿಗೆ ಮೆಚ್ಚುಗೆ ಸಿಕ್ಕಿತ್ತು. ಇಲ್ಲಿನ ಹವಾಮಾನದ ಹಿತಾನುಭವ ಇಷ್ಟಪಟ್ಟವರು ಅಸಂಖ್ಯ. ಆದರೆ, ಈ ವರ್ಷ ಬೇಸಿಗೆ ತೀವ್ರತೆ ನೋಡಿದರೆ 'ಇದೋ ಬಂತು ಬೇಸಿಗೆ ನೆಲಕೆ ಧಗೆಯ ಹಾಸಿಗೆ' ಎನ್ನುವ ಹಾಗಿದೆ. ನಗರದ ತೀವ್ರವಾದ ತಾಪಮಾನಕ್ಕೆ ಕನ್ನಡಿ ಹಿಡಿಯುವಂತಿವೆ ಈ ಚಿತ್ರಗಳು...







1. ಬರಿದಾಗಿರುವ ನಗರದ ಮಡಿವಾಳ ಕೆರೆಯಲ್ಲಿ ಆಹಾರ ಅರಸುತ್ತಿರುವ ಹದ್ದು
2. ಬಿಸಿಲಿನ ತಾಪದಿಂದಾಗಿ ಗೂಡ್ಸ್ ವಾಹನದ ಒಳಗೆ ಕೂರಲು ಆಗದ ಕಾರಣ ಚಾಲಕರು ವಾಹನವನ್ನು ತಂಪಾಗಿಸಲು ಚಾವಣಿಯ ಮೇಲೆ ನೀರು ಸುರಿಯುತ್ತಿರುವುದು ಮೆಜೆಸ್ಟಿಕ್ ಬಳಿ ಕಂಡುಬಂತು
3. ನಗರದ ಲಾಲ್‌ಬಾಗ್‌ನಲ್ಲಿ ಮಂಗಳವಾರ ಸುತ್ತಾಡುತ್ತಿದ್ದ ಯುವತಿಯರು ಬಿಸಿಲಿನಿಂದ ರಕ್ಷಣೆ ಪಡೆಯಲು ದುಪಟ್ಟಾ ಮೊರೆಹೋದರು

–ಪ್ರಜಾವಾಣಿ ಚಿತ್ರಗಳು: ಎಸ್‌.ಕೆ. ದಿನೇಶ್, ಕಿಶೋರ್ ಕುಮಾರ್ ಬೋಳಾರ್, ರಂಜು ಪಿ.

ಪ್ರಧಾನಿ ವಿರುದ್ಧವೂ ಸಾಹಿತಿಗಳ ಅಸಮಾಧಾನ

ಆಸ್ತಿ ಹಂಚಿಕೆ: ಬಿಜೆಪಿಯಿಂದ ಅಪಪ್ರಚಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಸಮಾನತೆ ನಿವಾರಣೆ ಕುರಿತ ಕಾಂಗ್ರೆಸ್ ಪಕ್ಷದ ನಿಲುವನ್ನು ಬಿಜೆಪಿ ಹಾಗೂ ದೇಶದ ಪ್ರಧಾನಿ ಸಂಕುಚಿತವಾಗಿ ಅರ್ಥೈಸುತ್ತಿದ್ದಾರೆ. ಮತ ಬ್ಯಾಂಕ್ ರಾಜಕಾರಣಕ್ಕೆ ಬಳಸಿಕೊಳ್ಳುತ್ತಿದ್ದಾರೆ. ಇಂತಹ ಅಪಪ್ರಚಾರಕ್ಕೆ ಕಾಂಗ್ರೆಸ್ ಪಕ್ಷ, ಕಿವಿಗೊಡದೆ ಅಧಿಕಾರಕ್ಕೆ ಬಂದಾಗ ಹಂಚಿಕೆಯ ಸಮಗ್ರ ಕಾರ್ಯಯೋಜನೆ ರೂಪಿಸಬೇಕು ಎಂದು ಸಾಹಿತಿಗಳು, ಹೋರಾಟಗಾರರು ಒತ್ತಾಯಿಸಿದ್ದಾರೆ.

ಜಿಡಿಪಿ, ಅಭಿವೃದ್ಧಿ ದರಗಳಂತಹ ಶುಷ್ಕ ಆರ್ಥಿಕ ಮಾನದಂಡಗಳ ಆಧರಿಸಿ ಭಾರತ ಪ್ರಗತಿ ಪಥದಲ್ಲಿದೆ ಎಂದು ಬಿಂಬಿಸಲಾಗುತ್ತಿದೆ. ದೇಶದಲ್ಲಿ ಬಡತನ, ಹಸಿವು, ಅಪೌಷ್ಟಿಕತೆ ತಾಂಡವಾಡುತ್ತಿವೆ. ಆದಾಯ ಮತ್ತು ಸಂಪತ್ತು ಕೆಲವರ ಪಾಲಾಗುತ್ತಿವೆ. ಜಾಗತಿಕ ವರದಿಯ ಪ್ರಕಾರ ಶೇ 40ರಷ್ಟು ರಾಷ್ಟ್ರದ ಸಂಪತ್ತು ಶೇ 1ರಷ್ಟು ಶ್ರೀಮಂತರ ಕೈವಶವಾಗಿರುತ್ತದೆ. ಕೆಳಸ್ತರದ ಅರ್ಧ ಭಾಗ ಜನಸಂಖ್ಯೆಯ ಆದಾಯದ ಪಾಲು ಶೇಕಡ 6 ರಷ್ಟಿದೆ. ಇಂತಹ ಅಸಮಾನತೆ ಹೋಗಲಾಡಿಸಲು ಕಾಂಗ್ರೆಸ್ ನೀಡಿದ ಹೇಳಿಕೆ ತಿರುಚಲಾಗಿದೆ ಎಂದು ಸಾಹಿತಿ ಹಾಗೂ ಹೋರಾಟಗಾರರಾದ ಎಸ್. ಜಿ. ಸಿದ್ದರಾಮಯ್ಯ, ಮೈಕೇಲ್ ಬಿ ಫರ್ನಾಂಡಿಸ್, ಅಲ್ಲಮಪ್ರಭು ಬೆಟ್ಟದೂರು, ವಿಜಯಾ, ವಿನೋದ ವ್ಯಾಸಲು, ಎಸ್. ಜಾಫೆಟ್ ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

10 ವರ್ಷಗಳಲ್ಲಿ ಆದಾಯ ಮತ್ತು ಸಂಪತ್ತಿನ ಹಂಚಿಕೆಯಲ್ಲಿನ ಅಸಮಾನತೆಗಳು ದೇಶದಲ್ಲಿ ಉಲ್ಬಣಗೊಂಡಿವೆ. ಇದಕ್ಕೆ ಪರಿಹಾರವಾಗಿ ಕಾಂಗ್ರೆಸ್ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ರಾಷ್ಟ್ರದಾದ್ಯಂತ ವಿವಿಧ ಜಾತಿ ಮತ್ತು ಉಪಜಾತಿಗಳ ಆರ್ಥಿಕ ಮತ್ತು ಸಾಮಾಜಿಕ ಸಮೀಕ್ಷೆ ನಡೆಸಿ, ಹೊರಹೊಮ್ಮುವ ಫಲಿತಾಂಶದ ಆಧಾರದ ಮೇಲೆ ದೃಢವಾದ ಕ್ರಮ ಕೈಗೊಳ್ಳುವ ಭರವಸೆ ನೀಡಿರುವುದು ಸ್ವಾಗತಾರ್ಹ. ಆದರೆ, ಸಮಾಜವಾದ, ಜಾತ್ಯತೀತತೆ ಮತ್ತಿತರ ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ತಾತ್ವಿಕ ಬುನಾದಿ ನೀಡುವ ಉದಾತ್ತ ಧ್ಯೇಯಗಳನ್ನು ಅರಗಿಸಿಕೊಳ್ಳದ ನರೇಂದ್ರ ಮೋದಿ, ಅಸಮಾನತೆ ಮತ್ತು ಹಂಚಿಕೆ ವಿಚಾರಗಳನ್ನೂ ತಿರುಚುತ್ತಿದ್ದಾರೆ. ತನ್ನ ಕೈಗೊಂಬೆ ಮಾಧ್ಯಮಗಳ ಮೂಲಕ ಬಿತ್ತರಿಸುತ್ತಿದ್ದಾರೆ ಎಂದಿದ್ದಾರೆ.

'ಜನರು ಸಂಪಾದಿಸಿದ ಆಸ್ತಿ, ಆಭರಣ, ವಾಹನ, ಅಷ್ಟೇಕೆ ಮಹಿಳೆಯರ ಮಾಂಗಲ್ಯವನ್ನೂ ಕಾಂಗ್ರೆಸ್ ಪಕ್ಷ ಕಿತ್ತುಕೊಂಡು ತನ್ನ ಓಲೈಕೆಯ ಮತಬ್ಯಾಂಕ್‌ಗೆ (ಮುಸ್ಲಿಂ ಸಮುದಾಯಕ್ಕೆ) ಹಸ್ತಾಂತರಿಸಲಿದೆ' ಎನ್ನುವ ಮೂಲಕ ಬಿಜೆಪಿ ಅಪಪ್ರಚಾರ ಮಾಡುತ್ತಿದೆ. ಒಡೆದಾಳುವ ರಾಜಕಾರಣಕ್ಕೆ ಪ್ರಯತ್ನಿಸುತ್ತಿದೆ. ಇಂತಹ ಅಪಪ್ರಚಾರದ ಸಂಚಿಗೆ ಕಾಂಗ್ರೆಸ್ ವಿಚಲಿತಗೊಳ್ಳದೆ ಜಾಗತೀಕರಣ, ನವ ಉದಾರಿಕರಣ ನೀತಿಗಳ ಬಗೆಗಿನ ನಿಲುವನ್ನು ಸರಿಪಡಿಸಿಕೊಂಡು ಸಂವಿಧಾನದ ವಿಧಿ 39 (ಬಿ) ಮತ್ತು (ಸಿ) ಅನ್ವಯ ಅಸಮಾನತೆ ಹೊಡೆದೋಡಿಸಬೇಕು ಎಂದು ಕೋರಿದ್ದಾರೆ.

ಮುಖ್ಯಾಂಶಗಳು


- ಅಸಮಾನತೆ ನಿವಾರಣೆ ವಿಚಾರವನ್ನು ಮತ ಬ್ಯಾಂಕ್ ರಾಜಕಾರಣಕ್ಕೆ ಬಳಕೆ
- ದೇಶದಲ್ಲಿ ಬಡತನ, ಹಸಿವು, ಅಪೌಷ್ಟಿಕತೆಯ ತಾಂಡವ: ಆರೋಪ

'ಬಾಕಿ ಪರಿಹಾರಕ್ಕಾಗಿ ಹೋರಾಟ ನಿರಂತರ'

ಪ್ರಜಾವಾಣಿ ವಾರ್ತೆ

ಗದಗ: 'ಕೇಂದ್ರದಿಂದ ಬಂದಿರುವ ಬರ ಪರಿಹಾರದ ಹಣವನ್ನು ರೈತರ ಖಾತೆಗೆ ಶೀಘ್ರ ಜಮೆ ಮಾಡಲಾಗುವುದು. ಅದೇ ರೀತಿ, ಕೇಂದ್ರ ಸರ್ಕಾರದಿಂದ ಬರಬೇಕಿರುವ ಬಾಕಿ ಹಣಕ್ಕಾಗಿ ಹೋರಾಟ ಮುಂದುವರಿಸಲಾಗುವುದು' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

'ರಾಜ್ಯ ಸರ್ಕಾರ ಕೇಳಿದ್ದು ₹18,172 ಕೋಟಿ. ಕೇಂದ್ರ ಸರ್ಕಾರ ಕೊಟ್ಟಿದ್ದು ₹3,454 ಕೋಟಿ. ಅಂದರೆ, ನಾವು ಕೇಳಿದ್ದರಲ್ಲಿ ಶೇ 19ರಷ್ಟು ಹಣವನ್ನು ಮಾತ್ರ ಕೊಟ್ಟಿದೆ. ಇದು ಅನ್ಯಾಯ ಎಂದು ನಮ್ಮ ವಕೀಲರು ಸುಪ್ರೀಂ ಕೋರ್ಟ್‌ನಲ್ಲಿ ವಾದ ಮಂಡಿಸಿದ್ದಾರೆ. ಇದಕ್ಕೆ ಕೇಂದ್ರ ಸರ್ಕಾರವನ್ನು ಮತ್ತೆ ತರಾಟೆಗೆ ತೆಗೆದುಕೊಂಡಿರುವ ಸುಪ್ರೀಂ ಕೋರ್ಟ್ ಬರ ಪರಿಹಾರಕ್ಕೆ ಸಂಬಂಧಪಟ್ಟ ಎಲ್ಲ ವರದಿಗಳನ್ನು ಒಪ್ಪಿಸುವಂತೆ ಸೂಚಿಸಿದೆ' ಎಂದು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.


ಕೃಷ್ಣಬೈರೇಗೌಡ

'ರಾಜ್ಯದ 33.60 ಲಕ್ಷ ಮಂದಿ ರೈತರಿಗೆ ಮೊದಲ ಕಂತಿನಲ್ಲಿ ಬರ ಪರಿಹಾರವನ್ನು ರಾಜ್ಯ ಸರ್ಕಾರ ನೀಡಿದೆ. ಈಗ ಕೇಂದ್ರದಿಂದ ಬಂದಿರುವ ಹಣದಲ್ಲಿ ಅವರಿಗೆ ನೀಡಬೇಕಿರುವ ಬಾಕಿ ಹಣವನ್ನು ಒಂದೇ ಕಂತಿನಲ್ಲಿ ಹಾಕುತ್ತೇವೆ' ಎಂದರು.

'ಕೇಂದ್ರದ ಹಣದಲ್ಲಿ ಕುಡಿಯುವ ನೀರು, ಜಾನುವಾರುಗಳಿಗೆ ಮೇವು ಇದ್ಯಾವುದಕ್ಕೂ ನಯಾಪೈಸೆ ಬಳಸುವುದಿಲ್ಲ. ಇದನ್ನೆಲ್ಲ ರಾಜ್ಯದ ಬೊಕ್ಕಸದಿಂದಲೇ ನಿಭಾಯಿಸಲಾಗುವುದು' ಎಂದರು.

ರಾಜ್ಯಕ್ಕೆ ಬರ ಪರಿಹಾರ ತಂದಿದ್ದು ನಾವೇ ಎಂದು ಹೇಳಿಕೊಳ್ಳುತ್ತಿರುವ ಬಿಜೆಪಿ ನಾಯಕರ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ಬಿಜೆಪಿ ನಾಯಕರಿಗೆ ನಾಚಿಕೆ, ಮಾನ, ಮರ್ಯಾದೆ ಇಲ್ಲ' ಎಂದರು.

'ರಾಜ್ಯದ ರೈತರು ಬೆಳೆದ ಅನ್ನ ತಿಂದು, ಅವರ ಮತಗಳಿಂದ ಗೆದ್ದು ದೆಹಲಿಗೆ ಹೋದ ಬಿಜೆಪಿ ಸಂಸದರವರು ಅನ್ನದಾತ ಕಷ್ಟದಲ್ಲಿದ್ದರೂ ಬರ ಪರಿಹಾರ ಕೊಡಿ ಅಂತ ಒಂದು ಮಾತು ಕೇಳಲಿಲ್ಲ. ಆ ಧೈರ್ಯವೂ ಅವರಿಗೆ ಇಲ್ಲ. ಬದಲಾಗಿ, ಕರ್ನಾಟಕ ಸರ್ಕಾರ ಮನವಿ ಕೊಟ್ಟಿಲ್ಲ, ಮನವಿ ಕೊಡಲು ವಿಳಂಬ ಮಾಡಿತು, ಕೇಂದ್ರದಿಂದ ರಾಜ್ಯಕ್ಕೆ ಒಂದು ನಯಾಪೈಸೆ ಬಾಕಿ ಬರಬೇಕಿಲ್ಲ ಅಂತ ವಾದ ಮಾಡಿಕೊಂಡು ಬಂದರು' ಎಂದು ಚಾಟಿ ಬೀಸಿದರು.

'ದೇಶದ ಇತಿಹಾಸದಲ್ಲೇ ಮೊದಲ ಬಾರಿಗೆ ಕೇಂದ್ರ ಸರ್ಕಾರವನ್ನು ಕೋರ್ಟ್‌ಗೆ ಎಳೆದು, ರಾಜ್ಯಕ್ಕೆ ಬರಬೇಕಿದ್ದ ಬರ ಪರಿಹಾರವನ್ನು ನ್ಯಾಯಾಲಯದ ಮಧ್ಯಸ್ಥಿಕೆಯಲ್ಲಿ ಪಡೆದುಕೊಂಡಿದೆ. ಈಗ ಪರಿಹಾರದ ಹಣವನ್ನು ನಾವು ತಂದಿದ್ದೇವೆ ಎಂದು ಬಿಜೆಪಿಯವರು ನಾಟಕ ಮಾಡುತ್ತಿದ್ದಾರೆ. ಜನರನ್ನು ಪ್ರತಿದಿನ ಯಾಮಾರಿಸಲು ಸಾಧ್ಯವಿಲ್ಲ. ಈ ಚುನಾವಣೆಯಲ್ಲಿ ಅವರಿಗೆ ತಕ್ಕ ಪಾಠ ಕಲಿಸಲಿದ್ದಾರೆ' ಎಂದು ಎಚ್ಚರಿಸಿದರು.

ಡೊನಾಲ್ಡ್ ಟ್ರಂಪ್‌ಗೆ ₹6 ಲಕ್ಷ ದಂಡ

ನ್ಯೂಯಾರ್ಕ್(ರಾಯಿಟರ್ಸ್): 'ಹಷ್ ಮನಿ' ಪ್ರಕರಣಕ್ಕೆ ಸಂಬಂಧಿಸಿ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಇಲ್ಲಿನ ನ್ಯಾಯಾಲಯ ₹ 6 ಲಕ್ಷ ದಂಡ ವಿಧಿಸಿದೆ.

ಟ್ರಂಪ್ ಅವರು ನಟಿ ಸ್ಟ್ರಾಮಿ ಡೇನಿಯಲ್ಸ್‌ಗೆ ಹಣ ಪಾವತಿಸಿದ ಆರೋಪಕ್ಕೆ ಸಂಬಂಧಿಸಿ 'ಹಷ್ ಮನಿ' ಪ್ರಕರಣದಡಿ ಕಾನೂನು ವಿಚಾರಣೆ ಎದುರಿಸುತ್ತಿದ್ದಾರೆ. 'ಗೋಪ್ಯತೆ ರಕ್ಷಿಸಲು ನೀಡಿದ ಹಣ'ಕ್ಕೆ 'ಹಷ್ ಮನಿ' ಎನ್ನಲಾಗುತ್ತದೆ.

ಸ್ಟಾರ್ಮಿ ಜೊತೆಗೆ 2006ರಲ್ಲಿ ಟ್ರಂಪ್ ಲೈಂಗಿಕ ಸಂಬಂಧ ಹೊಂದಿದ್ದರು. ಇದಕ್ಕೆ ಸಂಬಂಧಿಸಿ ಮೌನ ವಹಿಸುವ ಕುರಿತು ಸ್ಟಾರ್ಮಿ ಅವರಿಗೆ ಟ್ರಂಪ್ ತಮ್ಮ ವಕೀಲರ ಮೂಲಕ ಹಣ ಪಾವತಿಸಿದ್ದರು ಎಂಬ ಆರೋಪ ಇದ್ದು, ಇದರ ವಿಚಾರಣೆ ನಡೆಯುತ್ತಿದೆ. ಈ ಪ್ರಕರಣ 2016ರ ಅಧ್ಯಕ್ಷೀಯ ಚುನಾವಣೆ ಪ್ರಚಾರದ ಮೇಲೆ ಪ್ರಭಾವ ಬೀರಬಹುದು ಎಂಬ ಕಾರಣಕ್ಕೆ ಟ್ರಂಪ್, ನಟಿಗೆ ಹಣ ನೀಡಿದ್ದರು ಎಂದು ಆರೋಪಿಸಲಾಗಿದೆ.

'ಸಿಐಡಿ ತನಿಖೆ ಮೇಲೆ ನಂಬಿಕೆಯಿಲ್ಲ'

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ನೇಹಾ ಕೊಲೆ ಆರೋಪಿ ಫಯಾಜ್ ಹಿಂದೆ ಯಾರಿದ್ದಾರೆ? ಪಿಎಫ್‌ಐ ಸಂಘಟನೆ ಕೈವಾಡವೇ? ಕೃತ್ಯಕ್ಕೂ ಮುನ್ನ ಆತ ಮಾದಕವಸ್ತು ಸೇವಿಸಿದ್ದನೇ? ಮತಾಂತರಕ್ಕೆ ಒತ್ತಾಯಿಸಿದ್ದನೇ ಎಂಬ ಬಗ್ಗೆ ತನಿಖೆ ಆಗಬೇಕು. ಈ ಪ್ರಕರಣದಲ್ಲಿ ರಾಜಕೀಯ ಮಾಡಬಾರದು' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಆಗ್ರಹಿಸಿದರು.

ನೇಹಾ ಮನೆಗೆ ಮಂಗಳವಾರ ಭೇಟಿ ನೀಡಿ ಕುಟುಂಬದವರಿಗೆ ಸಾಂತ್ವನ ಹೇಳಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಬುಲೆಟ್ ಟ್ರೇನ್ ಓಡೋ ವೇಗದಲ್ಲಿ ಸಾಕ್ಷ್ಯಾಧಾರ ಸಂಗ್ರಹಿಸಬೇಕು. ಫಯಾಜ್ ಹಿಂದೆ ಇರುವವರನ್ನು ಪೊಲೀಸರು ವಿಚಾರಣೆ ಮಾಡುತ್ತಿಲ್ಲ. ಸಿಐಡಿ ತನಿಖೆ ಬಗ್ಗೆ ನನಗೆ ನಂಬಿಕೆಯಿಲ್ಲ' ಎಂದರು.


ಹುಬ್ಬಳ್ಳಿಯಲ್ಲಿ ನೇಹಾ ಮನೆಗೆ ಭೇಟಿ ನೀಡಿದ ಶಾಸಕ ಬಸವರಾಜ ಬೊಮ್ಮಾಯಿ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್‌.ಅಶೋಕ ಅವರು ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿದರು. ಶಾಸಕ ಮಹೇಶ ಟೆಂಗಿನಕಾಯಿ ಉಪಸ್ಥಿತರಿದ್ದರು

'ಇದು ಲವ್ ಜಿಹಾದ್‌ಗಾಗಿ ನಡೆದ ಕೊಲೆ. ಪೊಲೀಸರು ಆರೋಪಿಯನ್ನು ತಮ್ಮ ವಶಕ್ಕೆ ತೆಗೆದುಕೊಳ್ಳದೇ ನ್ಯಾಯಾಂಗ ಬಂಧನದಲ್ಲಿ ಇರಿಸಿದ್ದು ಯಾಕೆ? ಆರೋಪಿಯನ್ನು ಯಾರೆಲ್ಲ ಭೇಟಿಯಾಗಿದ್ದಾರೆ ಮತ್ತು ಏನು ಹೇಳಿದ್ದಾರೆ ಎಂಬುದು ತನಿಖೆ ಆಗಬೇಕು' ಎಂದು ಅವರು ತಿಳಿಸಿದರು. ಶಾಸಕರಾದ ಬಸವರಾಜ ಬೊಮ್ಮಾಯಿ, ಮಹೇಶ ಟೆಂಗಿನಕಾಯಿ ಇದ್ದರು.

ಕೈದಿ ಹೊಟ್ಟೆಯಲ್ಲಿ ಮೊಬೈಲ್!

ಶಿವಮೊಗ್ಗ: ಇಲ್ಲಿನ ಸೋಗಾನೆಯ ಕೇಂದ್ರ ಕಾರಾಗೃಹದಲ್ಲಿ ಕೈದಿಯೊಬ್ಬನ ಹೊಟ್ಟೆಯಲ್ಲಿ ಮೊಬೈಲ್ ಫೋನ್ ಪತ್ತೆಯಾಗಿದೆ.

ಶಿವಮೊಗ್ಗದ ರಾಜೀವ್ ಗಾಂಧಿ ಬಡಾವಣೆ ನಿವಾಸಿ ಪರಶುರಾಮ ಅಲಿಯಾಸ್ ಚಿಂಗಾರಿಗೆ ಹೊಟ್ಟೆನೋವಿನ ಕಾರಣಕ್ಕೆ ಮಾ. 28ರಂದು ಕಾರಾಗೃಹದ ಒಳ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿತ್ತು.

ಹೊಟ್ಟೆನೋವು ಜಾಸ್ತಿ ಆದ ಕಾರಣ ಶಿವಮೊಗ್ಗದ ಮೆಗ್ಗಾನ್ ಬೋಧನಾ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಪರೀಕ್ಷೆ ನಡೆಸಿದ ವೈದ್ಯರು ಪರಶುರಾಮ ಕಲ್ಲು ನುಂಗಿರಬಹುದು ಎಂದು ಶಂಕಿಸಿದ್ದರು.

ಏಪ್ರಿಲ್ ಒಂದರಂದು ಶಿವಮೊಗ್ಗ ಕೇಂದ್ರ ಕಾರಾಗೃಹದ ವೈದ್ಯಾಧಿಕಾರಿ ಸಲಹೆ ಮೇರೆಗೆ ಹೆಚ್ಚಿನ ಚಿಕಿತ್ಸೆಗಾಗಿ ಮೆಗ್ಗಾನ್ ಆಸ್ಪತ್ರೆಯಿಂದ ಬೆಂಗಳೂರಿಗೆ ಕಳುಹಿಸಲಾಗಿತ್ತು.

ಏ.3 ರಂದು ಬೆಂಗಳೂರಿನ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಮುಖ್ಯ ವೈದ್ಯಾಧಿಕಾರಿಯಿಂದ ಚಿಕಿತ್ಸೆ ಕೊಡಿಸಿ ಅವರ ಶಿಫಾರಸಿನಂತೆ ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಕಳುಹಿಸಲಾಗಿತ್ತು. ಅಲ್ಲಿ ಏಪ್ರಿಲ್ 25ರಂದು ಶಸ್ತ್ರಚಿಕಿತ್ಸೆ ನಡೆಸಿ ಕೈದಿಯ ಹೊಟ್ಟೆಯಿಂದ ಮೊಬೈಲ್ ಹೊರ ತೆಗೆಯಲಾಗಿತ್ತು. ಶಿವಮೊಗ್ಗ ಕಾರಾಗೃಹದ ಅಧೀಕ್ಷಕರು ಇಲ್ಲಿನ ತುಂಗಾ ನಗರ ಪೊಲೀಸ್ ಠಾಣೆಯಲ್ಲಿ ಕೈದಿ ವಿರುದ್ಧ ದೂರು ದಾಖಲಿಸಿದ್ದಾರೆ.

ಬಿಸಿಗಾಳಿ: ಪಾಲಕ್ಕಾಡ್ ಜಿಲ್ಲೆಯಲ್ಲಿ 'ಆರೆಂಜ್ ಅಲರ್ಟ್'

ತಿರುವನಂತಪುರ (ಪಿಟಿಐ): ಕೇರಳದ ಪಾಲಕ್ಕಾಡ್ ಜಿಲ್ಲೆಯಲ್ಲಿ ಮೇ 2ವರೆಗೂ ಬಿಸಿಗಾಳಿ ಬೀಸುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಮಂಗಳವಾರ 'ಆರೆಂಜ್ ಅಲರ್ಟ್' ನೀಡಿದೆ.

ತ್ರಿಶ್ಶೂರ್, ಆಲಪ್ಪುಳ, ಕೋಯಿಕ್ಕೋಡ್‌ನಲ್ಲಿ ಬಿಸಿಗಾಳಿ ಬೀಸುವ ಸಾಧ್ಯತೆ ಇದ್ದು, 'ಯೆಲ್ಲೋ ಅಲರ್ಟ್' ನೀಡಿದೆ.

ಮೇ 4ರವರೆಗೆ ಪಾಲಕ್ಕಾಡ್ ಜಿಲ್ಲೆಯಲ್ಲಿ ಗರಿಷ್ಠ 41 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ, ತ್ರಿಶ್ಶೂರ್‌ನಲ್ಲಿ 40 ಡಿಗ್ರಿ ಸೆಲ್ಸಿಯಸ್, ಕೊಲ್ಲಂ, ಕೋಯಿಕ್ಕೋಡ್‌ನಲ್ಲಿ ಅಂದಾಜು 39 ಡಿಗ್ರಿ ಸೆಲ್ಸಿಯಸ್ ಮತ್ತು ಅಲಪ್ಪುಳ, ಪಟ್ಟಣಂತಿಟ್ಟು, ಕಣ್ಣೂರು ಜಿಲ್ಲೆಗಳಲ್ಲಿ ಅಂದಾಜು 38 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ಇರಲಿದೆ.

ಇನ್ನು ತಿರುವನಂತಪುರ, ಎರ್ನಾಕುಲಂ, ಕಾಸರಗೋಡು ಮತ್ತು ಮಲಪ್ಪುರಂ ಜಿಲ್ಲೆಗಳಲ್ಲಿ ಮೇ 4ರವರೆಗೆ ಗರಿಷ್ಠ 37 ಡಿಗ್ರಿ ಸೆಲ್ಸಿಯಸ್ ತಾಪಮಾನ ಇರಲಿದೆ ಎಂದು ಹೇಳಿದೆ.

ಪ್ರಜ್ವಲ್ ಪ್ರಕರಣ: ಮೈತ್ರಿ ನಾಯಕರಿಗೆ ಇಕ್ಕಟ್ಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಸನ ಸಂಸದ ಪ್ರಜ್ವಲ್ ರೇವಣ್ಣ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ್ದಾರೆ ಎಂಬ ಆರೋಪವು ಬಿಜೆಪಿ–ಜೆಡಿಎಸ್ ಮೈತ್ರಿಕೂಟದ ನಾಯಕರನ್ನು ಇಕ್ಕಟ್ಟಿಗೆ ಸಿಲುಕಿಸಿದೆ. ರಾಷ್ಟ್ರ ಮಟ್ಟದಲ್ಲಿ ಮುಜುಗರ ತಪ್ಪಿಸಿಕೊಳ್ಳಲು ಪ್ರಕರಣದಿಂದ ಅಂತರ ಕಾಯ್ದುಕೊಳ್ಳಲು ಬಿಜೆಪಿ ಮುಂದಾಗಿದೆ.

ಲೋಕಸಭಾ ಚುನಾವಣೆಯ ಅಭ್ಯರ್ಥಿ ಆಯ್ಕೆಗೂ ಮುನ್ನವೇ ಹಾಸನದಲ್ಲಿ ಪ್ರಜ್ವಲ್ ಕಣಕ್ಕಿಳಿಸದಂತೆ ಬಿಜೆಪಿಯ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಪ್ರೀತಂ ಗೌಡ ಮತ್ತು ಮಾಜಿ ಶಾಸಕ ಎ.ಟಿ. ರಾಮಸ್ವಾಮಿ ಪಟ್ಟು ಹಿಡಿದಿದ್ದರು. ಜೆಡಿಎಸ್‌ನಿಂದ ಬೇರೊಬ್ಬರನ್ನು ಕಣಕ್ಕಿಳಿಸುವಂತೆ ಒತ್ತಾಯಿಸಿದ್ದರು. ಆದರೆ, ಎಚ್‌.ಡಿ. ರೇವಣ್ಣ ಕುಟುಂಬದ ಒತ್ತಡದಿಂದ ಪ್ರಜ್ವಲ್ ಅವರನ್ನೇ ಕಣಕ್ಕಿಳಿಸುವ ನಿರ್ಧಾರವನ್ನು ಜೆಡಿಎಸ್ ವರಿಷ್ಠ ಎಚ್‌.ಡಿ. ದೇವೇಗೌಡ ಕೈಗೊಂಡಿದ್ದರು.

ಈಗ ಪ್ರಜ್ವಲ್ ವಿರುದ್ಧ ಹಲವು ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿರುವ ಆರೋಪ ಎದುರಾದ ಬೆನ್ನಲ್ಲೇ ಸರಣಿಯೋಪಾದಿಯಲ್ಲಿ ವಿಡಿಯೊ ತುಣುಕುಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿವೆ. ರೇವಣ್ಣ ಮತ್ತು ಪ್ರಜ್ವಲ್ ವಿರುದ್ಧ ಹೊಳೆನರಸೀಪುರ ನಗರ ಠಾಣೆಯಲ್ಲಿ ಕ್ರಿಮಿನಲ್ ಪ್ರಕರಣವೂ ದಾಖಲಾಗಿದೆ. ವಿಡಿಯೊ ತುಣುಕುಗಳು ಬಹಿರಂಗವಾದ ಬಳಿಕ ಪ್ರಜ್ವಲ್ ವಿದೇಶಕ್ಕೆ ತೆರಳಿದ್ದಾರೆ. ಈ ಎಲ್ಲ ಬೆಳವಣಿಗೆಗಳೂ ಜೆಡಿಎಸ್ ಮತ್ತು ಬಿಜೆಪಿ ನಾಯಕರಿಗೆ ಕಸಿವಿಸಿ ಉಂಟುಮಾಡಿವೆ.

ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್‌.ಡಿ. ಕುಮಾರಸ್ವಾಮಿ ಅವರು ಅಣ್ಣನ ಮಗ ತಪ್ಪು ಮಾಡಿದ್ದಲ್ಲಿ ಕಠಿಣ ಕ್ರಮ ಜರುಗಿಸಬೇಕು ಎಂಬ ನಿಲುವು ಹೊರ ಹಾಕಿದ್ದಾರೆ. ಶಾಸಕರಾದ ಶರಣಗೌಡ ಕಂದಕೂರ, ಸಮೃದ್ಧಿ ಮಂಜುನಾಥ್ ಸೇರಿದಂತೆ ಜೆಡಿಎಸ್‌ನ ಹಲವು ಮುಖಂಡರೂ ಪ್ರಜ್ವಲ್ ವಿರುದ್ಧ ಬಿಗಿ ನಿಲುವು ತಳೆದಿದ್ದಾರೆ.

ಅಂತರ ಕಾಯ್ದುಕೊಳ್ಳಲು ಸೂಚನೆ: ಪ್ರಜ್ವಲ್ ರೇವಣ್ಣ ಪ್ರಕರಣದಿಂದ ಅಂತರ ಕಾಯ್ದುಕೊಳ್ಳುವಂತೆ ಬಿಜೆಪಿ ರಾಜ್ಯ ಘಟಕದ ನಾಯಕರಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಸೂಚನೆ ನೀಡಿದ್ದಾರೆ ಎಂದು ಪಕ್ಷದ ಮೂಲಗಳು ಹೇಳಿವೆ.

'ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಮಾತ್ರ ಈ ಪ್ರಕರಣದಲ್ಲಿ ಪಕ್ಷದ ನಿಲುವನ್ನು ಒಮ್ಮೆ ಪ್ರಕಟಿಸಬಹುದು. ಉಳಿದಂತೆ ಯಾವುದೇ ನಾಯಕರೂ ಬಹಿರಂಗ ಹೇಳಿಕೆ ನೀಡಕೂಡದು. ಈ ಪ್ರಕರಣ ಮೈತ್ರಿಕೂಟದ ಮೇಲೆ ಪರಿಣಾಮ ಬೀರುತ್ತದೆ ಎಂದು ಭಾವಿಸುವ ಅಗತ್ಯವಿಲ್ಲ ಎಂಬ ಸಂದೇಶ ಅಮಿತ್ ಶಾ ಅವರಿಂದ ಬಂದಿದೆ' ಎಂದು ಮೂಲಗಳು ತಿಳಿಸಿವೆ.

ಸಂದೇಶ ಖಾಲಿ ಪ್ರಕರಣವನ್ನು ಮುಂದಿಟ್ಟುಕೊಂಡು ಪಶ್ಚಿಮ ಬಂಗಾಳದಲ್ಲಿ ತೃಣಮೂಲ ಕಾಂಗ್ರೆಸ್ ಪಕ್ಷದ ಸರ್ಕಾರದ ವಿರುದ್ಧ ಬಿಜೆಪಿ ಪ್ರಬಲ ಹೋರಾಟ ನಡೆಸುತ್ತಿದೆ. ಕರ್ನಾಟಕದಲ್ಲಿ ಪ್ರಜ್ವಲ್ ಬೆಂಬಲಿಸಿದರೆ ರಾಷ್ಟ್ರ ಮಟ್ಟದಲ್ಲಿ ವರ್ಚಸ್ಸಿಗೆ ಧಕ್ಕೆಯಾಗುತ್ತದೆ. ಅಂತಹ ಬೆಳವಣಿಗೆಗೆ ಅವಕಾಶ ನೀಡಬಾರದು ಎಂಬುದು ಪಕ್ಷದ ವರಿಷ್ಠರ ಸೂಚನೆಗೆ ಕಾರಣ ಎನ್ನುತ್ತಾರೆ ಬಿಜೆಪಿ ಮುಖಂಡರು.

ಹೊಸ್ತೋಟ ಮಂಜುನಾಥ ಭಾಗವತರ ಸಂಸ್ಮರಣ ಗ್ರಂಥ

'ಯಕ್ಷಹಂಸ' ಕೃತಿ ಲೋಕಾರ್ಪಣೆ

ಪ್ರಜಾವಾಣಿ ವಾರ್ತೆ

ಶಿರಸಿ: ಎಂಟು ದಶಕಗಳಿಂದ ಯಕ್ಷಗಾನ ಕ್ಷೇತ್ರದ ಆಳ-ಅಗಲ ಅರಿಯುವುದರ ಜತೆ ಯಕ್ಷಗಾನಕ್ಕೆ ವಿಶಿಷ್ಟ ಕೊಡುಗೆ ನೀಡಿದ್ದ ಹೊಸ್ತೋಟ ಮಂಜುನಾಥ ಭಾಗವತರ ಕುರಿತ 'ಯಕ್ಷಹಂಸ' ಸಂಸ್ಮರಣ ಗ್ರಂಥವನ್ನು ಮಂಗಳವಾರ ಪಲ್ಲಕ್ಕಿಯಲ್ಲಿ ತಂದು, ಯಕ್ಷಗಾನದ ಹಿಮ್ಮೇಳದ ಮೂಲಕ ಬರಮಾಡಿಕೊಂಡು ವಿಶೇಷ ಗೌರವ ಸಲ್ಲಿಸಿ ಬಿಡುಗಡೆ ಮಾಡಲಾಯಿತು. ಗ್ರಂಥವನ್ನು ಭಾಗವತರ ಸಂಸ್ಮರಣ ಗ್ರಂಥ ಸಮಿತಿ ಪ್ರಕಟಿಸಿದೆ.

ನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಗ್ರಂಥವನ್ನು ಬಿಡುಗಡೆ ಮಾಡಿದ ಹೆಗ್ಗೋಡು ನೀನಾಸಂ ಮುಖ್ಯಸ್ಥ ಕೆ.ವಿ.ಅಕ್ಷರ ಅವರು, 'ಹೊಸ್ತೋಟ ಮಂಜುನಾಥ ಭಾಗವತ ಅವರ ಕುರಿತು ದಂತ ಕತೆಗಳು ಸಾಕಷ್ಟಿದ್ದವು' ಎಂದು ಒಡನಾಟ ನೆನಪಿಸಿಕೊಂಡರು. 'ಯಕ್ಷಗಾನ, ತಾಳಮದ್ದಲೆ ಬಹುಸಂಖ್ಯಾತ ಕಲಾವಿದರ ರಂಗಭೂಮಿ. ಆದರೆ, ಯಕ್ಷಗಾನದಲ್ಲಿ ಕೆಲಸ ಮಾಡುವವರು ಪ್ರಸಿದ್ಧಿಗೆ ಬರುತ್ತಿಲ್ಲ. ಯಕ್ಷಗಾನ ಹಾಗೂ ತಾಳಮದ್ದಲೆಯನ್ನು ನೋಡುವ ಒಳಗಣ್ಣು ಮರೆಯಾಗುತ್ತಿರುವುದು ಇದಕ್ಕೆ ಕಾರಣ' ಎಂದರು.

ಹಿರಿಯ ವಿದ್ವಾಂಸ ಪ್ರಭಾಕರ ಜೋಶಿ ಮಾತನಾಡಿ, 'ಭಾಗವತರ ಕುರಿತಾದ ಪುಸ್ತಕಕ್ಕೆ ಪ್ರಧಾನ ಮಾರ್ಗದರ್ಶಕನಾಗಿದ್ದು ಬದುಕಿನಲ್ಲಿ ನನಗೆ ದೊಡ್ಡ ಗೌರವ ಸಿಕ್ಕಂತಾಗಿದೆ. ಅವರು ಮಾಡಿದ ಕೆಲಸ ಮನುಷ್ಯ ಮಾತ್ರರಿಂದ ಸಾಧ್ಯವಿಲ್ಲ. ಭಾಗವತರು ದಕ್ಷಿಣೋತ್ತರ ಕನ್ನಡದಲ್ಲಿ ಯಕ್ಷಗಾನದ ಯುಗ ಪರಿವರ್ತಕರು. ಯಕ್ಷಗಾನದಲ್ಲಿ ಅಗಾಧ ಕೆಲಸ ಮಾಡಿದ್ದಾರೆ. ವೇಷಧಾರಿ, ಗುರು, ಕವಿ, ಮದ್ದಳೆಗಾರ, ಭಾಗವತ ಹೀಗೆ ಎಲ್ಲ ವಿಭಾಗಗಳಲ್ಲೂ ತಜ್ಞರಾಗಿದ್ದರು' ಎಂದರು.

ಹಿರಿಯ ಯಕ್ಷಗಾನ ಕಲಾವಿದ ಗೋಡೆ ನಾರಾಯಣ ಹೆಗಡೆ, ಪ್ರಕಾಶಕ ಕಿರಣ ಉಪಾಧ್ಯಾಯ, ಬರಹಗಾರ ಅಶೋಕ ಹಾಸ್ಯಗಾರ, ಕಲಾವಿದ ಸುಬ್ರಾಯ ಕೆರೆಕೊಪ್ಪ ಇತರರು ಇದ್ದರು. ಕಲಾವಿದ ಶಿವಾನಂದ ಹೆಗಡೆ ಕೆರೆಮನೆ ಸ್ವಾಗತಿಸಿದರು. ಗ್ರಂಥ ಸಂಪಾದಕಿ ವಿಜಯನಳಿನಿ ರಮೇಶ ಪ್ರಸ್ತಾವಿಕ ಮಾತನಾಡಿದರು. ಕವಿ ದಿವಾಕರ ಹೆಗಡೆ ಕೆರೆಹೊಂಡ ಪರಿಚಯಿಸಿದರು. ಶೈಲಜಾ ಗೋರ್ನಮನೆ ನಿರ್ವಹಿಸಿದರು.


ಶಿರಸಿಯಲ್ಲಿ ಹೊಸ್ತೋಟ ಮಂಜುನಾಥ ಭಾಗವತರ ಕುರಿತ 'ಯಕ್ಷಹಂಸ' ಕೃತಿಯನ್ನು ಕೆ.ವಿ.ಅಕ್ಷರ ಬಿಡುಗಡೆ ಮಾಡಿದರು. ಶಿವಾನಂದ ಹೆಗಡೆ ಕೆರೆಮನೆ, ಶೈಲಜಾ ಗೋರ್ನಮನೆ, ವಿಜಯನಳಿನಿ ರಮೇಶ, ಪ್ರಭಾಕರ ಜೋಶಿ, ನಾರಾಯಣ ಹೆಗಡೆ ಗೋಡೆ, ಕಿರಣ ಉಪಾಧ್ಯಾಯ, ಅಶೋಕ ಹಾಸ್ಯಗಾರ, ಸುಬ್ರಾಯ ಹೆಗಡೆ ಪಾಲ್ಗೊಂಡಿದ್ದರು

ಸಿ.ಎಂ. ಎದುರಲ್ಲೇ ಕಾಂಗ್ರೆಸ್ ಬಣ ರಾಜಕಾರಣ

ಪ್ರಜಾವಾಣಿ ವಾರ್ತೆ

ಗಂಗಾವತಿ (ಕೊಪ್ಪಳ ಜಿಲ್ಲೆ): ಕಳೆದ ವಿಧಾನಸಭಾ ಚುನಾವಣಾ ಫಲಿತಾಂಶದ ಬಳಿಕ ಬಹಿರಂಗಗೊಂಡಿದ್ದ ಗಂಗಾವತಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಬಣ ರಾಜಕಾರಣ ಮಂಗಳವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಸಮ್ಮುಖದಲ್ಲೇ ಮತ್ತೊಮ್ಮೆ ಸ್ಫೋಟಗೊಂಡಿತು.

'ಹಿಂದಿನ ವಿಧಾನಸಭಾ ಚುನಾವಣೆಯಲ್ಲಿ ನಾನು ಸೋಲಲು ಪಕ್ಷದಲ್ಲಿರುವ ಡೀಲರ್‌ಗಳು ಕಾರಣ' ಎಂದು ಮಾಜಿ ಸಚಿವ ಇಕ್ಬಾಲ್ ಅನ್ಸಾರಿ ಆರೋಪಿಸಿದ್ದರು. 'ಪಕ್ಷದ ಮಾಜಿ ಸಚಿವ ಮಲ್ಲಿಕಾರ್ಜುನ ನಾಗಪ್ಪ, ವಿಧಾನ ಪರಿಷತ್ ಸದಸ್ಯ ಎಚ್‌.ಆರ್. ಶ್ರೀನಾಥ್ ಮತ್ತು ಗಂಗಾವತಿ ಬ್ಲಾಕ್ ಕಾಂಗ್ರೆಸ್ ಘಟಕದ ಅಧ್ಯಕ್ಷ ಶಾಮೀದ್ ಮನಿಯಾರ್ ಅವರು ಜನಾರ್ದನ ರೆಡ್ಡಿ ಜೊತೆ ಕೈ ಜೋಡಿಸಿ ನನ್ನನ್ನು ಸೋಲಿಸಿದ್ದಾರೆ' ಎಂದು ದೂರಿದ್ದರು. ಲೋಕಸಭಾ ಚುನಾವಣೆ ಪ್ರಚಾರ ಆರಂಭವಾದ ದಿನದಿಂದಲೂ ಹಿಂದಿನ ಮುನಿಸು ಮುಂದುವರಿದಿದೆ.

ಮಂಗಳವಾರ ಇಲ್ಲಿ ನಡೆದ ಕಾಂಗ್ರೆಸ್ ಸಭೆಯಲ್ಲಿ ಸ್ವಾಗತ ಭಾಷಣ ಮಾಡಿದ ಅನ್ಸಾರಿ, ಮಲ್ಲಿಕಾರ್ಜುನ ನಾಗಪ್ಪ, ಎಚ್‌.ಆರ್.ಶ್ರೀನಾಥ್ ಮತ್ತು ಶಾಮೀದ್ ಅವರ ಹೆಸರು ಪ್ರಸ್ತಾಪಿಸಲಿಲ್ಲ. ಈ ಮೂವರನ್ನು ಸ್ವಾಗತಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಹೇಳಿದಾಗ ಅನ್ಸಾರಿ ಮೈಕ್‌ನಿಂದ ಹಿಂದೆ ಸರಿದರು. ಆಗ ತಂಗಡಗಿಯೇ ಮೂವರನ್ನು ಸ್ವಾಗತಿಸಿದರು.

ಕುರ್ಚಿ ಎಸೆದು ಗಲಾಟೆ: ಶ್ರೀನಾಥ್ ಭಾಷಣ ಮಾಡುವಾಗ ಅನ್ಸಾರಿ ಬೆಂಬಲಿಗರು ಕುರ್ಚಿ ಎಸೆದು ಆಕ್ರೋಶ ವ್ಯಕ್ತಪಡಿಸಿದರು.

ತಂತ್ರಜ್ಞಾನ





ಕೃತಕ ಬುದ್ಧಿಮತ್ತೆಗೆ ಕೃತಕ ಭ್ರಮೆಗಳು

ಅಮೃತೇಶ್ವರಿ ಬಿ.

ಭಾವನೆಗಳನ್ನು ಭಾವಿಸಿಕೊಳ್ಳುವ, ಕಲ್ಪಿಸಿಕೊಳ್ಳುವ, ಮಾತನಾಡುವ ಸಾಮರ್ಥ್ಯವನ್ನು ಪ್ರಕೃತಿ ಮನುಷ್ಯರಿಗಷ್ಟೇ ನೀಡಿದೆ. ಇದು ಮಾನವಕುಲಕ್ಕೆ ಸಿಕ್ಕ ವರದಾನವೇ ಸರಿ. ಅಂತಹುದೊಂದು ಸಂಕೀರ್ಣ ಮಿದುಳು ಮನುಷ್ಯನಿಗಿದ್ದಿದ್ದರಿಂದಲೇ ಜಗತ್ತು ಇಂದು ನಾವೂ ನೀವೂ ನೋಡಿ ಅನುಭವಿಸುತ್ತಿರುವ ಸ್ಥಿತಿಯಲ್ಲಿರುವುದು – ಒಳ್ಳೆಯದ್ದಾದರೂ ಸರಿ, ಕೆಟ್ಟದ್ದಾದರೂ ಸರಿ! ಮನುಷ್ಯನ ಅತಿಬುದ್ಧಿವಂತಿಕೆಯ ಸಾಕ್ಷಿಗಳಲ್ಲಿ ಕೃತಕ ಬುದ್ಧಿಮತ್ತೆಯೂ ಒಂದು. ಶಿಕ್ಷಣ, ಮಾರುಕಟ್ಟೆ, ತಯಾರಿಕಾ ಕಂಪೆನಿಗಳು, ಔಷಧಗಳು – ಹೀಗೆ ಪ್ರತಿಯೊಂದು ಕ್ಷೇತ್ರಗಳಿಗೂ ಪ್ರವೇಶವಿತ್ತಿರುವ ಕೃತಕ ಬುದ್ಧಿಮತ್ತೆಯು ವೈದ್ಯಕೀಯ ಕ್ಷೇತ್ರದಲ್ಲಿಯೂ ತನ್ನ ಸಾಮರ್ಥ್ಯವನ್ನು ತೋರಿಸಿಯೇ ಇದೆ. ಆದರೆ ವಿಷಯ ಇದು ಮಾಡಬಹುದಾದ ಕೆಲಸಗಳ ಪಟ್ಟಿಯ ಬಗ್ಗೆ ಅಲ್ಲ, ಇದು ಮಾಡಬಹುದಾದ ದೋಷಗಳ ಬಗ್ಗೆ. ಮನುಷ್ಯನ ಭಾವನೆಗಳಿಂದ ಒಳ್ಳೆಯದೂ ಆಗುತ್ತದೆ, ಕೆಟ್ಟದ್ದೂ ಆಗುತ್ತದೆ. ಆದರೆ ಕೃತಕ ಬುದ್ಧಿಮತ್ತೆಯಿಂದ ಕೆಲಸ ಮಾಡುವ 'ಚಾಟ್ ಬಾಟು'ಗಳು ಹೀಗೆ ಏನೇನೋ ಭಾವನೆಗಳನ್ನು ಭಾವಿಸಿಕೊಂಡರೆ ಏನಾದೀತು ಎನ್ನುವುದು ಪ್ರಶ್ನೆ! ಹೌದು. 'ಟ್ರಾನ್ಸ್‌ಕ್ರಿಪ್ಶನ್ ಟೂಲ್' ಅಥವಾ ಧ್ವನಿ ಅಥವಾ ಆಡಿಯೊಗಳನ್ನು ಕೇಳಿಸಿಕೊಂಡು ಪಠ್ಯಗಳನ್ನು ತಯಾರಿಸುವ ಸಾಧನಗಳು ಕೂಡ ಹೀಗೆ ಭ್ರಮಿಸಿಕೊಳ್ಳಬಲ್ಲವಂತೆ! ಮನುಷ್ಯನ ಭ್ರಮಿಸಿಕೊಳ್ಳುವ ಗುಣ ಆತ ಸೃಷ್ಟಿಸಿರುವ ಸಾಧನಗಳಿಗೂ ಅಂಟಿಕೊಂಡಿರಬೇಕು.

ಟೆಕ್ಸ್ಟ್ ಮೆಸೇಜ್ ಕೃತಕ ಬುದ್ಧಿಮತ್ತೆಯ ಸಹಾಯದಿಂದ ತಪ್ಪಾಗಿ ಲಿಪ್ಯಂತರಗೊಂಡರೆ ಏನಾಗುತ್ತದೆ?

ಹೀಗೆ ಕೃತಕಬುದ್ಧಿಮತ್ತೆಯ ಸಾಧನಗಳು ಕೂಡ ಕಲ್ಪಿಸಿಕೊಂಡರೆ ಏನೆಲ್ಲಾ ಅದ್ವಾನಗಳಾಗಬಹುದು ಯೋಚಿಸಿ ನೋಡಿ. ವೈದ್ಯಕೀಯ ಮಾಹಿತಿಗಳು ತಪ್ಪಾಗಿಬಿಡಬಹುದು, ಎಷ್ಟೋ ಸುಳ್ಳು ಕಾನೂನು ಪ್ರಕರಣಗಳು ಹುಟ್ಟಿಕೊಳ್ಳಬಹುದು. ಹೀಗೆ ಆಗಿರುವ ಉದಾಹರಣೆಗಳೂ ಇವೆಯಂತೆ. ಈಗ 'ಓಪನ್ ಎಐ'ನ 'ವಿಸ್ಪರ್' ಎನ್ನುವ ಟ್ರಾನ್ಸ್‌ಕ್ರಿಪ್ಶನ್ ಸಾಧನ ಕೂಡ ಆಡಿಯೊಗಳ ಸುಮಾರು ಪ್ರತಿಶತ 1.4ರಷ್ಟು ವಾಕ್ಯಗಳನ್ನು ಭ್ರಮಿಸಿಕೊಂಡುಬಿಡುತ್ತದೆಯಂತೆ! ದುರದೃಷ್ಟವಶಾತ್ ಹೀಗೆ ಕಲ್ಪಿಸಿಕೊಂಡ ವಿಷಯಗಳಲ್ಲಿ ಬಹುತೇಕ ಅಪಾಯಕಾರಿ ಹಾಗೂ ಕಾನೂನಾತ್ಮಕವಾಗಿ ಅಪಾರಾಧವೆನಿಸುವಂಥವು ಇರುವುದಂತೆ! ಹೀಗೆಂದು ಕಾರ್ನೆಲ್ ವಿಶ್ವವಿದ್ಯಾಲಯದ ಕಂಪ್ಯೂಟರ್ ವಿಜ್ಞಾನಿಗಳು ವರದಿ ಮಾಡಿದ್ದಾರೆ.

ನಾವಂತೂ ಯಾಂತ್ರಿಕ ಯುಗದಲ್ಲಿದ್ದೇವೆ. ವೈದ್ಯರು ಕೂಡ ರೋಗಿಗಳೊಡನೆ ಸಂವಹನ ನಡೆಸಲು ಇಂತಹ ಸಾಧನಗಳನ್ನು ಬಳಸುತ್ತಿದ್ದಾರೆ. ರೋಗಿಗಳು ಕಳುಹಿಸಿದ ಆಡಿಯೊ ಸಂದೇಶಗಳನ್ನು ಈ ಸಾಧನಗಳು 'ಟೆಕ್ಸ್ಟ್ ಮೆಸೇಜ್' ಆಗಿ ಲಿಪ್ಯಂತರ ಮಾಡುತ್ತವೆ. ಇದು ಒಂದು ವೇಳೆ ಇವನ್ನು ತಪ್ಪಾಗಿ ಲಿಪ್ಯಂತರ ಮಾಡಿದರೆ ಏನಾಗಬಹುದು ಒಮ್ಮೆ ಅಂದಾಜು ಮಾಡಿ ನೋಡಿ! ಈ ವಿಸ್ಪರ್ ಸಾಧನವನ್ನು ಪರೀಕ್ಷೆ ಮಾಡಿದಾಗ ರೋಗಿ ಹೇಳಿಲ್ಲದಿರುವ ವಿಷಯಗಳನ್ನೂ ಭ್ರಮಿಸಿ ಭಾವಿಸಿಕೊಂಡು ಬರೆದಿದೆಯಂತೆ. ಉದಾಹರಣೆಗೆ, ಆತ ಯಾರನ್ನೋ ಹೇಗೆ ಕೊಲೆ ಮಾಡಿದ? ಇಂಥವನ್ನೆಲ್ಲಾ ಬರೆದುಬಿಟ್ಟಿದೆಯಂತೆ, ಕೊಲೆ ಮಾಡಿಲ್ಲದಿದ್ದರೂ! ಜೊತೆಗೆ ಔಷಧಗಳನ್ನೂ ಹೀಗೆ ತನ್ನಷ್ಟಕ್ಕೆ ತಾನೇ ಏನನ್ನೋ ಸೂಚಿಸಿರುವುದೂ ಉಂಟಂತೆ. 'ಎಐ'ಗಳ ಈ ದೋಷದಿಂದ ಆಗಬಹುದಾದ ಪರಿಣಾಮಗಳು ನಮ್ಮ ಕಲ್ಪನೆಗೂ ಸಿಗದಂತಾಗಿದೆ. ಶರೆನ್ ಬರ್ಗ್ ಅವರ ಅಧ್ಯಯನದ ಪ್ರಕಾರ ಯಾವುದೇ 'ಸ್ಪೀಚ್- ಟು-ಟೆಕ್ಸ್ಟ್' ಸಾಧನಗಳು ನಾವು ನೀಡುವ ವಿಷಯಗಳನ್ನು ಯಾವುದೇ ದೋಷವಿಲ್ಲದ ರೀತಿಯಲ್ಲಿ ಅರ್ಥಮಾಡಿಕೊಳ್ಳಲಾರವಂತೆ.

ಇಂತಹ ಸಾಧನಗಳೆಲ್ಲವೂ ಮನುಷ್ಯ ಈಗಾಗಲೇ ತರಬೇತಿ ನೀಡಿ ಕೋಟಿಗಟ್ಟಲೆ ಗಟ್ಟಲೆ ಮಾಹಿತಿಗಳನ್ನು ಪಠ್ಯರೂಪದಲ್ಲಿ ತುಂಬಿಸಿ, ಅವುಗಳಿಗೆ ತರಬೇತಿ ನೀಡಿರುವುದರ ಆಧಾರದ ಮೇಲೆ ಕೆಲಸ ಮಾಡುತ್ತವೆ. ಅಂತೆಯೇ 'ಜನರೇಟಿವ್ ಚಾಟ್ ಬಾಟು'ಗಳು ಇದಕ್ಕಾಗಿ 'ಲಾರ್ಜ್ ಲ್ಯಾಂಗ್ವೇಜ್' ಮಾಡೆಲ್‌ಗಳನ್ನು ಅವಲಂಬಿಸಿವೆ. ಯಾವುದಾದರೂ ಸಂದೇಶವನ್ನು ನೀಡಿದಾಗ ಧ್ವನಿ ಹಾಗೂ ಅಲ್ಲಿರುವ ಪಠ್ಯಗಳೆರಡನ್ನೂ ಹೊಂದಿಸಿ ನಮಗೆ ಹೊಸ ಸಂದೇಶವನ್ನು ನೀಡುತ್ತವೆ. ಇವು ದೊಡ್ಡ ಮಟ್ಟದ ಮಾಡೆಲ್ ಆಗಿರುವುದರಿಂದ ಇವು ನೀಡುವ ಫಲಿತಾಂಶಗಳು ನಿಖರವಾಗಿರುತ್ತವೆ. ಇತರೆ ಸಾಧನಗಳಲ್ಲಿ ಸಣ್ಣ ಪ್ರಮಾಣದ ಲ್ಯಾಂಗ್ವೇಜ್ ಮಾದರಿಗಳನ್ನು ಬಳಸುವುದರಿಂದ ಅವು ದೋಷಪೂರಿತ ಮಾಹಿತಿಗಳನ್ನು ಹುಟ್ಟುಹಾಕುವ ಸಾಧ್ಯತೆ ಹೆಚ್ಚು. ವಿಸ್ಪರ್ ಕೂಡ ಅಂತಹ ಸಾಧನಗಳಲ್ಲಿ ಒಂದು.

ಇದನ್ನು ಪರೀಕ್ಷಿಸಲು ಕೊನೆಕ್ ಮತ್ತು ಸಂಗಡಿಗರು ಈ ಸಾಧನಕ್ಕೆ ಇಪ್ಪತ್ತು ಗಂಟೆಯ ಆಡಿಯೊವನ್ನು ಪಠ್ಯವನ್ನಾಗಿಸಲು ನೀಡಿದ್ದರಂತೆ. ಅದರಲ್ಲಿ ಚೆನ್ನಾಗಿ ಮಾತನಾಡುವವರು ಹಾಗೂ ಮಾತನಾಡಲು ಸಮಸ್ಯೆಯಿರುವಂಥವರ ಆಡಿಯೊಗಳೂ ಇದ್ದುವಂತೆ. ಎರಡೂ ರೀತಿಯ ಸಂಭಾಷಣೆಗಳನ್ನು ಈ ವಿಸ್ಪರ್ ಒಂದಿಷ್ಟು ಕಥೆಗಳನ್ನು ಹೆಣೆದು ತಪ್ಪಾಗಿ ಲಿಪ್ಯಂತರ ಮಾಡಿತ್ತಂತೆ. ಆದರೆ ಭಾಷೆ ಸ್ಪಷ್ಟವಾಗಿಲ್ಲದ ಆಡಿಯೊಗಳನ್ನು ಲಿಪ್ಯಂತರ ಮಾಡುವಾಗ ಆಗಿರುವ ದೋಷ ಹೆಚ್ಚಿನದಾಗಿತ್ತಂತೆ. ಅದರಲ್ಲೂ ಸುಮಾರು ಶೇ 40ರಷ್ಟು ಅಪಾಯಕಾರಿಯಾಗಿದ್ದುವಂತೆ. ಅರ್ಥಾತ್ ಹಿಂಸೆ, ಲೈಂಗಿಕ ವಕ್ರೋಕ್ತಿಗಳು, ಕೊಲೆ ಪ್ರಕರಣಗಳಂತಹ ಸುಳ್ಳು ಮಾಹಿತಿಗಳನ್ನು ನೀಡಿಬಿಟ್ಟಿತ್ತಂತೆ!

ಹೀಗಾಗಿ ಸಂಶೋಧಕರು, ಮಾತನಾಡುವಾಗ ಹೆಚ್ಚಿನ ವಿರಾಮ ಅಥವಾ ಸಮಯದ ಅಂತರವನ್ನು ನೀಡಿದಾಗ ಈ ರೀತಿ ಭ್ರಮಿಸಿಕೊಳ್ಳುವ ಸಾಧ್ಯತೆ ಹೆಚ್ಚು ಮತ್ತು 'ಮೌನ', 'ಹ್ಮ್', 'ಅಹ್' ಇಂತಹ ಶಬ್ದಗಳನ್ನು ಲ್ಯಾಂಗ್ವೇಜ್ ಮಾಡೆಲ್‌ಗಳು ನಿಜವಾದ ಶಬ್ದಗಳೆಂದು ಗುರುತಿಸಿ ಕಾಲ್ಪನಿಕ ಕಥೆಗಳನ್ನು ಹೆಣೆದುಬಿಡುತ್ತವೆ ಎನ್ನುತ್ತಾರೆ. ಜೊತೆಗೆ ಲ್ಯಾಂಗ್ವೇಜ್ ಮಾಡೆಲ್‌ಗಳ ಉತ್ಪಾದಕ ಸ್ವಭಾವದಿಂದಲೂ ಈ ರೀತಿಯ ತಪ್ಪುಗಳಾಗಬಹುದು, ಹೊಸ ಮತ್ತು ಅಸತ್ಯ ಕಥೆಗಳು ಸೇರಿಕೊಳ್ಳಬಹುದು ಎನ್ನುತ್ತಾರೆ. ಓಪನ್ 'ಎಐ'ನ ಅತಿದೊಡ್ಡ ಮಿತಿಯೇ ಕಟ್ಟುಕಥೆಗಳನ್ನು ಹೆಣೆಯುವುದು ಎಂದು ಈಗಾಗಲೇ ಇವರಿಗೆ ತಿಳಿದಿದ್ದರಿಂದ ಅವು ಭ್ರಮಿಸಬಲ್ಲವು ಎಂಬುದರ ಬಗ್ಗೆ ಆಶ್ಚರ್ಯವಿಲ್ಲದಿದ್ದರೂ, ಅಪಾಯಕಾರಿ ವಿಷಯಗಳನ್ನು ಭ್ರಮಿಸುತ್ತಿರುವುದು ತಲೆನೋವಾಗಿಬಿಟ್ಟಿದೆ. ಮುಂದಿನ ಸಂಶೋಧನೆಗಳಲ್ಲಿ ಅಪಾಯಕಾರಿ ವಿಷಯಗಳನ್ನು ಭ್ರಮಿಸುವುದನ್ನು ಕಡಿಮೆ ಮಾಡುವುದರತ್ತ ಕೆಲಸ ಮಾಡಬೇಕಿದೆ ಎನ್ನುತ್ತಾರೆ, ವಿಜ್ಞಾನಿಗಳು. ಸಾಮಾನ್ಯವಾಗಿ ಮನುಷ್ಯರು ಕೆಲಸ ಮಾಡುವಾಗ ದೋಷಗಳಾಗುತ್ತವೆ, ಯಂತ್ರಗಳು ಮಾಡುವಾಗ ದೋಷಗಳು ಕಡಿಮೆ ಎನ್ನುವುದು ನಂಬಿಕೆಯಾಗಿತ್ತು. ಇತರೆ ಸಾಧನಗಳಲ್ಲಿ ಅದು ಸತ್ಯವೂ ಹೌದು. ಆದರೆ ವೈದ್ಯಕೀಯ ಕ್ಷೇತ್ರಗಳಲ್ಲಿ ಮನುಷ್ಯರನ್ನು ಯಂತ್ರಸಾಧನಗಳಿಂದ ಬದಲಾಯಿಸುವುದು ಸೂಕ್ತವಲ್ಲ. ಒಂದು ಕೆಲಸವನ್ನು ಸುಲಭಗೊಳಿಸಿಕೊಳ್ಳಲು ಹೋಗಿ ಮತ್ತಾವುದೋ ದೊಡ್ಡ ಅಪಾಯವನ್ನು ಆಹ್ವಾನಿಸುವುದು ತರವಲ್ಲ ಎನ್ನಿಸುತ್ತದೆ.

ನೈಜ ಪ್ರಕರಣಗಳನ್ನು ಬೆನ್ನತ್ತಿ ಪರಿಹಾರ ನೀಡುವುದಕ್ಕೇ ಸಾಕಷ್ಟು ಸಮಯ ಬೇಕಿರುವಾಗ ಈ ರೀತಿಯ ಸುಳ್ಳು ಮಾಹಿತಿಗಳ ಬೆನ್ನತ್ತುವುದಾದರೂ ಹೇಗೆ? ಪರಿಹಾರ ನೀಡುವುದಾದರೂ ಹೇಗೆ? ತಂತ್ರಜ್ಞಾನಗಳ ಬಳಕೆಗೂ ಮುನ್ನ ಅವುಗಳ ಸಾಧಕ–ಬಾಧಕಗಳ ಬಗ್ಗೆ ಎಚ್ಚರದಿಂದ ಇರಬೇಕಾದುದು ಅತ್ಯವಶ್ಯ. ❖



ಸೋಷಿಯಲ್ ಮೀಡಿಯಾಗೊಂದು ವಿರೋಧಿ ಆ್ಯಪ್!

ಕೃಷ್ಣ ಭಟ್

ಎಲ್ಲ ತಂತ್ರಜ್ಞಾನ ವಲಯದಲ್ಲಿರುವ ಕಂಪನಿಗಳಿಗೂ ಹೊಸ, ಮುಂದಿನ ಪೀಳಿಗೆಯನ್ನೇ ಆಕರ್ಷಿಸುವ ಪ್ಲಾಟ್‌ಫಾರಂ ಅನ್ನು ನಿರ್ಮಿಸುವುದು ಹೇಗೆ ಎಂಬುದೇ ಸಂಶೋಧನೆಯ ಪ್ರಮುಖ ಭಾಗವಾಗಿರುತ್ತದೆಯಷ್ಟೆ. ಆದರೆ ಇಲ್ಲೊಂದು ಕಂಪನಿ ಸೋಷಿಯಲ್ ಮೀಡಿಯಾಗೆ ತದ್ವಿರುದ್ಧ ಪ್ಲಾಟ್‌ಫಾರಂ ಒಂದನ್ನು ಸಿದ್ಧಪಡಿಸಿದೆ. ಸಾಮಾನ್ಯ ಸೋಷಿಯಲ್ ಮೀಡಿಯಾದಲ್ಲಿ ಪೋಸ್ಟ್‌ಗಳು, ಅದಕ್ಕೆ ಲೈಕ್‌ಗಳು, ಶೇರ್ – ಇವೆಲ್ಲ ಸಾಮಾನ್ಯ ಆಕರ್ಷಣೀಯ ಗುಣಗಳು. ಇವು ಹೆಚ್ಚಾದಷ್ಟೂ ಅದರಲ್ಲಿ ತೊಡಗಿಸಿಕೊಳ್ಳುವ ಜನರ ಸಂಖ್ಯೆಯೂ ಹೆಚ್ಚಾಗುತ್ತದೆ. ಏಕೆಂದರೆ, ಲೈಕ್‌ಗಳು ಹೆಚ್ಚಾದ ಹಾಗೆಯೇ ಪೋಸ್ಟ್ ಮಾಡಿದ ವ್ಯಕ್ತಿಗೆ 'ಓಹ್... ನನ್ನ ಪೋಸ್ಟ್, ವಿಡಿಯೊ ಇಷ್ಟು ಜನರಿಗೆ ತಲುಪಿದೆ. ನನ್ನನ್ನು ಜನರು ಸ್ವೀಕರಿಸುತ್ತಿದ್ದಾರೆ' ಎಂಬ ಭಾವ ಮೂಡುತ್ತದೆ. ಆ ಭಾವವನ್ನು ಉದ್ದೀಪಿಸುವುದಕ್ಕೆಂದೇ ಈ ಸೋಷಿಯಲ್ ಮೀಡಿಯಾಗಳು ಆಯ್ದ ಒಂದಷ್ಟು ಪೋಸ್ಟ್, ವಿಡಿಯೊಗಳನ್ನು ಬೂಸ್ಟ್ ಮಾಡುತ್ತವೆ.

ಆದರೆ, ಇದಕ್ಕೆ ತದ್ವಿರುದ್ಧವಾದ ಒಂದು ಮನೋಭಾವದ ಒಂದು ಆ್ಯಪ್ ಕಳೆದ ಕೆಲವು ದಿನದಿಂದ ಸೋಷಿಯಲ್ ಮೀಡಿಯಾ ಪ್ರಿಯರ ಹುಬ್ಬೇರಿಸಿದೆ.

> ಸೋಷಿಯಲ್ ಮೀಡಿಯಾವನ್ನು ಮತ್ತೇರಿದಂತೆ ಬಳಸಿ ಅದರ ವಿಷ ಉಂಡವರಿಗೆ ಈ 'ಪಾಮ್‌ಸಿ' ಒಂದು ಸಮಾಧಾನದ ಹಾಗೆ ಬಳಕೆಗೆ ಸಿಗಬಹುದು.

ಇದೇ ಪಾಮ್‌ಸಿ (Palmsy).

ಇದನ್ನು 'ಆ್ಯಂಟಿ-ಸೋಷಿಯಲ್ ಮೀಡಿಯಾ' ಎಂದು ಕರೆಯಲಾಗಿದೆ. ಇದು ಸೋಷಿಯಲ್ ಮೀಡಿಯಾ ವಿರೋಧಿ ಆ್ಯಪ್. ಆದರೆ, ಇದು ಕೆಲಸ ಮಾಡುವುದು ಥೇಟ್ ಸೋಷಿಯಲ್ ಮೀಡಿಯಾದ ಹಾಗೆ! ಅರೆ... ಸೋಷಿಯಲ್ ಮೀಡಿಯಾದ ಹಾಗೆಯೇ ಕೆಲಸ ಮಾಡುವ ಒಂದು ಆ್ಯಪ್, ಸೋಷಿಯಲ್ ಮೀಡಿಯಾ ವಿರೋಧಿ ಆಗುವುದು ಹೇಗೆ?

ಅದರಲ್ಲೇ ಇದೆ ಹಕೀಕತ್ತು! ಸಾಮಾನ್ಯವಾಗಿ ನಮಗೆ ಸೋಷಿಯಲ್ ಮೀಡಿಯಾದಲ್ಲಿ ಖುಷಿ ಕೊಡುವುದು ಲೈಕುಗಳು, ಶೇರ್‌ಗಳು ಹಾಗೂ ವ್ಯೂಸ್‌ಗಳೇ ಅಲ್ಲವೇ? ಆದರೆ, ಇದರಲ್ಲಿ ಸೋಷಿಯಲ್ ಮೀಡಿಯಾದಲ್ಲಿ ಕಾಣಸಿಗುವ ಎಲ್ಲ ಲೈಕ್, ಶೇರ್ ಮತ್ತು ವ್ಯೂಸ್‌ಗಳೂ ಇರುತ್ತವೆ. ಆದರೆ, ಇವು ಯಾವುವೂ ಅಸಲಿ ಆಗಿರುವುದಿಲ್ಲ. ಅಷ್ಟೇ ಅಲ್ಲ, ನಾವು ಮಾಡುವ ಪೋಸ್ಟ್ ಕೂಡ ನಮ್ಮ ಮೊಬೈಲ್ ಬಿಟ್ಟು ಅದಕ್ಕೂ ಮುಂದೆ ಹೋಗುವುದೂ ಇಲ್ಲ.

ಅಂದರೆ, ಈ 'ಪಾಮ್‌ಸಿ' ಆ್ಯಪ್‌ನಲ್ಲಿ ಒಂದು ಫೋಟೋ ಪೋಸ್ಟ್ ಮಾಡಿದರೆ, ಅದು ಬೇರೆ ಸೋಷಿಯಲ್ ಮೀಡಿಯಾದ ಹಾಗೆ ಬೇರೆಯವರ ವಾಲ್‌ನಲ್ಲಿ ಕಾಣಿಸುವುದಿಲ್ಲ. ನಮ್ಮ ವಾಲ್‌ನಲ್ಲಿ ನಮ್ಮದೇ ಫೋಟೋಗಳಿರುತ್ತವೆ. ಅದಕ್ಕೆ ಲೈಕ್‌ಗಳೂ ಇರುತ್ತವೆ. ನಮ್ಮ ಸ್ನೇಹಿತರೇ ಅದನ್ನು ಲೈಕ್ ಮಾಡಿದಂತೆಯೂ ಕಾಣಿಸುತ್ತದೆ. ಆದರೆ, ಅಸಲಿ ವಿಷಯ ಏನೆಂದರೆ, ಇದು ಆ ನಮ್ಮ ಸ್ನೇಹಿತರು ಮಾಡಿದ ಲೈಕ್ ಆಗಿರುವುದಿಲ್ಲ. ಬದಲಿಗೆ ಆ್ಯಪ್ ಸ್ವತಃ ನಮಗೆ ಕೊಡಿಸಿದ ಲೈಕ್ ಆಗಿರುತ್ತದೆ. ಅದು ನಮ್ಮ ಸ್ನೇಹಿತರಿಗೆ ಗೊತ್ತೂ ಆಗಿರುವುದಿಲ್ಲ. ಅವರಿಗೆ ನಮ್ಮ ಫೋಟೊ ಕಾಣಿಸುವುದಿಲ್ಲ ಎಂದಾದ ಮೇಲೆ ಅವರಿಗೆ ಅದು ಗೊತ್ತಾಗುವುದಾದರೂ ಹೇಗೆ, ಅಲ್ಲವೇ?

ಈ ಆ್ಯಪ್‌ನ ಇನ್ನೊಂದು ಅನುಕೂಲವೆಂದರೆ, ಇದು ಸಂಪೂರ್ಣವಾಗಿ ಗೌಪ್ಯ! ಇದು ಕೇಳುವುದು ನಮ್ಮ ಕಾಂಟ್ಯಾಕ್ಟ್ ಲಿಸ್ಟ್‌ಗಳನ್ನು ಹಂಚಿಕೊಳ್ಳುವ ಅನುಮತಿ ಮಾತ್ರ. ಇದು ಕೂಡ ಲೈಕುಗಳು ಅಸಲಿಯೆಂಬಂತೆ ಕಾಣಿಸಲಿ ಎಂಬ ಕಾರಣಕ್ಕೆ ನಮ್ಮ ಸ್ನೇಹಿತರ ಪಟ್ಟಿಯಲ್ಲಿರುವವರ ಹೆಸರನ್ನು ಬಳಸಿಕೊಳ್ಳುವುದಕ್ಕೆ ಈ ಪರ್ಮಿಶನ್ ಕೊಡಬೇಕಿರುತ್ತದೆ. ಅದನ್ನು ಹೊರತುಪಡಿಸಿ, ನಮ್ಮ ಫೋಟೊ, ವಿಡಿಯೊಗಳೆಲ್ಲವೂ ಸಂಪೂರ್ಣ ಖಾಸಗಿ ಆಗಿರುತ್ತವೆ. ನಾವು ಹಂಚಿಕೊಳ್ಳುವ ಎಲ್ಲ ಮಾಹಿತಿಯೂ ನಮ್ಮ ಸ್ಮಾರ್ಟ್‌ಫೋನ್ ಬಿಟ್ಟು ಅದರಿಂದಾಚೆಗೆ ಹೋಗುವುದಿಲ್ಲ.


ಆರಂಭದಲ್ಲಿ ಇಂಥದ್ದೊಂದು ಆ್ಯಪ್ ಏಕಾದರೂ ಬೇಕು? ಹೀಗೆ ಅನ್ನಿಸುವುದು ಸುಳ್ಳಲ್ಲ. ಇದರ ಅಗತ್ಯವಾದರೂ ಏನು? ನಾವು ಪೋಸ್ಟ್ ಮಾಡುವುದು ನಾಲ್ಕು ಜನ ನೋಡಲಿ ಎಂದೇ ಹೊರತು ಯಾರೂ ನೋಡದಿರಲಿ ಎಂದಲ್ಲವಲ್ಲ...? ನಿಜ. ಇದು ಮೂಲಭೂತ ಸಮಸ್ಯೆ. ಹಾಗೆಂದ ಮಾತ್ರಕ್ಕೆ ಇದು ನಿರುಪಯುಕ್ತವೂ ಎಂದಲ್ಲ. ಏಕೆಂದರೆ, ಸೋಷಿಯಲ್ ಮೀಡಿಯಾದ ವಿಷವರ್ತುಲ ಇದರಲ್ಲಿಲ್ಲ. ಆದರೆ, ಆ ಖುಷಿ, ಅಂದರೆ ನಮ್ಮ ಪೋಸ್ಟ್‌ಗಳಿಗೆ ಬರುವ ಲೈಕಿನ ಖುಷಿ ಸಿಗುತ್ತದೆ! ಈ ಲೈಕ್‌ಗಳು ನಕಲಿ ಎಂದು ಗೊತ್ತಿದ್ದೂ ನಾವು ಖುಷಿ ಪಡಬಹುದು!

ಇನ್ನೂ ಸೋಷಿಯಲ್ ಮೀಡಿಯಾ ಬಳಸದೇ ಇರುವವರಿಗೆ ಇದು ಖುಷಿ ಕೊಡದೇ ಇರಬಹುದು. ಆದರೆ, ಸೋಷಿಯಲ್ ಮೀಡಿಯಾವನ್ನು ಮತ್ತೇರಿದಂತೆ ಬಳಸಿ ಅದರ ವಿಷ ಉಂಡವರಿಗೆ ಈ 'ಪಾಮ್‌ಸಿ' ಒಂದು ಸಮಾಧಾನದ ಹಾಗೆ ಬಳಕೆಗೆ ಸಿಗಬಹುದು. ಒಂದ ಗುಕ್ಕಿಗೆ ಸೋಷಿಯಲ್ ಮೀಡಿಯಾವನ್ನು ತೊರೆಯಲು ಸಾಧ್ಯವಾಗದಿದ್ದಾಗ ಇದೊಂದು ಪರ್ಯಾಯ ವಿಧಾನವಾಗಬಹುದು. ಹೀಗೆಂದು ಇದೇನೂ ಈಗಿರುವ ಸೋಷಿಯಲ್ ಮೀಡಿಯಾದ ಹಾಗೆ ಜನಪ್ರಿಯವಾಗುತ್ತದೆ ಎನ್ನಲಾಗದು. ಏಕೆಂದರೆ, 'ಜನಪ್ರಿಯ' ಆಗದೇ ಇರುವುದೇ ಇದರ ಮೂಲಮಂತ್ರವಾಗಿದ್ದರಿಂದ, ಇದು ಸೋಷಿಯಲ್ ಮೀಡಿಯಾ ಆಗುವುದರಲ್ಲಿನ ವೈಫಲ್ಯವೇ ಇದರ ಯಶಸ್ಸು! ಸೋಷಿಯಲ್ ಮೀಡಿಯಾ ವಿರೋಧಿಯಾಗುವುದರಲ್ಲಿನ ಯಶಸ್ಸೇ ಇದರ ಯಶಸ್ಸೂ ಹೌದು! ❖

ನೀಟ್- ಪಿಯುಸಿ ಪರೀಕ್ಷೆ ದಿಕ್ಸೂಚಿ

NEET PHYSICS

27) The figure shows the energy level of certain atom. When the electron de excites from 3E to E, an electromagnetic wave of wavelength λ is emitted. What is the wavelength of the electromagnetic wave emitted when the electron de excites from $\frac{5E}{3}$ to E?



(a) 3 λ (b) 2 λ

(c) 5 λ (d) $\frac{3\lambda}{5}$

Ans:- (a)

Expln- As electron de excites from 3E → E

$\therefore h\nu = 3E - E$

(or) $\frac{hc}{\lambda} = 2E$ .... (i)


When electron de excites from $\frac{5E}{3} \rightarrow E$

$$\frac{hc}{\lambda'} = \frac{5E}{3} - E = \frac{2E}{3} \text{ .... (ii)}$$

Substituting the value of E from Eq. (i) in above equation

$$\frac{hc}{\lambda'} = \frac{2}{3}\left(\frac{hc}{\lambda_2}\right) \Rightarrow \lambda' = 3\lambda$$

28) From a fixed support, two small identical spheres are suspended by means of strings of length 1 m each. They are pulled aside as shown and then released. B is the mean position. Then the two spheres collide



(a) At B after 0.25 s

(b) At B after 0.5 s

(c) On the right side of B after some time

(d) On the right side of B when the strings are inclined at 15^0 with B

Ans:- (b)

Expln- Irrespective of amplitude, both spheres take same time to reach the mean position i.e., $\frac{T}{4}$ S

$$\therefore T = 2\pi\sqrt{\frac{l}{g}} = 2\times3.14\times\sqrt{\frac{1}{10}} = 2s$$

So, they will collide at $\frac{T}{4} = \frac{2}{4} = 0.5\,s.$

29) A truck accelerates from speed v to 2v. Work done in during this is

(a) Three times as the work done in accelerating it from rest to v

(b) Same as the work done in accelerating it from rest to v

(c) Four times as the work done in accelerating it from rest to v

(d) less than the work done in accelerating it from rest to v

Ans:- (a)

Expln- Work done to accelerating from 0 to v is,

$$W_1 = \frac{1}{2}mv^2$$


Work done to accelerate from v to 2v is,

$$W_1 = \frac{1}{2}m(2v)^2$$

$$\Rightarrow \Delta W = W_2 - W_1 = \frac{1}{2}m(2v)^2 - \frac{1}{2}mv^2$$

$$= 4W_1 - W_1 = 3W_1$$

30) Earth is moving around the sun in elliptical orbit as shown. The ratio of OB and OA is R. Then the ratio of Earth's is velocities at A and B is




(a) R^{-1} (b) $\sqrt{R}$

(c) R (d) $R^{2/3}$

Ans:- (c)

Expln- In central force motion, the angular momentum of body remains conserved.



i.e., Angular momentum, $L = r \times p = mvr$

[at minor and major axis v and r are perpendicular]

So if v_1 and v_2 be the speed of earth at A and B, respectively.

Then, $mv_1r_1 = mv_2r_2$

$$\Rightarrow \frac{v_1}{v_2} = \frac{r_2}{r_1} = \frac{OB}{OA} \Rightarrow \frac{v_1}{v_2} = R$$

31) A solid cylinder of radius R made of a material of thermal conductivity K_1 is surrounded by a cylindrical shell of inner radius R and outer radius 2R made of a material of thermal conductivity K_2. The two ends of the combined system are maintained at two different temperatures.

Then there is no loss of heat across the cylindrical surface and the system is in steady state. The effective thermal conductivity of the system is *(Contd….)*

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC BIOLOGY

MOLECULAR BASIS OF INHERITANCE

25. Which RNA co-ordinates the function of protein synthesis and helps in the formation of peptide bonds?

Ans:- Ribosomal RNA (rRNA)s co-ordinate the function of protein synthesis and helps in the formation of peptide bonds.

26. How many types of replications are observed in DNA?

Ans:- Replications observed in DNA are of three types, they are - Conservative replication, Disruptive replication and Semiconservative replication.

27. What is RNA Polmerase I?

Ans:- RNA Polmerase I is the enzyme located in the nucleolus and is responsible for the transcription of ribosomal RNA.

28. What is RNA Polmerase II?

Ans:- RNA polymerase II is the enzyme located in the nucleoplasm which is part of the nucleus other than nucleolus. This enzyme is the major component of RNA polymerase activity and it transcribes all the genes that produce mRNA.

29. What is RNA Polmerase III?

Ans:- RNA polymerase III is the enzyme that occurs in the nucleoplasm and transcribe RNA and 5 RNA genes. It is inhibited by high level of amanitin in animal cells but not in the yeast and insects.

30. What is a dominant gene?

Ans:- Dominant gene is the one which expresses itself by suppressing the expression of its counterpart. E.g., the gene for tallness is expressed suppressing the gene for dwarfness. This is conventionally represented as 'T'.

31. What is a recessive gene?

Ans:- Recessive gene is the one, which is not expressed in the presence of the dominant gene. E.g., the gene for dwarfness is expressed only in the absence of the dominant gene for tallness. This is conventionally represented as 't'.

32. Which are the different types of crossing over?

Ans:- The different types of crossing over are – single cross-over, double cross-over and multiple cross-over.

33. What is meant by Sex linked inheritance in humans?

Ans:- The inheritance of the body characters controlled by genes present on the sex chromosomes is known as sex-linked inheritance.

34. Give some examples for Sex linked inheritance.

Ans:- Inheritance of eye colour in Drosophila, inheritance of colour blindness and haemophilia in human beings are some of the good examples for sex linked inheritance.

35. State the law of Segregation.

Ans:- The law of Segregation states that when a pair of contrasting factors or allelomorphs or genes are brought together in a hybrid (heterozygote), these factors do not blend or mix-up but simply associate themselves and remain together and separate at the time of gamete formation.

36. Explain the law of segregation briefly?

Ans:- Alleles with respect to a pair of characters remain associated in pairs in all the cells of an organism. But during gamete formation the factors undergo separation or segregation.

37. Give an example for the law of segregation?

Ans:- An example for the law of segregation is - Suppose a tall plant with a pair of alleles Tt produces about 100 gametes during reproduction, 50 gametes receive the gene T and the other 50 gametes receive the gene t. Thus, segregation takes place in equal ratios with reference to any given character and so the gametes maintain purity.

Hence this law is also, called the Law of purity of gametes.

38. Explain the Law of independent assortment briefly?

Ans:- In an organism with many characters, the genes for different characters undergo segregation independently. This means, the separation of genes for a character does not interfere in the separation of genes for the other character. Hence, they assort independently. This is possible because the genes for various characters are located on different loci or in different homologous chromosomes.

39. Mention some differences between Monohybird and Dihybird.

Ans:-

Monohybird	*Dihybird*
It is a cross made between individuals having contrasting traits in order to study the inheritance of a pair of alleles.	It is a cross made between individuals having contrasting traits in order to study the inheritance of a two pairs of alleles.
Phenotypic monohybrid ratio in F_2 generation is 3: 1.	Phenotypic dihybird ratio is 9 : 3 : 3 : 1.
Genotypic monohybrid ratio in F_2 generation is 1 : 2 : 1.	Genotypic mono-hybrid ratio in F_2 is 1:2:2:4:2:2:1:1:1.

40. Briefly mentioned the contribution of T.H. Morgan in genetics.

Ans:- T.H. Morgan (1866-1945) was an American genetist who was awarded Nobel Prize in 1933 for his work. *(Contd……)*

‘ಬಿಜೆಪಿ– ಜೆಡಿಎಸ್ ಮೈತ್ರಿಯನ್ನು ಸೋಲಿಸಲು ಪೆನ್‌ಡ್ರೈವ್ ಹಂಚಿಕೆ’

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ಬಿಜೆಪಿ– ಜೆಡಿಎಸ್ ಮೈತ್ರಿಗೆ ಸೋಲಿಸಲೆಂದೇ ಮಹಾನ್ ನಾಯಕರು (ಡಿ.ಕೆ.ಶಿವಕುಮಾರ್) ಪೆನ್ ಡ್ರೈವ್ ಹಂಚಿದ್ದಾರೆ. ಮಾಧ್ಯಮಗಳು ಹಾಗೂ ಸಾಮಾಜಿಕ ಜಾಲತಾಣಗಳ ಮೂಲಕ ಪ್ರಸಾರ ಮಾಡಿಸಿದ್ದಾರೆ. ಇದರ ಬಗ್ಗೆಯೂ ಎಸ್‌ಐಟಿ ತನಿಖೆ ಮಾಡಲಿ’ ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಒತ್ತಾಯಿಸಿದರು.

ಇಲ್ಲಿ ಮಂಗಳವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಅಶ್ಲೀಲ ವಿಡಿಯೊದಲ್ಲಿ ಭಾಗಿಯಾದ ಮಹಿಳೆಯರು ದೂರು ನೀಡಿದ್ದಾರೆಯೇ? ಮಹಿಳಾ ಆಯೋಗದ ಅಧ್ಯಕ್ಷೆ ನೀಡಿದ ಸಲಹೆ ಮೇರೆಗೆ ಸರ್ಕಾರ ಎಸ್‌ಐಟಿ ರಚಿಸಿದೆ. ಈ ಅಧ್ಯಕ್ಷೆ ಯಾರು? ಅವರನ್ನು ನೇಮಿಸಿದ್ದು ಯಾರು’ ಎಂದು ಪ್ರಶ್ನಿಸಿದರು.

‘ಇದು ಮಹಿಳೆಯರ ರಕ್ಷಣೆಗಾಗಿ ಅಲ್ಲ. ನಮ್ಮ ಕುಟುಂಬದ ವರ್ಚಸ್ಸು ಹಾಳು ಮಾಡುವ ಹುನ್ನಾರವಿದೆ. ಈ ಪ್ರಕರಣದಲ್ಲಿ ನನ್ನನ್ನು ಸೇರಿ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ, ಪ್ರಧಾನಿ ನರೇಂದ್ರ ಮೋದಿ ಅವರ ಹೆಸರನ್ನು ಏಕೆ ತಂದಿದ್ದೀರಿ? ಈ ಪ್ರಕರಣಕ್ಕೂ ನನಗೂ, ಮೋದಿಗೂ ಏನು ಸಂಬಂಧ? ಪ್ರಧಾನಿಯವರ ಪಾತ್ರ ಏನಿದೆ’ ಎಂದು ಅವರು ಪ್ರಶ್ನಿಸಿದರು.


ಅವಮಾನಿಸಿದ್ದು ಇವರೇ: ‘ಅಶ್ಲೀಲ ದೃಶ್ಯಗಳಲ್ಲಿ ಮಹಿಳೆಯರ ಮುಖಗಳನ್ನು ಬ್ಲರ್ (ಕಾಣಿಸದಂತೆ) ಮಾಡದೆ, ಅತ್ಯಂತ ಕೀಳಾಗಿ ಪ್ರಸಾರ ಮಾಡಲಾಗಿದೆ. ಇದರಿಂದ ಆ ಹೆಣ್ಣುಮಕ್ಕಳ ಭವಿಷ್ಯ ತೊಂದರೆಗೆ ಸಿಲುಕುವ ಅಪಾಯವಿದೆ. ನಿಜವಾಗಿಯೂ ಮಹಿಳೆಯರನ್ನು ಅವಮಾನಿಸಿದ್ದು ನೀವೇ’ ಎಂದು ಅವರು ಹರಿಹಾಯ್ದರು.

‘ಡಿ.ಕೆ.ಶಿವಕುಮಾರ್ ಅವರೇ, ನಿಮ್ಮ ಕುಟುಂಬದ ಸದಸ್ಯರು ವಿಡಿಯೊದಲ್ಲಿ ಸಿಲುಕಿದ್ದರೆ, ಏನು ಮಾಡುತ್ತಿದ್ದೀರಿ? ನಾವು ಎದುರಿಸುತ್ತೇವೆ. ಎಲ್ಲೂ ಓಡಿ ಹೋಗಲ್ಲ. ಯಾರಾದರೂ ಆತ್ಮಹತ್ಯೆ ಮಾಡಿಕೊಂಡರೆ ಅಥವಾ ಹೆಚ್ಚು ಕಡಿಮೆಯಾದರೆ ಅದಕ್ಕೆ ಸರ್ಕಾರವೇ ಜವಾಬ್ದಾರಿ. ಕಾಂಗ್ರೆಸ್‌ನವರು ಮಹಿಳೆಯರಿಗೆ ಎಷ್ಟು ಗೌರವಿಸುತ್ತಾರೆ ಎಂಬುದನ್ನು ವಿದ್ಯಾರ್ಥಿನಿ ನೇಹಾ ಹಿರೇಮಠ ಪ್ರಕರಣದಲ್ಲಿ ನೋಡಿದ್ದೇವೆ’ ಎಂದರು.

ಮುಖ್ಯಮಂತ್ರಿಗೂ ಗೊತ್ತು: ‘ಪೆನ್‌ಡ್ರೈವ್ ವಿಷಯ ಮುಖ್ಯಮಂತ್ರಿಯವರಿಗೆ ಮೊದಲೇ ಗೊತ್ತು. ಅವರ ಗಮನಕ್ಕೆ ಬಾರದೆ ಇಂತಹ ಬೆಳವಣಿಗೆ ನಡೆಯಲ್ಲ. ಪೆನ್‌ಡ್ರೈವ್ ಗ್ಯಾರಂಟಿ ಆಧಾರದ ಮೇಲೆ ಅವರು ಜೆಡಿಎಸ್ ಎಲ್ಲ ಸ್ಥಾನಗಳಲ್ಲೂ ಸೋಲುತ್ತದೆ ಎನ್ನುತ್ತಿದ್ದರು. ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಸೇರಿ ಕ್ಯಾಸೆಟ್ ಬಿಡುಗಡೆ ಮಾಡಿದ್ದಾರೆ’ ಎಂದು ಅವರು ಆರೋಪಿಸಿದರು.

‘ನಮ್ಮ ವಿರುದ್ಧ ಬೆಂಗಳೂರಿನಲ್ಲಿ ದೂರು ನೀಡಿದ ಮಹಿಳೆ, ಕಾರ್ತಿಕ ಗೌಡ ಮತ್ತು ದೇವರಾಜ್‌ಗೌಡ ಬಗ್ಗೆಯೂ ತನಿಖೆಯಾಗಲಿ’ ಎಂದು ಅವರು ಒತ್ತಾಯಿಸಿದರು.

ನನ್ನ ಪೆನ್‌ಡ್ರೈವ್ ಅಶ್ಲೀಲ ಅಲ್ಲ: ‘ನನ್ನ ಬಳಿ ಇರುವ ಪೆನ್‌ಡ್ರೈವ್ ಇದೇನಾ ಎಂದು ಡಿ.ಕೆ. ಶಿವಕುಮಾರ್ ಪ್ರಶ್ನಿಸಿದ್ದಾರೆ. ನನ್ನ ಬಳಿ ಇರುವ ಪೆನ್‌ಡ್ರೈವ್ ಬಗ್ಗೆ ಯಾವಾಗ ಹೇಳಬೇಕೋ, ಆಗ ಹೇಳುವೆ. ಅದರಲ್ಲಿ ಅಶ್ಲೀಲ ಇಲ್ಲ. ಅವರ ಭ್ರಷ್ಟಾಚಾರದ ವಿವರ ಇದೆ. ಅಶ್ಲೀಲ ಪೆನ್‌ಡ್ರೈವ್ ಮಾಡುವ ಸಂಸ್ಕೃತಿ ನಮ್ಮದಲ್ಲ. ಆ ಸಂಸ್ಕೃತಿ ಅವರದ್ದು. ಹಿಂದೆ ಅವರು ಇಂತಹದ್ದನ್ನು ಸಾಕಷ್ಟು ಮಾಡಿದ್ದಾರೆ’ ಎಂದರು.


ಕುಮಾರಸ್ವಾಮಿ

‘ಚಿಲ್ಲರೆ ರಾಜಕಾರಣ ಮಾಡಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಾಸನದಲ್ಲಿನ ಪೆನ್‌ಡ್ರೈವ್ ಪ್ರಕರಣಕ್ಕೂ ನನಗೂ ಸಂಬಂಧವಿಲ್ಲ. ಅಂತಹ ಚಿಲ್ಲರೆ ರಾಜಕೀಯವನ್ನು ನಾನು ಮಾಡುವುದಿಲ್ಲ’ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

‘ಪೆನ್ ಡ್ರೈವ್ ಪ್ರಕರಣದ ಹಿಂದೆ ಒಬ್ಬ ಮಹಾನಾಯಕ ಇದ್ದಾನೆ’ ಎಂಬ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಅವರ ಪರೋಕ್ಷ ಆರೋಪದ ಕುರಿತು ಮಾಧ್ಯಮಗಳಿಗೆ ಮಂಗಳವಾರ ಪ್ರತಿಕ್ರಿಯಿಸಿದ ಅವರು, ‘ಪೆನ್‌ಡ್ರೈವ್ ಇದೆ ಎಂದು ಹೆದರಿಸುವ ಕೆಲಸವನ್ನು ನಾನು ಮಾಡುವುದಿಲ್ಲ. ಚುನಾವಣೆಯಲ್ಲಿ ನೇರವಾಗಿ ಎದುರಿಸುತ್ತೇನೆ. ಏನೇ ವಿಷಯವಿದ್ದರೂ ವಿಧಾನಸಭೆಯೊಳಗೆ ಬಂದು ಮಾತನಾಡಿ ಎಂದು ಕುಮಾರಸ್ವಾಮಿ ಅವರಿಗೆ ಆಹ್ವಾನ ನೀಡಿದ್ದೇನೆ. ಅಲ್ಲಿ ಬರಲಿ’ ಎಂದರು.

‘ಬಿಜೆಪಿಯವರು ಪೆನ್‌ಡ್ರೈವ್ ಬಿಡುಗಡೆ ಮಾಡಿದ್ದಾರೆ ಎಂದು ಪ್ರಜ್ವಲ್ ರೇವಣ್ಣ ಅವರ ಮಾಜಿ ಕಾರು ಚಾಲಕ ಹೇಳಿಕೆ ನೀಡಿದ್ದಾನೆ. ಸಾಮಾಜಿಕ ಮಾಧ್ಯಮಗಳಲ್ಲಿ ಬಂದ ವಿಡಿಯೊ ತುಣುಕುಗಳನ್ನು ನಮ್ಮ ಪಕ್ಷದ ಕಾರ್ಯಕರ್ತರು ಹಂಚಿಕೊಂಡಿರಬಹುದು. ಆದರೆ, ಪೆನ್‌ಡ್ರೈವ್ ಬಿಡುಗಡೆ ಹಿಂದೆ ನಾವಾಗಲೀ, ನಮ್ಮ ಪಕ್ಷವಾಗಲೀ ಇಲ್ಲ’ ಎಂದು ಹೇಳಿದರು.

‘ಬಿಜೆಪಿ ನಾಯಕರ ಮೌನವೇಕೆ?’

‘ಕರ್ನಾಟಕದಲ್ಲಿ ಮಹಿಳೆಯರ ರಕ್ಷಣೆ ಕುರಿತು ಅಮಿತ್ ಶಾ ಮಾತನಾಡುತ್ತಿರುತ್ತಾರೆ. ಉಡುಪಿ ಶಾಲೆಯಲ್ಲಿ ನಡೆದ ಪ್ರಕರಣದ ತನಿಖೆಗೆ ರಾಷ್ಟ್ರೀಯ ಮಹಿಳಾ ಆಯೋಗವನ್ನೇ ಕಳಿಸಲಾಗಿತ್ತು. ಆದರೆ, ಪ್ರಜ್ವಲ್ ರೇವಣ್ಣ ಪ್ರಕರಣದ ಕುರಿತು ಬಿಜೆಪಿಯವರು ಏಕೆ ಮೌನ ವಹಿಸಿದ್ದಾರೆ’ ಎಂದು ಶಿವಕುಮಾರ್ ಪ್ರಶ್ನಿಸಿದರು.


‘ಪ್ರಲ್ಹಾದ ಜೋಶಿ, ಆರ್. ಅಶೋಕ, ವಿ.ಸುನಿಲ್ ಕುಮಾರ್, ಸಿ.ಟಿ. ರವಿ, ಶೋಭಾ ಕರಂದ್ಲಾಜೆ ಅವರೆಲ್ಲರೂ ಏಕೆ ಮಾತನಾಡುತ್ತಿಲ್ಲ’ ಎಂದು ಕೇಳಿದರು.

ಬಹಿರಂಗಗೊಂಡಿರುವುದು ಹಳೆಯ ವಿಡಿಯೊಗಳು ಎಂದು ಎಚ್.ಡಿ. ರೇವಣ್ಣ ಅವರೇ ಒಪ್ಪಿಕೊಂಡಿದ್ದಾರೆ. ಇದೇ ವಿಚಾರವಾಗಿ ಬಿಜೆಪಿ ಮುಖಂಡ ದೇವರಾಜೇಗೌಡ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಪತ್ರವನ್ನೂ ಬರೆದಿದ್ದರು. ಪ್ರಜ್ವಲ್‌ಗೆ ಟಿಕೆಟ್ ನೀಡದಂತೆ ಅಮಿತ್ ಶಾ ಸೂಚಿಸಿದ್ದರು. ಇದನ್ನು ಕುಮಾರಸ್ವಾಮಿ ಅವರೇ ಹೇಳಿಕೊಂಡಿದ್ದರು ಎಂದರು.

‘ಕುಮಾರಸ್ವಾಮಿ ಮತ್ತು ಅವರ ಕುಟುಂಬದವರಿಗೆ ನಮ್ಮನ್ನು ನೆನಪಿಸಿಕೊಳ್ಳದಿದ್ದರೆ ಸ್ಫೂರ್ತಿ ಬರುವುದಿಲ್ಲ. ಅದಕ್ಕಾಗಿ ನಮ್ಮ ಬಗ್ಗೆ ಏನಾದರೂ ಹೇಳುತ್ತಿರುತ್ತಾರೆ. ಪೆನ್‌ಡ್ರೈವ್ ಬಗ್ಗೆ ಹಿಂದೆಯೇ ಗುಸು ಗುಸು ಚರ್ಚೆ ನಡೆಯುತ್ತಿತ್ತು. ನಾನು ಒಂದು ಪಕ್ಷದ ಅಧ್ಯಕ್ಷ. ಹೀಗಾಗಿ ಯಾರಾದರೂ ಮಾಹಿತಿ ನೀಡುತ್ತಿರುತ್ತಾರೆ’ ಎಂದರು.

ಕುಟುಂಬದವರಲ್ಲ ಎಂಬುದು ಸುಳ್ಳು: ‘ಪ್ರಜ್ವಲ್ ಕುಟುಂಬಕ್ಕೂ ನಮಗೂ ಸಂಬಂಧವಿಲ್ಲ ಎಂದು ಕುಮಾರಸ್ವಾಮಿ ಹೇಳಿದ್ದಾರೆ. ಪ್ರಜ್ವಲ್ ನನ್ನ ಮಗ ಎಂದು ಅವರೇ ಹಿಂದೆ ಹೇಳಿದ್ದರು. ಎಚ್.ಡಿ. ರೇವಣ್ಣ, ಎಚ್.ಡಿ. ಕುಮಾರಸ್ವಾಮಿ ಎಂಬ ಹೆಸರಿದೆ. ಎಚ್.ಡಿ. ಎಂಬುದು ಎಚ್.ಡಿ. ದೇವೇಗೌಡರ ಮಕ್ಕಳು ಎಂದಲ್ಲವೆ? ಇನ್ನು ನಮ್ಮ ಕುಟುಂಬದವರಲ್ಲ ಎಂದು ಹೇಳಲು ಹೇಗೆ ಸಾಧ್ಯ’ ಎಂದು ಶಿವಕುಮಾರ್ ಪ್ರಶ್ನಿಸಿದರು.

ಪ್ರಜ್ವಲ್ ರೇವಣ್ಣ ಅವರನ್ನು ಜೆಡಿಎಸ್ ಪಕ್ಷದಿಂದ ವಜಾಗೊಳಿಸಲಿ ಅಥವಾ ಅಲ್ಲಿಯೇ ಇಟ್ಟುಕೊಳ್ಳಲಿ. ಅದು ಅವರಿಗೆ ಬಿಟ್ಟ ವಿಚಾರ. ಇದೆಲ್ಲವೂ ಕಣ್ಣೊರೆಸುವ ತಂತ್ರ ಎಂಬುದು ಎಲ್ಲರಿಗೂ ಗೊತ್ತು ಎಂದು ಜೆಡಿಎಸ್ ವಿರುದ್ಧ ವಾಗ್ದಾಳಿ ನಡೆಸಿದರು.


ಡಿ.ಕೆ. ಶಿವಕುಮಾರ್

ಪ್ರಜ್ವಲ್ ರೇವಣ್ಣ ವಿಡಿಯೊ ಪ್ರಕರಣ: ಮಾಜಿ ಕಾರು ಚಾಲಕ ಕಾರ್ತಿಕ್ ಅಜ್ಞಾತ ಸ್ಥಳದಿಂದ ವಿಡಿಯೊ ಸಂದೇಶ

‘ದೇವರಾಜೇಗೌಡ ಬಿಟ್ಟು ಇತರರಿಗೆ ವಿಡಿಯೊ ಕೊಟ್ಟಿಲ್ಲ’

ಪ್ರಜಾವಾಣಿ ವಾರ್ತೆ

ಹಾಸನ: ಸಂಸದ ಪ್ರಜ್ವಲ್ ರೇವಣ್ಣ ಪಾಲ್ಗೊಂಡಿದ್ದಾರೆ ಎನ್ನಲಾಗುತ್ತಿರುವ ಲೈಂಗಿಕ ದೌರ್ಜನ್ಯದ ವಿಡಿಯೊ ಪ್ರಕರಣ ದಿನಕ್ಕೊಂದು ತಿರುವು ಪಡೆಯುತ್ತಿದ್ದು, ಇದೀಗ ಅವರ ಮಾಜಿ ಕಾರು ಚಾಲಕ ಕಾರ್ತಿಕ್ ಅಜ್ಞಾತ ಸ್ಥಳದಿಂದ ವಿಡಿಯೊ ಹೇಳಿಕೆ ಬಿಡುಗಡೆ ಮಾಡಿದ್ದಾರೆ.

6 ನಿಮಿಷಗಳಿಗೂ ಹೆಚ್ಚಿರುವ ವಿಡಿಯೊದಲ್ಲಿ ಮಾತನಾಡಿರುವ ಅವರು, ‘ಪ್ರಜ್ವಲ್ ರೇವಣ್ಣ ಅವರಿಗೆ ಸೇರಿದ್ದು ಎನ್ನಲಾದ ಅಶ್ಲೀಲ ವಿಡಿಯೊ ಮತ್ತು ಫೋಟೊಗಳನ್ನು ನಾನು ಬಿಜೆಪಿ ಮುಖಂಡ ದೇವರಾಜೇಗೌಡ ಅವರಿಗೆ ಮಾತ್ರ ಕೊಟ್ಟಿದ್ದೇನೆ. ಬೇರೆ ಯಾರಿಗೂ ನೀಡಿಲ್ಲ’ ಎಂದು ಸ್ಪಷ್ಟನೆ ನೀಡಿದ್ದಾರೆ.

‘ಯಾವುದೇ ಕಾರಣಕ್ಕೂ ನಾನು ಕಾಂಗ್ರೆಸ್‌ನ ಯಾರೊಬ್ಬರಿಗೂ ವಿಡಿಯೊ–ಫೋಟೊಗಳನ್ನು ಕೊಟ್ಟಿಲ್ಲ. ನಾನು ಕಾಂಗ್ರೆಸ್‌ನವರಿಗೆ ಕೊಡುವುದಾಗಿದ್ದರೆ, ದೇವರಾಜೇಗೌಡರ ಬಳಿ ಏಕೆ ಹೋಗುತ್ತಿದ್ದೆ? ಅವರಿಗೆ ಬಿಟ್ಟರೆ ಒಂದೂ ತುಣುಕನ್ನು ಯಾರಿಗೂ ಕೊಟ್ಟಿಲ್ಲ. ವಿನಾಕಾರಣ ಕಾಂಗ್ರೆಸ್‌ನವರ ಹೆಸರನ್ನು ಎಳೆದುತರಬೇಡಿ’ ಎಂದು ಕೋರಿದ್ದಾರೆ.


‘15 ವರ್ಷದಿಂದ ಪ್ರಜ್ವಲ್ ಹಾಗೂ ಅವರ ಕುಟುಂಬದ ಕಾರು ಚಾಲಕನಾಗಿ ಕೆಲಸ ಮಾಡಿದ್ದೆ. ಆ ಸಂದರ್ಭದಲ್ಲಿ ನನ್ನ ಜಮೀನನ್ನು ಅವರು ಬಲವಂತವಾಗಿ ಬರೆಸಿಕೊಂಡು ನನ್ನ ಹಾಗೂ ನನ್ನ ಪತ್ನಿ ಮೇಲೆ ಹಲ್ಲೆ ಮಾಡಿ ಹಿಂಸೆ ಕೊಟ್ಟರು. ಹಾಗಾಗಿ ನಾನು ಒಂದು ವರ್ಷದಿಂದೀಚೆಗೆ ಕೆಲಸ ಬಿಟ್ಟು ಅವರ ಮನೆಯಿಂದ ಹೊರಬಂದೆ. ಆ ಸಂದರ್ಭದಲ್ಲಿ ನನಗೆ ಯಾರೂ ನ್ಯಾಯ ಕೊಡಿಸಲಿಲ್ಲ. ಹಾಗಾಗಿ ನನಗಾದ ಅನ್ಯಾಯವನ್ನು ಬಿಜೆಪಿ ಮುಖಂಡ ದೇವರಾಜೇಗೌಡ ಬಳಿ ಹೋಗಿ ವಿವರಿಸಿದೆ’ ಎಂದಿದ್ದಾರೆ.

‘ದೇವರಾಜೇಗೌಡರು ಪ್ರಜ್ವಲ್ ಕುಟುಂಬದ ವಿರುದ್ಧ ಕಾನೂನು ಹೋರಾಟ ಮಾಡುತ್ತಿದ್ದರು. ನಿನ್ನ ಬಳಿ ಇರುವ ವಿಡಿಯೊ ಮತ್ತು ಫೋಟೊಗಳನ್ನು ಕೊಡು, ನಾನು ಯಾರಿಗೂ ತೋರಿಸುವುದಿಲ್ಲ ಎಂದು ಭರವಸೆ ನೀಡಿದ್ದರು. ಅವರ ಮಾತನ್ನು ನಂಬಿ ನನ್ನ ಬಳಿ ಇದ್ದ ವಿಡಿಯೊದ ಒಂದು ಕಾಪಿಯನ್ನು ಅವರಿಗೆ ಕೊಟ್ಟಿದ್ದೆ’ ಎಂದು ತಿಳಿಸಿದ್ದಾರೆ.

‘ಆದರೆ, ಅವರು ಅದನ್ನು ಸ್ವಾರ್ಥಕ್ಕಾಗಿ ಬಳಸಿಕೊಂಡಿದ್ದಾರೆಯೋ ಏನೋ ಗೊತ್ತಿಲ್ಲ. ಹಾಗೆಯೇ ಯಾರು ಪೆನ್‌ಡ್ರೈವ್ ಹಂಚಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ವಿನಾಕಾರಣ ನನ್ನ ಮೇಲೆ ಇಲ್ಲ ಸಲ್ಲದ ಆರೋಪ ಮಾಡುತ್ತಿದ್ದಾರೆ. ನಾನು ಎಲ್ಲ ವಿಚಾರವನ್ನು ಎಸ್‌ಐಟಿ ಮುಂದೆ ಎಳೆಎಳೆಯಾಗಿ ಹಂಚಿಕೊಳ್ಳುತ್ತೇನೆ’ ಎಂದು ಹೇಳಿದ್ದಾರೆ.

ಮಹಿಳೆಯ ವಿರುದ್ಧ ಒಡನಾಡಿ ದೂರು: ‘ಸಂತ್ರಸ್ತ ಮಹಿಳೆಯ ನಡವಳಿಕೆ ಸರಿ ಇಲ್ಲ’ ಎಂದು ಪತ್ರಿಕಾಗೋಷ್ಠಿಯಲ್ಲಿ ಹೇಳಿಕೆ ನೀಡಿರುವ ಮಹಿಳೆ ಹಾಗೂ ಪುರುಷರ ವಿರುದ್ಧ ಕ್ರಮ ಕೈಗೊಳ್ಳುವಂತೆ ಒಡನಾಡಿ ಸಂಸ್ಥೆಯ ಮೇಲ್ವಿಚಾರಕಿ ಶ್ರುತಿ, ಜಿಲ್ಲಾಧಿಕಾರಿ ಮತ್ತು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರಿಗೆ ಮನವಿ ಸಲ್ಲಿಸಿದ್ದಾರೆ.

‘ಭಾಷಣ ಮಾಡಲು ಜಿಲ್ಲಾಧಿಕಾರಿ ಯಾರು?’


ಕೆ.ಎಸ್. ಲಿಂಗೇಶ್

‘ಪಾಪದ ಕೊಡ ತುಂಬಿದಾಗ ಎಲ್ಲವೂ ಹೊರಬರಲೇಬೇಕು’ ಎಂಬ ಹಾಸನ ಜಿಲ್ಲಾಧಿಕಾರಿ ಸಿ. ಸತ್ಯಭಾಮಾ ಹೇಳಿಕೆಗೆ ಆಕ್ಷೇಪ ವ್ಯಕ್ತಪಡಿಸಿರುವ ಜೆಡಿಎಸ್ ಜಿಲ್ಲಾ ಘಟಕದ ಅಧ್ಯಕ್ಷ ಕೆ.ಎಸ್. ಲಿಂಗೇಶ್, ‘ರಾಜಕೀಯ ಭಾಷಣ ಮಾಡಲು ಇವರು ಯಾರು? ಜಿಲ್ಲಾಧಿಕಾರಿಯ ಕೆಲಸವೇನು ಎಂಬುದನ್ನು ತಿಳಿದುಕೊಳ್ಳಲಿ’ ಎಂದು ತಿರುಗೇಟು ನೀಡಿದ್ದಾರೆ.

‘ಲೋಕಸಭೆ ಚುನಾವಣೆ ಸಂದರ್ಭದಲ್ಲಿ ಜಿಲ್ಲಾಧಿಕಾರಿಯನ್ನು ವರ್ಗಾವಣೆ ಮಾಡುವಂತೆ ಎಚ್.ಡಿ. ದೇವೇಗೌಡರು ಪತ್ರ ಬರೆದಿದ್ದರು. ಇದನ್ನು ಗುರಿಯಾಗಿಸಿಕೊಂಡು ಪ್ರತಿಭಟನಕಾರರ ಎದುರು ಮಹಾಭಾರತದ ಉದಾಹರಣೆ ನೀಡಿದ್ದಾರೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ಬನ್ನಿ ದೂರು ಕೊಡಿ ಎಂದು ಹೇಳಲು ಇವರು ಯಾರು? ಜಿಲ್ಲಾಧಿಕಾರಿ ವಿರುದ್ಧ ಚುನಾವಣಾ ಆಯೋಗಕ್ಕೆ ದೂರು ಕೊಡುತ್ತೇನೆ. ಪೆನ್‌ಡ್ರೈವ್ ಹಂಚಿಕೆ ಹಿಂದೆ ಯಾರಿದ್ದಾರೆ ಎಂಬುದನ್ನು ಎಸ್‌ಐಟಿ ತನಿಖೆ ಮಾಡಲಿ. ಪೆನ್‌ಡ್ರೈವ್‌ಗೆ ಬಂಡವಾಳ ಹಾಕಿದವರು ಯಾರು ಎಂಬುದರ ಬಗ್ಗೆಯೂ ಸಂಪೂರ್ಣ ತನಿಖೆ ನಡೆಯಬೇಕು’ ಎಂದು ಒತ್ತಾಯಿಸಿದರು.

‘ಈ ಬಾರಿಯ ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಸೋಲು ಕಟ್ಟಿಟ್ಟ ಬುತ್ತಿ ಎಂಬುದು ಗೊತ್ತಾಗಿದೆ. ಮುಂದೆ ಮುಖ್ಯಮಂತ್ರಿ ಆಗಬೇಕು ಎಂದುಕೊಂಡಿರುವವರು, ರಾಜಕೀಯವಾಗಿ ಎಚ್.ಡಿ. ರೇವಣ್ಣ ಅವರನ್ನು ಹಣಿಯಲು ಈ ರೀತಿ ಎಫ್‌ಐಆರ್ ಮಾಡಿಸಿದ್ದಾರೆ’ ಎಂದು ಆರೋಪಿಸಿದರು.

‘ಎಸ್‌ಐಟಿಗೆ ಎಲ್ಲ ದಾಖಲೆ ನೀಡುವೆ’

ಬೆಂಗಳೂರು: ‘ಪೆನ್‌ಡ್ರೈವ್‌ನಲ್ಲಿದ್ದ ವಿವರಗಳು ಬಹಿರಂಗ ಮಾಡಿರುವುದು ರೇವಣ್ಣ ಕುಟುಂಬದ ಮಾಜಿ ಕಾರು ಚಾಲಕ ಕಾರ್ತಿಕ್. ಅವನ ಆರೋಪಕ್ಕೆ ಪ್ರತಿಕ್ರಿಯಿಸುವುದಿಲ್ಲ. ಪೆನ್‌ಡ್ರೈವ್ ಹಂಚಿಕೆ ಹಿಂದೆ ಯಾರಿದ್ದಾರೆ ಎನ್ನುವ ಎಲ್ಲ ಪ್ರಮುಖ ದಾಖಲೆಗಳನ್ನು ಎಸ್‌ಐಟಿಗೆ ನೀಡುತ್ತೇನೆ’ ಎಂದು ಹಾಸನ ಜಿಲ್ಲೆಯ ಬಿಜೆಪಿ ಮುಖಂಡ ದೇವರಾಜೇಗೌಡ ಹೇಳಿದರು.

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, ‘ಅಶ್ಲೀಲ ವಿಡಿಯೊಗಳ ಪೆನ್‌ಡ್ರೈವ್ ಅನ್ನು ನನಗೆ ಕಾರ್ತಿಕ್ ಕೊಟ್ಟಿದ್ದು ನಿಜ. ಆದರೆ, ಆತ ಹಾಸನ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಶ್ರೇಯಸ್ ಪಟೇಲ್ ಸೇರಿದಂತೆ ಕಾಂಗ್ರೆಸ್ ಮುಖಂಡರ ಸಂಪರ್ಕದಲ್ಲೆ ಇದ್ದ. ಕಾರ್ತಿಕ್ ಬಳಿ ಪೆನ್‌ಡ್ರೈವ್ ಹೇಗೆ ಬಂತು? ಚುನಾವಣೆ ಮೂರು ದಿನ ಇರುವಾಗ ಹೇಗೆ ಬಹಿರಂಗವಾಯಿತು? ಕಾಂಗ್ರೆಸ್ ಪಾತ್ರವೇನು ಎನ್ನುವ ಕುರಿತು ಸರಿಯಾದ ತನಿಖೆಯಾಗಬೇಕು. ಇಲ್ಲದಿದ್ದರೆ ಸಿಬಿಐಗೆ ವಹಿಸಬೇಕು’ ಎಂದು ಒತ್ತಾಯಿಸಿದರು.

‘ಹಾಸನ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಶ್ರೇಯಸ್ ಪಟೇಲ್ ಅವರ ಸಾಮಾಜಿಕ ಜಾಲತಾಣದ ಉಸ್ತುವಾರಿಯನ್ನು ಕಾರ್ತಿಕ್ ವಹಿಸಿಕೊಂಡಿದ್ದ. ಚುನಾವಣೆ ಸಮಯದಲ್ಲಿ ಏನೆಲ್ಲ ನಡೆದಿದೆ ಎನ್ನುವುದು ಗೊತ್ತಿದೆ. ತಾನೇ ತೋಡಿದ ಗುಂಡಿಯಲ್ಲಿ ಕಾಂಗ್ರೆಸ್ ಬೀಳಲಿದೆ’ ಎಂದರು.

‘ರೇವಣ್ಣ ಕುಟುಂಬ ಕಾರ್ತಿಕ್ ಕುಟುಂಬದ ಮೇಲೆ ದೌರ್ಜನ್ಯ ಎಸಗಿದಾಗ ಕಾಂಗ್ರೆಸ್ ಮುಖಂಡರನ್ನು ಸಂಪರ್ಕಿಸಿದ್ದ. ಅವರ ಬಳಿ ನ್ಯಾಯ ಸಿಗಲಿಲ್ಲ ಎಂದು ನನ್ನ ಬಳಿ ಬಂದಿದ್ದ. ಆಗ ಪೆನ್‌ಡ್ರೈವ್‌ನಲ್ಲಿನ ವಿವರ ಬಹಿರಂಗ ಮಾಡದಂತೆ ಕೋರ್ಟ್ ತಡೆ ನೀಡಿತ್ತು. ಹಾಗಾಗಿ, ವಕೀಲನಾಗಿರುವುದರಿಂದ ನನ್ನ ಬಳಿ ಪೆನ್‌ಡ್ರೈವ್ ಕೊಟ್ಟಿದ್ದ’ ಎಂದು ಹೇಳಿದರು.

‘ಅಶ್ಲೀಲ ವಿಡಿಯೊ ಬಗ್ಗೆ ವಿಜಯೇಂದ್ರ ಗಮನಕ್ಕೆ ತಂದಿದ್ದೆ’: ‘ಪ್ರಜ್ವಲ್‌ಗೆ ಸಂಬಂಧಿಸಿದ ಅಶ್ಲೀಲ ವಿಡಿಯೊಗಳ ಬಗ್ಗೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಸೇರಿದಂತೆ ಪಕ್ಷದ ನಾಯಕರಿಗೆ ಪತ್ರ ಬರೆದು, ಮೇಲ್ ಮೂಲಕ ಗಮನಕ್ಕೆ ತಂದಿದ್ದೆ ಎಂದೂ ದೇವರಾಜೇಗೌಡ ಹೇಳಿದರು.



ಪೆನ್‌ಡ್ರೈವ್ ಎಲ್ಲಿಂದ ಎಲ್ಲಿಗೆ ಹೋಗಿದೆ ಎಂಬುದರ ಬಗ್ಗೆಯೂ ತನಿಖೆ ಆಗಲಿ. ಎಸ್‌ಐಟಿಯಿಂದ ನಿಷ್ಪಕ್ಷಪಾತ ತನಿಖೆ ಸಾಧ್ಯವಿಲ್ಲ. ಸಿಬಿಐ ತನಿಖೆಯಿಂದ ಮಾತ್ರ ನ್ಯಾಯ ಸಿಗಲು ಸಾಧ್ಯ
ದೇವರಾಜೇಗೌಡ, ಬಿಜೆಪಿ ಮುಖಂಡ

‘ಮೈತ್ರಿ ಪಕ್ಷಗಳ ಅಭ್ಯರ್ಥಿಯಾಗಿ ಪ್ರಜ್ವಲ್‌ಗೆ ಟಿಕೆಟ್ ನೀಡದಂತೆ ವಿಜಯೇಂದ್ರ ಅವರಿಗೆ ಮನವಿ ಮಾಡಿದ್ದೆ, ನಮ್ಮ ನಾಯಕರು ಅದನ್ನು ಗಂಭೀರವಾಗಿ ತೆಗೆದುಕೊಳ್ಳಲಿಲ್ಲ’ ಎಂದು ಹೇಳಿದರು.

‘ನಾನು ಅಶ್ಲೀಲ ವಿಡಿಯೊಗಳನ್ನು ಬಿಡುಗಡೆ ಮಾಡುವುದಿದ್ದರೆ ರೇವಣ್ಣ ವಿರುದ್ಧ ವಿಧಾನಸಭಾ ಚುನಾವಣೆಗೆ ಸ್ಪರ್ಧಿಸಿದಾಗಲೇ ಬಿಡುಗಡೆ ಮಾಡಬಹುದಿತ್ತು. ಪ್ರಜ್ವಲ್‌ಗೆ ಟಿಕೆಟ್ ನೀಡುವ ಕುರಿತು ಚರ್ಚೆ ನಡೆದ ಸಮಯದಲ್ಲೇ ಬಹಿರಂಗ ಪಡಿಸಬಹುದಿತ್ತು. ಈಗ ಅದರ ಅಗತ್ಯ ಏನಿತ್ತು’ ಎಂದು ಪ್ರಶ್ನಿಸಿದರು.

ಹಾಸನದ ಪೆನ್‌ಡ್ರೈವ್ ಪ್ರಕರಣ ಕುರಿತು ಮೌನವಹಿಸುವ ಪ್ರಶ್ನೆಯೇ ಇಲ್ಲ. ನಾಗರಿಕ ಸಮಾಜ ತಲೆತಗ್ಗಿಸುವ ಇಂತಹ ಕೃತ್ಯವನ್ನು ಖಂಡಿಸುತ್ತೇವೆ
ಬಿ.ವೈ. ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ಪ್ರಜ್ವಲ್ ರೇವಣ್ಣ ಪ್ರಕರಣಕ್ಕೂ ಬಿಜೆಪಿಗೂ ಯಾವುದೇ ಸಂಬಂಧ ಇಲ್ಲ ಎಂದು ಎಚ್.ಡಿ.ಕುಮಾರಸ್ವಾಮಿ ಅವರೇ ಹೇಳಿದ್ದಾರೆ. ಪ್ರಜ್ವಲ್ ಈಗ ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿ. ಅವರು ಗೆದ್ದ ನಂತರ ಪ್ರಶ್ನಿಸಿದರೆ, ನಾವು ಉತ್ತರಿಸುತ್ತೇವೆ. ಕಾಂಗ್ರೆಸ್–ಜೆಡಿಎಸ್ ಮೈತ್ರಿ ಸರ್ಕಾರ ಇದ್ದಾಗ ಪ್ರಜ್ವಲ್‌ಗೆ ಟಿಕೆಟ್ ಕೊಟ್ಟು, ಪ್ರಚಾರ ಮಾಡಿ, ಗೆಲ್ಲಿಸಿದ್ದು ಯಾರು ಎಂಬುದಕ್ಕೆ ಕಾಂಗ್ರೆಸ್‌ನವರೇ ಉತ್ತರಿಸಲಿ
ಆರ್.ಅಶೋಕ, ವಿಧಾನಸಭೆ ವಿರೋಧಪಕ್ಷದ ನಾಯಕ

ಲೈಂಗಿಕ ಹಗರಣದ ಆರೋಪಿ ಪ್ರಜ್ವಲ್ ರೇವಣ್ಣ ಭಾರತದಿಂದ ಪಲಾಯನ ಮಾಡಲು ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಅನುಕೂಲ ಮಾಡಿಕೊಟ್ಟಿದೆ. ಪ್ರಜ್ವಲ್ ರೇವಣ್ಣ ಸಾವಿರಾರು ಮಹಿಳೆಯರ ಮೇಲೆ ದೌರ್ಜನ್ಯ ಎಸಗಿದ ಮಾಹಿತಿ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಷಾ ಮತ್ತು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರಿಗೆ ಮೊದಲೇ ಗೊತ್ತಿತ್ತು
ಸುಪ್ರಿಯಾ ಶ್ರೀನೆತ್, ಎಐಸಿಸಿ ವಕ್ತಾರೆ

ಮಹಿಳೆಯೊಂದಿಗೆ ಶಾಸಕ ಆಪ್ತ ಮಾತು: ಹರಿದಾಡಿದ ವಿಡಿಯೊ

ಪ್ರಜಾವಾಣಿ ವಾರ್ತೆ


ಇಕ್ಬಾಲ್ ಹುಸೇನ್

ರಾಮನಗರ: ಕಾಂಗ್ರೆಸ್ ಶಾಸಕ ಎಚ್.ಎ.ಇಕ್ಬಾಲ್ ಹುಸೇನ್ ಅವರು ಮಹಿಳೆ ಯೊಬ್ಬರ ಜತೆಗಿನ ವಾಟ್ಸ್‌ಆ್ಯಪ್ ಕಾಲ್ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಜಿಲ್ಲಾ ಕಾಂಗ್ರೆಸ್ ಪದಾಧಿಕಾರಿಯೂ ಆಗಿರುವ ಮಹಿಳೆ ಜತೆ ಹುಸೇನ್ ಅವರು, ಆಪ್ತವಾಗಿ ಮಾತನಾಡುತ್ತಿರುವ 2 ನಿಮಿಷ 27 ಸೆಕೆಂಡ್‌ನ ವಿಡಿಯೊ ಚರ್ಚೆಗೆ ಗ್ರಾಸವಾಗಿದೆ.

ಹಾಸನ ಸಂಸದ ಪ್ರಜ್ವಲ್ ರೇವಣ್ಣ ಅವರು ಲೈಂಗಿಕ ದೌರ್ಜನ್ಯ ಎಸಗಿದ್ದಾರೆಂಬ ಆರೋಪದ ಪ್ರಕರಣ ದೊಡ್ಡ ಸುದ್ದಿಯಾಗಿರುವ ಬೆನ್ನಲ್ಲೇ ಶಾಸಕ ಹುಸೇನ್ ವಿಡಿಯೊ ಬಹಿರಂಗವಾಗಿದೆ. ಇದರೊಂದಿಗೆ ಜಿಲ್ಲೆಯ ವಿವಿಧ ರಾಜಕಾರಣಿಗಳ ಜತೆ ಮಹಿಳೆ ಕಾಣಿಸಿಕೊಂಡಿರುವ ಫೋಟೊಗಳು ಕೂಡ ಮೊಬೈಲ್‌ಗಳಲ್ಲಿ ಹರಿದಾಡುತ್ತಿವೆ.

ವಿಡಿಯೊ ಕುರಿತು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಹುಸೇನ್ ಅವರು, ‘ನಾನೇ ಮಾತನಾಡಿರುವ ವಿಡಿಯೊ ಇರಬಹುದು. ನಾನು ಗೆದ್ದಿರುವುದಕ್ಕೆ ಎದುರಾಳಿಗಳು ಈ ರೀತಿಯ ವಿಡಿಯೊ ಹರಿಬಿಟ್ಟಿದ್ದಾರೆ. ಇಂತಹವೆಲ್ಲಾ ಬರುತ್ತಿರುತ್ತವೆ. ಅದರಲ್ಲಿರುವ ಸತ್ಯಾಂಶವೇನು ಎಂದು ನೋಡುವೆ. ಪೊಲೀಸ್ ದೂರು ಸೇರಿದಂತೆ ಕಾನೂನು ಕ್ರಮ ಕುರಿತು ಇನ್ನೂ ನಿರ್ಧರಿಸಿಲ್ಲ’ ಎಂದರು.

ಹುಬ್ಬಳ್ಳಿ: ಜೆಡಿಎಸ್– ಕಾಂಗ್ರೆಸ್ ಕಾರ್ಯಕರ್ತರ ನಡುವೆ ವಾಗ್ವಾದ


ಕಾಂಗ್ರೆಸ್ ಕಾರ್ಯಕರ್ತರ ಜೊತೆ ವಾಗ್ವಾದಕ್ಕಿಳಿಯಲು ಮುಂದಾದ ಜೆಡಿಎಸ್ ಕಾರ್ಯಕರ್ತರನ್ನು ಪೊಲೀಸರು ತಡೆದರು

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಹಾಸನ ಸಂಸದ ಪ್ರಜ್ವಲ್ ರೇವಣ್ಣ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂಬ ಆರೋಪದ ಪ್ರಕರಣಕ್ಕೆ ಸಂಬಂಧಿಸಿ ಇಲ್ಲಿಯ ಗೋಕುಲ ರಸ್ತೆ ಬಳಿಯಿರುವ ಹೋಟೆಲ್‌ವೊಂದರ ಆವರಣ ದಲ್ಲಿ ಮಂಗಳವಾರ ಜೆಡಿಎಸ್ ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಪರಸ್ಪರ ಚಪ್ಪಲಿ ತೋರಿಸಿ, ಕೈ ಕೈ ಮಿಲಾಯಿಸಿದರು.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಪತ್ರಿಕಾಗೋಷ್ಠಿ ಮುಗಿಸಿ, ರಾಜ್ಯದ 14 ಲೋಕಸಭಾ ಕ್ಷೇತ್ರಗಳ ಜೆಡಿಎಸ್ ಕೋರ್ ಕಮಿಟಿ ಸಭೆಗೆ ತೆರಳುತ್ತಿದ್ದರು. ಹೋಟೆಲ್ ಹೊರಗಡೆ ಅವರ ಬರುವಿಕೆಯನ್ನೇ ಕಾಯುತ್ತಿದ್ದ ಕಾಂಗ್ರೆಸ್ ಮುಖಂಡ ಅನಿಲಕುಮಾರ್ ಪಾಟೀಲ ನೇತೃತ್ವದಲ್ಲಿ ಕಾರ್ಯಕರ್ತರು, ‘ಗೋ ಬ್ಯಾಕ್ ಕುಮಾರಸ್ವಾಮಿ’ ಎಂದು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ‘ಧಿಕ್ಕಾರ, ಧಿಕ್ಕಾರ ಕುಮಾರಸ್ವಾಮಿಗೆ ಧಿಕ್ಕಾರ’ ಎಂದು ಘೋಷಣೆ ಹಾಕಿದರು.

ಇದರಿಂದ ಕೋಪಗೊಂಡ ಕುಮಾರಸ್ವಾಮಿ ‘ಏನು ನಿಮ್ಮದು?’ ಎಂದು ಅವರತ್ತ ತೆರಳಲು ಮುಂದಾದರು. ಪರಿಸ್ಥಿತಿಯ ಸೂಕ್ಷ್ಮತೆ ಅರಿತ ಕೆಲ ಜೆಡಿಎಸ್ ಮುಖಂಡರು ಹಾಗೂ ಪೊಲೀಸ್ ಅಧಿಕಾರಿಗಳು ಅವರನ್ನು ಸ್ಥಳದಿಂದ ದೂರ ಕರೆದೊಯ್ದರು. ಇತ್ತ ಜೆಡಿಎಸ್ ಕಾರ್ಯಕರ್ತರು, ಕಾಂಗ್ರೆಸ್ ಕಾರ್ಯಕರ್ತರ ಘೋಷಣೆಗೆ ಪ್ರತಿಯಾಗಿ ‘ರಾಜ್ಯ ಸರ್ಕಾರದ ಗೂಂಡಾಗಿರಿಗೆ ಧಿಕ್ಕಾರ’ ಎಂದು ಘೋಷಣೆ ಕೂಗಿದರು.

ಆಗ ಎರಡೂ ಪಕ್ಷಗಳ ಕಾರ್ಯಕರ್ತರ ನಡುವೆ ತೀವ್ರ ವಾಗ್ವಾದ ನಡೆಯಿತು. ಪರಸ್ಪರ ಚಪ್ಪಲಿ ತೋರಿಸುತ್ತ, ಕೈ ಕೈ ಮಿಲಾಯಿಸಿಕೊಂಡರು. ಎರಡೂ ಗುಂಪನ್ನು ಚದುರಿಸಲು ಪೊಲೀಸರು ಹರಸಾಹಸ ಪಟ್ಟರು. ಮಧ್ಯಾಹ್ನ 1.30ಕ್ಕೆ ಆರಂಭವಾದ ಗಲಾಟೆ 2ರವರೆಗೂ ನಡೆಯಿತು. ಮುಂಜಾಗ್ರತಾ ಕ್ರಮವಾಗಿ ಪೊಲೀಸರು ಕಾಂಗ್ರೆಸ್‌ನ 20ಕ್ಕೂ ಹೆಚ್ಚು ಕಾರ್ಯಕರ್ತರನ್ನು ವಶಕ್ಕೆ ಪಡೆದು, ವಾಹನದಲ್ಲಿ ಕರೆದೊಯ್ದರು.

ನಂತರ ಜೆಡಿಎಸ್ ಕೋರ್ ಕಮಿಟಿ ಸಭೆ ಪ್ರಾರಂಭವಾಯಿತು. ಘಟನೆ ಹಿನ್ನೆಲೆಯಲ್ಲಿ ಹೋಟೆಲ್ ಆವರಣದಲ್ಲಿ ಪೊಲೀಸ್ ಬಿಗಿ ಬಂದೋಬಸ್ತ್ ಮಾಡಲಾಗಿತ್ತು.

ವಿಶೇಷ ಪ್ರಾಸಿಕ್ಯೂಟರ್ ನೇಮಕ

ಪ್ರಜಾವಾಣಿ ವಾರ್ತೆ


ಜಗದೀಶ್

ಬೆಂಗಳೂರು: ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಕುರಿತು ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಆರೋಪ ಪ್ರಕರಣದಲ್ಲಿ ವಿಶೇಷ ಪ್ರಾಸಿಕ್ಯೂಟರ್ ಆಗಿ ಹೆಚ್ಚುವರಿ ಪಬ್ಲಿಕ್ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್ ಅವರನ್ನು ನೇಮಕ ಮಾಡಲಾಗಿದೆ. ವಿಚಾರಣಾ ಮತ್ತು ಜಿಲ್ಲಾ ಸೆಷನ್ಸ್ ನ್ಯಾಯಾಲಯಗಳಲ್ಲಿನ ವಿಚಾರಣೆಗೆ ಜಗದೀಶ್ ರಾಜ್ಯ ಸರ್ಕಾರದ ಪರ ಹಾಜರಾಗಲಿದ್ದಾರೆ. ಒಳಾಡಳಿತ ಇಲಾಖೆ ಮಂಗಳವಾರ ಈ ಆದೇಶ ಹೊರಡಿಸಿದೆ.

ಮಾನಹಾನಿ ವರದಿ: ನಿರ್ಬಂಧಕಾಜ್ಞೆ ತಂದ ಈಶ್ವರಪ್ಪ ಪುತ್ರ ಕಾಂತೇಶ್

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ವಿದ್ಯುನ್ಮಾನ, ಮುದ್ರಣ ಮಾಧ್ಯಮಗಳು ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ತಮ್ಮ ವಿರುದ್ಧ ಯಾವುದೇ ರೀತಿಯ ಮಾನಹಾನಿ ವರದಿ ಮಾಡದಂತೆ ಮಾಜಿ ಉಪ ಮುಖ್ಯಮಂತ್ರಿ, ಶಿವಮೊಗ್ಗ ಲೋಕಸಭಾ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಕೆ.ಎಸ್. ಈಶ್ವರಪ್ಪ ಅವರ ಪುತ್ರ ಕೆ.ಈ. ಕಾಂತೇಶ್ ನ್ಯಾಯಾಲಯದಿಂದ ನಿರ್ಬಂಧಕಾಜ್ಞೆ ತಂದಿದ್ದಾರೆ.

ವಕೀಲ ಎಂ.ವಿನೋದಕುಮಾರ್ ಮೂಲಕ ಬೆಂಗಳೂರಿನ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯದಲ್ಲಿ ಅರ್ಜಿ (ಓಎಸ್ 3224/2024) ಸಲ್ಲಿಸಿದ್ದಾರೆ. 50 ಸುದ್ದಿ ಮಾಧ್ಯಮಗಳಿಗೆ ನೋಟಿಸ್ ಜಾರಿಗೊಳಿಸಿರುವ ನ್ಯಾಯಾಲಯವು ಕಾಂತೇಶ್ ವಿರುದ್ಧ ಯಾವುದೇ ರೀತಿಯ ಮಾನಹಾನಿ ವರದಿಗಳನ್ನು ಪ್ರಕಟಿಸಬಾರದು, ವಿಡಿಯೊಗಳನ್ನು ಪ್ರಸಾರ ಮಾಡಬಾರದು ಎಂದು ನಿರ್ಬಂಧಕಾಜ್ಞೆ ಜಾರಿ ಮಾಡಿದೆ.

ಪ್ರಜ್ವಲ್ ರೇವಣ್ಣ ಪ್ರಕರಣ: ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿಕೆ

‘ಸ್ತ್ರೀಯರಿಗೆ ಅವಮಾನ ಸಹಿಸಲ್ಲ’

ಪ್ರಜಾವಾಣಿ ವಾರ್ತೆ/ಪಿಟಿಐ

ಗುವಾಹಟಿ: ‘ಪ್ರಜ್ವಲ್ ಅವರು ಲೈಂಗಿಕ ದೌರ್ಜನ್ಯ ನಡೆಸಿದ್ದಾರೆ ಎನ್ನಲಾದ ಪ್ರಕರಣ ತುಂಬ ನೋವುಂಟು ಮಾಡಿದೆ’ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಹೇಳಿದ್ದಾರೆ.

‘ಮಹಿಳೆಯರ ಅವಮಾನವನ್ನು ಬಿಜೆಪಿ ಸಹಿಸುವುದಿಲ್ಲ’ ಎಂದು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಸ್ಪಷ್ಟಪಡಿಸಿದರು.


‘ಬಿಜೆಪಿ ನಿಲುವು ಸ್ಪಷ್ಟವಾಗಿದೆ. ಮಾತೃ ಮತ್ತು ನಾರಿ ಶಕ್ತಿಯ (ಮಹಿಳಾ ಸಬಲೀಕರಣ) ಅವಮಾನವನ್ನು ನಾವು ಸಹಿಸುವುದಿಲ್ಲ’ ಎಂದು ಅವರು ಹೇಳಿದರು.

‘ಈ ಪ್ರಕರಣದಲ್ಲಿ ಎನ್‌ಡಿಎ ಅಭ್ಯರ್ಥಿ ಭಾಗಿಯಾಗಿದ್ದಾರೆ ಎಂದು ಕಾಂಗ್ರೆಸ್ ಆರೋಪಿಸುತ್ತಿದೆ. ಆದರೆ, ಕರ್ನಾಟಕದಲ್ಲಿ ಯಾರ ಸರ್ಕಾರವಿದೆ. ಅಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿದ್ದು, ಈ ವಿಷಯ ಅವರ ಗಮನಕ್ಕೆ ಬಂದಿರಬೇಕಲ್ಲವೇ?. ಇಲ್ಲಿಯವರೆಗೆ ಅದರ ಬಗ್ಗೆ ಕರ್ನಾಟಕ ಸರ್ಕಾರ ಏಕೆ ಕ್ರಮ ತೆಗೆದುಕೊಂಡಿಲ್ಲ? ಕಾನೂನು ಮತ್ತು ಸುವ್ಯವಸ್ಥೆ ರಾಜ್ಯದ ವಿಷಯವಾಗಿರುವುದರಿಂದ, ನಾವು (ಕೇಂದ್ರ) ಕ್ರಮ ತೆಗೆದುಕೊಳ್ಳಲು ಸಾಧ್ಯವಿಲ್ಲ’ ಎಂದು ಅಮಿತ್ ಶಾ ಪ್ರತಿಕ್ರಿಯಿಸಿದರು.

ಬಿಜೆಪಿಯು ತನ್ನ ಮಿತ್ರ ಪಕ್ಷದವಾದ ಜೆಡಿಎಸ್ ಅನ್ನು ರಕ್ಷಿಸುತ್ತಿದೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರು ಮಾಡಿರುವ ಆರೋಪಕ್ಕೆ ಪ್ರತಿಕ್ರಿಯಿಸಿದ ಶಾ, ‘ಪ್ರಿಯಾಂಕಾ ಅವರು ಈ ಕುರಿತು ಮೊದಲು ಕರ್ನಾಟಕದಲ್ಲಿನ ತಮ್ಮ ಪಕ್ಷದ ಸರ್ಕಾರವನ್ನು ಪ್ರಶ್ನಿಸಬೇಕು’ ಎಂದರು.


ಅಮಿತ್ ಶಾ

‘ಅತ್ಯಾಚಾರಿಗಳಿಗೆ ಬಿಜೆಪಿ ರಕ್ಷಣೆ’


ತೇಜಸ್ವಿ ಪ್ರಸಾದ್

ಪಟ್ನಾ (ಪಿಟಿಐ): ‘ಅತ್ಯಾಚಾರಿಗಳನ್ನು ರಕ್ಷಿಸುತ್ತಿರುವ ಬಿಜೆಪಿಯು, ಅವರು ಪರಾರಿಯಾಗಲು ಸಹಾಯ ಮಾಡುತ್ತಿದೆ’ ಎಂದು ರಾಷ್ಟ್ರೀಯ ಜನತಾದಳದ ಮುಖಂಡ ತೇಜಸ್ವಿ ಪ್ರಸಾದ್ ಮಂಗಳವಾರ ವಾಗ್ದಾಳಿ ನಡೆಸಿದ್ದಾರೆ.

‘ಕರ್ನಾಟಕದಲ್ಲಿ ನಡೆದಿರುವ ಲೈಂಗಿಕ ಹಗರಣದ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಮೌನ ವಹಿಸುತ್ತಿರುವುದೇಕೆ? ಬಿಜೆಪಿ ನಾಯಕರ ‘ಬೇಟಿ ಬಚಾವೋ–ಬೇಟಿ ಪಢಾವೋ’ ಘೋಷಣೆ ಏನಾಯಿತು? ಅಂದಾಜು 2,500 ಮಹಿಳೆಯರ ಮೇಲೆ ದೌರ್ಜನ್ಯ ಎಸಗಿದ ಆರೋಪಿಯು ಜರ್ಮನಿಗೆ ಪರಾರಿಯಾಗಲು ಕೇಂದ್ರದ ಬಿಜೆಪಿ ಸರ್ಕಾರ ನೆರವಾಗಿದೆ’ ಎಂದು ದೂರಿದ್ದಾರೆ.

‘ಮಣಿಪುರ ಘಟನೆ, ಮಹಿಳಾ ಕುಸ್ತಿಪಟುಗಳ ಪ್ರತಿಭಟನೆ ಬಗ್ಗೆ ಮೌನವಹಿಸಿದ್ದ ಪ್ರಧಾನಿಯು, ಲೈಂಗಿಕ ಹಗರಣದಲ್ಲಿ ಭಾಗಿಯಾಗಿರುವ ಆರೋಪಿಯೊಂದಿಗೆ ಕರ್ನಾಟಕದಲ್ಲಿ ವೇದಿಕೆ ಹಂಚಿಕೊಂಡು ಚುನಾವಣಾ ಪ್ರಚಾರ ನಡೆಸಿದ್ದು ಎಲ್ಲರಿಗೂ ತಿಳಿದ ವಿಚಾರವೇ’ ಎಂದಿದ್ದಾರೆ.

ಕಟ್ಟಡ ಕಾರ್ಮಿಕರ ಮಕ್ಕಳ ಅರ್ಜಿ • ಧನಸಹಾಯ ಕೋರಿದ ಅರ್ಜಿ ವಿಲೇವಾರಿಗೆ 10 ತಿಂಗಳ ವಿಳಂಬ

ಕಲ್ಯಾಣ ಮಂಡಳಿಗೆ ಹೈಕೋರ್ಟ್ ತಪರಾಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಟ್ಟಡ ಕಾರ್ಮಿಕರ ಮಕ್ಕಳಿಗೆ ಮೀಸಲಾದ ವರ್ಗದಲ್ಲಿ ಶೈಕ್ಷಣಿಕ ಧನಸಹಾಯಕ್ಕಾಗಿ ಅರ್ಜಿ ಸಲ್ಲಿಸಿದ್ದ ಇಬ್ಬರು ಸ್ನಾತಕೋತ್ತರ ವಿದ್ಯಾರ್ಥಿನಿಯರ ನೆರವಿಗೆ ಬಾರದ ಕರ್ನಾಟಕ ರಾಜ್ಯ ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಉದಾಸೀನ ನಿಲುವನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡಿರುವ ಹೈಕೋರ್ಟ್, ಅರ್ಜಿದಾರ ವಿದ್ಯಾರ್ಥಿನಿಯರ ಶುಲ್ಕದ ಜೊತೆಗೆ ತಲಾ ₹25 ಸಾವಿರ ವ್ಯಾಜ್ಯದ ವೆಚ್ಚ ನೀಡುವಂತೆ ಆದೇಶಿಸಿದೆ.

ಈ ಸಂಬಂಧ, 'ಕರ್ನಾಟಕ ರಾಜ್ಯ ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಫೆಡರೇಶನ್' ಪ್ರಧಾನ ಕಾರ್ಯದರ್ಶಿ ಕೆ.ಮಹಾಂತೇಶ್ ಹಾಗೂ ಇತರರು ಸಲ್ಲಿಸಿದ್ದ ರಿಟ್ ಅರ್ಜಿಯನ್ನು

ಮುಖ್ಯಾಂಶಗಳು

- ಬಡ ವಿದ್ಯಾರ್ಥಿನಿಯರ ಅರ್ಜಿಗೆ ಸ್ಪಂದಿಸಿದ ಹೈಕೋರ್ಟ್
- ಕಲ್ಯಾಣ ಮಂಡಳಿಯಲ್ಲಿರುವ ನಿಧಿ ₹8,200 ಕೋಟಿ

ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

'ಅರ್ಜಿದಾರ ವಿದ್ಯಾರ್ಥಿನಿಯರು ಭರಿಸಬೇಕಿದ್ದ ಕಾಲೇಜು ಶುಲ್ಕವು ಯಾವುದೇ ಒಂದು ಸರ್ಕಾರಿ ಕಚೇರಿಯಲ್ಲಿನ ನೌಕರ ಪಡೆಯಬಹುದಾದ ಸಾರಿಗೆ ಮತ್ತು ತುಟ್ಟಿ ಭತ್ಯೆಗೆ ಸಮಾನವಾದುದು. ಆದರೆ, ಅಂದಂದಿನ ತುತ್ತು ಅನ್ನವನ್ನು ಅಂದೇ ದುಡಿದು ತಿನ್ನುವ ಬಡವರ್ಗದ



ವಿದ್ಯಾರ್ಥಿನಿಯರ ಶೈಕ್ಷಣಿಕ ಧನಸಹಾಯ ಕೋರಿದ ಅರ್ಜಿಗಳನ್ನು ಕಳೆದ 10 ತಿಂಗಳಿನಿಂದ ಶೈತ್ಯಾಗಾರದಲ್ಲಿ ಇರಿಸಿದ ನಿಮ್ಮ ನಿಲುವು ಭಯಾನಕವಾಗಿದೆ' ಎಂದು ನ್ಯಾಯಪೀಠ ಕಲ್ಯಾಣ ಮಂಡಳಿ ಅಧಿಕಾರಿಗಳಿಗೆ ಬೆವರಿಳಿಸಿದೆ.

ಕಲ್ಯಾಣ ಮಂಡಳಿ ಪರವಾಗಿ ಹಾಜರಿದ್ದ ವಕೀಲ ಬಿ.ಎನ್. ಪ್ರಶಾಂತ್, 'ಮಂಡಳಿಯ ಈ ಹಿಂದಿನ ತೀರ್ಮಾನದಂತೆ ಕೇವಲ ₹10 ಸಾವಿರ ಹಾಗೂ ₹11 ಸಾವಿರವನ್ನು ಮಾತ್ರವೇ ಪಾವತಿಸಲು ಸಾಧ್ಯ' ಎನ್ನುವ ಅಭಿಪ್ರಾಯವನ್ನು ತಳ್ಳಿ ಹಾಕಿರುವ ನ್ಯಾಯಪೀಠ, 'ಸರ್ಕಾರದ ಅಧಿಸೂಚನೆ ಅನುಸಾರ ಅರ್ಜಿದಾರ ವಿದ್ಯಾರ್ಥಿನಿಯರು ಹೆಚ್ಚಿನ ಧನಸಹಾಯ ಪಡೆಯಲು ಅರ್ಹರಿದ್ದಾರೆ' ಎಂದು ಹೇಳಿದೆ.

'ಕಾರ್ಮಿಕರ ಶ್ರಮದಿಂದ ಸಂಗ್ರಹವಾಗಿರುವ ₹8,200 ಕೋಟಿ ಕಲ್ಯಾಣ ನಿಧಿ ಇದ್ದರೂ ಅವರ ಮಕ್ಕಳಿಗೆ ನೀಡಬೇಕಾದ ಶೈಕ್ಷಣಿಕ ಧನಸಹಾಯವನ್ನು ನಿರಾಕರಿಸಿರುವುದನ್ನು ಯಾವ ಕಾರಣದಿಂದಲೂ ಸಮರ್ಥನೆ ಮಾಡಲು ಸಾಧ್ಯವಿಲ್ಲ' ಎಂದು ನ್ಯಾಯಪೀಠ ಹೇಳಿದೆ. ಅರ್ಜಿದಾರರ ಪರ ವಕೀಲ ಆದಿತ್ಯ ಚಟರ್ಜಿ ವಾದ ಮಂಡಿಸಿದರು.

ಹಣ ಪಾವತಿಗೆ ಖಡಕ್ ತಾಕೀತು

'ಅರ್ಜಿದಾರ ವಿದ್ಯಾರ್ಥಿನಿಯರಲ್ಲಿ ಅಂಕಿತಾ ಎಲ್‌ಎಲ್‌ಬಿ ಹಾಗೂ ಅಮೃತಾ ಎಂಬಿಎ ಪದವೀಧರರಿದ್ದಾರೆ. ಇವರಿಬ್ಬರೂ ವಿದ್ಯಾರ್ಥಿನಿಯರು ಈಗಾಗಲೇ ಹೇಗೋ ಹಣಗಾಡಿ ₹30 ಸಾವಿರ ಮತ್ತು ₹35 ಸಾವಿರ ಶುಲ್ಕವನ್ನು ಸ್ವಂತ ಖರ್ಚಿನಲ್ಲಿ ಭರ್ತಿ ಮಾಡಿದ್ದಾರೆ. ಅವರು ಕೋರಿರುವ ಮೊತ್ತದ ಶುಲ್ಕವನ್ನು ಮಧ್ಯಂತರ ಆದೇಶ ನೀಡಿರುವ ನಾಲ್ಕು ವಾರದೊಳಗೆ ಅವರ ಖಾತೆಗೆ ಪಾವತಿಸಬೇಕು' ಎಂದು ನ್ಯಾಯಪೀಠ ಆದೇಶಿಸಿದೆ.

'ಒಂದು ವೇಳೆ ವ್ಯಾಜ್ಯದ ವೆಚ್ಚ ಸಹಿತ ಈ ಹಣವನ್ನು ವಿದ್ಯಾರ್ಥಿಗಳ ಖಾತೆಗೆ ನಿಗದಿತ ಅವಧಿಯೊಳಗೆ ಪಾವತಿಸಲು ವಿಫಲವಾದರೆ ನಂತರದ ಪ್ರತಿ ದಿವಸಕ್ಕೂ ₹500 ಗಳನ್ನು ಪ್ರತಿ ವಿದ್ಯಾರ್ಥಿನಿಗೆ ದಂಡದ ರೂಪದಲ್ಲಿ ಪಾವತಿಸಬೇಕು' ಎಂದು ಕಲ್ಯಾಣ ಮಂಡಳಿಗೆ ಖಡಕ್ ತಾಕೀತು ಮಾಡಿದೆ.



ಬಡ ಕಾರ್ಮಿಕರ ಮಕ್ಕಳು ತಮಗೆ ಸಿಗಬೇಕಾದ ನ್ಯಾಯಬದ್ಧ ಧನಸಹಾಯ ಪಡೆಯಲು ಕೋರ್ಟ್ ಮೆಟ್ಟಿಲು ಹತ್ತುವಂತೆ ಮಾಡಿರುವುದು ಅಕ್ಷಮ್ಯ. ಬಿರು ಬಿಸಿಲಿನಲ್ಲಿ ಬೆವರು ಸುರಿಸುವವರ ಬಗ್ಗೆ ಕಲ್ಯಾಣ ಮಂಡಳಿ ಅಶ್ರದ್ಧೆ ಅಕ್ಷಮ್ಯ.

ಎಂ.ನಾಗಪ್ರಸನ್ನ, ನ್ಯಾಯಮೂರ್ತಿ

ಶರಾವತಿ ವಿದ್ಯುತ್ ಯೋಜನೆ ಮೇಲ್ಮನವಿ 'ಸುಪ್ರೀಂ'ನಿಂದ ವಜಾ

ಪ್ರಜಾವಾಣಿ ವಾರ್ತೆ

ನವದೆಹಲಿ: ₹8,300 ಕೋಟಿಯ ಬೃಹತ್ ಮೊತ್ತದ ಶರಾವತಿ ಪಂಪ್ಡ್ ಸ್ಟೋರೇಜ್ ವಿದ್ಯುತ್ ಯೋಜನೆಯ ಟೆಂಡರ್ ಪ್ರಕ್ರಿಯೆ ಪ್ರಶ್ನಿಸಿ 'ಎಲ್ ಆ್ಯಂಡ್ ಟಿ' ಕಂಪನಿ ಸಲ್ಲಿಸಿದ್ದ ವಿಶೇಷ ಮೇಲ್ಮನವಿ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಪೀಠವು ಅರ್ಜಿಯ ವಿಚಾರಣೆ ನಡೆಸಿ, 'ರಾಜ್ಯವು ಸಾಕಷ್ಟು ಸಮಯ ನೀಡಿತ್ತು. ಆದರೆ, ಎಲ್ ಆ್ಯಂಡ್ ಟಿ ಕಂಪನಿ ಬಿಡ್ ಸಲ್ಲಿಸಿರಲಿಲ್ಲ' ಎಂದು ಅಭಿಪ್ರಾಯಪಟ್ಟಿತು. ಜತೆಗೆ, ಅರ್ಜಿ ವಜಾಗೊಳಿಸಿತು.

ವಿದ್ಯುತ್ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಕರ್ನಾಟಕ ವಿದ್ಯುತ್ ನಿಗಮ (ಕೆಪಿಸಿಎಲ್) ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ ಜಾರಿಗೆ ಮುಂದಾಗಿತ್ತು. ಈ ಸಂಬಂಧ ಟೆಂಡರ್ ಕರೆಯಲಾಗಿತ್ತು. ಕಾಮಗಾರಿ ಆರಂಭಿಸುವ ಪ್ರಕ್ರಿಯೆಯಲ್ಲಿದ್ದಾಗ ಟೆಂಡರ್ ಪ್ರಕ್ರಿಯೆಯಿಂದ ದೂರ ಉಳಿದಿದ್ದ ಎಲ್ ಆ್ಯಂಡ್ ಟಿ ಕಂಪನಿ, ಹೈಕೋರ್ಟ್ ಮೆಟ್ಟಿಲೇರಿತ್ತು.

ರಿಟ್ ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, ಟೆಂಡರ್‌ನಲ್ಲಿ ಪಾಲ್ಗೊಳ್ಳದ ಅರ್ಜಿದಾರರು ಟೆಂಡರ್ ಪ್ರಕ್ರಿಯೆ ತಡೆಯುವಂತೆ ಮನವಿ ಮಾಡುವುದು ಸೂಕ್ತವಲ್ಲ ಎಂದು ಅರ್ಜಿಯನ್ನು ವಜಾಗೊಳಿಸಿತ್ತು.

ಈ ಆದೇಶವನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿದ್ದ ಕಂಪನಿ, 'ಟೆಂಡರ್ ಪ್ರಕ್ರಿಯೆಯನ್ನು 21 ದಿನಗಳಲ್ಲೇ ತರಾತುರಿಯಲ್ಲಿ ಮುಗಿಸಲಾಗಿದೆ. ಬೇರೆ ರಾಜ್ಯಗಳಲ್ಲಿ ಇಂತಹುದೇ ಟೆಂಡರ್ ಪ್ರಕ್ರಿಯೆಗೆ ವಿಪುಲ ಕಾಲಾವಕಾಶ ನೀಡಲಾಗಿದೆ' ಎಂದು ಪ್ರತಿಪಾದಿಸಿತ್ತು.

ಮೇಲ್ಮನವಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ, 'ಟೆಂಡರ್ ಪ್ರಕ್ರಿಯೆಯ ಅವಧಿಯನ್ನು ನಿಗದಿಪಡಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ಗೆ (ಕೆಪಿಪಿಪಿ) ಸಂಪೂರ್ಣ ಅಧಿಕಾರವಿದೆ. ವಿಶೇಷ ಕಾರಣಕ್ಕಾಗಿ ಟೆಂಡರ್ ಅವಧಿಯನ್ನು ಕಡಿಮೆ ಮಾಡಲು ಅದು ತನ್ನದೇ ಆದ ಸ್ವಯಮಾಧಿಕಾರ ಹೊಂದಿದೆ. ಮೇಲ್ಮನವಿದಾರರು ಪ್ರೀ ಬಿಡ್ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿದ್ದರು. ಈಗ ತಕರಾರು ವ್ಯಕ್ತಪಡಿಸಿರುವುದು ನೆಪಮಾತ್ರ' ಎಂಬ ಅಭಿಪ್ರಾಯದೊಂದಿಗೆ ಎಲ್ ಆ್ಯಂಡ್ ಟಿ ವಾದವನ್ನು ತಳ್ಳಿ ಹಾಕಿತ್ತು. ಬಳಿಕ ಕಂಪನಿಯು ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು.

ಟೆಂಡರ್ ಅನ್ನು ಕಡಿಮೆ ದರ ನಮೂದಿಸಿದ್ದ ಮೇಘ ಎಂಜಿನಿಯರಿಂಗ್ ಮತ್ತು ಇನ್‌ಫ್ರಾಸ್ಟ್ರಕ್ಚರ್ಸ್ ಲಿಮಿಟೆಡ್ (ಎಂಇಐಎಲ್) ಕಂಪನಿ ತನ್ನದಾಗಿಸಿಕೊಂಡಂತಾಗಿದೆ.

ಬೌದ್ಧ ಧರ್ಮದ ಅನುಸಾರ ಅಂತ್ಯಕ್ರಿಯೆ • ದರ್ಶನಕ್ಕೆ ಹರಿದು ಬಂದ ಜನಸಾಗರ

ಜನಾನುರಾಗಿಗೆ ಭಾವಪೂರ್ಣ ವಿದಾಯ

ಪ್ರಜಾವಾಣಿ ವಾರ್ತೆ

ಮೈಸೂರು: ವಯೋಸಹಜ ಅನಾರೋಗ್ಯದಿಂದ ಸೋಮವಾರ ನಿಧನರಾದ ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರ ಅಂತ್ಯಕ್ರಿಯೆಯನ್ನು ಮಂಗಳವಾರ ಇಲ್ಲಿನ ಅಶೋಕಪುರಂನ ಡಾ.ಬಿ.ಆರ್.ಅಂಬೇಡ್ಕರ್ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಟ್ರಸ್ಟ್ ಆವರಣದಲ್ಲಿ ಬೌದ್ಧ ಧರ್ಮದ ವಿಧಾನದಂತೆ ಸಾವಿರಾರು ಅಭಿಮಾನಿಗಳ ಸಮ್ಮುಖದಲ್ಲಿ ಸಕಲ ಸರ್ಕಾರಿ ಗೌರವದೊಂದಿಗೆ ನೆರವೇರಿಸಲಾಯಿತು.

ಥೇರಾ ಮಹಾಬೋಧಿ ಸಂಸ್ಥೆಯ ಆನಂದ್ ಭಂತೇಜಿ ನೇತೃತ್ವದಲ್ಲಿ 20 ಬಿಕ್ಕುಗಳು ಬೌದ್ಧ ಧರ್ಮದ ವಿಧಿವಿಧಾನಗಳನ್ನು ನೆರವೇರಿಸಿದರು. ನಂತರ ಪೊಲೀಸರು ಗಾಳಿಯಲ್ಲಿ ಮೂರು ಸುತ್ತು ಗುಂಡು ಹಾರಿಸಿ ಗೌರವ ಸಲ್ಲಿಸಿದರು. ಈ ವೇಳೆ ಪೊಲೀಸ್ ಬ್ಯಾಂಡ್ ರಾಷ್ಟ್ರಗೀತೆ ನುಡಿಸಿತು.

ಇದಕ್ಕೂ ಮುನ್ನ ಪ್ರಸಾದ್ ಹುಟ್ಟಿದ ಅಶೋಕಪುರಂನಲ್ಲಿ ಅಂತಿಮ ಯಾತ್ರೆ ನಡೆಯಿತು. ಮೈಸೂರು, ಚಾಮರಾಜನಗರ, ಮಂಡ್ಯ, ಹಾಸನ ಭಾಗದಿಂದ ಹರಿದು ಬಂದ ಸಾವಿರಾರು ಅಭಿಮಾನಿಗಳು ಅಂತಿಮ ನಮನ ಸಲ್ಲಿಸಿ, ಮೆರವಣಿಗೆಯಲ್ಲಿ ಹೆಜ್ಜೆ ಹಾಕಿದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ದರ್ಶನ ಪಡೆದು ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು. ಒಡನಾಡಿ ಪಿಜಿಆರ್ ಸಿಂಧ್ಯ, ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಡಾ.ಸಿ.ಎನ್.ಮಂಜುನಾಥ್, ಶಾಸಕ ನರೇಂದ್ರಸ್ವಾಮಿ ಅಂತಿಮ ನಮನ ಸಲ್ಲಿಸಿದರು. ಬಳಿಕ ನಡೆದ ಮೆರವಣಿಗೆಯಲ್ಲಿ ಜನರು ಅಪಾರ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ಮನೋರಕ್ಷಿತ ಭಂತೇಜಿ, ಕಲ್ಯಾಣಸಿರಿ ಭಂತೇಜಿ, ಬೋಧಿದತ್ತ ಭಂತೇಜಿ, ನಾಗರತ್ನ ಭಂತೇಜಿ, ಬೋಧಿರತ್ನ ಭಂತೇಜಿ, ಸಮನರಿಯ ಭಂತೇಜಿ, ಧರ್ಮಚಾರಿಗಳಾದ ಪುಟ್ಟಸ್ವಾಮಿ, ಬಸವರಾಜು ಹಾಗೂ 20 ಉಪಾಸಕರು ಅಂತ್ಯಕ್ರಿಯೆಯಲ್ಲಿ ಪಾಲ್ಗೊಂಡಿದ್ದರು.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ, ಸಂಸದ ಪ್ರತಾಪ ಸಿಂಹ, ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್, ಡಿಸಿಪಿ ಜಾಹ್ನವಿ, ಉರಿಲಿಂಗಿ ಪೆದ್ದಿಮಠದ ಜ್ಞಾನ ಪ್ರಕಾಶ ಸ್ವಾಮೀಜಿ, ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಎನ್.ಮಹೇಶ್ ಪಾಲ್ಗೊಂಡಿದ್ದರು.



ಮೈಸೂರಿನ ಅಶೋಕಪುರಂನಲ್ಲಿ ಮಂಗಳವಾರ ಸಂಸದ ವಿ.ಶ್ರೀನಿವಾಸ ಪ್ರಸಾದ್ ಪಾರ್ಥಿವ ಶರೀರದ ಮೆರವಣಿಗೆಯಲ್ಲಿ ಅಭಿಮಾನಿಗಳು ಪಾಲ್ಗೊಂಡರು —ಪ್ರಜಾವಾಣಿ ಚಿತ್ರ

ಸುದ್ದಿ 2 ನಿಮಿಷ

'ಅಲ್ಪಸಂಖ್ಯಾತರಿಗೆ ₹ 10 ಸಾವಿರ ಕೋಟಿ, ರೈತರಿಗೆ ₹ 2 ಸಾವಿರ ಭಿಕ್ಷೆ'

ಕಲಬುರಗಿ: 'ಅಲ್ಪಸಂಖ್ಯಾತರಿಗಾಗಿ ₹ 10 ಸಾವಿರ ಕೋಟಿ ಮೀಸಲಿಟ್ಟಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಬರದಿಂದ ತತ್ತರಿಸಿರುವ ರೈತರಿಗೆ ಭಿಕ್ಷೆಯಂತೆ ಕೇವಲ ₹ 2 ಸಾವಿರ ಬೆಳೆ ಪರಿಹಾರ ನೀಡಿದ್ದಾರೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಟೀಕಿಸಿದರು.

ಕಮಲಾಪುರ ಪಟ್ಟಣದಲ್ಲಿ ಮಂಗಳವಾರ ನಡೆದ ಬಿಜೆಪಿ ಅಭ್ಯರ್ಥಿ ಡಾ.ಉಮೇಶ ಜಾಧವ್ ಪರ ಪ್ರಚಾರ ಸಮಾವೇಶದಲ್ಲಿ ಮಾತನಾಡಿದ ಅವರು, 'ಕಾಂಗ್ರೆಸ್ ಸರ್ಕಾರದ ತುಷ್ಟೀಕರಣ ನೀತಿಯಿಂದ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ' ಎಂದರು.

'ಕಳೆದ ಬಾರಿ ಪ್ರವಾಹದಿಂದ ಬೆಳೆ ಹಾನಿಯಾದವರಿಗೆ ಯಡಿಯೂರಪ್ಪ ಸರ್ಕಾರ ಹೆಕ್ಟೇರ್‌ಗೆ ₹ 24 ಸಾವಿರ ಒದಗಿಸಿತ್ತು, ಗ್ಯಾರಂಟಿ ಹೆಸರಲ್ಲಿ ₹ 2 ಸಾವಿರ ಕೊಡುತ್ತಿರುವ ಸರ್ಕಾರ, 800 ರೈತರ ಆತ್ಮಹತ್ಯೆಗೆ ಪರಿಹಾರ ಒದಗಿಸಿಲ್ಲ. ನಾಲ್ಕು ತಿಂಗಳಿಂದ ಸಂಧ್ಯಾ ಸುರಕ್ಷಾ, ವಿವಿಧ ಪಿಂಚಣಿಗಳಿಗೆ ಹಣ ಬಿಡುಗಡೆ ಮಾಡಿಲ್ಲ. 10 ಕೆ.ಜಿ ಅಕ್ಕಿ ಕೊಡುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಅದರಲ್ಲಿ 5 ಕೆ.ಜಿ ಕೇಂದ್ರ ಸರ್ಕಾರ ನೀಡುತ್ತಿದೆ. ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ವ್ಯವಸ್ಥೆ ಮಾಡಿ ಪುರುಷರ ಟಿಕೆಟ್ ದರವನ್ನು ಶೇ 30ರಷ್ಟು ಹೆಚ್ಚಿಸಿದ್ದಾರೆ. ವಿದ್ಯುತ್ ದರ ಹೆಚ್ಚಿಸಿದ್ದಾರೆ. ರೈತರು ಜಮೀನಿನಲ್ಲಿ ಟ್ರಾನ್ಸ್‌ಫಾರ್ಮರ್ ಅಳವಡಿಸಲು ಕೇವಲ ₹ 25 ಸಾವಿರ ಇತ್ತು, ಕಾಂಗ್ರೆಸ್ ಸರ್ಕಾರ ಅದನ್ನು ₹ 2 ಲಕ್ಷಕ್ಕೆ ಹೆಚ್ಚಿಸಿದೆ. ಮದ್ಯದ ದರ, ನೋಂದಣಿ ಮುದ್ರಾಂಕ ದರ ಹೆಚ್ಚಿಸಿ ಜನರ ಸುಲಿಗೆ ಮಾಡುತ್ತಿದೆ' ಎಂದು ಆರೋಪಿಸಿದರು.



ರಾಯಚೂರಿಗೆ ನಾಳೆ ರಾಹುಲ್


ರಾಯಚೂರು: ರಾಯಚೂರು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಜಿ.ಕುಮಾರ ನಾಯಕ ಪರ ಪ್ರಚಾರಕ್ಕೆ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಮೇ 2ರಂದು ರಾಯಚೂರಿಗೆ ಬರಲಿದ್ದಾರೆ.

ರಾಯಚೂರಿನ ಬಸವೇಶ್ವರ ವೃತ್ತ ಸಮೀಪದ ಮೈದಾನದಲ್ಲಿ ಅಂದು ಮಧ್ಯಾಹ್ನ 3ಕ್ಕೆ ನಡೆಯುವ ಬೃಹತ್ ಪ್ರಚಾರ ಸಭೆಯಲ್ಲಿ ರಾಹುಲ್ ಗಾಂಧಿ ಅವರೊಂದಿಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪಾಲ್ಗೊಳ್ಳಲಿದ್ದಾರೆ.

ಈ ಹಿನ್ನೆಲೆಯಲ್ಲಿ ಸಣ್ಣ ನೀರಾವರಿ ಸಚಿವ ಎನ್.ಎಸ್. ಬೋಸರಾಜು ಹಾಗೂ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಸಚಿವ ಮುನಿಯಪ್ಪ, [illegible] ಸಮುದಾಯದ ಮುಖಂಡರೊಂದಿಗೆ ಮಂಗಳವಾರ ಸಭೆ ನಡೆಸಿದ್ದಾರೆ.

ನೌಕಾಪಡೆ ಮುಖ್ಯಸ್ಥರಾಗಿ ತ್ರಿಪಾಠಿ ಅಧಿಕಾರ ಸ್ವೀಕಾರ

ನವದೆಹಲಿ (ಪಿಟಿಐ): ಕಡಲ ಗಡಿ ರಕ್ಷಣೆ ವಿಷಯದಲ್ಲಿ ಸದ್ಯದ ಹಾಗೂ ಬರುವ ದಿನಗಳಲ್ಲಿ ಎದುರಾಗಲಿರುವ ಸವಾಲುಗಳನ್ನು ಮೆಟ್ಟಿ ನಿಲ್ಲುವುದಕ್ಕಾಗಿ ನೌಕಾಪಡೆಯು ಯಾವಾಗಲೂ ಸನ್ನದ್ಧ ಸ್ಥಿತಿಯಲ್ಲಿ ಇರಬೇಕು ಎಂದು ನೌಕಾಪಡೆಯ ನೂತನ ಮುಖ್ಯಸ್ಥ ಅಡ್ಮಿರಲ್ ದಿನೇಶ್‌ಕುಮಾರ್ ತ್ರಿಪಾಠಿ ಮಂಗಳವಾರ ಹೇಳಿದ್ದಾರೆ.



ದಿನೇಶ್ ಕುಮಾರ್ ತ್ರಿಪಾಠಿ

ನೌಕಾಪಡೆಯ 26ನೇ ಮುಖ್ಯಸ್ಥರಾಗಿ ಅಧಿಕಾರ ಸ್ವೀಕರಿಸಿದ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

'ಸ್ವಾವಲಂಬನೆಗೆ ಒತ್ತು ನೀಡುವ ಮೂಲಕ ನೌಕಾಪಡೆಯ ಬಲ ಹೆಚ್ಚಿಸಲಾಗುವುದು. ಈ ನಿಟ್ಟಿನಲ್ಲಿ ಹೊಸ ತಂತ್ರಜ್ಞಾನಗಳ ಅಳವಡಿಕೆ ಮಹತ್ವದ ಪಾತ್ರ ವಹಿಸಲಿದೆ' ಎಂದರು.

'ನೌಕಾಪಡೆ ಸಿಬ್ಬಂದಿಯ ಕೌಶಲ ವೃದ್ಧಿ ನನ್ನ ಆದ್ಯತೆಯಾಗಿದೆ. ಪುರುಷ ಮತ್ತು ಮಹಿಳಾ ಸಿಬ್ಬಂದಿಗೆ ತರಬೇತಿ ನೀಡುವುದು, ವೃತ್ತಿಪರ ವಾತಾವರಣ ನಿರ್ಮಾಣ ಹಾಗೂ ಎಲ್ಲರಿಗೂ ಆಡಳಿತಾತ್ಮಕ ನೆರವು ನೀಡುವುದು ಸಹ ಆದ್ಯತೆಗಳಲ್ಲಿ ಸೇರಿವೆ' ಎಂದು ಹೇಳಿದರು.

ತಮ್ಮ ನಾಲ್ಕು ದಶಕಗಳ ಸೇವಾವಧಿಯಲ್ಲಿ ನೌಕಾಪಡೆಯ ವಿವಿಧ ಹುದ್ದೆಗಳನ್ನು ನಿಭಾಯಿಸಿ, ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿದ ಆರ್. ಹರಿಕುಮಾರ್ ನಿವೃತ್ತಿಯಿಂದ ತೆರವಾದ ಹುದ್ದೆಗೆ ತ್ರಿಪಾಠಿ ನೇಮಕಗೊಂಡಿದ್ದಾರೆ.

ವೈಸ್ ಅಡ್ಮಿರಲ್ ಆಗಿದ್ದ ತ್ರಿಪಾಠಿ ಅವರು ರೇವಾದ ಸೈನಿಕ್ ಶಾಲೆಯ ಹಳೆ ವಿದ್ಯಾರ್ಥಿ. ಅಡ್ಮಿರಲ್ ಹುದ್ದೆಗೇರುವುದಕ್ಕೂ ಮುನ್ನ ಅವರು ನೌಕಾಪಡೆಯ ವಿವಿಧ ಜವಾಬ್ದಾರಿಗಳಲ್ಲಿ ಕಾರ್ಯ ನಿರ್ವಹಿಸಿದ್ದಾರೆ. ಯುದ್ಧನೌಕೆಗಳಾದ ವಿನಾಶ್, ಕಿರ್ಚ್ ಹಾಗೂ ತ್ರಿಶೂಲ್‌ಗಳನ್ನು ಮುನ್ನಡೆಸಿದ್ದಾರೆ.

ಎನ್‌ಕೌಂಟರ್: 10 ನಕ್ಸಲರ ಹತ್ಯೆ

ನಾರಾಯಣಪುರ/ರಾಯಪುರ/ ಭುವನೇಶ್ವರ (ಪಿಟಿಐ/ ರಾಯಿಟರ್ಸ್): ಛತ್ತೀಸಗಢ ರಾಜ್ಯದ ನಾರಾಯಣಪುರ ಮತ್ತು ಕಂಕೇರ್ ಜಿಲ್ಲೆಗಳ ಗಡಿಯಲ್ಲಿ ಭದ್ರತಾ ಪಡೆಗಳು ನಡೆಸಿದ ಎನ್‌ಕೌಂಟರ್‌ನಲ್ಲಿ ಮೂವರು ಮಹಿಳೆಯರು ಸೇರಿ 10 ನಕ್ಸಲರು ಮೃತಪಟ್ಟಿದ್ದಾರೆ.

ನಕ್ಸಲರು ಪ್ರಬಲವಾಗಿರುವ ಅಬುಜ್ಮದ್ ಪ್ರದೇಶದ ಟೆಕ್ಮೆಟಾ ಮತ್ತು ಕಾಕೂರ್ ಗ್ರಾಮಗಳಲ್ಲಿ ಜಿಲ್ಲಾ ಮೀಸಲು ಪಡೆ (ಡಿಆರ್‌ಜಿ) ಮತ್ತು ವಿಶೇಷ ಕಾರ್ಯಪಡೆ (ಎಸ್‌ಟಿಎಫ್) ಜಂಟಿಯಾಗಿ ನಕ್ಸಲ್ ವಿರೋಧಿ ಕಾರ್ಯಾಚರಣೆಯಲ್ಲಿ ತೊಡಗಿದ್ದಾಗ, ಬೆಳಿಗ್ಗೆ 6 ಗಂಟೆ ಸುಮಾರಿಗೆ ಗುಂಡಿನ ಚಕಮಕಿ ನಡೆದಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಮೃತ ನಕ್ಸಲರ ಗುರುತು ಇನ್ನೂ ಪತ್ತೆ ಹಚ್ಚಬೇಕಿದೆ ಎಂದು ಅವರು ತಿಳಿಸಿದ್ದಾರೆ.

15 ದಿನಗಳಲ್ಲಿ ನಕ್ಸಲರ ವಿರುದ್ಧ ಭದ್ರತಾ ಪಡೆಗಳು ನಡೆಸಿದ ಎರಡನೇ ಪ್ರಮುಖ ಕಾರ್ಯಾಚರಣೆ ಇದಾಗಿದೆ. 'ಇದು ರಾಜ್ಯದಲ್ಲಿ ನಕ್ಸಲ್ ವಿರೋಧಿ ಕಾರ್ಯಾಚರಣೆಗೆ ದೊರೆತ ಮಹತ್ವದ ಯಶಸ್ಸು' ಎಂದು ಗೃಹ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ವಿಜಯ್ ಶರ್ಮಾ ಮಂಗಳವಾರ ಬಣ್ಣಿಸಿದ್ದಾರೆ.

'ಕಾರ್ಯಾಚರಣೆ ಸೋಮವಾರ ರಾತ್ರಿಯಿಂದ ಪ್ರಾರಂಭವಾಯಿತು. ಮಂಗಳವಾರ ಬೆಳಿಗ್ಗೆ ಎನ್‌ಕೌಂಟರ್ ನಡೆಯಿತು' ಎಂದು ಶರ್ಮಾ ವಿಡಿಯೊ ಹೇಳಿಕೆ ನೀಡಿದ್ದಾರೆ.

'ನಕ್ಸಲರ ಮೃತದೇಹಗಳನ್ನು ವಶಕ್ಕೆ ಪಡೆಯಲಾಗಿದೆ. ಸ್ಥಳದಿಂದ ಎಕೆ-47 ರೈಫಲ್, ಶಸ್ತ್ರಾಸ್ತ್ರ, ಮದ್ದುಗುಂಡು ಮತ್ತು ಸ್ಫೋಟಕಗಳನ್ನು ವಶಪಡಿಸಿಕೊಳ್ಳಲಾಗಿದೆ. ಈ ಕಾರ್ಯಾಚರಣೆ ವೇಳೆ ಭದ್ರತಾ ಪಡೆ ಮೇಲೆ ಹಾನಿ ಆಗಿಲ್ಲ' ಎಂದಿದ್ದಾರೆ.

'ಮುಖ್ಯವಾಹಿನಿಗೆ ಬನ್ನಿ': ಭದ್ರತಾ ಪಡೆಯ ಈ ಯಶಸ್ಸಿಗೆ ಅಭಿನಂದಿಸಿರುವ ಶರ್ಮಾ ಅವರು, ನಕ್ಸಲರು ಶಸ್ತ್ರಾಸ್ತ್ರ ತ್ಯಜಿಸಿ, ಮುಖ್ಯವಾಹಿನಿಗೆ ಬರುವಂತೆಯೂ ಕೋರಿದ್ದಾರೆ.

'ಮುಖ್ಯಮಂತ್ರಿ ವಿಷ್ಣುದೇವ್ ಸಾಯ್ ನೇತೃತ್ವದ ಸರ್ಕಾರವು ನಕ್ಸಲ್ ಸಮಸ್ಯೆಯನ್ನು ಮಾತುಕತೆ ಮೂಲಕ ಪರಿಹಾರ ಕಂಡುಕೊಳ್ಳಲು ಬಯಸಿದೆ' ಎಂದು ಅವರು ಹೇಳಿದ್ದಾರೆ.

'ನಾಲ್ಕು ವರ್ಷದ ಪದವಿ ಸ್ಥಗಿತ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಶಿಕ್ಷಣ ನೀತಿ–2020 (ಎನ್‌ಇಪಿ) ಭಾಗವಾಗಿದ್ದ ನಾಲ್ಕು ವರ್ಷಗಳ ಪದವಿ ಸ್ಥಗಿತಗೊಳಿಸಲು ಎಲ್ಲ ವಿಶ್ವವಿದ್ಯಾಲಯಗಳು ಹಾಗೂ ಪದವಿ ಕಾಲೇಜುಗಳಿಗೆ ಸೂಚನೆ ನೀಡಿರುವ ಉನ್ನತ ಶಿಕ್ಷಣ ಇಲಾಖೆ, ಗೊಂದಲಕ್ಕೆ ತೆರೆ ಎಳೆದಿದೆ.

ರಾಜ್ಯದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಎನ್‌ಇಪಿ ಜಾರಿಗೊಳಿಸಿದ ನಂತರ ಪದವಿಗೆ ಸೇರಿದ್ದ ವಿದ್ಯಾರ್ಥಿಗಳು ಈಗ 6ನೇ ಸೆಮಿಸ್ಟರ್‌ನಲ್ಲಿ ಇದ್ದಾರೆ. ವಿಶ್ವವಿದ್ಯಾಲಯಗಳ ಕುಲಪತಿಗಳು, ಪದವಿ ಕಾಲೇಜುಗಳ ಪ್ರಾಂಶುಪಾಲರು ಸರ್ಕಾರಕ್ಕೆ ಪತ್ರ ಬರೆದು, ನಾಲ್ಕು ವರ್ಷಗಳ ಪದವಿಗೆ ಅವರನ್ನು ಮುಂದುವರಿಸುವ ಕುರಿತು ಸ್ಪಷ್ಟನೆ ಕೇಳಿದ್ದರು. ಈ ಕುರಿತು ಈಚೆಗೆ ನಡೆದ ಸಭೆಯಲ್ಲಿ ಸುದೀರ್ಘ ಚರ್ಚೆ ನಡೆಸಿದ್ದ ಉನ್ನತ ಶಿಕ್ಷಣ ಇಲಾಖೆ ಅಧಿಕಾರಿಗಳು ಹಾಗೂ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಸದಸ್ಯರು, ನಾಲ್ಕು ವರ್ಷಗಳ ಆನರ್ಸ್ ಪದವಿ ರದ್ದು ಮಾಡಲು ನಿರ್ಧರಿಸಿದ್ದರು.

'ನಾಲ್ಕು ವರ್ಷಗಳ ಪದವಿಗೆ ಪ್ರವೇಶ ನೀಡಬಾರದು. ಎಲ್ಲ ವಿದ್ಯಾರ್ಥಿಗಳಿಗೂ ಸರ್ಕಾರದ ನಿರ್ಧಾರ ಮನವರಿಕೆ ಮಾಡಿಕೊಡಬೇಕು. ಈ ಕುರಿತು ಸೂಕ್ತ ಮಾಹಿತಿ ನೀಡಬೇಕು' ಎಂದು ಉನ್ನತ ಶಿಕ್ಷಣ ಇಲಾಖೆ ಅಧಿಕಾರಿಗಳು ಸೂಚನೆ ನೀಡಿದ್ದು, ಮೇ 8ರಂದು ಅಧಿಕೃತ ಆದೇಶಹೊರಡಿಸುವುದಾಗಿಹೇಳಿದ್ದಾರೆ.

ವಿಶ್ವವಿದ್ಯಾನಿಲಯ ಅನುದಾನ ಆಯೋಗದ ಮಾಜಿ ಅಧ್ಯಕ್ಷ ಸುಖದೇವ್ ಥೋರಟ್ ನೇತೃತ್ವದ ರಾಜ್ಯ ಶಿಕ್ಷಣ ನೀತಿ (ಎಸ್‌ಇಪಿ) ಆಯೋಗವು ಸಲ್ಲಿಸಿದ ಮಧ್ಯಂತರ ವರದಿಯನ್ನು ಆಧರಿಸಿ ಉನ್ನತ ಶಿಕ್ಷಣ ಇಲಾಖೆ ನಾಲ್ಕು ವರ್ಷಗಳ ಪದವಿ ಕೈಬಿಡುವ ನಿರ್ಧಾರ ತೆಗೆದುಕೊಂಡಿದೆ. ಆಯೋಗ ಇದೇ ಆಗಸ್ಟ್‌ನಲ್ಲಿ ಅಂತಿಮ ವರದಿ ಸಲ್ಲಿಸಲಿದೆ.

ಅಕ್ಕಿ ಗಿರಣಿ ಹಗರಣ: 'ಮಾರ್ಕ್‌ಫೆಡ್' ಎಂ.ಡಿ ಬಂಧನ

ರಾಯಪುರ (ಪಿಟಿಐ): ಜಾರಿ ನಿರ್ದೇಶನಾಲಯ (ಇ.ಡಿ) ಛತ್ತೀಸಗಢದ 'ಮಾರ್ಕ್‌ಫೆಡ್' ವ್ಯವಸ್ಥಾಪಕ ನಿರ್ದೇಶಕ ಮನೋಜ್ ಸೋನಿ ಅವರನ್ನು ₹ 175 ಕೋಟಿ ಮೊತ್ತದ ಅಕ್ಕಿ ಗಿರಣಿ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಬಂಧಿಸಿದೆ ಎಂದು ಮೂಲಗಳು ತಿಳಿಸಿವೆ.

ಸೋನಿ ಅವರನ್ನು ರಾಯಪುರದಲ್ಲಿನ ಪಿಎಂಎಲ್‌ಎ ವಿಶೇಷ ನ್ಯಾಯಾಲಯದಲ್ಲಿ ಹಾಜರುಪಡಿಸಲಾಯಿತು. ವಿಚಾರಣೆಗಾಗಿ ತನ್ನ ವಶಕ್ಕೆ ಒಪ್ಪಿಸುವಂತೆ ಇ.ಡಿ ಈ ವೇಳೆ ಕೋರಿತು. ಅದನ್ನು ಮಾನ್ಯ ಮಾಡಿದ ನ್ಯಾಯಾಲಯ, ಮೇ 4ರವರೆಗೆ ಅವರನ್ನು ಇ.ಡಿ ವಶಕ್ಕೆ ನೀಡಿ ಆದೇಶಿಸಿತು ಎಂದು ಇ.ಡಿ ಪರ ವಕೀಲ ಸೌರಭ ಪಾಂಡೆ ತಿಳಿಸಿದ್ದಾರೆ.

ಇದು ಸುಮಾರು ₹175 ಕೋಟಿ ಮೊತ್ತದ ಹಗರಣವಾಗಿದೆ ಎಂದು ಇ.ಡಿ ಕಳೆದ ವರ್ಷ ಪ್ರಕಟಣೆಯಲ್ಲಿ ತಿಳಿಸಿತ್ತು.

25 ಜಿಲ್ಲೆಗಳಲ್ಲಿ ಬಿಸಿ ಗಾಳಿ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಬುಧವಾರದಿಂದ ಐದು ದಿನಗಳು ಬಿಸಿ ಗಾಳಿ ಹೆಚ್ಚಾಗುವ ಸಾಧ್ಯತೆಯಿದ್ದು, ಹವಾಮಾನ ಇಲಾಖೆಯು 25 ಜಿಲ್ಲೆಗಳಿಗೆ ಶಾಖಾಘಾತದ ಮುನ್ಸೂಚನೆ ನೀಡಿದೆ.

ಬೀದರ್, ಕಲಬುರಗಿ, ವಿಜಯಪುರ, ಯಾದಗಿರಿ, ರಾಯಚೂರು, ಬಾಗಲಕೋಟೆ, ಬೆಳಗಾವಿ, ಗದಗ, ಧಾರವಾಡ, ಹಾವೇರಿ, ಕೊಪ್ಪಳ, ವಿಜಯನಗರ, ದಾವಣಗೆರೆ, ಚಿತ್ರದುರ್ಗ, ತುಮಕೂರು, ಕೋಲಾರ, ಮಂಡ್ಯ, ಬಳ್ಳಾರಿ, ಹಾಸನ, ಚಾಮರಾಜನಗರ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಮೈಸೂರು, ಚಿಕ್ಕಮಗಳೂರು ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಶಾಖದ ಅಲೆಗಳು ಹೆಚ್ಚಾಗುವ ಸಾಧ್ಯತೆ ಇದೆ. ಮೇ 5ರವರೆಗೂ ಇದೇ ಪರಿಸ್ಥಿತಿ ಇರಲಿದೆ ಎಂದು ಇಲಾಖೆ ತಿಳಿಸಿದೆ.

ಚಿಕ್ಕಮಗಳೂರು, ಕೊಡಗು, ಮೈಸೂರು, ಮಂಡ್ಯ, ರಾಮನಗರ ಹಾಗೂ ತುಮಕೂರು ಜಿಲ್ಲೆಯ ಕೆಲವೆಡೆ ಬುಧವಾರ ಹಗುರ ಮಳೆಯಾಗುವ ಸಾಧ್ಯತೆಯಿದೆ. ಮುಂದಿನ ನಾಲ್ಕುದಿನ ಒಣಹವೆ ಇರಲಿದೆ. ಇದೇ 6ರಿಂದ ಕೊಡಗು, ಮೈಸೂರು, ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಯ ಕೆಲವೆಡೆ ಸಾಧಾರಣ ಮಳೆಯಾಗುವ ಸಂಭವವಿದೆ. ಬಳ್ಳಾರಿ, ಚಿಕ್ಕಮಗಳೂರು, ಚಿತ್ರದುರ್ಗ, ಹಾಸನ, ಶಿವಮೊಗ್ಗ, ತುಮಕೂರು, ವಿಜಯನಗರ, ರಾಮನಗರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಯ ಕೆಲವೆಡೆ ಹಗುರ ಮಳೆಯಾಗುವ ಸಾಧ್ಯತೆ ಇದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ಮೇ 4ರವರೆಗೆ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಬಿಸಿ ವಾತಾವರಣವಿರುವ ಸಂಭವವಿದೆ. ಬುಧವಾರದಿಂದ ಮುಂದಿನ ಐದು ದಿನಗಳು ಬಾಗಲಕೋಟೆ, ಕಲಬುರಗಿ ಹಾಗೂ ಕೊಪ್ಪಳದಲ್ಲಿ ರಾತ್ರಿಯ ಅವಧಿಯೂ ಬಿಸಿ ವಾತಾವರಣದಿಂದ ಕೂಡಿರುವ ಸಾಧ್ಯತೆಯಿದೆ ಎಂದು ತಿಳಿಸಿದೆ.

ಮಂಗಳವಾರ ಬೆಳಿಗ್ಗೆ 8.30ಕ್ಕೆ ಅನ್ವಯಿಸಿದಂತೆ ಹಿಂದಿನ 24 ಗಂಟೆಗಳ ಅವಧಿಯಲ್ಲಿ ರಾಜ್ಯದಲ್ಲಿ ಕಲಬುರಗಿಯಲ್ಲಿ ಗರಿಷ್ಠ (42.8 ಡಿಗ್ರಿ ಸೆಲ್ಸಿಯಸ್) ಉಷ್ಣಾಂಶ ವರದಿಯಾಗಿದೆ. ಬೆಂಗಳೂರಿನಲ್ಲಿ ಸಂಜೆ 5.30ಕ್ಕೆ ಅನ್ವಯಿಸಿದಂತೆ ಗರಿಷ್ಠ ತಾಪಮಾನ 38.2 ಡಿಗ್ರಿ ಸೆಲ್ಸಿಯಸ್ ವರದಿಯಾಗಿದೆ. ಕಳೆದ ನಾಲ್ಕು ದಿನಗಳಲ್ಲಿ ಮೂರು ದಿನ 38 ಡಿಗ್ರಿ ಸೆಲ್ಸಿಯಸ್ ದಾಟಿದೆ.


ಬಿಜೆಪಿ ಅಭ್ಯರ್ಥಿ ಮೇಲೆ ಹಲ್ಲೆ: ಆರೋಪ

ಕೋಲ್ಕತ್ತಾ (ಪಿಟಿಐ): ಪ್ರಚಾರದ ವೇಳೆ ಟಿಎಂಸಿ ಕಾರ್ಯಕರ್ತರು ಹಲ್ಲೆ ಮಾಡಿದರು ಎಂದು ಬಶೀರ್‌ಹಾಟ್ ಕ್ಷೇತ್ರದ ಬಿಜೆಪಿ ಅಭ್ಯರ್ಥಿ, ಸಂದೇಶ್‌ಖಾಲಿ ಪ್ರತಿಭಟನೆಯಲ್ಲಿ ಮುಂಚೂಣಿ ಪಾತ್ರ ವಹಿಸಿದ್ದ ರೇಖಾ ಪಾತ್ರಾ ಮಂಗಳವಾರ ಆರೋಪಿಸಿದರು.

ನೀತಿಸಂಹಿತೆ ಉಲ್ಲಂಘನೆ: ಬೊಮ್ಮಾಯಿ ಮೇಲೆ ಪ್ರಕರಣ

ಪ್ರಜಾವಾಣಿ ವಾರ್ತೆ

ಹಾವೇರಿ: ಅನುಮತಿ ಇಲ್ಲದೇ ನಗರದ ಶಿಕ್ಷಣ ಸಂಸ್ಥೆಯಲ್ಲಿ ಚುನಾವಣಾ ಪ್ರಚಾರ ಸಭೆ ನಡೆಸಿದ ಆರೋಪದ ಮೇಲೆ ಹಾವೇರಿ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಸವರಾಜ ಬೊಮ್ಮಾಯಿ ವಿರುದ್ಧ ಹಾವೇರಿ ಶಹರ ಪೊಲೀಸ್ ಠಾಣೆಯಲ್ಲಿ ಮಂಗಳವಾರ ಪ್ರಕರಣ ದಾಖಲಾಗಿದೆ.



ಬಸವರಾಜ ಬೊಮ್ಮಾಯಿ

'ಏಪ್ರಿಲ್ 27 ರಂದು ಬೊಮ್ಮಾಯಿ ಅವರು ನಗರದ ಆಯುರ್ವೇದ ಕಾಲೇಜಿನಲ್ಲಿ ಪ್ರಚಾರ ಸಭೆ ನಡೆಸಿದ್ದರು. ನೀತಿಸಂಹಿತೆ ಜಾರಿ ಇರುವ ಸಂದರ್ಭದಲ್ಲಿ ಪೂರ್ವಾನುಮತಿ ಇಲ್ಲದೇ ಮತ್ತು ನೀತಿಸಂಹಿತೆ ಅನ್ವಯ ನಿಷೇಧಿತ ಪ್ರದೇಶವಾದ ವಿದ್ಯಾಸಂಸ್ಥೆಯಲ್ಲಿ ಚುನಾವಣಾ ಪ್ರಚಾರ ಸಭೆ ನಡೆಸಿದ್ದಾರೆ. ಅಲ್ಲದೇ ಫೇಸ್‌ಬುಕ್‌ನಲ್ಲಿ ಸಭೆಯ ಫೋಟೊ ಹಂಚಿಕೊಳ್ಳುವ ಮೂಲಕ ನೀತಿಸಂಹಿತೆ ಉಲ್ಲಂಘಿಸಿದ್ದಾರೆ' ಎಂದು ಕ್ಷಿಪ್ರ ಕಾರ್ಯಪಡೆ ಮುಖ್ಯಸ್ಥ ರಾಮಕೃಷ್ಣ ದೂರಿನಲ್ಲಿ ತಿಳಿಸಿದ್ದಾರೆ.

ರಾಜ್ಯದಲ್ಲಿ ಅತಿಸಾರ ಪ್ರಕರಣ ಹೆಚ್ಚಳ

ಬೆಂಗಳೂರು: ತಾಪಮಾನ ಏರಿಕೆ, ಕಲುಷಿತ ನೀರು ಮತ್ತು ಆಹಾರ ಸೇವನೆಯಿಂದ ರಾಜ್ಯದಲ್ಲಿ ಅತಿಸಾರ (ಡಯೇರಿಯಾ) ಪ್ರಕರಣಗಳು ಏರಿಕೆಯಾಗಿದ್ದು, ಕಳೆದೊಂದು ವಾರದಲ್ಲಿ 4,210 ಪ್ರಕರಣಗಳು ದೃಢಪಟ್ಟಿವೆ.

ಆರೋಗ್ಯ ಇಲಾಖೆ ಮಾಹಿತಿ ಪ್ರಕಾರ ಈ ವರ್ಷ ವರದಿಯಾದ ಒಟ್ಟು ಅತಿಸಾರ ಪ್ರಕರಣಗಳ ಸಂಖ್ಯೆ 52,309ಕ್ಕೆ ಏರಿಕೆಯಾಗಿದೆ. ಇಲಾಖೆಯು ಸೋಂಕು ರೋಗಗಳ ವರದಿಯನ್ನು ಬಿಡುಗಡೆ ಮಾಡಿದ್ದು, ಮಾರ್ಚ್ ಬಳಿಕ ಅತಿಸಾರ ಪ್ರಕರಣಗಳಲ್ಲಿ ಗಣನೀಯ ಹೆಚ್ಚಳವಾಗಿದೆ.

ನಾಯಿ ಹಾಗೂ ಹಾವು ಕಡಿತ ಪ್ರಕರಣಗಳೂ ಏರಿಕೆ ಕಂಡಿವೆ. ಕಳೆದೊಂದು ವಾರದಲ್ಲಿ 7,455 ಮಂದಿ ನಾಯಿ ಕಡಿತಕ್ಕೆ ಒಳಗಾಗಿದ್ದಾರೆ. ಈವರೆಗೆ ವರದಿಯಾದ ಒಟ್ಟು ಪ್ರಕರಣಗಳ ಸಂಖ್ಯೆ 1.06 ಲಕ್ಷಕ್ಕೆ ತಲುಪಿದೆ. ವಾರದಲ್ಲಿ 178 ಹಾವು ಕಡಿತ ಪ್ರಕರಣ ವರದಿಯಾಗಿದ್ದು, ಐವರು ಮೃತಪಟ್ಟಿರುವುದು ದೃಢಪಟ್ಟಿದೆ. ಈವರೆಗೆ ವರದಿಯಾದ ಒಟ್ಟು ಹಾವು ಕಡಿತ ಪ್ರಕರಣಗಳು 2,234ಕ್ಕೆ ಏರಿಕೆಯಾಗಿದೆ. 16 ಮಂದಿ ಹಾವು ಕಡಿತದಿಂದ ಮೃತಪಟ್ಟಿದ್ದಾರೆ.

ವಾರದಲ್ಲಿ 94 ಡೆಂಗಿ ಹಾಗೂ 27 ಚಿಕೂನ್‌ಗುನ್ಯ ಪ್ರಕರಣಗಳು ದೃಢಪಟ್ಟಿವೆ. ಈ ಪ್ರಕರಣಗಳ ಒಟ್ಟು ಸಂಖ್ಯೆ ಕ್ರಮವಾಗಿ 2,392 ಹಾಗೂ 543ಕ್ಕೆ ತಲುಪಿದೆ.

ಪ್ರಾಣಿಗಳ ಮೂಲಕ ಹರಡುವ ಬ್ಯಾಕ್ಟೀರಿಯಾ ಸೋಂಕು (ಲೆಪ್ಟೊಸ್ಪಿರೋಸಿಸ್) ವಾರದಲ್ಲಿ 15 ಮಂದಿಗೆ ದೃಢಪಟ್ಟಿದೆ. ಈವರೆಗೆ ಒಟ್ಟು 356 ಮಂದಿ ಸೋಂಕಿತರಾಗಿದ್ದಾರೆ. ಮಂಗನ ಕಾಯಿಲೆಯೂ (ಕೆಎಫ್‌ಡಿ) ವಾರದಲ್ಲಿ ಎಂಟು ಮಂದಿಯಲ್ಲಿ ಖಚಿತಪಟ್ಟಿದೆ. ಒಟ್ಟು ಕೆಎಫ್‌ಡಿ ಪ್ರಕರಣಗಳ ಸಂಖ್ಯೆ 316ಕ್ಕೆ ಏರಿಕೆಯಾಗಿದೆ.

ರೇವಣ್ಣ, ಪ್ರಜ್ವಲ್‌ಗೆ ನೋಟಿಸ್

ಒಂದನೇ ಪುಟದಿಂದ...

'ನೋಟಿಸ್ ತಲುಪಿದ ನಿಗದಿತ ಅವಧಿಯೊಳಗೆ ಹಾಜರಾಗದಿದ್ದರೆ ಮುಂದಿನ ಕ್ರಮ ಕೈಗೊಳ್ಳುವುದಾಗಿಯೂ ಎಚ್ಚರಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

'ಪ್ರಕರಣದ ಸಂತ್ರಸ್ತೆಯರು ಹಾಗೂ ಇತರರು ನೀಡಿರುವ ಹೇಳಿಕೆಯ ಆಧಾರದಲ್ಲಿ ಕೆಲ ಪ್ರಶ್ನೆಗಳನ್ನು ಸಿದ್ಧಪಡಿಸಲಾಗಿದೆ. ಇವುಗಳಿಗೆ ಆರೋಪಿಗಳಿಂದ ಉತ್ತರ ಪಡೆಯಬೇಕಿದೆ. ಬಳಿಕ, ಪರಸ್ಪರ ಹೇಳಿಕೆ ಪರಿಶೀಲಿಸಿ ಮುಂದಿನ ಕಾನೂನು ಕ್ರಮ ಜರುಗಿಸಲಾಗುವುದು' ಎಂದು ಮೂಲಗಳು ಹೇಳಿವೆ.

ಎಸ್‌ಐಟಿಗೆ 18 ಸಿಬ್ಬಂದಿ: ಸಿಐಡಿ ಎಡಿಜಿಪಿ ಬಿ.ಕೆ. ಸಿಂಗ್ ಮುಖ್ಯಸ್ಥರಾಗಿರುವ ವಿಶೇಷ ತನಿಖಾ ತಂಡದಲ್ಲಿ ಐಪಿಎಸ್ ಅಧಿಕಾರಿಗಳಾದ ಸುಮನ್ ಪೆನ್ನೇಕರ್ ಹಾಗೂ ಸೀಮಾ ಲಾಟ್ಕರ್ ಸದಸ್ಯರಾಗಿದ್ದಾರೆ. ಜೊತೆಗೆ, ಎಸ್‌ಐಟಿಗೆ ಹೊಸದಾಗಿ 18 ಸಿಬ್ಬಂದಿಯನ್ನು ನಿಯೋಜಿಸಿ ಡಿಜಿ–ಐಜಿಪಿ ಅವರು ಮಂಗಳವಾರ ಆದೇಶ ಹೊರಡಿಸಿದ್ದಾರೆ. ಇದರಲ್ಲಿ 10 ಮಂದಿ ಮಹಿಳಾ ಸಿಬ್ಬಂದಿ ಇದ್ದಾರೆ.

ಮೂವರು ಎಸಿಪಿಗಳು, ಐವರು ಇನ್‌ಸ್ಪೆಕ್ಟರ್‌ಗಳು, ನಾಲ್ವರು ಪಿಎಸ್‌ಐಗಳು, ನಾಲ್ವರು ಹೆಡ್ ಕಾನ್‌ಸ್ಟೆಬಲ್‌ಗಳು ಹಾಗೂ ಇಬ್ಬರು ಕಾನ್‌ಸ್ಟೆಬಲ್‌ಗಳನ್ನು ಎಸ್‌ಐಟಿ ತಂಡ ಸೇರಿದ್ದಾರೆ. ಮಂಗಳವಾರವೇ ಅವರೆಲ್ಲ ಕರ್ತವ್ಯಕ್ಕೆ ಹಾಜರಾಗಿದ್ದಾರೆ.

ಅರಮನೆ ರಸ್ತೆಯಲ್ಲಿರುವ ಸಿಐಡಿ ಕಟ್ಟಡದಲ್ಲಿ ಎಸ್‌ಐಟಿ ಕಚೇರಿ ತೆರೆಯಲಾಗಿದೆ. ಜೊತೆಗೆ, ಹಾಸನದಲ್ಲೂ ಎಸ್‌ಐಟಿ ಅಧಿಕಾರಿಗಳ ಕೆಲಸಕ್ಕಾಗಿ ಪ್ರತ್ಯೇಕ ಜಾಗ ನಿಗದಿಪಡಿಸಲಾಗಿದೆ.

ಪನ್ನೂ ಹತ್ಯೆ ಸಂಚು: ವಾಷಿಂಗ್ಟನ್ ಪೋಸ್ಟ್ ವರದಿಯಲ್ಲಿ 'ರಾ' ಅಧಿಕಾರಿ ಕುರಿತು ಉಲ್ಲೇಖ

ನಿರಾಧಾರ ಆಪಾದನೆ: ಭಾರತ

ನವದೆಹಲಿ (ಪಿಟಿಐ): ಸಿಖ್ ಪ್ರತ್ಯೇಕತಾವಾದಿ ನಾಯಕ ಗುರುಪತ್ವಂತ್ ಸಿಂಗ್ ಪನ್ನೂ ಅವರ ಹತ್ಯೆಗೆ ರೂಪಿಸಲಾಗಿತ್ತು ಎನ್ನಲಾದ ಸಂಚಿನಲ್ಲಿ ಭಾರತೀಯ ಅಧಿಕಾರಿ ಭಾಗಿಯಾಗಿದ್ದರು ಎಂಬುದಾಗಿ 'ವಾಷಿಂಗ್ಟನ್ ಪೋಸ್ಟ್' ಪತ್ರಿಕೆ ಪ್ರಕಟಿಸಿರುವ ವರದಿ ನಿರಾಧಾರ ಮತ್ತು ಸಮರ್ಥನೀಯವಲ್ಲದ ಆರೋಪಗಳಿಂದ ಕೂಡಿದೆ ಎಂದು ಭಾರತ ಮಂಗಳವಾರ ಪ್ರತಿಕ್ರಿಯಿಸಿದೆ.



ಪನ್ನೂ

'ಅಮೆರಿಕದಲ್ಲಿ ನಡೆದಿದ್ದ, ಸಿಖ್ ಪ್ರತ್ಯೇಕತಾವಾದಿ ಪನ್ನೂ ಹತ್ಯೆಯ ಸಂಚಿನಲ್ಲಿ 'ರಾ' ಅಧಿಕಾರಿ ವಿಕ್ರಮ್ ಯಾದವ್ ಅವರು ಭಾಗಿಯಾಗಿದ್ದರು' ಎಂದು 'ವಾಷಿಂಗ್ಟನ್ ಪೋಸ್ಟ್' ದೈನಿಕ ವರದಿ ಮಾಡಿದೆ. ವಿಕ್ರಮ್ ಯಾದವ್ ಅವರು ಸಂಚಿನ ಭಾಗವಾಗಲು ಆಗ ಭಾರತೀಯ ಗುಪ್ತದಳ ಸಂಸ್ಥೆ 'ರಾ' ಮುಖ್ಯಸ್ಥರಾಗಿದ್ದ ಸಾಮಂತ್ ಗೋಯಲ್ ಅವರ ಅನುಮೋದನೆ ಸಿಕ್ಕಿತ್ತು ಎಂದೂ ಈ ವರದಿಯು ಉಲ್ಲೇಖಿಸಿದೆ.

ಈ ವರದಿ ಪ್ರಕಟಗೊಂಡ ಮಾರನೇ ದಿನವೇ ವಿದೇಶಾಂಗ ಸಚಿವಾಲಯ ಪ್ರತಿಕ್ರಿಯೆ ನೀಡಿದೆ.

ಈ ಪ್ರಕರಣ ಕುರಿತಂತೆ ಊಹಾತ್ಮಕ ಮತ್ತು ಬೇಜವಾಬ್ದಾರಿಯುತ ಹೇಳಿಕೆಗಳನ್ನು ನೀಡುವುದರಿಂದ ಯಾವುದೇ ಪ್ರಯೋಜನ ಇಲ್ಲ

ರಣಧೀರ್ ಜೈಸ್ವಾಲ್, ವಕ್ತಾರ, ವಿದೇಶಾಂಗ ಸಚಿವಾಲಯ

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಚಿವಾಲಯ ವಕ್ತಾರ ರಣಧೀರ್ ಜೈಸ್ವಾಲ್,'ಪನ್ನೂ ಹತ್ಯೆ ಸಂಚಿನಲ್ಲಿ ಭಾರತೀಯ ಅಧಿಕಾರಿ ಪಾತ್ರವಿದೆ ಎಂಬ ಆರೋಪ ಗಂಭೀರವಾದುದು. ಇಂತಹ ವಿಷಯ ಕುರಿತು ವಾಷಿಂಗ್ಟನ್ ಪೋಸ್ಟ್ ಪ್ರಕಟಿಸಿರುವ ವರದಿಯಲ್ಲಿ ಆಧಾರ ರಹಿತ ಆರೋಪಗಳನ್ನು ಮಾಡಲಾಗಿದೆ' ಎಂದರು.

'ಈ ಪ್ರಕರಣದ ಬೆನ್ನಲ್ಲೇ, ಜಾಗತಿಕ ಮಟ್ಟದಲ್ಲಿರುವ ಸಂಘಟಿತ ಅಪರಾಧಿಗಳ, ಭಯೋತ್ಪಾದಕರ ಮತ್ತು ಇತರರ ಜಾಲಗಳು ಹಾಗೂ ಭದ್ರತೆಗೆ ಅವುಗಳು ಒಡ್ಡಿರುವ ಬೆದರಿಕೆ ಕುರಿತು ಭಾರತದೊಂದಿಗೆ ಅಮೆರಿಕ ತನ್ನ ಕಳವಳ ಹಂಚಿಕೊಂಡಿತ್ತು. ಈ ಕುರಿತು ಭಾರತ ಸರ್ಕಾರ ಉನ್ನತ ಮಟ್ಟದ ಸಮಿತಿ ರಚಿಸಿದ್ದು, ತನಿಖೆಯೂ ನಡೆಯುತ್ತಿದೆ' ಎಂದು ಹೇಳಿದರು.

ಪನ್ನೂ ಹತ್ಯೆಗೆ ನಿಖಿಲ್ ಗುಪ್ತಾ ಎಂಬ ಭಾರತೀಯ ನಡೆಸಿದ್ದ ಯತ್ನವನ್ನು ವಿಫಲಗೊಳಿಸಲಾಗಿತ್ತು. ಭಾರತೀಯ ಉದ್ಯೋಗಿಯೊಬ್ಬರ ಬಳಿ ನಿಖಿಲ್ ನೌಕರನಾಗಿದ್ದ ಎಂದು ಅಮೆರಿಕ ಕಳೆದ ವರ್ಷ ನವೆಂಬರ್‌ನಲ್ಲಿ ಆರೋಪಿಸಿತ್ತು.

ಈ ಕುರಿತು ಡಿಸೆಂಬರ್ 7ರಂದು ಸಂಸತ್‌ನಲ್ಲಿ ಹೇಳಿಕೆ ನೀಡಿದ್ದ ವಿದೇಶಾಂಗ ಸಚಿವ ಎಸ್.ಜೈಶಂಕರ್, 'ರಾಷ್ಟ್ರದ ಭದ್ರತೆ ಮೇಲೆ ಪರಿಣಾಮ ಬೀರುವಂತಹ ಈ ಪ್ರಕರಣಕ್ಕೆ ಸಂಬಂಧಿಸಿ ಅಮೆರಿಕ ಹಂಚಿಕೊಂಡಿರುವ ಮಾಹಿತಿ ಕುರಿತು ಪರಿಶೀಲನೆ ನಡೆಸಿ, ತನಿಖೆ ಕೈಗೊಳ್ಳುವ ಸಂಬಂಧ ಉನ್ನತ ಮಟ್ಟದ ಸಮಿತಿ ರಚಿಸಲಾಗಿದೆ' ಎಂದಿದ್ದರು.

ಹಲವು ಭಯೋತ್ಪಾದನಾ ಕೃತ್ಯಗಳಿಗೆ ಸಂಬಂಧಿಸಿ ಪನ್ನೂ ಭಾರತಕ್ಕೆ ಬೇಕಾಗಿದ್ದಾನೆ. ಈತ, ಅಮೆರಿಕ ಹಾಗೂ ಕೆನಡಾದ ಪೌರತ್ವ ಹೊಂದಿದ್ದಾನೆ.

'ಭಾರತ ಗಂಭೀರವಾಗಿ ಪರಿಗಣಿಸಿದೆ'

ವಾಷಿಂಗ್ಟನ್ (ಪಿಟಿಐ): 'ಸಿಖ್ ಪ್ರತ್ಯೇಕತಾವಾದಿ ನಾಯಕ ಗುರುಪತ್ವಂತ್ ಸಿಂಗ್ ಪನ್ನೂ ಹತ್ಯೆಗೆ ಸಂಚು ರೂಪಿಸಲಾಗಿತ್ತು ಎಂಬ ಆರೋಪಗಳನ್ನು ಭಾರತ ಗಂಭೀರವಾಗಿ ಪರಿಗಣಿಸಿದೆ' ಎಂದು ಶ್ವೇತಭವನ ಪತ್ರಿಕಾ ಕಾರ್ಯದರ್ಶಿ ಕರೀನ್ ಜೀನ್ ಪಿಯರ್ ಹೇಳಿದ್ದಾರೆ.

ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ಈ ಆರೋಪಗಳ ಕುರಿತು ಎಫ್‌ಬಿಐ ನಡೆಸುತ್ತಿರುವ ತನಿಖೆ ಹಾಗೂ ನ್ಯಾಯಾಂಗ ಇಲಾಖೆ ದಾಖಲಿಸಿರುವ ಪ್ರಕರಣ ಕುರಿತು ಹೆಚ್ಚಿನ ಮಾಹಿತಿಯನ್ನು ನೀಡಲಿಲ್ಲ.

'ಈ ಪ್ರಕರಣ ಕುರಿತು ತನಿಖೆ ನಡೆಯುತ್ತಿದೆ. ಯಾವುದೇ ನಿರ್ದಿಷ್ಟ ಉತ್ತರ ಬೇಕು ಎಂದಾದಲ್ಲಿ ನ್ಯಾಯಾಂಗ ಇಲಾಖೆಯನ್ನೇ ನೀವು ಸಂಪರ್ಕಿಸಬೇಕು' ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದ್ದಾರೆ.


'ಭಾರತ ನಮ್ಮ ಬಹುಮುಖ್ಯ ಪಾಲುದಾರ ರಾಷ್ಟ್ರ. ಹಲವು ಕ್ಷೇತ್ರಗಳಲ್ಲಿ ಉಭಯ ದೇಶಗಳು ಸಹಕಾರ ವೃದ್ಧಿಸುವ ಕಾರ್ಯಸೂಚಿಯನ್ನು ಹೊಂದಿವೆ. ಆದರೆ, ಪನ್ನೂ ಹತ್ಯೆಗೆ ನಡೆದಿದ್ದ ಸಂಚಿನ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ನಡೆದ ಹಲವಾರು ಸಭೆಗಳಲ್ಲಿ ಪ್ರಸ್ತಾಪಿಸಿದ್ದೇವೆ' ಎಂದೂ ಹೇಳಿದ್ದಾರೆ.

ಜನರನ್ನು ತಪ್ಪುದಾರಿಗೆ ಎಳೆಯುವ ಪತಂಜಲಿ ಜಾಹೀರಾತುಗಳ ಪ್ರಕರಣ

ಕ್ಷಮಾಪಣೆಯಲ್ಲಿ ಸುಧಾರಣೆ: ಕೋರ್ಟ್

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ (ಪಿಟಿಐ): ಯೋಗ ಗುರು ಬಾಬಾ ರಾಮದೇವ, ಅವರ ಆಪ್ತ ಆಚಾರ್ಯ ಬಾಲಕೃಷ್ಣ ಮತ್ತು ಪತಂಜಲಿ ಆಯುರ್ವೇದ್ ಲಿಮಿಟೆಡ್ ಕಂಪನಿಯು ತಪ್ಪುದಾರಿಗೆ ಎಳೆಯುವ ಜಾಹೀರಾತುಗಳ ಪ್ರಕರಣದಲ್ಲಿ ಪತ್ರಿಕೆಗಳ ಮೂಲಕ ಕೋರಿರುವ ಬಹಿರಂಗ ಕ್ಷಮಾಪಣೆಯಲ್ಲಿ ಎದ್ದುಕಾಣುವಂತಹ ಸುಧಾರಣೆ ಇದೆ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಹೇಳಿದೆ.


ಬಾಬಾ ರಾಮದೇವ

ಕ್ಷಮಾಪಣೆಯಲ್ಲಿ ಬಳಕೆಗೆ ಯಾಗಿರುವ ಭಾಷೆಯು ತೃಪ್ತಿಕರವಾಗಿದೆ, ಕ್ಷಮಾಪಣೆ ಕೇಳುವಾಗ ಹೆಸರುಗಳನ್ನೂ ಉಲ್ಲೇಖಿಸಲಾಗಿದೆ ಎಂದು ನ್ಯಾಯಮೂರ್ತಿಗಳಾದ ಹಿಮಾ ಕೊಹ್ಲಿ ಮತ್ತು ಅಹ್ಸಾನುದ್ದೀನ್ ಅಮಾನುಲ್ಲಾ ಅವರು ಇದ್ದ ವಿಭಾಗೀಯ ಪೀಠವು ರಾಮದೇವ, ಬಾಲಕೃಷ್ಣ ಹಾಗೂ ಕಂಪನಿಯನ್ನು ಪ್ರತಿನಿಧಿಸುತ್ತಿರುವ ಹಿರಿಯ ವಕೀಲ ಮುಕುಲ್ ರೋಹಟಗಿ ಅವರನ್ನು ಉದ್ದೇಶಿಸಿ ಹೇಳಿದೆ.

'ಕ್ಷಮಾಪಣೆಯಲ್ಲಿ ಎದ್ದುಕಾಣುವಂತಹ ಸುಧಾರಣೆ ಇದೆ. ಇದನ್ನು ನಾವು ಮೆಚ್ಚುತ್ತೇವೆ. ಅಂತೂ ಅವರಿಗೆ ಅರ್ಥ ಆಗಿದೆ' ಎಂದು ನ್ಯಾಯಮೂರ್ತಿ ಅಮಾನುಲ್ಲಾ ಹೇಳಿದ್ದಾರೆ. ಹಿಂದೆ ಪ್ರಕಟಿಸಿದ್ದ ಕ್ಷಮಾಪಣೆಯಲ್ಲಿ ಕಂಪನಿಯ ಹೆಸರನ್ನು ಮಾತ್ರ ಉಲ್ಲೇಖಿಸಲಾಗಿತ್ತು ಎಂದು ಅವರು ಹೇಳಿದ್ದಾರೆ.

ಐಎಂಎ ಅಧ್ಯಕ್ಷರ ಹೇಳಿಕೆ: ಭಾರತೀಯ ವೈದ್ಯಕೀಯ ಸಂಘದ (ಐಎಂಎ) ಅಧ್ಯಕ್ಷ ಡಾ.ಆರ್.ವಿ. ಅಶೋಕನ್ ಅವರು ರಾಮದೇವ ಮತ್ತು ಅವರ ಕಂಪನಿಗಳ ವಿರುದ್ಧ ಕೋರ್ಟ್‌ನಲ್ಲಿ ನಡೆಯುತ್ತಿರುವ ವಿಚಾರಣೆ ಕುರಿತು ಆಡಿರುವ ಮಾತುಗಳನ್ನು ಪೀಠವು ಗಂಭೀರವಾಗಿ ಪರಿಗಣಿಸಿದೆ.

ಅಶೋಕನ್ ಆಡಿರುವ ಮಾತುಗಳು ದುರದೃಷ್ಟಕರ ಎಂದು ರೋಹಟಗಿ ಹೇಳಿದರು. 'ವಿಚಾರಣೆಯಲ್ಲಿ ನಾವು ಯಾವ ಬಗೆಯಲ್ಲಿ ಮುಂದುವರಿಯಬೇಕು ಎಂಬುದನ್ನು ನೀವು ಹೇಗೆ ತೀರ್ಮಾನಿಸುತ್ತೀರಿ, ನೀವು ಆಡಿರುವ ಮಾತುಗಳು ಮೆಚ್ಚುಗೆಗೆ ಪಾತ್ರವಾಗುವಂಥವೇನೂ ಅಲ್ಲ. ಹೆಚ್ಚು ಗಂಭೀರವಾದ ಪರಿಣಾಮಗಳಿಗೆ ಸಿದ್ಧವಾಗಿರಿ' ಎಂದು ಪೀಠವು ಐಎಂಎ ಪರ ವಕೀಲರಿಗೆ ಹೇಳಿತು.

ಐಎಂಎ ಬಗ್ಗೆ ಸುಪ್ರೀಂ ಕೋರ್ಟ್ ಟೀಕೆ ಮಾಡಿರುವುದು ದುರದೃಷ್ಟಕರ ಎಂದು ಅಶೋಕನ್ ಹೇಳಿರುವುದಾಗಿ ವರದಿಯಾಗಿದೆ. ಕೋರ್ಟ್ ಆಡಿರುವ ಅಸ್ಪಷ್ಟವಾದ ಮಾತುಗಳು ಖಾಸಗಿ ವೈದ್ಯರ ನೈತಿಕ ಸ್ಥೈರ್ಯವನ್ನು ಕುಗ್ಗಿಸಿದೆ ಎಂದು ಕೂಡ ಅವರು ಹೇಳಿದ್ದಾಗಿ ವರದಿ ಆಗಿದೆ.

ಪರವಾನಗಿ ಪ್ರಾಧಿಕಾರಕ್ಕೆ ಕೋರ್ಟ್ ತರಾಟೆ

ಪತಂಜಲಿ ಆಯುರ್ವೇದ್ ಲಿಮಿಟೆಡ್ ಕಂಪನಿ ನೀಡಿದ, ತಪ್ಪುದಾರಿಗೆ ಎಳೆಯುವ ಜಾಹೀರಾತುಗಳ ಪ್ರಕರಣದಲ್ಲಿ ಉತ್ತರಾಖಂಡ ರಾಜ್ಯ ಪರವಾನಗಿ ಪ್ರಾಧಿಕಾರದ ನಿಷ್ಕ್ರಿಯತೆಗೆ ಸುಪ್ರೀಂ ಕೋರ್ಟ್ ಮಂಗಳವಾರ ಅಸಮಾಧಾನ ವ್ಯಕ್ತಪಡಿಸಿದೆ. ಆರು ವರ್ಷಗಳ ಕಾಲ ಕ್ರಮ ಕೈಗೊಳ್ಳದೆ ಇದ್ದ ಪ್ರಾಧಿಕಾರವನ್ನು ತರಾಟೆಗೆ ತೆಗೆದುಕೊಂಡಿದೆ.

'ಸುಪ್ರೀಂ ಕೋರ್ಟ್ ಏಪ್ರಿಲ್ 10ರಂದು ಆದೇಶ ನೀಡಿದ ನಂತರವಷ್ಟೇ ಪ್ರಾಧಿಕಾರವು ಕಾನೂನಿಗೆ ಅನುಗುಣವಾಗಿ ಕ್ರಮ ಕೈಗೊಳ್ಳಲು ಮುಂದಾಯಿತು ಅನಿಸುತ್ತಿದೆ' ಎಂದು ಹೇಳಿದೆ.

'ಸಹಾನುಭೂತಿ ಹಾಗೂ ಅನುಕಂಪವನ್ನು ನೀವು ಬಯಸುತ್ತೀರಿ ಎಂದಾದರೆ ಕೋರ್ಟ್‌ನಲ್ಲಿ ಪ್ರಾಮಾಣಿಕವಾಗಿ ಇರಿ' ಎಂದು ಪೀಠವು ಹೇಳಿದೆ. ಪರವಾನಗಿ ಪ್ರಾಧಿಕಾರವು ಕಾನೂನಿಗೆ ಅನುಗುಣವಾಗಿ ಕ್ರಮವನ್ನು ಕೈಗೊಂಡಿದೆಯೇ ಎಂಬುದು ಕೋರ್ಟ್ ಪ್ರಮುಖವಾಗಿ ಪರಿಗಣಿಸುತ್ತಿರುವ ಸಂಗತಿ ಎಂದು ಪೀಠವು ಹೇಳಿದೆ. ವಿಚಾರಣೆಯನ್ನು ಪೀಠವು ಮೇ 14ಕ್ಕೆ ಮುಂದೂಡಿದೆ.

'ನಿಮಗೆ ಕ್ರಮ ಕೈಗೊಳ್ಳಬೇಕು ಎಂದು ಅನ್ನಿಸಿದಾಗ ನೀವು ಮಿಂಚಿನ ವೇಗದಲ್ಲಿ ಕೆಲಸ ಮಾಡುತ್ತೀರಿ. ನಿಮಗೆ ಕೆಲಸ ಮಾಡಲು ಮನಸ್ಸಿಲ್ಲದೆ ಇದ್ದಾಗ, ಕಾಲಹರಣ ಮಾಡುತ್ತಲೇ ಇರುತ್ತೀರಿ' ಎಂದು ಪೀಠವು ಕೋಪ ವ್ಯಕ್ತಪಡಿಸಿತು.

ಪರವಾನಗಿ ಪ್ರಾಧಿಕಾರವು ಕೋರ್ಟ್‌ಗೆ ಪ್ರಮಾಣ ಪತ್ರವೊಂದನ್ನು ಸಲ್ಲಿಸಿದ್ದು, ತಾನು ಪತಂಜಲಿ ಆಯುರ್ವೇದ್ ಲಿಮಿಟೆಡ್ ಹಾಗೂ ದಿವ್ಯಾ ಫಾರ್ಮಸಿ ವಿರುದ್ಧ ಏಪ್ರಿಲ್ 10ರ ನಂತರ ಕೈಗೊಂಡಿರುವ ಕ್ರಮಗಳನ್ನು ಅದರಲ್ಲಿ ವಿವರಿಸಿದೆ.

'ಕಾನೂನು ಇದೆ ಎಂಬುದನ್ನು ನೀವು ಇದ್ದಕ್ಕಿದ್ದಂತೆ ಅರ್ಥಮಾಡಿಕೊಂಡಿದ್ದೀರಿ. ನಿಮ್ಮ ಬಳಿ ಎಲ್ಲ ಅಧಿಕಾರವೂ ಇದೆ ಎಂಬುದನ್ನು ಅರ್ಥ ಮಾಡಿಕೊಂಡಿದ್ದೀರಿ... ಆದರೆ ಕೋರ್ಟ್ ನಿಮ್ಮನ್ನು ಎಚ್ಚರಿಸುವವರೆಗೆ ಅದರ ಬಗ್ಗೆ ನಿಮಗೆ ಗೊತ್ತೇ ಇರಲಿಲ್ಲ' ಎಂದು ಪ್ರಾಧಿಕಾರದ ನಡೆಯ ಬಗ್ಗೆ ನ್ಯಾಯಪೀಠ ಅಸಮಾಧಾನ ವ್ಯಕ್ತಪಡಿಸಿತು.

ಏಪ್ರಿಲ್ 10ರ ಆದೇಶದ ನಂತರ ಕ್ರಮ ಕೈಗೊಳ್ಳಲಾಗಿದೆ ಎಂದಾದರೆ, ತನ್ನ ಕರ್ತವ್ಯಗಳ ವಿಚಾರದಲ್ಲಿ ಪ್ರಾಧಿಕಾರವು ಪ್ರಜ್ಞೆಯಿಂದ ಕೆಲಸ ಮಾಡಿತ್ತು ಎನ್ನಲು ಸಾಧ್ಯವೇ ಎಂದು ಪ್ರಶ್ನಿಸಿತು. ಏಪ್ರಿಲ್ 15ರಂದು ಹೊರಡಿಸಿರುವ ಆದೇಶದಲ್ಲಿ, ಪತಂಜಲಿ ಆಯುರ್ವೇದ್ ಲಿಮಿಟೆಡ್ ಹಾಗೂ ದಿವ್ಯಾ ಫಾರ್ಮಸಿಯ 14 ಉತ್ಪನ್ನಗಳ ತಯಾರಿಕೆಗೆ ನೀಡಿರುವ ಪರವಾನಗಿಯನ್ನು ಅಮಾನತು ಮಾಡಲಾಗಿದೆ ಎಂದು ಪ್ರಾಧಿಕಾರ ತಿಳಿಸಿದೆ.

ಕಾನೂನಿಗೆ ಅನುಗುಣವಾಗಿ ಬಹಳ ಮೊದಲೇ ಮಾಡಬಹುದಾಗಿದ್ದ ಕೆಲಸಗಳನ್ನು ಪ್ರಾಧಿಕಾರವು ಮೂರು ದಿನಗಳ ಅವಧಿಯಲ್ಲಿ ಮಾಡಿದೆ ಎಂದು ಪೀಠ ಹೇಳಿತು.

'ಪುರಕಾಯಸ್ಥ ವಿರುದ್ಧ ಸಾಕ್ಷ್ಯ ಇದೆ'

ನವದೆಹಲಿ (ಪಿಟಿಐ): ನ್ಯೂಸ್‌ಕ್ಲಿಕ್ ಸುದ್ದಿತಾಣದ ಸಂಸ್ಥಾಪಕ ಹಾಗೂ ಪ್ರಧಾನ ಸಂಪಾದಕ ಪ್ರಬೀರ್ ಪುರಕಾಯಸ್ಥ ಅವರ ವಿರುದ್ಧ ಸಲ್ಲಿಕೆಯಾಗಿರುವ ದೋಷಾರೋಪ ಪಟ್ಟಿಯನ್ನು ಗಮನಕ್ಕೆ ತೆಗೆದುಕೊಂಡಿರುವ ದೆಹಲಿಯ ನ್ಯಾಯಾಲಯವೊಂದು, ಆರೋಪಿಯ ವಿರುದ್ಧ ಹಲವು ಸಾಕ್ಷ್ಯಗಳು ಇವೆ ಎಂದು ಹೇಳಿದೆ.

ಈ ಸುದ್ದಿತಾಣವು ಚೀನಾ ಪರವಾದ ಪ್ರಚಾರಾಂದೋಲನ ನಡೆಸಲು ಹಣ ಪಡೆದಿದೆ ಎಂಬ ಆರೋಪಗಳ ಕುರಿತು 'ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆ' (ಯುಎಪಿಎ) ಅಡಿಯಲ್ಲಿ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ. ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಹರದೀಪ್ ಕೌರ್ ಅವರು, ದೋಷಾರೋಪಪಟ್ಟಿಯ ಪ್ರತಿಯೊಂದನ್ನು ಪುರಕಾಯಸ್ಥ ಅವರಿಗೆ ನೀಡಲು ಪ್ರಾಸಿಕ್ಯೂಷನ್‌ಗೆ ಸೂಚಿಸಿದರು.

ದೋಷಾರೋಪ ನಿಗದಿಗಾಗಿ ಮೇ 31ರಂದು ವಾದ-ಪ್ರತಿವಾದ ನಡೆಯಲಿದೆ. ನ್ಯೂಸ್‌ಕ್ಲಿಕ್‌ನ ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥ ಅಮಿತ್ ಚಕ್ರವರ್ತಿ ಅವರಿಗೆ ಈ ಪ್ರಕರಣದಲ್ಲಿ ಮಾಫಿ ಸಾಕ್ಷಿಯಾಗಲು ಜನವರಿಯಲ್ಲಿ ಒಪ್ಪಿಗೆ ನೀಡಲಾಗಿತ್ತು.

ದೆಹಲಿಯ ಪೊಲೀಸರ ವಿಶೇಷ ಘಟಕವು ಚಕ್ರವರ್ತಿ ಮತ್ತು ಪುರಕಾಯಸ್ಥ ಅವರನ್ನು ಅಕ್ಟೋಬರ್‌ನಲ್ಲಿ ಬಂಧಿಸಿದೆ. ಇಬ್ಬರೂ ಈಗ ನ್ಯಾಯಾಂಗ ಬಂಧನದಲ್ಲಿದ್ದಾರೆ. ಪೊಲೀಸರು ದಾಖಲಿಸಿರುವ ಎಫ್‌ಐಆರ್‌ನಲ್ಲಿ, 'ಭಾರತದ ಸಾರ್ವಭೌಮತ್ವವನ್ನು ಹಾಳುಮಾಡಲು' ಮತ್ತು ದೇಶದ ವಿರುದ್ಧ ಅತೃಪ್ತಿ ಸೃಷ್ಟಿಸಲು ಭಾರಿ ಪ್ರಮಾಣದ ಹಣವು ಚೀನಾದಿಂದ ಈ ಸುದ್ದಿತಾಣಕ್ಕೆ ಬಂದಿದೆ ಎಂದು ಹೇಳಲಾಗಿದೆ.

ಮೊದಲ 2 ಹಂತದ ಚುನಾವಣೆ

ಶೇ 66.14, ಶೇ 66.71 ಮತದಾನ

ನವದೆಹಲಿ (ಪಿಟಿಐ): ಲೋಕಸಭೆ ಚುನಾವಣೆಯ ಮೊದಲ ಎರಡು ಹಂತಗಳಲ್ಲಿ ಕ್ರಮವಾಗಿ ಶೇ 66.14 ಮತ್ತು ಶೇ 66.71ರಷ್ಟು ಮತದಾನವಾಗಿದೆ ಎಂದು ಚುನಾವಣಾ ಆಯೋಗವು ಮಂಗಳವಾರ ಪ್ರಕಟಿಸಿದೆ.

ಮೊದಲನೇ ಹಂತದ ಮತದಾನ ಪ್ರಕ್ರಿಯೆಯು ಪೂರ್ಣಗೊಂಡ 11 ದಿನಗಳ ನಂತರ, ಅಂತಿಮ ಶೇಕಡಾವಾರು ವಿವರ ಪ್ರಕಟಿಸಿರುವ ಆಯೋಗದ ನಡೆಯನ್ನು ವಿರೋಧಪಕ್ಷಗಳು ಪ್ರಶ್ನಿಸಿವೆ.

ಮತದಾನದ ಅಂತಿಮ ಪ್ರಮಾಣ ಹಂಚಿಕೊಂಡಿರುವ ಆಯೋಗವು, ಮೊದಲ ಹಂತದಲ್ಲಿ ಶೇ 66.22ರಷ್ಟು ಪುರುಷರು, 66.07ರಷ್ಟು ಮಹಿಳೆಯರು ಹಕ್ಕು ಚಲಾಯಿಸಿದ್ದಾರೆ. ಹಕ್ಕು ಚಲಾಯಿಸಿರುವ ಲಿಂಗತ್ವ ಅಲ್ಪಸಂಖ್ಯಾತರ ಪ್ರಮಾಣ ಶೇ 31.22ರಷ್ಟು ಎಂದು ತಿಳಿಸಿದೆ.

ಏ.26ರಂದು ನಡೆದಿದ್ದ ಎರಡನೇ ಹಂತದ ಮತದಾನದಲ್ಲಿ ಶೇ 66.99ರಷ್ಟು ಪುರುಷರು, ಶೇ 66.42ರಷ್ಟು ಮಹಿಳೆಯರು ಹಕ್ಕು ಚಲಾಯಿಸಿದ್ದಾರೆ. ಲಿಂಗತ್ವ ಅಲ್ಪಸಂಖ್ಯಾತರ ಪ್ರಮಾಣಶೇ 23.86ರಷ್ಟು ಎಂದು ವಿವರಿಸಿದೆ.

ವಿರೋಧಪಕ್ಷಗಳ ಪ್ರಶ್ನೆ: ವಿಳಂಬವಾಗಿ ಮತದಾನದ ಪ್ರಮಾಣವನ್ನು ಪ್ರಕಟಿಸಿರುವ ಆಯೋಗದ ನಡೆಯನ್ನು ಕಾಂಗ್ರೆಸ್, ಸಿಪಿಎಂ, ಟಿಎಂಸಿ ಪ್ರಶ್ನಿಸಿವೆ.

ಸಕಾಲದಲ್ಲಿ ಹಾಗೂ ಪಾರದರ್ಶಕವಾದ ಕ್ರಮದಲ್ಲಿ ಅಂಕಿ ಅಂಶ ಪ್ರಕಟಿಸುವುದು ಅಗತ್ಯ. 'ಇದೇ ಮೊದಲ ಬಾರಿಗೆ 11 ದಿನ ತಡವಾಗಿ ವಿವರ ಪ್ರಕಟಿಸಲಾಗಿದೆ' ಎಂದು ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು ಆಕ್ಷೇಪಿಸಿದ್ದಾರೆ.

ತೃಣಮೂಲ ಕಾಂಗ್ರೆಸ್ ನಾಯಕ ಡೆರೆಕ್ ಒಬ್ರಯಾನ್ ಅವರು, 'ತಮ್ಮದೇ ಅಂಪೈರ್ ಅನ್ನು ನೇಮಿಸಿಕೊಳ್ಳಲು ಹಾಗೂ ಆಯೋಗವನ್ನು ನಾಶಪಡಿಸಲು ಪ್ರಧಾನಿ ಮೋದಿ ಅವರು ಸಂಸತ್ತಿನಲ್ಲಿಯೇ ಕಾಯ್ದೆಯನ್ನೇ ಬದಲಿಸಿಕೊಂಡರು' ಎಂದು ಟೀಕಿಸಿದ್ದಾರೆ.

ದೆಹಲಿ ಕಾಂಗ್ರೆಸ್ ಘಟಕಕ್ಕೆ ಹಂಗಾಮಿ ಅಧ್ಯಕ್ಷ ನೇಮಕ

ನವದೆಹಲಿ (ಪಿಟಿಐ): ದೆಹಲಿ ಕಾಂಗ್ರೆಸ್ ಘಟಕಕ್ಕೆ (ಡಿಪಿಸಿಸಿ) ಮಾಜಿ ಶಾಸಕ ದೇವೇಂದರ್ ಯಾದವ್ ಅವರನ್ನು ಹಂಗಾಮಿ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ.

ಎಎಪಿಯೊಂದಿಗಿನ ಮೈತ್ರಿ ವಿರೋಧಿಸಿ ಅರವಿಂದರ್ ಸಿಂಗ್ ಲವ್ಲಿ ಅವರು ತಮ್ಮ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರಿಂದ ಕಾಂಗ್ರೆಸ್ ಈ ನಿರ್ಧಾರ ಕೈಗೊಂಡಿದೆ.

ದೇವೇಂದರ್ ಪ್ರಸ್ತುತ ಪಕ್ಷದ ಪಂಜಾಬ್ ಉಸ್ತುವಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ದೇವೇಂದರ್ ಅವರು ದೆಹಲಿಯ ಬಾದಲಿ ವಿಧಾನಸಭಾ ಕ್ಷೇತ್ರದಿಂದ 2008 ಮತ್ತು 2013ರಲ್ಲಿ ಶಾಸಕರಾಗಿ ಆಯ್ಕೆಯಾಗಿದ್ದರು.


ಪ್ರವಾಹ
ಕಾಶ್ಮೀರದ ಉತ್ತರದಲ್ಲಿ ಪ್ರವಾಹ ಇಳಿಮುಖವಾಗುತ್ತಿದ್ದಂತೆಯೇ ಕುಪ್ವಾರ ಜಿಲ್ಲೆಯ ಚೋಗಲ್ ಹಂದ್ವಾರ ಗ್ರಾಮದಲ್ಲಿ ಮಹಿಳೆಯೊಬ್ಬರು ಮನೆ ಮುಂದೆ ನಿಂತಿದ್ದ ನೀರನ್ನು ತೆರವುಗೊಳಿಸುತ್ತಿದ್ದುದು ಮಂಗಳವಾರ ಕಂಡುಬಂತು –ಪಿಟಿಐ ಚಿತ್ರ

'ಪೊಲೀಸರೇ ವಾಹನದಲ್ಲಿ ಕರೆತಂದಿದ್ದರು...'

ನವದೆಹಲಿ (ಪಿಟಿಐ): ಮಣಿಪುರದಲ್ಲಿ ಆಶ್ರಯ ಕೋರಿದ್ದ ಕುಕಿ–ಜೊಮಿ ಸಮುದಾಯದ ಇಬ್ಬರು ಮಹಿಳೆಯರನ್ನು ಪೊಲೀಸರೇ, ಸಾವಿರಕ್ಕೂ ಹೆಚ್ಚು ಸಂಖ್ಯೆಯಲ್ಲಿದ್ದ ಮೈತೇಯಿ ಗಲಭೆಕೋರರ ನಡುವೆ ಅಧಿಕೃತ ಜಿಪ್ಸಿ ವಾಹನದಲ್ಲಿ ಕರೆತಂದಿದ್ದರು ಎಂದು ಸಿಬಿಐ ಹೇಳಿದೆ.

ಮಣಿಪುರದಲ್ಲಿ ಜನಾಂಗೀಯ ಘರ್ಷಣೆಯ ಸಂಬಂಧ ಕಂಗ್‌ಪೋಕ್ಪಿ ಜಿಲ್ಲೆಯಲ್ಲಿ ಇದೇ ಇಬ್ಬರು ಮಹಿಳೆಯರನ್ನು, ಅತ್ಯಾಚಾರದ ಬಳಿಕ ಬೆತ್ತಲಾಗಿಸಿ ಮೆರವಣಿಗೆ ನಡೆಸಲಾಗಿತ್ತು ಎಂದು ಸಿಬಿಐ ಈ ಕುರಿತು ಕೋರ್ಟ್‌ಗೆ ಸಲ್ಲಿಸಿರುವ ದೋಷಾರೋಪ ಪಟ್ಟಿಯಲ್ಲಿ ಹೇಳಿದೆ.

ಉದ್ರಿಕ್ತರ ಗುಂಪು, ಇದೇ ಕುಟುಂಬದ ಮೂರನೇ ಮಹಿಳೆ ಮೇಲೂ ಹಲ್ಲೆ ನಡೆಸಿ, ಬೆತ್ತಲುಗೊಳಿಸಲು ಯತ್ನಿಸಿದೆ. ಮಹಿಳೆ ಮೊಮ್ಮಗಳನ್ನು ಬಿಗಿಯಾಗಿ ಹಿಡಿದಿದ್ದ ಕಾರಣ ಉದ್ರಿಕ್ತರ ಯತ್ನ ಈಡೇರಿಲ್ಲ. ಆಕೆ ತಪ್ಪಿಸಿಕೊಂಡಿದ್ದರು ಎಂದು ಸಿಬಿಐ ವಿವರಿಸಿದೆ.

ಸ್ಥಳದಲ್ಲಿದ್ದ ಪೊಲೀಸರಿಗೆ ನೆರವು ನೀಡುವಂತೆ ಮೂವರು ಮಹಿಳೆಯರು ಕೋರಿದ್ದರು. ಆದರೆ, ಪೊಲೀಸರು ಸ್ಪಂದಿಸಿಲ್ಲ ಎಂದು ದೋಷಾರೋಪ ಪಟ್ಟಿಯಲ್ಲಿ ಆರೋಪಿಸಲಾಗಿದೆ.

ಮಹಿಳೆಯರ ಪೈಕಿ ಒಬ್ಬರು ಕಾರ್ಗಿಲ್ ಯುದ್ಧದಲ್ಲಿ ಭಾಗಿಯಾಗಿದ್ದ ಯೋಧರ ಪತ್ನಿ. ಸುರಕ್ಷಿತ ಸ್ಥಳಕ್ಕೆ ಕರೆದೊಯ್ಯುವಂತೆ ಕೋರಿದ್ದರು. ಆದರೆ, ನಮ್ಮ ಬಳಿ ವಾಹನದ ಕೀ ಇಲ್ಲ ಎಂದು ಅವರಿಗೆ ತಿಳಿಸಲಾಯಿತು ಎಂದು ಆರೋಪಪಟ್ಟಿಯಲ್ಲಿ ಸಿಬಿಐ ಹೇಳಿದೆ.

ಮಣಿಪುರದಲ್ಲಿ ಇಬ್ಬರು ಮಹಿಳೆಯರನ್ನು ಉದ್ರಿಕ್ತರ ಗುಂಪು ಬೆತ್ತಲಾಗಿಸಿ ಮೆರವಣಿಗೆ ನಡೆಸಿದ್ದ ಕೃತ್ಯವು ಕಳೆದ ವರ್ಷ ಮೇ 4ರಂದು ನಡೆದಿದ್ದು, ಎರಡು ತಿಂಗಳ ತರುವಾಯ ಜುಲೈನಲ್ಲಿ ಸಂಬಂಧಿತ ವಿಡಿಯೊ ಜಾಲತಾಣದಲ್ಲಿ ಸಾಕಷ್ಟು ಹಂಚಿಕೆಯಾಗಿತ್ತು.

ಚುನಾವಣೆ ಸಮಯದಲ್ಲೇಕೆ ಕೇಜ್ರಿವಾಲ್ ಬಂಧನ?: 'ಸುಪ್ರೀಂ'

ಒಂದನೇ ಪುಟದಿಂದ...

ದೆಹಲಿ ಅಬಕಾರಿ ನೀತಿ ಹಗರಣದ ಜತೆ ನಂಟಿನ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯ ತಮ್ಮನ್ನು ಬಂಧಿಸಿರುವುದನ್ನು ಪ್ರಶ್ನಿಸಿ ಕೇಜ್ರಿವಾಲ್ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಮತ್ತು ದೀಪಂಕರ್ ದತ್ತಾ ಅವರಿದ್ದ ನ್ಯಾಯಪೀಠ ಮಂಗಳವಾರವೂ ಮುಂದುವರಿಸಿತು.

'ಈ ಪ್ರಕರಣಕ್ಕೆ ಸಂಬಂಧಿಸಿ, ಜಪ್ತಿಯಂತಹ ಯಾವುದೇ ಕ್ರಮವನ್ನು ಈ ವರೆಗೆ ಕೈಗೊಂಡಿಲ್ಲ. ಒಂದು ವೇಳೆ ಅಂತಹ ಕ್ರಮವನ್ನು ಕೈಗೊಂಡಿದ್ದರೆ, ಅದರಲ್ಲಿ ಕೇಜ್ರಿವಾಲ್ ಅವರ ಪಾತ್ರ ಏನಿದೆ ಎಂಬುದನ್ನು ತೋರಿಸಿ' ಎಂದೂ ಇ.ಡಿ ಯನ್ನು ನ್ಯಾಯಪೀಠ ಪ್ರಶ್ನಿಸಿತು.

'ಮನೀಷ್ ಸಿಸೋಡಿಯಾ ವಿರುದ್ಧ ಪ್ರಕರಣಕ್ಕೆ ಸಂಬಂಧಿಸಿದ ತೀರ್ಪನ್ನು ಎರಡು ಭಾಗಗಳಾಗಿ ವಿಭಜಿಸಲಾಗಿತ್ತು. ಮೊದಲನೆದಾಗಿ, ಮನೀಷ್ ಸಿಸೋಡಿಯಾ ಪರವಾಗಿರುವ ಸಾಕ್ಷ್ಯಗಳು; ಎರಡನೆಯದಾಗಿ ಅವರ ವಿರುದ್ಧ ಪತ್ತೆ ಮಾಡಲಾಗಿರುವ ಅಂಶಗಳಿಗೆ ಸಂಬಂಧಿಸಿದ್ದು ಎಂಬ ಎರಡು ಭಾಗಗಳಿವೆ. ಹೀಗಾಗಿ ಈ ಪ್ರಕರಣವು (ಕೇಜ್ರಿವಾಲ್ ವಿರುದ್ಧದ ಆರೋಪ) ಈ ಎರಡರ ಪೈಕಿ ಯಾವ ತೀರ್ಪಿನ ವ್ಯಾಪ್ತಿಗೆ ಬರುತ್ತದೆ ಎಂಬುದನ್ನು ತಿಳಿಸಿ' ಎಂದು ರಾಜು ಅವರನ್ನು ನ್ಯಾಯಪೀಠ ಪ್ರಶ್ನಿಸಿತು.

> ಬಂಧಿಸುವುದಕ್ಕೆ ಸಂಬಂಧಿಸಿ ಇ.ಡಿ ಹೊಂದಿರುವ ಅಧಿಕಾರ ಕುರಿತು ಪ್ರಮುಖ ಪ್ರಶ್ನೆಯೂ ಇದೆ. ಈ ಕಾರಣಕ್ಕೆ, ಕೇಜ್ರಿವಾಲ್ ತಮ್ಮ ಬಂಧನ ಪ್ರಶ್ನಿಸಿ ಕೋರ್ಟ್ ಕದ ತಟ್ಟುತ್ತಿದ್ದಾರೆ
> **ಸಂಜೀವ್ ಖನ್ನಾ**
> ನ್ಯಾಯಮೂರ್ತಿ

ಅಕ್ರಮ ವರ್ಗಾವಣೆ ತಡೆ ಕಾಯ್ದೆಯ ಸೆಕ್ಷನ್ 19ರ ಪ್ರಕಾರ, ತನ್ನ ಬಳಿ ಇರುವ ಸಾಕ್ಷ್ಯಗಳ ಆಧಾರದಲ್ಲಿ ಆರೋಪಿಯನ್ನು ಬಂಧಿಸುವ ಅಧಿಕಾರವನ್ನು ಇ.ಡಿ ಹೊಂದಿರುತ್ತದೆ. ಈ ಸೆಕ್ಷನ್ ಅನ್ವಯಿಸಿದಾಗ, ಆರೋಪವನ್ನು ಸಾಬೀತುಪಡಿಸುವ ಜವಾಬ್ದಾರಿ ಪ್ರಾಸಿಕ್ಯೂಷನ್ ಮೇಲೆಯೇ ಹೆಚ್ಚಾಗಿರುತ್ತದೆಯೇ ಹೊರತು ಆರೋಪಿ ಮೇಲೆ ಅಲ್ಲ' ಎಂದು ಹೇಳಿದರು.

'ಒಂದು ವೇಳೆ, ಆರೋಪಿಯು ಹಣ ಅಕ್ರಮ ವರ್ಗಾವಣೆ ಕಾಯ್ದೆಯ ಸೆಕ್ಷನ್ 45ರಡಿ ಜಾಮೀನಿಗೆ ಅರ್ಜಿ ಹಾಕಿದಲ್ಲಿ, ಆಗ, ಆರೋಪಿಯ ಜವಾಬ್ದಾರಿಯೇ ಹೆಚ್ಚುತ್ತದೆ' ಎಂದು ವಿವರಿಸಿದರು.

'ಈ ಪ್ರಕರಣವನ್ನು ಯಾವ ರೀತಿ ಅರ್ಥೈಸಬೇಕು? ಇ.ಡಿ ಮೇಲೆಯೇ ಹೆಚ್ಚಿನ ಜವಾಬ್ದಾರಿ ಹೊರಿಸಬೇಕೆ ಅಥವಾ 'ಸಂಶಯದ ಲಾಭ' ಎಂಬ ಅಂಶ ಪರಿಗಣಿಸಿ ನಿರ್ಧಾರ ಕೈಗೊಳ್ಳಬೇಕೇ' ಎಂದು ಹೆಚ್ಚುವರಿ ಸಾಲಿಸಿಟರ್ ಜನರಲ್ ಅವರನ್ನು ನ್ಯಾಯಪೀಠ ಪ್ರಶ್ನಿಸಿತು.


'ಪಿಎಂಎಲ್‌ಎ ಕಾಯ್ದೆಯು ಆರೋಪಿಗಳ ವಿರುದ್ಧ ಕಾನೂನು ಕ್ರಮ ಜರುಗಿಸುವುದಕ್ಕೆ ಗರಿಷ್ಠ 365 ದಿನಗಳ ಅವಕಾಶ ನೀಡುತ್ತದೆ. ಈ ಪ್ರಕರಣದಲ್ಲಿ, ದೂರುಗಳ ದಾಖಲು ಹಾಗೂ ಕ್ರಮ ಕೈಗೊಳ್ಳುವಿಕೆ ನಡುವಿನ ಸಮಯದ ಅಂತರ ನಮ್ಮನ್ನು ಯೋಚಿಸುವಂತೆ ಮಾಡಿದೆ' ಎಂದೂ ಹೇಳಿತು.

ಸಿಸೋಡಿಯಾ ಜಾಮೀನು ಅರ್ಜಿ ವಜಾ

ನವದೆಹಲಿ (ಪಿಟಿಐ): ದೆಹಲಿಯ ಮಾಜಿ ಉಪ ಮುಖ್ಯಮಂತ್ರಿ, ಎಎಪಿ ನಾಯಕ ಮನೀಶ್ ಸಿಸೋಡಿಯಾ ಅವರ ಜಾಮೀನು ಅರ್ಜಿಯನ್ನು ದೆಹಲಿಯ ಕೋರ್ಟ್ ಮಂಗಳವಾರ ವಜಾ ಮಾಡಿತು.

ಜಾಮೀನು ಮಂಜೂರು ಮಾಡಲು ಸಂದರ್ಭ ಸೂಕ್ತವಾಗಿಲ್ಲ ಎಂದು ಅರ್ಜಿ ವಜಾ ಮಾಡಿದ ಸಿಬಿಐ ಮತ್ತು ಇ.ಡಿ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಾಧೀಶರಾದ ಕಾವೇರಿ ಬವೇಜಾ ತಿಳಿಸಿದರು.

ಅಬಕಾರಿ ನೀತಿ ಕುರಿತ ಹಣ ಅಕ್ರಮ ವರ್ಗಾವಣೆ ಆರೋಪದ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಸೋಡಿಯಾ ಅವರನ್ನು ಬಂಧಿಸಲಾಗಿದೆ. ಸಿಬಿಐ, ಜಾರಿ ನಿರ್ದೇಶನಾಲಯ (ಇ.ಡಿ) ಪರ ವಕೀಲರು ಹಾಗೂ ಸಿಸೋಡಿಯಾ ಪರ ವಕೀಲರ ವಾದ ಆಲಿಸಿದ ನ್ಯಾಯಾಧೀಶರು ಈ ಕುರಿತ ಆದೇಶವನ್ನು ಕಾಯ್ದಿರಿಸಿದರು.


ಮನೀಶ್ ಸಿಸೋಡಿಯಾ

ಹಗರಣದಲ್ಲಿ ಸಿಸೋಡಿಯಾ ಪಾತ್ರವಿದೆ ಎಂಬ ಆರೋಪದಡಿ ಸಿಬಿಐ 2023ರ ಫೆಬ್ರುವರಿ 26ರಂದು ಬಂಧಿಸಿದ್ದ, ಹಣ ಅಕ್ರಮ ವರ್ಗಾವಣೆ ಪ್ರಕರಣದ ಸಂಬಂಧ ಇ.ಡಿ ಮಾರ್ಚ್ 9, 23ರಂದು ಬಂಧಿಸಿತ್ತು.

ಬಂಧನದ ಹಿಂದೆಯೇ ಸಿಸೋಡಿಯಾ ಅವರು ದೆಹಲಿಯ ಸಚಿವ ಸಂಪುಟಕ್ಕೆ 2023ರ ಫೆಬ್ರುವರಿ 28ರಂದು ರಾಜೀನಾಮೆಯನ್ನು ಸಲ್ಲಿಸಿದ್ದರು.

ಮೊದಲ ತ್ರೈಮಾಸಿಕ: ಸರಾಸರಿ ಬೆಲೆ ಶೇ 11ರಷ್ಟು ಏರಿಕೆ

ದೇಶದ ಚಿನ್ನದ ಬೇಡಿಕೆ ಶೇ 8 ಹೆಚ್ಚಳ

ನವದೆಹಲಿ (ಪಿಟಿಐ): ಪ್ರಸಕ್ತ ಕ್ಯಾಲೆಂಡರ್ ವರ್ಷದ ಮೊದಲ ತ್ರೈಮಾಸಿಕದಲ್ಲಿ (ಜನವರಿ–ಮಾರ್ಚ್) ದೇಶದ ಚಿನ್ನದ ಬೇಡಿಕೆಯು ಶೇ 8ರಷ್ಟು ಏರಿಕೆಯಾಗಿದೆ ಎಂದು ವಿಶ್ವ ಚಿನ್ನ ಸಮಿತಿ (ಡಬ್ಲ್ಯುಜಿಸಿ) ಮಂಗಳವಾರ ತಿಳಿಸಿದೆ.

ಸದ್ಯ ಹಳದಿ ಲೋಹದ ಬೆಲೆಯು ಐತಿಹಾಸಿಕ ಗರಿಷ್ಠ ಮಟ್ಟಕ್ಕೆ ಮುಟ್ಟಿದೆ. ಇದರ ನಡುವೆಯೇ ದೇಶದ ಆರ್ಥಿಕತೆ ಬೆಳವಣಿಗೆ ಸದೃಢವಾಗಿರುವುದು ಹಾಗೂ ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ಚಿನ್ನ ಖರೀದಿ ಪ್ರಮಾಣವು ಹೆಚ್ಚಿರುವುದೇ ಈ ಬೇಡಿಕೆ ಹೆಚ್ಚಳಕ್ಕೆ ಕಾರಣವಾಗಿದೆ ಎಂದು ಚಿನ್ನದ ಬೇಡಿಕೆ ಕುರಿತು ಡಬ್ಲ್ಯುಜಿಸಿ ಸಿದ್ಧಪಡಿಸಿರುವ 2024ರ ಮೊದಲ ತ್ರೈಮಾಸಿಕ ವರದಿ ತಿಳಿಸಿದೆ.

ಈ ತ್ರೈಮಾಸಿಕ ಅವಧಿಯಲ್ಲಿ ಚಿನ್ನದ ಬೇಡಿಕೆ ಮೌಲ್ಯವು ಶೇ 20ರಷ್ಟು ಏರಿಕೆಯಾಗಿದ್ದು, ₹75,470 ಕೋಟಿಗೆ ತಲುಪಿದೆ. ಅಲ್ಲದೆ, ಸರಾಸರಿ ಬೆಲೆಯು ಶೇ 11ರಷ್ಟು ಏರಿಕೆಯಾಗಿದೆ ಎಂದು ಹೇಳಿದೆ.

ಚಿನ್ನಾಭರಣ ಮತ್ತು ಹೂಡಿಕೆ ಸೇರಿ ದೇಶದ ಚಿನ್ನದ ಬೇಡಿಕೆಯು 136.6 ಟನ್‌ಗೆ ಮುಟ್ಟಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ 126.3 ಟನ್ ಆಗಿತ್ತು ಎಂದು ವಿವರಿಸಿದೆ.

ಒಟ್ಟು ಬೇಡಿಕೆ ಪೈಕಿ ಚಿನ್ನಾಭರಣಗಳ ಬೇಡಿಕೆಯು ಶೇ 4ರಷ್ಟು ಏರಿಕೆಯಾಗಿದ್ದು, 95.5 ಟನ್‌ಗೆ ತಲುಪಿದೆ. ಹೂಡಿಕೆಗಾಗಿ ಚಿನ್ನದ ಬೇಡಿಕೆಯು ಶೇ 19ರಷ್ಟು ಹೆಚ್ಚಳವಾಗಿದ್ದು, 34.4 ಟನ್‌ಗೆ ಮುಟ್ಟಿದೆ.

'ಈ ಬೇಡಿಕೆ ಹೆಚ್ಚಳವು ಹಳದಿ ಲೋಹದ ಮೇಲೆ ಭಾರತೀಯರು ಬೆಸೆದುಕೊಂಡಿರುವ ಬಾಂಧವ್ಯದ ದ್ಯೋತಕವಾಗಿದೆ' ಎಂದು ಡಬ್ಲ್ಯುಜಿಸಿಯ ಭಾರತದ ಸಿಇಒ ಸಚಿನ್ ಜೈನ್ ತಿಳಿಸಿದ್ದಾರೆ.

'ಪ್ರಸಕ್ತ ವರ್ಷದಲ್ಲಿ ದೇಶದ ಚಿನ್ನದ ಬೇಡಿಕೆಯು 700ರಿಂದ 800 ಟನ್‌ಗೆ ಮುಟ್ಟುವ ಸಾಧ್ಯತೆಯಿದೆ. ಆದರೆ, ಬೆಲೆಯು ಇದೇ ರೀತಿ ಏರುಗತಿ ಕಂಡರೆ ಬೇಡಿಕೆಯು ಕಡಿಮೆಯಾಗುವ ಸಾಧ್ಯತೆಯಿದೆ' ಎಂದು ಹೇಳಿದ್ದಾರೆ.

'ಭಾರತ ಹಾಗೂ ಚೀನಾದಲ್ಲಿ ಬೆಲೆ ಕಡಿಮೆಯಾದಾಗ ಬೇಡಿಕೆ ಹೆಚ್ಚಿರುತ್ತದೆ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಬೆಲೆ ಏರಿಕೆಯಾದಾಗ ಬೇಡಿಕೆ ಹೆಚ್ಚಿರುವುದು ಸಾಮಾನ್ಯ. ಆದರೆ, ಮೊದಲ ಬಾರಿಗೆ ಭಾರತ, ಚೀನಾ ಮಾರುಕಟ್ಟೆಯಲ್ಲಿ ದರ ಏರಿಕೆ ನಡುವೆಯೇ ಬೇಡಿಕೆಯು ಹೆಚ್ಚಳವಾಗಿದೆ' ಎಂದು ಹೇಳಿದ್ದಾರೆ.

2023ರಲ್ಲಿ ಆರ್‌ಬಿಐ 16 ಟನ್ ಚಿನ್ನ ಖರೀದಿಸಿತ್ತು. ಆದರೆ, ಪ್ರಸಕ್ತ ವರ್ಷದ ಮೊದಲ ತ್ರೈಮಾಸಿಕದಲ್ಲಿಯೇ 19 ಟನ್ ಖರೀದಿಸಿದೆ. ಇದು ಮುಂದುವರಿಯುವ ಸಾಧ್ಯತೆಯಿದೆ ಎಂದು ಹೇಳಿದ್ದಾರೆ.

ಲೋಕಸಭಾ ಚುನಾವಣಾ ಪ್ರಕ್ರಿಯೆ ಮುಗಿದ ಬಳಿಕ ಏಪ್ರಿಲ್–ಜೂನ್ ತ್ರೈಮಾಸಿಕದಲ್ಲಿ ಚಿನ್ನಕ್ಕೆ ಬೇಡಿಕೆ ತಗ್ಗುವ ಸಾಧ್ಯತೆಯಿದೆ ಎಂದು ಹೇಳಿದ್ದಾರೆ.

ಅಂಕಿ ಅಂಶಗಳು

19 ಟನ್– ಮೊದಲ ತ್ರೈಮಾಸಿಕದಲ್ಲಿ ಆರ್‌ಬಿಐ ಖರೀದಿಸಿದ ಚಿನ್ನ

747.5 ಟನ್– 2023ರಲ್ಲಿ ದೇಶದ ಒಟ್ಟು ಚಿನ್ನದ ಬೇಡಿಕೆ

700-800 ಟನ್– 2024ರಲ್ಲಿ ದೇಶದ ಒಟ್ಟು ಚಿನ್ನದ ಬೇಡಿಕೆ ಅಂದಾಜು

ಚಿನ್ನದ ದರ ₹150, ಬೆಳ್ಳಿ ₹750 ಇಳಿಕೆ

ದೆಹಲಿಯ ಚಿನಿವಾರ ಪೇಟೆಯಲ್ಲಿ ಮಂಗಳವಾರ ಚಿನ್ನ ಮತ್ತು ಬೆಳ್ಳಿ ಧಾರಣೆಯು ಇಳಿಕೆಯಾಗಿದೆ.

10 ಗ್ರಾಂ ಚಿನ್ನದ ದರ ₹150 ಇಳಿಕೆಯಾಗಿ, ₹72,600ಕ್ಕೆ ಮಾರಾಟವಾಗಿದೆ. ಬೆಳ್ಳಿ ಧಾರಣೆಯು ಕೆ.ಜಿಗೆ ₹750 ಕಡಿಮೆಯಾಗಿ ₹83,750ರಂತೆ ವಹಿವಾಟು ನಡೆಸಿತು.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯು ಒಂದು ಔನ್ಸ್‌ಗೆ (28.34 ಗ್ರಾಂ) ಕ್ರಮವಾಗಿ 2,320 ಡಾಲರ್ (ಅಂದಾಜು ₹1.93 ಲಕ್ಷ) ಮತ್ತು 26.80 (ಅಂದಾಜು ₹2,236) ಡಾಲರ್‌ನಂತೆ ಮಾರಾಟವಾಗಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಬೆಲೆ ಇಳಿಕೆಯಾಗಿದೆ. ಇದರಿಂದ ದೇಶೀಯ ಮಾರುಕಟ್ಟೆಯಲ್ಲೂ ದರ ಕಡಿಮೆಯಾಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.



ವಿದೇಶಿ ವಿದ್ಯಾರ್ಥಿಗಳಿಗೆ ವಾರದಲ್ಲಿ 24 ಗಂಟೆ ದುಡಿಯಲು ಅವಕಾಶ

ಒಟ್ಟಾವ(ಪಿಟಿಐ): ಭಾರತ ಸೇರಿದಂತೆ ವಿವಿಧ ರಾಷ್ಟ್ರಗಳಿಂದ ಕೆನಡಾಗೆ ಬರುವ ವಿದ್ಯಾರ್ಥಿಗಳಿಗೆ ಬರುವ ಸೆಪ್ಟೆಂಬರ್‌ನಿಂದ ವಾರದಲ್ಲಿ ಗರಿಷ್ಠ 24 ಗಂಟೆ ಮಾತ್ರ ಕೆಲಸ ಮಾಡಲು ಅವಕಾಶ ನೀಡಲಾಗುತ್ತದೆ.

'ಕ್ಯಾಂಪಸ್ ಹೊರಗೆ ವಾರದಲ್ಲಿ 20 ಗಂಟೆಗೂ ಹೆಚ್ಚು ಕಾಲ ಕೆಲಸ ಮಾಡುವ ಅವಕಾಶವನ್ನು ಕೆನಡಾದ ತಾತ್ಕಾಲಿಕ ನೀತಿಯೊಂದು ವಿದೇಶಿ ವಿದ್ಯಾರ್ಥಿಗಳಿಗೆ ಕಲ್ಪಿಸಿತ್ತು. ಆದರೆ, ಇದು ಏಪ್ರಿಲ್ 30ಕ್ಕೆ ಕೊನೆಗೊಂಡಿದ್ದು, ಇದನ್ನು ಮುಂದುವರಿಸುತ್ತಿಲ್ಲ ಎಂದು ವಲಸೆ, ನಿರಾಶ್ರಿತರು ಹಾಗೂ ಪೌರತ್ವ ಸಚಿವ ಮಾರ್ಕ್ ಮಿಲ್ಲರ್ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

'ಕೋವಿಡ್ ಸಂದರ್ಭದಲ್ಲಿ ಉಂಟಾದ ಕಾರ್ಮಿಕರ ಕೊರತೆ ನೀಗಿಸಲು ಕೆನಡಾದ ಪ್ರಧಾನಿ ಜಸ್ಟಿನ್ ಟ್ರೂಡೊ ಅವರು ವಿದೇಶಿ ವಿದ್ಯಾರ್ಥಿಗಳಿಗೆ ಈ ಅವಕಾಶ ಕಲ್ಪಿಸಿದ್ದರು.

'ವಿದ್ಯಾಭ್ಯಾಸಕ್ಕಾಗಿ ಕೆನಡಾಗೆ ಬರುವವರು ಕಡ್ಡಾಯವಾಗಿ ಓದಬೇಕು. ಹೀಗಾಗಿ, ವಾರದಲ್ಲಿ 24 ಗಂಟೆಗಳಷ್ಟೇ ಕ್ಯಾಂಪಸ್‌ನಿಂದ ಹೊರಗೆ ದುಡಿಯಲು ಅವಕಾಶ ಕಲ್ಪಿಸಲಾಗಿದೆ' ಎಂದು ಮಿಲ್ಲರ್ ಅವರು ಹೇಳಿದ್ದಾರೆ.

ಶಾ ಹೇಳಿಕೆಯ ತಿರುಚಿದ ವಿಡಿಯೊ ಹಂಚಿಕೆ ಆರೋಪ

ಮೆವಾನಿ ಸಹಾಯಕ ಸೇರಿ ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಮೀಸಲಾತಿ ಕುರಿತ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಹೇಳಿಕೆಯ ತಿರುಚಿದ ವಿಡಿಯೊ ಹಂಚಿಕೊಂಡ ಆರೋಪದ ಮೇರೆಗೆ ಕಾಂಗ್ರೆಸ್ ಶಾಸಕ ಜಿಗ್ನೇಶ್ ಮೆವಾನಿ ಅವರ ಆಪ್ತ ಸಹಾಯಕ (ಪಿಎ) ಸೇರಿದಂತೆ ಇಬ್ಬರನ್ನು ಅಹಮದಾಬಾದ್‌ನ ಸೈಬರ್ ಅಪರಾಧ ವಿಭಾಗವು ಮಂಗಳವಾರ ಬಂಧಿಸಿದೆ.

ವಡ್ಗಾಮ್‌ನ ಶಾಸಕ ಮತ್ತು ದಲಿತ ನಾಯಕ ಜಿಗ್ನೇಶ್ ಮೆವಾನಿ ಅವರ ಪಿಎ ಸತೀಶ್ ವಂಸೋಲಾ ಹಾಗೂ ಎಎಪಿ ನಾಯಕ ಆರ್.ಬಿ.ಬರಿಯಾ ಬಂಧಿತ ಆರೋಪಿಗಳು. ಐಪಿಸಿ ಕಲಂ 153ಎ, 505 (1), 469 ಹಾಗೂ ಐಟಿ ಕಾಯ್ದೆಯ ಅಡಿ ಅವರನ್ನು ಬಂಧಿಸಲಾಗಿದೆ.

ಎಡಿಟ್ ಮಾಡಿದ ಮತ್ತು ತಿರುಚಿದ ವಿಡಿಯೊವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿರುವ ಎರಡು ಪ್ರೊಫೈಲ್‌ಗಳನ್ನು ಗುರುತಿಸಿ, ಈ ಇಬ್ಬರನ್ನು ಬಂಧಿಸಲಾಗಿದೆ ಎಂದು ಸೈಬರ್ ಕ್ರೈಂ ಉಪ ಪೊಲೀಸ್ ಆಯುಕ್ತರಾದ ಲವಿನಾ ಸಿನ್ಹಾ ಹೇಳಿದ್ದಾರೆ. ತಿರುಚಿದ ವಿಡಿಯೊ ಕುರಿತು ತನಿಖೆ ನಡೆಸುತ್ತಿರುವಾಗ, ಈ ಇಬ್ಬರು ಆರೋಪಿಗಳು ವಿಡಿಯೊವನ್ನು ಹಂಚಿಕೊಂಡಿರುವುದು ತಿಳಿದು ಬಂದಿತು ಎಂದು ಅವರು ತಿಳಿಸಿದ್ದಾರೆ.



> ಬಿಜೆಪಿ ಐಟಿ ಘಟಕ ಹಿಂದಿನಿಂದಲೂ ನಕಲಿ ವಿಡಿಯೊಗಳನ್ನು ಹರಡುತ್ತಿದೆ. ಅವರ ವಿರುದ್ಧ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಸಾಮಾನ್ಯ ಜನರನ್ನು ಬಂಧಿಸಿರುವುದು ಸರಿಯಲ್ಲ
> **ಜಿಗ್ನೇಶ್ ಮೆವಾನಿ**
> ಶಾಸಕ

ಧರ್ಮಾಧಾರಿತವಾಗಿ ನೀಡಲಾದ ಮುಸ್ಲಿಮರ ಮೀಸಲಾತಿಯನ್ನು ರದ್ದುಪಡಿಸಲು ಬದ್ಧ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ತೆಲಂಗಾಣದಲ್ಲಿ ಕಳೆದ ವರ್ಷ ಹೇಳಿಕೆ ನೀಡಿದ್ದರು. ಆ ವಿಡಿಯೊವನ್ನು ತಿರುಚಿ, ಎಲ್ಲ ಮೀಸಲಾತಿಯನ್ನು ರದ್ದುಗೊಳಿಸುವುದಾಗಿ ಪ್ರತಿಪಾದಿಸುತ್ತಿದ್ದಾರೆ ಎಂಬಂತೆ ಬಿಂಬಿಸಿ, ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಲಾಗಿದೆ.

16 ಜನರ ವಿರುದ್ಧ ಪ್ರಕರಣ

ಮುಂಬೈ (ಪಿಟಿಐ): ಅಮಿತ್ ಶಾ ಅವರ ಡೀಪ್‌ಫೇಕ್ ವಿಡಿಯೊವನ್ನು ಹಂಚಿಕೊಂಡ ಆರೋಪದ ಮೇಲೆ ಮಹಾರಾಷ್ಟ್ರ ಯುವ ಕಾಂಗ್ರೆಸ್‌ನ ಸಾಮಾಜಿಕ ಮಾಧ್ಯಮ ಘಟಕ ಮತ್ತು ಇತರ 16 ಜನರ ವಿರುದ್ಧ ಮುಂಬೈ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಮುಂಬೈ ಬಿಜೆಪಿ ಘಟಕದ ಕಾರ್ಯಾಧ್ಯಕ್ಷ ಪ್ರತೀಕ್ ಕರ್ಪೆ ಅವರು ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್ ಸೈಬರ್ ಪೊಲೀಸ್ ಠಾಣೆಯಲ್ಲಿ ಸೋಮವಾರ ದೂರು ದಾಖಲಿಸಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಭ್ರೂಣ ಲಿಂಗ ಪತ್ತೆ ಕುರಿತು ಭಾರತೀಯ ವೈದ್ಯಕೀಯ ಸಂಸ್ಥೆ ಅಧ್ಯಕ್ಷ ಅಶೋಕನ್ ಪ್ರಶ್ನೆ

ಪರೀಕ್ಷೆ ಮೂಲಕ ಹೆಣ್ಣು ಮಗುವನ್ನು ರಕ್ಷಿಸಬಾರದೇ?

ನವದೆಹಲಿ(ಪಿಟಿಐ): 'ಗರ್ಭ ಪೂರ್ವ ಮತ್ತು ಪ್ರಸವ ಪೂರ್ವ ಪತ್ತೆ ತಂತ್ರ ವಿಧಾನಗಳ (ಲಿಂಗ ಆಯ್ಕೆ ನಿಷೇಧ) ಕಾಯ್ದೆ (ಪಿಸಿ–ಪಿಎನ್‌ಡಿಟಿ ಆ್ಯಕ್ಟ್) ಪರಿಷ್ಕರಿಸುವ ಕುರಿತಂತೆ ದಾಖಲೆ-ಪತ್ರಯೊಂದನ್ನು ಸಂಸ್ಥೆ ಸಿದ್ಧಪಡಿಸುತ್ತಿದೆ. ಭ್ರೂಣದ ಲಿಂಗ ಪತ್ತೆ ಮಾಡಿ, ಆ ಮೂಲಕ ಹೆಣ್ಣು ಮಗುವಿನ ರಕ್ಷಣೆ ಮಾಡಬಾರದೇಕೆ? ಎಂಬ ಸಲಹೆಯನ್ನು ಈ ದಾಖಲೆಪತ್ರ ಒಳಗೊಂಡಿರಲಿದೆ' ಎಂದು ಭಾರತೀಯ ವೈದ್ಯಕೀಯ ಸಂಸ್ಥೆ(ಐಎಂಎ) ಅಧ್ಯಕ್ಷ ಡಾ.ಆರ್.ವಿ.ಅಶೋಕನ್ ಅವರು ಹೇಳಿದ್ದಾರೆ.

'ಈಗಿರುವ ಕಾಯ್ದೆಯು ಭ್ರೂಣ ಲಿಂಗ ಪತ್ತೆಗಾಗಿ ಪ್ರಸವಪೂರ್ವ ಪತ್ತೆ ತಂತ್ರವಿಧಾನಗಳನ್ನು ಬಳಸುವುದನ್ನು ನಿಷೇಧಿಸುತ್ತದೆ. ಲಿಂಗ ಪತ್ತೆ ನಡೆದಲ್ಲಿ ಅದಕ್ಕೆ ವೈದ್ಯರನ್ನೇ ಹೊಣೆಗಾರರನ್ನಾಗಿ ಮಾಡಲಾಗುತ್ತದೆ. ಹೀಗಾಗಿ, ಭ್ರೂಣದ ಲಿಂಗ ಪತ್ತೆ ಮಾಡಿ, ಆ ಮೂಲಕ ಹೆಣ್ಣು ಮಗುವಿನ ರಕ್ಷಣೆ ಮಾಡಬಾರದೇಕೆ' ಎಂಬ ಪ್ರಶ್ನೆಯನ್ನು ಡಾ.ಅಶೋಕನ್ ಮುಂದಿಟ್ಟಿದ್ದಾರೆ.



ಪಿಟಿಐ ಸಂಪಾದಕರ ಜೊತೆಗೆ ನಡೆಸಿದ ಸಂವಾದದಲ್ಲಿ ಈ ವಿಷಯ ಕುರಿತು ಮಾತನಾಡಿರುವ ಅವರು, 'ಒಂದು ಸಾಮಾಜಿಕ ಅನಿಷ್ಟ ವೈದ್ಯಕೀಯ ಪರಿಹಾರ ಇರಲು ಸಾಧ್ಯವಿಲ್ಲ' ಎಂದೂ ಪ್ರತಿಪಾದಿಸಿದ್ದಾರೆ.

> ಪಿಸಿ–ಪಿಎನ್‌ಡಿಟಿ ಕಾಯ್ದೆ ಸಮರ್ಪಕವಾಗಿಲ್ಲ. ಇದು ದೂರದೃಷ್ಟಿರಹಿತ ಹಾಗೂ ಎನ್‌ಜಿಒಗಳು ರೂಪಿಸಿರುವ ಕಾಯ್ದೆಯಾಗಿದೆ
> **ಡಾ.ಆರ್.ವಿ.ಅಶೋಕನ್**
> ಅಧ್ಯಕ್ಷ, ಐಎಂಎ

'ಲಿಂಗ ಪತ್ತೆಯನ್ನು ನಿಷೇಧಿಸುವ ಕಾನೂನಿನ ಮೂಲಕ ಹೆಣ್ಣು ಭ್ರೂಣ-ಹತ್ಯೆಯನ್ನು ತಡೆಗಟ್ಟಬಹುದು. ಆದರೆ, ಹೆಣ್ಣು ಶಿಶುಗಳ ಹತ್ಯೆ ನಡೆಯುತ್ತದೆ. ಈ ಸಾಮಾಜಿಕ ಅನಿಷ್ಟಕ್ಕೆ ಪರಿಹಾರ ಕಂಡುಕೊಳ್ಳದಿದ್ದರೆ ಏನಾಗುತ್ತದೆ ಗೊತ್ತೇ? ಹೆಣ್ಣು ಭ್ರೂಣ ಹತ್ಯೆ ನಿಯಂತ್ರಣಕ್ಕೆ ಬಂದರೂ ಹೆಣ್ಣು ಶಿಶುಗಳ ಹತ್ಯೆ ಮುಂದುವರಿಯುತ್ತದೆ' ಎಂದು ಅವರು ವಿವರಿಸಿದ್ದಾರೆ.

'ಹೆಣ್ಣು ಭ್ರೂಣ ಹತ್ಯೆ ತಡೆಗಟ್ಟುವ ಕಾರ್ಯದಲ್ಲಿ ನಾವೂ ಭಾಗೀದಾರರು. ಆದರೆ, ಈ ವಿಚಾರವಾಗಿ ಪಿಸಿ–ಪಿಎನ್‌ಡಿಟಿ ಕಾಯ್ದೆ ಅಡಿ ಅನುಸರಿತ್ತಿರುವ ಕಾರ್ಯವಿಧಾನವನ್ನು ನಾವು ಒಪ್ಪುವುದಿಲ್ಲ. ಕಾಯ್ದೆಯಲ್ಲಿ ಹೇಳಿರುವ ಕಾರ್ಯವಿಧಾನದಿಂದ ವೈದ್ಯರು ಸಾಕಷ್ಟು ತೊಂದರೆ ಅನುಭವಿಸುವಂತಾಗಿದೆ' ಎಂದಿದ್ದಾರೆ.

'ಈ ಕಾಯ್ದೆಯನ್ನು ಪರಿಷ್ಕರಣೆ ಮಾಡಬೇಕು ಎಂಬುದು ವೈದ್ಯರ ಬಹುದಿನಗಳ ಬೇಡಿಕೆಯಾಗಿದೆ. ಯಾವುದಾದರೂ ಒಂದು ಕಾನೂನನ್ನು ತೆಗೆದುಹಾಕಬೇಕು ಎಂದಾದಲ್ಲಿ, ಅದು ಪಿಸಿ–ಪಿಎನ್‌ಡಿಟಿ ಕಾಯ್ದೆಯಾಗಿದೆ' ಎಂದು ಡಾ.ಅಶೋಕನ್ ಅವರು ಹೇಳಿದ್ದಾರೆ.

ಕದನ ವಿರಾಮ: ಹಮಾಸ್ ಮೇಲೆ ಅಮೆರಿಕ ಒತ್ತಡ

ಕೈರೊ (ಎಪಿ): ಗಾಜಾದಲ್ಲಿ ಕದನ ವಿರಾಮ ಘೋಷಿಸುವ ಸಂಬಂಧ ಹೊಸ ಪ್ರಸ್ತಾವವನ್ನು ಒಪ್ಪಿಕೊಳ್ಳುವಂತೆ ಹಮಾಸ್ ಮೇಲೆ ಅಮೆರಿಕ ಮತ್ತೆ ಒತ್ತಡ ಹೇರಿದೆ.

ಈ ಮಧ್ಯೆ ಸೋಮವಾರ ಮುಂಜಾನೆ ಗಾಜಾದ ದಕ್ಷಿಣದಲ್ಲಿರುವ ರಫಾಹ್ ನಗರದಲ್ಲಿ ಇಸ್ರೇಲ್ ನಡೆಸಿದ ವಾಯುದಾಳಿಯಲ್ಲಿ ಮಹಿಳೆಯರು, ಹಸುಗೂಸು ಸೇರಿ 26 ಜನರು ಮೃತಪಟ್ಟಿದ್ದಾರೆ ಎಂದು ಆಸ್ಪತ್ರೆ ದಾಖಲೆಗಳು ತಿಳಿಸಿವೆ.

ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕನ್ ಅವರು ಈ ವಾರ ಇಸ್ರೇಲ್‌ಗೆ ಭೇಟಿ ನೀಡಿದ್ದು, ನೂತನ ಪ್ರಸ್ತಾವವನ್ನು ಒಪ್ಪಿಕೊಳ್ಳುವಂತೆ ಹಮಾಸ್ ಬಂಡುಕೋರರನ್ನು ಒತ್ತಾಯಿಸಿದ್ದಾರೆ.

ಹೊಸ ಒಪ್ಪಂದದ ಕರಾರುಗಳನ್ನು ಸಾರ್ವಜನಿಕವಾಗಿ ಹೇಳಿಲ್ಲ. ಆದರೆ ಈಜಿಪ್ಟ್ ಅಧಿಕಾರಿಗಳು ಮತ್ತು ಇಸ್ರೇಲ್ ಮಾಧ್ಯಮಗಳ ಪ್ರಕಾರ, 'ಇಸ್ರೇಲ್ ತನ್ನ ಬೇಡಿಕೆಗಳ ವಿಚಾರದಲ್ಲಿ ಮೃಧು ಧೋರಣೆ ತಾಳಿದೆ. ಕದನ ವಿರಾಮದ ಮೊದಲ ಆರು ವಾರಗಳಲ್ಲಿ ಇಸ್ರೇಲ್ ಕಾರಾಗೃಹಗಳಿಂದ ಬಿಡುಗಡೆ ಮಾಡುವ ನೂರಾರು ಪ್ಯಾಲೆಸ್ಟೀನಿಯನ್ನರ ಬದಲಿಗೆ ಹಮಾಸ್ ಬಿಡುಗಡೆ ಮಾಡಬೇಕಿರುವ ಒತ್ತೆಯಾಳುಗಳ ಸಂಖ್ಯೆಯನ್ನು ಅದು ಕಡಿಮೆ ಮಾಡಿದೆ' ಎಂದು ಅವರು ಹೇಳಿದ್ದಾರೆ.

ಇತ್ತ ಹಮಾಸ್, ಎಲ್ಲಾ ಒತ್ತೆಯಾಳುಗಳನ್ನು ಬಿಡುಗಡೆ ಮಾಡಿದ ಬಳಿಕ ಇಸ್ರೇಲ್ ದಾಳಿಯನ್ನು ನಿಲ್ಲಿಸಬೇಕು ಮತ್ತು ಸೈನಿಕರನ್ನು ವಾಪಸ್ ಕರೆಸಿಕೊಳ್ಳಬೇಕು ಎಂದು ಬೇಡಿಕೆ ಇಟ್ಟಿದೆ. ಆದರೆ ದಾಳಿಗೆ ವಿರಾಮ ಘೋಷಿಸಲು ಮಾತ್ರ ಇಸ್ರೇಲ್ ಒಪ್ಪಿದೆ. ಹೀಗಾಗಿ ಅಮೆರಿಕ, ಈಜಿಪ್ಟ್ ಮತ್ತು ಕತಾರ್ ರಾಷ್ಟ್ರಗಳ ಮಧ್ಯಸ್ಥಿಕೆ ಮಾತುಕತೆಗೆ ನಿರಂತರವಾಗಿ ಅಡ್ಡಿಗಳು ಎದುರಾಗುತ್ತಿವೆ.

ಇಸ್ರೇಲ್‌ನಿಂದ 34 ಸಾವಿರ ಪ್ಯಾಲೆಸ್ಟೀನಿಯನ್ನರ ಹತ್ಯೆ: ಗಾಜಾ

ಕೈರೊ(ರಾಯಿಟರ್ಸ್): 'ಕಳೆದ ವರ್ಷದ ಅಕ್ಟೋಬರ್‌ನಿಂದ ಇಲ್ಲಿಯವರೆಗೆ ಇಸ್ರೇಲ್ ಸೇನೆಯಿಂದ ಗಾಜಾ ಪಟ್ಟಿಯಲ್ಲಿ ಮೃತಪಟ್ಟ ಪ್ಯಾಲೆಸ್ಟೀನಿಯನ್ನರ ಸಂಖ್ಯೆ 34,535ಕ್ಕೂ ಹೆಚ್ಚಾಗಿದೆ. 77,704 ಮಂದಿ ಗಾಯಗೊಂಡಿದ್ದಾರೆ' ಎಂದು ಗಾಜಾದ ಆರೋಗ್ಯ ಸಚಿವಾಲಯ ಮಂಗಳವಾರ ತಿಳಿಸಿದೆ.

'ಕಳೆದ 24 ಗಂಟೆಯಲ್ಲಿ ಇಸ್ರೇಲ್ ಸೇನೆ ನಡೆಸಿದ ದಾಳಿಯಿಂದಾಗಿ 47 ಮಂದಿ ಸಾವಿಗೀಡಾಗಿದ್ದಾರೆ ಮತ್ತು 61 ಮಂದಿ ಗಾಯಗೊಂಡಿದ್ದಾರೆ' ಎಂದೂ ಅದು ಹೇಳಿದೆ. 'ಸುಮಾರು 10 ಸಾವಿರ ಪ್ಯಾಲೆಸ್ಟೀನಿಯರ ಮೃತ ದೇಹಗಳು ದಾಳಿಗೊಳಗಾದ ಕಟ್ಟಡಗಳ ಅವಶೇಷಗಳಡಿ ಸಿಲುಕಿರಬಹುದು' ಎಂದು ಗಾಜಾದ ನಾಗರಿಕ ತುರ್ತು ಸೇವಾ ಸಂಸ್ಥೆ ಅಂದಾಜಿಸಿದ್ದು, 'ಆಸ್ಪತ್ರೆಯ ದಾಖಲಾತಿಗಳಲ್ಲಿ ದೊರೆತ ಸಾವಿನ ಸಂಖ್ಯೆಯನ್ನು ಮಾತ್ರ ಗಾಜಾ ಆರೋಗ್ಯ ಸಚಿವಾಲಯ ಪರಿಷ್ಕರಿಸಿ, ಮಾಹಿತಿ ನೀಡಿದೆ. ಇನ್ನೂ ಪತ್ತೆಯಾಗದ ಮೃತರ ಸಂಖ್ಯೆಯನ್ನು ಒಟ್ಟು ಸಾವಿನ ಸಂಖ್ಯೆಗೆ ಸೇರಿಸಿಲ್ಲ' ಎಂದು ಹೇಳಿದೆ.

'ಸಾಕಷ್ಟು ಉಪಕರಣಗಳು ಲಭ್ಯವಿಲ್ಲದ ಕಾರಣ ಅವಶೇಷಗಳಡಿ ಸಿಲುಕಿರುವ ಮೃತದೇಹಗಳನ್ನು ಹೊರತೆಗೆಯಲು, ಶೋಧ ಕಾರ್ಯಾಚರಣೆ ನಡೆಸಲು ಸಾಧ್ಯವಾಗುತ್ತಿಲ್ಲ. ಈ ಅವಶೇಷಗಳಡಿ ಸಿಲುಕಿರುವ ಮೃತದೇಹಗಳಿಂದ ರೋಗಗಳು ಹರಡಲು ಪ್ರಾರಂಭವಾಗಿದೆ' ಎಂದೂ ಅದು ಹೇಳಿದೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in




ಸುಭಾಷಿತ

ನಿಮ್ಮ ತಪ್ಪುಗಳಿಂದ ಪಾಠ ಕಲಿಯುವುದು ಉತ್ತಮ. ಇತರರ ತಪ್ಪುಗಳಿಂದ ಪಾಠ ಕಲಿಯುವುದು ಅತ್ಯುತ್ತಮ.

–ವಾರನ್ ಬಫೆಟ್

ಚುನಾವಣೆಗಳಲ್ಲಿ ‘ನೋಟಾ’ ಆಯ್ಕೆ ಇನ್ನಷ್ಟು ಪರಿಣಾಮಕಾರಿ ಆಗಿಸಬೇಕು

ಚಲಾವಣೆಯಾದ ಒಟ್ಟು ಮತಗಳಲ್ಲಿ ‘ನೋಟಾ’ (ಮತ ಯಾರಿಗೂ ಇಲ್ಲ) ಸಂಖ್ಯೆ ಹೆಚ್ಚಿದ್ದ ಕ್ಷೇತ್ರಗಳಲ್ಲಿ ಹೊಸದಾಗಿ ಚುನಾವಣೆ ನಡೆಸಬೇಕು ಎಂಬ ಕೋರಿಕೆ ಇರುವ ಅರ್ಜಿಗೆ ಸಂಬಂಧಿಸಿದಂತೆ ಪ್ರತಿಕ್ರಿಯೆ ಸಲ್ಲಿಸಲು ಚುನಾವಣಾ ಆಯೋಗಕ್ಕೆ ಸುಪ್ರೀಂ ಕೋರ್ಟ್ ಸೂಚಿಸಿರುವುದು ಸ್ವಾಗತಾರ್ಹ ನಡೆ. ನೋಟಾ ಮತಗಳ ಸಂಖ್ಯೆಯು ಯಾವುದೇ ಅಭ್ಯರ್ಥಿಗೆ ಸಿಗುವ ಮತಗಳ ಸಂಖ್ಯೆಗಿಂತ ಹೆಚ್ಚಾಗುವ ಸಾಧ್ಯತೆ ಇದ್ದಿರಬಹುದು, ಇಲ್ಲದಿರಲೂಬಹುದು. ಆದರೆ ಸೂರತ್ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯು ಎದುರಾಳಿಗಳೇ ಇಲ್ಲದೆ ಜಯ ಸಾಧಿಸಿರುವ ಹಿನ್ನೆಲೆಯಲ್ಲಿ ನೋಟಾ ಕುರಿತ ಅರ್ಜಿಯು ಮಹತ್ವದ್ದಾಗುತ್ತದೆ. ಬಿಜೆಪಿ ಅಭ್ಯರ್ಥಿಯ ವಿರುದ್ಧವಾಗಿ ನೋಟಾ ಆಯ್ಕೆಗೆ ಮತದಾರರಿಗೆ ಅವಕಾಶ ಕಲ್ಪಿಸಿದ್ದರೆ, ಮತದಾರರ ನಿಜವಾದ ಒಲವು ಏನು ಎಂಬುದು ಗೊತ್ತಾಗುತ್ತಿತ್ತು ಎಂದು ಕೋರ್ಟ್‌ಗೆ ವಿವರಿಸಲಾಗಿದೆ. ಚುನಾವಣಾ ಕಣದಲ್ಲಿ ಇರುವ ಅಭ್ಯರ್ಥಿಗಳ ಪರವಾಗಿ ಚಲಾವಣೆಯಾದ ಮತಗಳಿಗೆ ಎಷ್ಟು ಮೌಲ್ಯ ಇದೆಯೋ ನೋಟಾ ಮತಕ್ಕೂ ಅಷ್ಟೇ ಮೌಲ್ಯ ಇದೆ. ಯಾವುದೇ ಕ್ಷೇತ್ರದಲ್ಲಿ ಮತದಾರರಿಗೆ ಅವರ ಮತ ಚಲಾಯಿಸುವ ಅವಕಾಶವನ್ನು ನಿರಾಕರಿಸಬಾರದು. ಕ್ಷೇತ್ರವೊಂದರಲ್ಲಿ ಒಬ್ಬನೇ ಅಭ್ಯರ್ಥಿ ಕಣದಲ್ಲಿ ಇದ್ದಾಗಲೂ ಆ ಅಭ್ಯರ್ಥಿಯ ಪರವಾಗಿ ಅಥವಾ ವಿರುದ್ಧವಾಗಿ ಮತ ಚಲಾಯಿಸುವ ಅವಕಾಶವನ್ನು ಮತದಾರರಿಗೆ ನೀಡಬೇಕು. ಈ ಹಿನ್ನೆಲೆಯಲ್ಲಿ, ಇಂತಹ ಪರಿಸ್ಥಿತಿಯಲ್ಲಿ ಚುನಾವಣೆ ನಡೆಸದೆಯೇ ಅಭ್ಯರ್ಥಿ ಒಬ್ಬರನ್ನು ಜಯಶಾಲಿ ಎಂದು ಘೋಷಿಸುವುದು ತಪ್ಪಾಗುತ್ತದೆ.



ಚುನಾವಣೆ ನಡೆಸದೆಯೇ ಅಭ್ಯರ್ಥಿಯೊಬ್ಬನನ್ನು ಜಯಶಾಲಿ ಎಂದು ಘೋಷಿಸುವುದರಿಂದ, ಆ ಕ್ಷೇತ್ರದ ಮತದಾರರಿಗೆ ಅವರ ಮತ ಚಲಾಯಿಸುವ ಅವಕಾಶವನ್ನು ನಿರಾಕರಿಸಿದಂತೆ ಆಗುತ್ತದೆ

ನೋಟಾ ಮತಗಳಿಗೆ ಸಂಬಂಧಿಸಿದಂತೆ, ಆ ಮತಗಳು ಇತರ ಅಭ್ಯರ್ಥಿಗಳ ಮೇಲೆ ಯಾವ ರೀತಿಯಲ್ಲಿ ಪರಿಣಾಮ ಉಂಟುಮಾಡಬೇಕು ಎಂಬ ಬಗ್ಗೆ ನಿಯಮಗಳನ್ನು ಕೋರ್ಟ್ ರೂಪಿಸಬೇಕು ಎಂದು ಅರ್ಜಿಯಲ್ಲಿ ಕೋರಲಾಗಿದೆ. ಮತದಾರರ ಸಬಲೀಕರಣದ ಉದ್ದೇಶದಿಂದ 2013ರಲ್ಲಿ ಸುಪ್ರೀಂ ಕೋರ್ಟ್ ಸೂಚನೆ ಆಧರಿಸಿ ನೋಟಾ ಆಯ್ಕೆಯನ್ನು ಜಾರಿಗೆ ತರಲಾಯಿತು. ಕಣದಲ್ಲಿ ಇರುವ ಯಾವ ಅಭ್ಯರ್ಥಿಯೂ ಸೂಕ್ತ ಅಲ್ಲ ಎಂದು ಹೇಳಲು ಮತದಾರರಿಗೆ ಇದು ಈಗ ಸಾಂಕೇತಿಕ ಅಸ್ತ್ರದ ಮಾದರಿಯಲ್ಲಿ ಮಾತ್ರ ಬಳಕೆಗೆ ಲಭ್ಯವಿದೆ. ಚುನಾವಣಾ ಪ್ರಕ್ರಿಯೆಯ ಮೇಲೆ ಇದು ಯಾವುದೇ ಪರಿಣಾಮವನ್ನು ಉಂಟುಮಾಡುವುದಿಲ್ಲ. ನೋಟಾವನ್ನು ಕಾಲ್ಪನಿಕ ಅಭ್ಯರ್ಥಿ ಎಂದು ಗುರುತಿಸಿ, ಆ ಅಭ್ಯರ್ಥಿಯು (ಅಂದರೆ, ನೋಟಾ ಮತಗಳು) ಇತರ ಅಭ್ಯರ್ಥಿಗಳಿಗಿಂತ ಹೆಚ್ಚಿನ ಮತಗಳನ್ನು ಪಡೆದಲ್ಲಿ, ಆ ಕ್ಷೇತ್ರದಲ್ಲಿ ಹೊಸದಾಗಿ ಚುನಾವಣೆ ನಡೆಸಲು ಮಹಾರಾಷ್ಟ್ರ ಮತ್ತು ಹರಿಯಾಣದಲ್ಲಿ ರಾಜ್ಯ ಚುನಾವಣಾ ಆಯೋಗಗಳು ಅಧಿಸೂಚನೆ ಹೊರಡಿಸಿವೆ. ಇದೇ ಬಗೆಯ ನಿಯಮಗಳು ಕೆಲವು ದೇಶಗಳಲ್ಲಿಯೂ ಜಾರಿಯಲ್ಲಿ ಇವೆ. ಹೀಗಾಗಿ, ಈ ನಿಯಮಗಳನ್ನು ಇತರ ರಾಜ್ಯಗಳಿಗೂ ವಿಸ್ತರಿಸಬೇಕು, ರಾಷ್ಟ್ರ ಮಟ್ಟದಲ್ಲಿಯೂ ಇವನ್ನು ಅನ್ವಯಿಸಬೇಕು ಎಂದು ಅರ್ಜಿಯಲ್ಲಿ ಕೋರಲಾಗಿದೆ. ನೋಟಾಗಿಂತ ಕಡಿಮೆ ಸಂಖ್ಯೆಯಲ್ಲಿ ಮತಗಳನ್ನು ಪಡೆಯುವ ಅಭ್ಯರ್ಥಿಯನ್ನು ವಿಜಯಿ ಎಂದು ಘೋಷಿಸುವುದು ನೋಟಾ ಉದ್ದೇಶವನ್ನೇ ನಿರರ್ಥಕಗೊಳಿಸುತ್ತದೆ ಎಂದು ಅರ್ಜಿಯಲ್ಲಿ ವಾದಿಸಲಾಗಿದೆ.

ನೋಟಾ ಆಯ್ಕೆಯನ್ನು ನೀಡಿದ ನಂತರದಲ್ಲಿ, ಆ ಆಯ್ಕೆಯನ್ನು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ಈಗ ನೋಟಾ ಮತಗಳನ್ನು, ಅದಕ್ಕಿಂತ ಕಡಿಮೆ ಮತಗಳನ್ನು ಪಡೆದ ಅಭ್ಯರ್ಥಿಯನ್ನು ಹಾಸ್ಯಮಾಡಲು ಮಾತ್ರ ಉಲ್ಲೇಖಿಸಲಾಗುತ್ತಿದೆ. ಯಾರಿಗೂ ಮತ ಇಲ್ಲ ಎಂಬ ಆಯ್ಕೆಯನ್ನು ನೀಡಿದ ನಂತರದಲ್ಲಿ, ಅದು ಹೇಗೆ ಕೆಲಸ ಮಾಡಬೇಕು ಎಂಬ ವಿಚಾರವಾಗಿಯೂ ಒಂದಿಷ್ಟು ನಿಯಮಗಳು ಇರುವುದು ಒಳಿತು. ನೋಟಾ ಆಯ್ಕೆಯ ಕಾರಣದಿಂದಾಗಿ ಮತದಾನದ ಪ್ರಮಾಣವೇನೂ ಹೆಚ್ಚಳ ಕಂಡಿಲ್ಲ; ರಾಜಕೀಯ ಪಕ್ಷಗಳು ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಪ್ರಕ್ರಿಯೆಯ ಮೇಲೆಯೂ ಅದು ಪರಿಣಾಮ ಬೀರಿಲ್ಲ ಎಂದು ಅರ್ಜಿಯಲ್ಲಿ ಹೇಳಲಾಗಿದೆ. ನೋಟಾ ಆಯ್ಕೆಯು ಇನ್ನಷ್ಟು ಹೆಚ್ಚು ಉತ್ತಮವಾಗಿ ಬಳಕೆಯಾಗುವಂತೆ ಮಾಡಲು ಚುನಾವಣಾ ಆಯೋಗವು ದಾರಿ ಹುಡುಕಬೇಕು. ಕಳೆದ ಲೋಕಸಭಾ ಚುನಾವಣೆಯಲ್ಲಿ ಶೇಕಡ 1ರಷ್ಟು ಮತಗಳನ್ನು ನೋಟಾ ಪಡೆದಿತ್ತು. ಶೇ 1ಕ್ಕಿಂತ ಕಡಿಮೆ ಮತಗಳನ್ನು ಪಡೆದಿರುವ ರಾಜಕೀಯ ಪಕ್ಷಗಳೂ ಇವೆ. ನೋಟಾ ಎಂಬುದು ಮತದಾರರಿಗೆ ಒಂದು ಪರಿಣಾಮಕಾರಿ ಅಸ್ತ್ರವಾಗುವಂತೆ ಆಯೋಗವು ನಿಯಮ ರೂಪಿಸಬೇಕು. ಅಂತಹ ನಿಯಮಗಳು ರೂಪ ಪಡೆಯುವುದಕ್ಕೆ ಸುಪ್ರೀಂ ಕೋರ್ಟ್ ಒತ್ತಾಸೆಯಾಗಿ ನಿಲ್ಲಬೇಕು.

ಜೈವಿಕ ಬಲವರ್ಧಿತ ಬೆಳೆಗೆ ಹೆಚ್ಚು ಮನ್ನಣೆ ದೊರೆತರೆ ಮಾತ್ರ ಪರಿಹಾರ

ಸೊರಗುತ್ತಿರುವ ಪೋಷಕಾಂಶ ಭದ್ರತೆ



ವಿಶ್ಲೇಷಣೆ

ಎಚ್.ಆರ್.ಕೃಷ್ಣಮೂರ್ತಿ

ನಮ್ಮ ದೇಶದಲ್ಲಿ ಹಸಿರುಕ್ರಾಂತಿ ಪ್ರಾರಂಭವಾದದ್ದು 1966– 67ರಲ್ಲಿ. ಅಧಿಕ ಇಳುವರಿಯ ಮಿಶ್ರತಳಿಗಳು, ರಾಸಾಯನಿಕ ಗೊಬ್ಬರ, ವಿಪುಲ ಪ್ರಮಾಣದಲ್ಲಿ ಕೀಟನಾಶಕಗಳು, ವಿಸ್ತರಿಸಿದ ನೀರಾವರಿ ಸೌಲಭ್ಯದಂತಹವನ್ನು ಒಳಗೊಂಡಿದ್ದ ಹಸಿರುಕ್ರಾಂತಿಯ ಮುಖ್ಯ ಉದ್ದೇಶವು ಏರುತ್ತಿದ್ದ ಜನಸಂಖ್ಯೆಯ ಬೇಡಿಕೆಗೆ ಅನುಸಾರವಾಗಿ ಆಹಾರ ಉತ್ಪಾದನೆಯನ್ನು ಹೆಚ್ಚಿಸುವುದು. ಈ ಎಲ್ಲ ಕ್ರಮಗಳು ಒಟ್ಟಾಗಿ ಸೇರಿ ನಿರೀಕ್ಷಿತ ಫಲ ನೀಡಿದುದರ ಪರಿಣಾಮವಾಗಿ, ದೇಶ ಇಂದು ಆಹಾರ ಭದ್ರತೆಯನ್ನು ಬಹುತೇಕ ಸಾಧಿಸಿದೆ.

2023ರ ನವೆಂಬರ್ ತಿಂಗಳ ‘ನೇಚರ್’ ಸಂಶೋಧನಾ ಜರ್ನಲ್‌ನ ‘ಸೈಂಟಿಫಿಕ್ ರಿಪೋರ್ಟಿಂಗ್’ ವಿಭಾಗದಲ್ಲಿ, ಭಾರತೀಯ ಕೃಷಿ ಸಂಶೋಧನಾ ಮಂಡಳಿ, ಪಶ್ಚಿಮ ಬಂಗಾಳದ ವಿಧಾನಚಂದ್ರ ಕೃಷಿ ವಿಶ್ವವಿದ್ಯಾಲಯ ಮತ್ತು ಹೈದರಾಬಾದ್‌ನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ನ್ಯೂಟ್ರಿಷನ್ ಸಂಸ್ಥೆಯ 11 ಕೃಷಿ ವಿಜ್ಞಾನಿಗಳು ಒಟ್ಟಾಗಿ ಸೇರಿ, ವಿಜ್ಞಾನಿ ಸೋವನ್ ದೇವನಾಥ್ ಅವರ ನೇತೃತ್ವದಲ್ಲಿ ನಡೆಸಿದ ಅಧ್ಯಯನದ ವರದಿಯೊಂದು ಪ್ರಕಟವಾಗಿದೆ. ಹಸಿರುಕ್ರಾಂತಿಯ ಮೂಲಕ ಆಹಾರ ಉತ್ಪಾದನೆಯನ್ನು ಹೆಚ್ಚಿಸುವ ಭರದಲ್ಲಿ, ಆಹಾರಧಾನ್ಯಗಳ ಅದರಲ್ಲೂ ಮುಖ್ಯವಾಗಿ ಅಕ್ಕಿ ಮತ್ತು ಗೋಧಿಯಲ್ಲಿನ ಪೋಷಕಾಂಶಗಳನ್ನು ನಾವು ಹೇಗೆ ಕಳೆದುಕೊಂಡಿದ್ದೇವೆ, 2040ರ ಸುಮಾರಿಗೆ ಈ ಎರಡೂ ಆಹಾರಧಾನ್ಯಗಳು ತಮ್ಮ ಪೋಷಕಾಂಶ ಮೌಲ್ಯವನ್ನು ಕಳೆದುಕೊಂಡು ಹೇಗೆ ನಿಸ್ಸಾರವಾಗಲಿವೆ ಎಂಬುದರ ಮೇಲೆ ಬೆಳಕು ಚೆಲ್ಲಿದೆ.

ಹಸಿರುಕ್ರಾಂತಿಯ ಕೃಷಿ ವಿಧಾನಗಳು, ಪರಿಸರ ಮತ್ತು ಆಹಾರ ವ್ಯವಸ್ಥೆಯಲ್ಲಿ ತಂದ ಬದಲಾವಣೆಗಳು ಮತ್ತು ಅವುಗಳ ಮೇಲಿನ ಪರಿಣಾಮಗಳಿಗೆ ಸಂಬಂಧಿಸಿದಂತೆ ವ್ಯಾಪಕವಾದ ಟೀಕೆ, ಟಿಪ್ಪಣಿಗಳು ಬಂದಿವೆ. ಆದರೆ ಈ ಎಲ್ಲ ದೂರು, ಆರೋಪ, ಆಕ್ಷೇಪಗಳು ಮಣ್ಣಿನ ಗುಣಮಟ್ಟದ ಅವನತಿ, ಮೇಲ್ಮೈನೀರಿನ ಮಾಲಿನ್ಯ, ಅಂತರ್ಜಲ ಮಟ್ಟದ ಕುಸಿತ, ಜೈವಿಕ ವೈವಿಧ್ಯದ ನಾಶದಂತಹವುಗಳನ್ನು ದಾಟಿ ಮುಂದೆ ಹೋಗಿಲ್ಲ. ಆದರೆ ಇದೀಗ ಈ 11 ಕೃಷಿ ವಿಜ್ಞಾನಿಗಳು ನಡೆಸಿರುವ ಸಂಶೋಧನಾ ಅಧ್ಯಯನವು ಮೊದಲ ಬಾರಿಗೆ, ಭಾರತದ ‘ಪೋಷಕಾಂಶಗಳ ಭದ್ರತೆ’ಯ (ನ್ಯೂಟ್ರಿಷನಲ್ ಸೆಕ್ಯೂರಿಟಿ) ಮೇಲೆ ಹಸಿರುಕ್ರಾಂತಿಯ ಪರಿಣಾಮವನ್ನು ವಿಶ್ಲೇಷಿಸಿದೆ.

ಭಾರತೀಯ ಕೃಷಿ ಸಂಶೋಧನಾ ಮಂಡಳಿಯ ಮೂಲಗಳ ಪ್ರಕಾರ, 1966–67ರಿಂದ 2010ರವರೆಗೂ ಹೆಚ್ಚು ಇಳುವರಿ ನೀಡುವ ಭತ್ತ ಮತ್ತು ಗೋಧಿಯ ಒಟ್ಟು 1,500 ಸುಧಾರಿತ ತಳಿಗಳನ್ನು ದೇಶದಾದ್ಯಂತ ಕೃಷಿಗಾಗಿ ಬಿಡುಗಡೆ ಮಾಡಲಾಗಿದೆ. ವಿವಿಧ ರಾಜ್ಯಗಳ ಕೃಷಿ ವಿಶ್ವವಿದ್ಯಾಲಯಗಳು, ಸಂಶೋಧನಾ ಸಂಸ್ಥೆಗಳು, ಮಿಶ್ರತಳಿ ಅಭಿವೃದ್ಧಿಯಲ್ಲಿ ಸಕ್ರಿಯವಾಗಿರುವ ರೈತ ಸಂಘಟನೆಗಳೊಡನೆ ಸಮಾಲೋಚನೆ ನಡೆಸಿದ ಸೋವನ್ ಅವರ ತಂಡ, ಹಿಂದಿನ 50 ವರ್ಷಗಳಲ್ಲಿ ಬಳಕೆಗೆ ಬಂದಿರುವ, ಅತ್ಯುತ್ತಮ ಮತ್ತು ಅತಿಮಹತ್ವದ 16 ಭತ್ತದ ತಳಿಗಳು ಮತ್ತು 18 ಗೋಧಿಯ ತಳಿಗಳನ್ನು ಅಧ್ಯಯನಕ್ಕಾಗಿ ಆಯ್ಕೆ ಮಾಡಿತು. ಈ ಆಯ್ದ ‘ಲ್ಯಾಂಡ್ ಮಾರ್ಕ್’ ತಳಿಗಳ ಬೀಜಗಳನ್ನು ಜೀನ್‌ಬ್ಯಾಂಕ್‌ನಿಂದ ಪಡೆದು, 2018– 20ರ ಅವಧಿಯಲ್ಲಿ ಕೃಷಿಭೂಮಿಯಲ್ಲಿ ಬೆಳೆಸಿ, ಪಡೆದ ಧಾನ್ಯಗಳ ‘ಪೋಷಕಾಂಶ ಪ್ರೊಫೈಲ್’ ಸಿದ್ಧಪಡಿಸಲಾಯಿತು. ಅದರಿಂದ, ದೇಶದ ಪ್ರಮುಖ ಆಹಾರಧಾನ್ಯಗಳಾದ ಅಕ್ಕಿ ಮತ್ತು ಗೋಧಿಯು ತಮ್ಮ ಆಹಾರದ ಮೌಲ್ಯವನ್ನು ಗಮನಾರ್ಹವಾಗಿ ಕಳೆದುಕೊಂಡಿರುವುದು ತಿಳಿದುಬಂದಿದೆ. ಉದಾಹರಣೆಗೆ, ಹಿಂದಿನ ಸುಮಾರು 50 ವರ್ಷಗಳಲ್ಲಿ ಅಕ್ಕಿಯಲ್ಲಿ ಸತು ಮತ್ತು ಕಬ್ಬಿಣದ ಅಂಶ ಶೇಕಡ 33 ಮತ್ತು ಶೇ 27ರಷ್ಟು ಕಡಿಮೆಯಾಗಿದೆ. ಗೋಧಿಯಲ್ಲಿ ಶೇ 30 ಮತ್ತು 19ರಷ್ಟು ಕಡಿಮೆಯಾಗಿದೆ. ಇವೇ ಅಲ್ಲದೆ ಕ್ಯಾಲ್ಸಿಯಂ, ಸಿಲಿಕಾನ್, ರಂಜಕ, ವೆನೇಡಿಯಮ್ ಅಂತಹವುಗಳ ಪ್ರಮಾಣವೂ ಕಡಿಮೆಯಾಗಿದೆ.

ಮೂಳೆಗಳು ಉತ್ತಮವಾಗಿ ರೂಪುಗೊಳ್ಳಲು ರಂಜಕ, ಕ್ಯಾಲ್ಸಿಯಂ, ಸಿಲಿಕಾನ್, ವೆನೇಡಿಯಮ್ ಬೇಕು. ರೋಗನಿರೋಧಕ ಪ್ರತಿರಕ್ಷೆ, ಸಂತಾನೋತ್ಪಾದನೆ ಮತ್ತು ನರಮಂಡಲ ವ್ಯವಸ್ಥೆಯ ಬೆಳವಣಿಗೆಗೆ ಸತು ಅಗತ್ಯ. ರಕ್ತದಲ್ಲಿನ ಹಿಮೋಗ್ಲೋಬಿನ್ ಉತ್ಪಾದನೆಗೆ ಕಬ್ಬಿಣ ಬೇಕು. ಅಕ್ಕಿ ಮತ್ತು ಗೋಧಿಯಲ್ಲಿ ಈ ಮೂಲವಸ್ತುಗಳ ಕೊರತೆಯುಂಟಾದಾಗ ನರಮಂಡಲ, ಸಂತಾನೋತ್ಪಾದನೆ, ಪ್ರತಿರಕ್ಷೆ, ಸ್ನಾಯು– ಅಸ್ಥಿಪಂಜರ ವ್ಯವಸ್ಥೆಗಳಲ್ಲಿ ತೊಂದರೆ ಕಂಡುಬರುತ್ತದೆ. ವಿಷಕಾರಿ ಮೂಲಧಾತುಗಳ ಪ್ರಮಾಣ ಏರುತ್ತಿರುವುದನ್ನೂ ಸೋವನ್ ಅವರ ತಂಡ ದಾಖಲಿಸಿದೆ. ಉದಾಹರಣೆಗೆ, ಅಕ್ಕಿಯಲ್ಲಿ ಆರ್ಸೆನಿಕ್ ಪ್ರಮಾಣ ಶೇ 1,493ರಷ್ಟು ಹೆಚ್ಚಾಗಿದೆಯೆಂದು ಸಂಶೋಧನಾ ಲೇಖನ ತಿಳಿಸುತ್ತದೆ!

‘ಭತ್ತ, ಗೋಧಿಯಂತಹ ಆಹಾರ ಸಸ್ಯಗಳಲ್ಲಿ ಸಂಕೀರ್ಣವಾದ, ಅಂತರ್ಗತವಾದ ನಿಯಂತ್ರಣ ವ್ಯವಸ್ಥೆಗಳಿವೆ. ಈ ವ್ಯವಸ್ಥೆಯು ಮಣ್ಣಿನಿಂದ ಖನಿಜ, ಪೋಷಕಾಂಶಗಳನ್ನು ಸಮತೋಲಿತ ಪ್ರಮಾಣದಲ್ಲಿ ಹೀರಿಕೊಂಡು, ಧಾನ್ಯಗಳಲ್ಲಿ ಶೇಖರವಾಗುವಂತೆ ಮಾಡುತ್ತದೆ. ವಿಷಯುಕ್ತ ಪದಾರ್ಥಗಳನ್ನು ಶೋಧಿಸಿ ಹೊರಗಿಡುವ ಕೆಲಸವನ್ನೂ ಮಾಡುತ್ತದೆ. ಅಧಿಕ ಇಳುವರಿಯ ಮಿಶ್ರ ತಳಿಗಳನ್ನು ಅಭಿವೃದ್ಧಿಪಡಿಸುವ ಭರದಲ್ಲಿ, ಇಂತಹ ನಿಯಂತ್ರಣ ವ್ಯವಸ್ಥೆಗೆ ಕಾರಣವಾದ ವಿಶಿಷ್ಟ ಜೀನೀಯ ಸ್ವಭಾವಗಳಲ್ಲಿ ಏರುಪೇರಾಗಿರುವುದೇ ಪೋಷಕಾಂಶಗಳ ಕೊರತೆಗೆ ಕಾರಣ’ ಎನ್ನುತ್ತಾರೆ ನ್ಯಾಷನಲ್ ರೈಸ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನ ಕೃಷಿ ವಿಜ್ಞಾನಿ ರುಬಿನಾ ಖಾನಮ್.



ನಮ್ಮ ದೇಶದಲ್ಲಿ ಮೊದಲ ಬಾರಿಗೆ ‘ನ್ಯಾಷನಲ್ ಫ್ಯಾಮಿಲಿ ಹೆಲ್ತ್ ಸರ್ವೆ’ ನಡೆದದ್ದು 1992- 93ರಲ್ಲಿ. ಈ ಸಮೀಕ್ಷೆಯ ಫಲಿತಾಂಶಗಳು ಜನಸಂಖ್ಯೆಯಲ್ಲಿ ಅದರಲ್ಲೂ ಮುಖ್ಯವಾಗಿ ಮಕ್ಕಳಲ್ಲಿ ನ್ಯೂನಪೋಷಣೆಯ ಸಮಸ್ಯೆಯನ್ನು ಎತ್ತಿ ತೋರಿದವು. ಅದೇ ಸಮಯದಲ್ಲಿ ಹಸಿರುಕ್ರಾಂತಿಯ ಭಾಗವಾಗಿ ಕೃಷಿಗೆ ಬಿಡುಗಡೆ ಆಗಿದ್ದ ಹೊಸ ತಳಿಗಳ ಧಾನ್ಯಗಳಲ್ಲಿ ಪೋಷಕಾಂಶಗಳು ಕ್ಷೀಣಿಸುತ್ತಿದ್ದ ಬಗ್ಗೆ ಅಲ್ಪಸ್ವಲ್ಪ ಮಾಹಿತಿಯಿದ್ದರೂ ಸರ್ಕಾರ ಸೂಕ್ತ ಗಮನಹರಿಸಲಿಲ್ಲ ಎಂಬ ಟೀಕೆಯಿದೆ.

ಇಳುವರಿಯೂ ಹೆಚ್ಚಿರಬೇಕು, ಪೋಷಕಾಂಶಗಳ ಕೊರತೆಯೂ ಇರಬಾರದು. ಈ ಗುರಿಯನ್ನು ಸಾಧಿಸಲು ಹಿಂದಿನ ಸುಮಾರು 15 ವರ್ಷಗಳಿಂದ ಆಹಾರಧಾನ್ಯಗಳ ‘ಜೈವಿಕ ಬಲವರ್ಧನೆ’ಯ (ಬಯೊಫೋರ್ಟಿಫಿಕೇಷನ್) ಪ್ರಯತ್ನಗಳು ನಡೆಯುತ್ತಿವೆ. ಹಿಂದಿನ ಹತ್ತು ವರ್ಷಗಳ ಅವಧಿಯಲ್ಲಿ ಈ ಯೋಜನೆಯಡಿಯಲ್ಲಿ ಇಂಡಿಯನ್ ಕೌನ್ಸಿಲ್ ಆಫ್ ಅಗ್ರಿಕಲ್ಚರಲ್ ರಿಸರ್ಚ್ (ಐಸಿಎಆರ್) ಮತ್ತು ಕೃಷಿ ವಿಶ್ವವಿದ್ಯಾಲಯದ ವಿಜ್ಞಾನಿಗಳು ಹಸಿರುಕ್ರಾಂತಿಗೂ ಮುಂಚೆ ಬಳಕೆಯಲ್ಲಿದ್ದ, ಇಂದಿಗೂ ವನ್ಯಸ್ಥಿತಿಯಲ್ಲಿರುವ, ಉತ್ತಮ ಪೋಷಕಾಂಶಗಳುಳ್ಳ ತಳಿಗಳಿಗಾಗಿ ವ್ಯವಸ್ಥಿತ ಹುಡುಕಾಟ ನಡೆಸಿ, ಅವುಗಳನ್ನು ಅಧಿಕ ಇಳುವರಿಯ ತಳಿಗಳೊಡನೆ ಅಡ್ಡಹಾಯಿಸುವ ಪ್ರಯತ್ನಗಳನ್ನು ನಿರಂತರವಾಗಿ ಮಾಡುತ್ತಿದ್ದಾರೆ.

2016ರಿಂದ ಈಚೆಗೆ ಐಸಿಎಆರ್ ಅಧೀನದ, ಕಟಕ್‌ನಲ್ಲಿರುವ ನ್ಯಾಷನಲ್ ರೈಸ್ ರಿಸರ್ಚ್ ಇನ್‌ಸ್ಟಿಟ್ಯೂಟ್, ಹೈದರಾಬಾದ್‌ನಲ್ಲಿರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ರೈಸ್ ರಿಸರ್ಚ್ ಮತ್ತು ರಾಯ್‌ಪುರದಲ್ಲಿರುವ ಇಂದಿರಾ ಗಾಂಧಿ ಕೃಷಿ ವಿಶ್ವವಿದ್ಯಾಲಯದ ವಿಜ್ಞಾನಿಗಳು ಒಟ್ಟಾಗಿ ಸೇರಿ, ಸತು ಮತ್ತು ಪ್ರೋಟೀನ್ ಉತ್ತಮ ಪ್ರಮಾಣದಲ್ಲಿರುವ 10 ಭತ್ತದ ತಳಿಗಳನ್ನು ಕೃಷಿಗಾಗಿ ಬಿಡುಗಡೆ ಮಾಡಿದ್ದಾರೆ. ಒಟ್ಟಾರೆಯಾಗಿ ಐಸಿಎಆರ್ ಇದುವರೆವಿಗೂ 142 ಜೈವಿಕ ಬಲವರ್ಧಿತ ತಳಿಗಳನ್ನು ಅಭಿವೃದ್ಧಿ ಮಾಡಿ ಬಿಡುಗಡೆ ಮಾಡಿದ್ದು, ಅವುಗಳಲ್ಲಿ ಭತ್ತ (10), ಗೋಧಿ (43), ಮುಸುಕಿನ ಜೋಳ (20), ಸಜ್ಜೆ (11), ಸಾಮೆ (13) ಮತ್ತು ತೋಟಗಾರಿಕಾ ಬೆಳೆಗಳು (18) ಸೇರಿವೆ. ಕೇಂದ್ರ ಸರ್ಕಾರವು 2023ರ ಡಿಸೆಂಬರ್ 8ರಂದು ಲೋಕಸಭೆಗೆ ನೀಡಿದ ಮಾಹಿತಿಯಂತೆ, ಸದ್ಯದಲ್ಲಿ ಜೈವಿಕ ಬಲವರ್ಧನೆಯ ಪ್ರಯತ್ನಗಳ ಗಮನವು ಸತು, ಕಬ್ಬಿಣ ಮತ್ತು ಪ್ರೋಟೀನ್ ಮೇಲಿದೆ. ಅದನ್ನು ಅತ್ಯಾವಶ್ಯಕ ಮೂಲಧಾತುಗಳಾದ ಕ್ಯಾಲ್ಸಿಯಂ, ತಾಮ್ರ, ಮ್ಯಾಂಗನೀಸ್‌ನಂತಹವುಗಳಿಗೂ ವಿಸ್ತರಿಸಬೇಕೆಂಬುದು ವಿಜ್ಞಾನಿಗಳ ಒತ್ತಾಯ.

ಉತ್ತಮ ಪ್ರಮಾಣದಲ್ಲಿ ಪೋಷಕಾಂಶಗಳಿದ್ದು, ಹೆಚ್ಚು ಇಳುವರಿ ನೀಡುವ ಮಿಶ್ರತಳಿಗಳನ್ನು ಅಭಿವೃದ್ಧಿಪಡಿಸುವುದು ಒಂದು ಸವಾಲಾದರೆ, ಅಂತಹ ತಳಿಗಳನ್ನು ಬಳಸಿ, ಬೆಳೆ ತೆಗೆಯುವಂತೆ ರೈತರ ಮನವೊಲಿಸುವುದು ಅದಕ್ಕಿಂತ ದೊಡ್ಡ ಸವಾಲೆಂಬ ಅಭಿಪ್ರಾಯವಿದೆ. 2017– 23ರ ಆರು ವರ್ಷಗಳ ಅವಧಿಯಲ್ಲಿ, ದೇಶದ ಕೃಷಿಭೂಮಿಯ ಶೇ 6ರಷ್ಟರಲ್ಲಿ ಮಾತ್ರ ಜೈವಿಕ ಬಲವರ್ಧಿತ ಬೆಳೆಗಳನ್ನು ಬೆಳೆಯಲಾಗಿದೆ. ಸೂಕ್ತ ಪ್ರೋತ್ಸಾಹಕಗಳಿಂದ ರೈತರ ಮನವೊಲಿಸಿ, ಈ ಪ್ರಮಾಣವನ್ನು ತ್ವರಿತ ಗತಿಯಲ್ಲಿ ಹೆಚ್ಚಿಸಿದರೆ ಮಾತ್ರ, ನಮ್ಮ ದೇಶದಲ್ಲಿರುವ ನ್ಯೂನಪೋಷಣೆ ಮತ್ತು ಸೂಕ್ಷ್ಮ ಪೋಷಕಾಂಶಗಳ ಸಮಸ್ಯೆಯನ್ನು ಸಮರ್ಥವಾಗಿ ಎದುರಿಸಲು ಸಾಧ್ಯವಾಗುತ್ತದೆ.

ಚುರುಮುರಿ



ಮತಭ್ರಮಣೆ

• ಮಣ್ಣೆ ರಾಜು

ಸಂಬಂಧಿಕರ ಮನೆಯ ಮದುವೆಗೆಂದು ಮೂರ್ನಾಲ್ಕು ದಿನ ಹೋಗಿ ವಾಪಸ್ ಬಂದ ಶಂಕ್ರಿ ಕುಟುಂಬಕ್ಕೆ ಆಘಾತ ಕಾದಿತ್ತು. ಶಾಕ್ ಆಗಲಿ ಅಂತಲೇ ಯಾರೋ ಮನೆ ಕಾಂಪೌಂಡ್ ಮೇಲೆ, ‘ಮತದಾನ ಮಾಡದ ನೀವು ನಾಲಾಯಕ್ ನಾಗರಿಕರು, ಮತಹೀನರು. ನಿಮಗೆ ಧಿಕ್ಕಾರ...’ ಎಂಬ ಪೋಸ್ಟರ್ ಅಂಟಿಸಿದ್ದರು.

‘ಪೋಸ್ಟರ್ ಅಂಟಿಸಿದವರ ವಿರುದ್ಧ ಆಯೋಗಕ್ಕೆ ದೂರು ಕೊಡಿ’ ಅಂದಳು ಸುಮಿ.

‘ಬೇಡ, ನಾವು ವೋಟ್ ಮಾಡಿಲ್ಲ ಅಂತ ಚುನಾವಣಾ ಆಯೋಗ ನಮಗೇ ಛೀಮಾರಿ ಹಾಕಬಹುದು’ ಶಂಕ್ರಿ ಹೆದರಿಸಿದ.

‘ಪೋಲಿಂಗ್ ದಿನ ಆಫೀಸಿಗೆ ರಜೆ ಅಂತ ಫ್ಯಾಮಿಲಿ ಸಮೇತ ಟೂರ್ ಹೋಗಿದ್ವಿ, ನಮ್ಮ ಕಾಂಪೌಂಡ್ ಮೇಲೂ ಇಂಥದ್ದೇ ಪೋಸ್ಟರ್ ಅಂಟಿಸಿದ್ದರು ಕಣ್ರೀ’ ಎಂದು ಬಂದ ಒಬ್ಬ.

‘ಮತದಾನದ ಮಹತ್ವ ಗೊತ್ತೇನ್ರೀ ನಿಮಗೆ? ನಿಮ್ಮಂತಹ ಮತಭ್ರಮಣೆ, ಮತಹೀನ ಮನಃಸ್ಥಿತಿಯವರಿಂದಲೇ ಪೋಲಿಂಗ್ ಪರ್ಸೆಂಟೇಜ್ ಕಮ್ಮಿಯಾಗ್ತಿರೋದು’ ಮತ್ತೊಬ್ಬ ಬಂದು ರೇಗಿದ.

‘ಮದುವೆ, ಗೃಹಪ್ರವೇಶದಂತಹ ಶುಭ ಕಾರ್ಯ ನಡೆಯುವ ಶುಭದಿನವೇ ಮತದಾನಕ್ಕೆ ದಿನ ನಿಗದಿ ಮಾಡಿದ್ರೆ ನಾವೇನು ಮಾಡೋಣ?’ ಸುಮಿನೂ ರೇಗಿದಳು.

‘ಶುಭ ಕಾರ್ಯಗಳಿಲ್ಲದ ಅಮಾವಾಸ್ಯೆ, ಆಷಾಢದಲ್ಲಿ ಎಲೆಕ್ಷನ್ ಡೇಟ್ ಫಿಕ್ಸ್ ಮಾಡಿದ್ರೆ ನಾವೂ ವೋಟ್ ಮಾಡಬಹುದಿತ್ತು’ ಶಂಕ್ರಿ ಹೇಳಿದ.

‘ಶುಭ ಮುಹೂರ್ತದಲ್ಲಿ ಮತದಾನ ಮಾಡಿದ್ರೆ ಸುಭದ್ರ ಸರ್ಕಾರ ರಚನೆ ಆಗುತ್ತೆ ಅಂತ ಚುನಾವಣಾ ಆಯೋಗದವರು ಜ್ಯೋತಿಷ ಕೇಳಿ ಮತದಾನಕ್ಕೆ ಶುಭ ದಿನ ಫಿಕ್ಸ್ ಮಾಡಿದ್ರೇನೋ’ ಎಂದ ಇನ್ನೊಬ್ಬ.

‘ಆ್ಯನ್ಯುಯಲ್ ಎಕ್ಸಾಂನಲ್ಲಿ ಫೇಲಾದವರಿಗೆ ಸಪ್ಲಿಮೆಂಟರಿ ಬರೆಯಲು ಅವಕಾಶವಿರುವಂತೆ, ಪೋಲಿಂಗ್ ದಿನ ವೋಟ್ ಮಾಡದವರಿಗೆ ಬೇರೊಂದು ದಿನ ಮತದಾನಕ್ಕೆ ಅವಕಾಶ ಮಾಡಿಕೊಡಬೇಕು’ ಅಂದ ಶಂಕ್ರಿ.

‘ಛೇ!... ನಿಮ್ಮಂಥಾ ಸಪ್ಲಿಮೆಂಟಾಲಿಟಿ ಜನ ಇರೋವರೆಗೂ ದೇಶದ ಪರಿಸ್ಥಿತಿ ಬದಲಾಗೋದಿಲ್ಲ...’ ಬಂದಿದ್ದವರು ರೇಗಾಡಿಕೊಂಡು ಹೋದರು.

ದಿನದ ಟ್ವೀಟ್

ಭ್ರಷ್ಟರೆಂದರೆ ಇಷ್ಟ!



ಭಾರತದಲ್ಲಿನ ಮಧ್ಯಮ ವರ್ಗದವರಿಗೆ ಭ್ರಷ್ಟಾಚಾರ ಕಡಿಮೆಯಾಗುವುದು ನಿಜಕ್ಕೂ ಬೇಕಿಲ್ಲ. ಭ್ರಷ್ಟರು ಎಷ್ಟು ಗಳಿಸುತ್ತಾರೋ ತಾವೂ ಅಷ್ಟನ್ನು ಗಳಿಸಲು ಸಾಧ್ಯವಾಗುವಂತಹ ಮತ್ತು ಸಿಕ್ಕಿಹಾಕಿಕೊಳ್ಳದೇ ಸುರಕ್ಷಿತವಾಗಿ ಇರುವಂತಹ ವ್ಯವಸ್ಥೆಯನ್ನಷ್ಟೇ ಅವರು ಬಯಸುತ್ತಾರೆ.

ಪ್ರಿಯಾಂಕಾ ಲಾಹಿರಿ, ಫಿಟ್‌ನೆಸ್ ಕೋಚ್

ಕಿಡಿನುಡಿ



ಗುಪ್ತದಳದ (ಐಬಿ) ಬ್ಯೂರೊ ಆಫ್ ಇಮಿಗ್ರೇಷನ್ ಘಟಕವು (ಬಿಒಐ) ವಲಸೆಗೆ ಸಂಬಂಧಿಸಿದ ಕಾರ್ಯಗಳನ್ನು ನಿರ್ವಹಿಸುತ್ತದೆ. ಸ್ಥಳೀಯ ನಾಯಕರೊಬ್ಬರು ಪ್ರಜ್ವಲ್ ರೇವಣ್ಣ ವಿರುದ್ಧ 2023ರಲ್ಲಿಯೇ ಆರೋಪಗಳನ್ನು ಹೊರಿಸಿದ್ದರು. ಐ.ಬಿಗೆ ಇದು ತಿಳಿದಿರಲಿಲ್ಲವೇ? ಅವರು ದೇಶ ತೊರೆಯದಂತೆ ಬಿಒಐಗೆ ಏಕೆ ಎಚ್ಚರಿಸಲಿಲ್ಲ? ಐ.ಬಿ, ಸಿಬಿಐ, ಇ.ಡಿ, ಎನ್‌ಐಎ ಮತ್ತು ಇತರ ಹಲವು ಸಂಸ್ಥೆಗಳನ್ನು ಕೇಂದ್ರ ಸರ್ಕಾರ ಹೊಂದಿದೆ. ಅವೆಲ್ಲವೂ ಸೋತಿದ್ದೇಕೆ? ಇದು ಗುಪ್ತಚರ ವೈಫಲ್ಯವೂ ಆಗಿದೆ. ಕೇಂದ್ರ ಗೃಹ ಸಚಿವಾಲಯ ಈ ಬಗ್ಗೆ ಮೌನವಾಗಿ ಇರುವುದೇಕೆ?

ಪ್ರಿಯಾಂಕಾ ಚತುರ್ವೇದಿ, ರಾಜ್ಯಸಭಾ ಸದಸ್ಯೆ, ಶಿವಸೇನಾ ನಾಯಕಿ

25 ವರ್ಷಗಳ ಹಿಂದೆ

ಶನಿವಾರ, 1-5-1999

• ವಿ.ವಿ. ಉಪನ್ಯಾಸಕರಿಗೆ ಯುಜಿಸಿ ವೇತನ ಶ್ರೇಣಿ

ಬೆಂಗಳೂರು, ಏ. 30– ರಾಜ್ಯದ ಆರು ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರು ಮತ್ತು ಈ ವಿಶ್ವವಿದ್ಯಾಲಯಗಳ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಮತ್ತು ಅನುದಾನಿತ ಪದವಿ ಕಾಲೇಜುಗಳ ಉಪನ್ಯಾಸಕರು– ಪ್ರಾಧ್ಯಾಪಕರಿಗೆ ಯುಜಿಸಿ ಪರಿಷ್ಕೃತ ವೇತನ ಶ್ರೇಣಿಯನ್ನು ಜಾರಿಗೊಳಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಯುಜಿಸಿ ಪರಿಷ್ಕೃತ ವೇತನ ಶ್ರೇಣಿಯನ್ನು 1996ರ ಜನವರಿ 1ರಿಂದಲೇ ಪೂರ್ವಾನ್ವಯ ಆಗುವಂತೆ ಜಾರಿಗೊಳಿಸಲು ಸರ್ಕಾರ ನಿರ್ಧರಿಸಿದೆ; ಸರ್ಕಾರದ ಈ ತೀರ್ಮಾನದಿಂದ ವಿಶ್ವವಿದ್ಯಾಲಯಗಳು, ಸರ್ಕಾರಿ ಮತ್ತು ಅನುದಾನಿತ ಪದವಿ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ಸುಮಾರು 15 ಸಾವಿರ ಉಪನ್ಯಾಸಕರು ಹಾಗೂ ಪ್ರಾಧ್ಯಾಪಕರಿಗೆ ಪ್ರಯೋಜನವಾಗಲಿದೆ ಎಂದು ಉನ್ನತ ಶಿಕ್ಷಣ ಸಚಿವ ಬಿ.ಎ. ಮೊಯಿದ್ದೀನ್ ತಿಳಿಸಿದರು.

• ನಗರ ವಿ.ವಿ ಬಿಬಿಎಂ ಪ್ರಶ್ನೆಪತ್ರಿಕೆ ಬಯಲು

ಬೆಂಗಳೂರು, ಏ. 30– ಬೆಂಗಳೂರು ವಿಶ್ವವಿದ್ಯಾಲಯದ ಎರಡನೇ ವರ್ಷದ ಬಿಬಿಎಂ ಪರೀಕ್ಷೆಯ ಪ್ರಶ್ನೆಪತ್ರಿಕೆ ಇಂದು ಬಯಲಾಗಿದ್ದು, ಪರೀಕ್ಷೆಗೆ ಎರಡು ಗಂಟೆ ಮೊದಲೇ ವಿದ್ಯಾರ್ಥಿಗಳಿಗೆ ಪ್ರಶ್ನೆಪತ್ರಿಕೆ ಲಭ್ಯವಾಗಿದೆ.

ಇಂದು ಬೆಳಿಗ್ಗೆ 9.30ಕ್ಕೆ ನಡೆಯಬೇಕಿದ್ದ ಬಿಸಿನೆಸ್ ಫೈನಾನ್ಸಿಂಗ್ ಪರೀಕ್ಷೆಯ ಪ್ರಶ್ನೆಪತ್ರಿಕೆ ಬಯಲಾಗಿದ್ದು, ಅದನ್ನು ಬೇರೆ ವಿದ್ಯಾರ್ಥಿಗಳಿಗೆ ಹಂಚಲಾಗುತ್ತಿದೆ ಎಂಬ ಖಚಿತ ಮಾಹಿತಿ ಮೇಲೆ ಯಶವಂತಪುರ ಪೊಲೀಸರು ಬೆಳಿಗ್ಗೆ 8 ಗಂಟೆ ವೇಳೆಯಲ್ಲಿ ಮತ್ತಿಕೆರೆಯಲ್ಲಿರುವ ವಿದ್ಯಾರ್ಥಿ ಒಬ್ಬನ ಮನೆಯ ಮೇಲೆ ದಾಳಿ ಮಾಡಿ ಕೆಲವು ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ.

50 ವರ್ಷಗಳ ಹಿಂದೆ

ಬುಧವಾರ, 1-5-1974

• ಪ್ರವಾಸಿ ಕೇಂದ್ರವಾಗಿ ಗೋಕರ್ಣ

ಬೆಂಗಳೂರು, ಏ. 30– ರಾಜ್ಯದಲ್ಲಿ ಪ್ರವಾಸೋದ್ಯಮ ಬೆಳೆಸಲು ಒಂದೊಂದು ವಿಭಾಗವನ್ನಾಗಿ ಅಭಿವೃದ್ಧಿ ಮಾಡುವ ಕಾರ್ಯಕ್ರಮ ರೂಪಿಸಲಾಗುವುದೆಂದು ಕಾರ್ಮಿಕ ಹಾಗೂ ಪ್ರವಾಸೋದ್ಯಮ ಸಚಿವ ಎಸ್.ಎಂ. ಯಾಹ್ಯಾ ಅವರು ಇಂದು ವಿಧಾನಸಭೆಯಲ್ಲಿ ತಿಳಿಸಿದರು.

ಗೋಕರ್ಣವನ್ನು ಪ್ರವಾಸಿ ಕೇಂದ್ರ ಮಾಡಲಾಗುವುದೆಂದೂ ಮರವಂತೆ ಕಡಲ ದಂಡೆಯನ್ನು ಈ ವರ್ಷವೇ ಅಭಿವೃದ್ಧಿ ಮಾಡಲಾಗುವುದೆಂದೂ ವಿವರಿಸಿದರು.

• ಕೈದಿ ತಲೆ, ಗಡ್ಡ ಬೋಳಿಸಿದ ಜೈಲರ್ ಸಸ್ಪೆಂಡ್

ಬೆಂಗಳೂರು, ಏ. 30– ಕಾರವಾರದ ಸಬ್ ಜೈಲಿನಲ್ಲಿ ವಿಚಾರಣೆಗೆ ಒಳಗಾಗಿರುವ ಕೈದಿ ಒಬ್ಬನ ತಲೆ ಮತ್ತು ಗಡ್ಡವನ್ನು ಬೋಳಿಸಿದ ಜೈಲರ್ ಹಾಗೂ ಹೆಡ್‌ವಾರ್ಡರ್ ಅವರನ್ನು ಸಸ್ಪೆಂಡ್ ಮಾಡಲಾಗಿದೆ ಎಂದು ಲೋಕೋಪಯೋಗಿ ಸಚಿವ ಎಚ್.ಎಂ. ಚೆನ್ನಬಸಪ್ಪ ವಿಧಾನಸಭೆಯಲ್ಲಿ ತಿಳಿಸಿದರು.

ಈ ಪ್ರಕರಣದ ಬಗ್ಗೆ ತನಿಖೆ ಮಾಡಲು ತನಿಖಾ ಅಧಿಕಾರಿಯನ್ನು ನೇಮಿಸಲಾಗಿದ್ದು, ತನಿಖೆ ಆರಂಭವಾಗಿದೆ ಎಂದರು.

ಸಂಗತ

ಮತ ಚಲಾವಣೆ: ಪೂರಕ ಉಪಕ್ರಮ

ಮತ ಚಲಾವಣೆಗೆ ನಿರುತ್ಸಾಹ ತೋರುವ ಮಹಾನಗರಗಳ ನಿವಾಸಿಗಳಲ್ಲಿ ಉತ್ಸಾಹ ತುಂಬಲು ಇವೆ ಹಲವು ಮಾರ್ಗೋಪಾಯಗಳು

• ಎಚ್.ಬಿ.ಚಂದ್ರಶೇಖರ್

ರಾಜ್ಯದ 14 ಲೋಕಸಭಾ ಕ್ಷೇತ್ರಗಳಿಗೆ ಏಪ್ರಿಲ್ 26ರಂದು ನಡೆದ ಮತದಾನದಲ್ಲಿ ಬೆಂಗಳೂರು ನಗರ ವ್ಯಾಪ್ತಿಯ ಕ್ಷೇತ್ರಗಳಲ್ಲಿ ಮತ ಚಲಾವಣೆ ಪ್ರಮಾಣ ಕಡಿಮೆ ದಾಖಲಾಗಿರುವ ಕುರಿತು ಎಲ್ಲೆಡೆ ಆಕ್ರೋಶ, ಅಸಮಾಧಾನ ವ್ಯಕ್ತವಾಗುತ್ತಿದೆ. 2019ರ ಲೋಕಸಭಾ ಚುನಾವಣೆಯಲ್ಲಿ ದೇಶದ ಹಲವು ಮಹಾನಗರಗಳ ಮತಕ್ಷೇತ್ರಗಳಲ್ಲಿಯೂ ಮತ ಚಲಾವಣೆಯ ಪ್ರಮಾಣ ಕಡಿಮೆ ಇತ್ತು ಎಂಬುದನ್ನು ದತ್ತಾಂಶದ ವಿಶ್ಲೇಷಣೆಯಿಂದ ಗಮನಿಸಬಹುದು.

2019ರಲ್ಲಿ ದೇಶದ ಒಟ್ಟು ಮತ ಚಲಾವಣೆ ಪ್ರಮಾಣ ಶೇಕಡ 67.4ರಷ್ಟು ಇತ್ತು. ರಾಜ್ಯದಲ್ಲಿ ಈ ಪ್ರಮಾಣ ತುಸು ಹೆಚ್ಚು ಅಂದರೆ ಒಟ್ಟು ಶೇ 68.81ರಷ್ಟು ಇತ್ತು. ಬೆಂಗಳೂರು ಉತ್ತರ, ಬೆಂಗಳೂರು ಕೇಂದ್ರ ಹಾಗೂ ಬೆಂಗಳೂರು ದಕ್ಷಿಣ ಕ್ಷೇತ್ರದಲ್ಲಿ ರಾಜ್ಯದ ಒಟ್ಟು ಮತ ಚಲಾವಣೆ ಪ್ರಮಾಣಕ್ಕಿಂತ ಕ್ರಮವಾಗಿ ಶೇ 14.05, ಶೇ 14.49 ಹಾಗೂ ಶೇ 15.11ರಷ್ಟು ಕಡಿಮೆ ದಾಖಲಾಗಿತ್ತು.

ತಮಿಳುನಾಡಿನ ಚೆನ್ನೈ ದಕ್ಷಿಣ ಲೋಕಸಭಾ ಕ್ಷೇತ್ರದಲ್ಲಿ ಆ ರಾಜ್ಯದ ಒಟ್ಟು ಮತ ಚಲಾವಣೆ ಪ್ರಮಾಣಕ್ಕಿಂತ ಶೇ 15.37ರಷ್ಟು ಕಡಿಮೆ ದಾಖಲಾಗಿತ್ತು. ತೆಲಂಗಾಣ ರಾಜ್ಯದ ಹೈದರಾಬಾದ್ ಮತ್ತು ಸಿಕಂದರಾಬಾದ್ ಕ್ಷೇತ್ರಗಳಲ್ಲಿ ಆ ರಾಜ್ಯದ ಒಟ್ಟು ಮತಚಲಾವಣೆ ಪ್ರಮಾಣಕ್ಕಿಂತ ಕ್ರಮವಾಗಿ ಶೇ 17.93 ಹಾಗೂ ಶೇ 16.27ರಷ್ಟು ಕಡಿಮೆ ಮತ ಚಲಾವಣೆ ಪ್ರಮಾಣ ದಾಖಲಾಗಿತ್ತು. ಪಶ್ಚಿಮ ಬಂಗಾಳ ರಾಜ್ಯದ ಕೋಲ್ಕತ್ತ ಉತ್ತರ ಕ್ಷೇತ್ರದಲ್ಲಿ ಆ ರಾಜ್ಯದ ಒಟ್ಟು ಮತಚಲಾವಣೆ ಪ್ರಮಾಣಕ್ಕಿಂತ ಶೇ 15.93ರಷ್ಟು ಕಡಿಮೆ ಮತ ಚಲಾವಣೆ ಪ್ರಮಾಣ ದಾಖಲಾಗಿತ್ತು.

ಮಹಾನಗರಗಳಲ್ಲಿ ಇತರೆಡೆಗಿಂತ ಮತ ಚಲಾವಣೆ ಪ್ರಮಾಣ ಕಡಿಮೆ ದಾಖಲಾಗುವುದಕ್ಕೆ ಹಲವಾರು ಕಾರಣಗಳನ್ನು ಗುರುತಿಸಬಹುದು. ದೇಶ ಮತ್ತು ರಾಜ್ಯದ ವಿವಿಧೆಡೆಗಳಿಂದ ಬಂದ ಜನರು ಮಹಾನಗರಗಳಲ್ಲಿ ತಾತ್ಕಾಲಿಕವಾಗಿ ಅಥವಾ ಶಾಶ್ವತವಾಗಿ ನೆಲೆಸಿರುತ್ತಾರೆ. ಹಲವು ವರ್ಷಗಳಿಂದ ಮಹಾನಗರಗಳಲ್ಲಿ ವಾಸಿಸುತ್ತಿದ್ದರೂ ಆಯಾ ನಗರದ ಜೊತೆ ಹೆಚ್ಚಿನ ಬಂಧ, ಬೆಸುಗೆ ರೂಪುಗೊಂಡಿರುವುದಿಲ್ಲ.

ಹಳ್ಳಿ ಅಥವಾ ಚಿಕ್ಕ ಪಟ್ಟಣಗಳಲ್ಲಿ ಇರುವಂತೆ ಮಹಾನಗರಗಳಲ್ಲಿ ಸ್ಥಳೀಯ ಸಮುದಾಯ ಇರುವುದಿಲ್ಲ. ಒಂದು ರೀತಿಯಲ್ಲಿ ಮಹಾನಗರಗಳು ಎಲ್ಲರಿಗೂ ಸೇರಿದ ಮತ್ತು ಯಾರಿಗೂ ಸೇರದ ಊರುಗಳು ಎನ್ನಬಹುದೇನೊ! ಮಹಾನಗರಗಳ ಕಾಸ್ಮೊ ಸಂಸ್ಕೃತಿಯು ತಾವು ವಾಸಿಸುವ ಊರಿನ ಸಮಸ್ಯೆ ಮತ್ತು ಅವುಗಳ ನಿವಾರಣೆಯಲ್ಲಿ ಜನರು ಹೆಚ್ಚಾಗಿ ತೊಡಗಿಕೊಳ್ಳದೇ ಇರುವಂತೆ ಮಾಡಿರುವ ಸಾಧ್ಯತೆಯೂ ಇರುತ್ತದೆ. ಸಮಸ್ಯೆಗಳನ್ನು ಯಾರೋ ಹೇಗೋ ಪರಿಹರಿಸುತ್ತಾರೆ ಎಂಬ ಉದಾಸೀನ ಧೋರಣೆ ಮಹಾನಗರಗಳ ಜನರಲ್ಲಿ ಮೊಳೆತಿರುವ ಸಂಭವ ಇರುತ್ತದೆ.

ಮಹಾನಗರಗಳಲ್ಲಿ ಒಂದಷ್ಟು ಕುಟುಂಬಗಳು ಒಂದೆಡೆಯಿಂದ ಇನ್ನೊಂದೆಡೆಗೆ ಸ್ಥಳಾಂತರಗೊಳ್ಳುತ್ತಿರುತ್ತವೆ. ಇದಕ್ಕೆ ಪೂರಕವಾಗಿ ಮತದಾನದ ನೋಂದಣಿಯನ್ನು ಅವರ ವಾಸಸ್ಥಳಕ್ಕೆ ಸ್ಥಳಾಂತರಿಸಿರುವುದಿಲ್ಲ. ಈ ಕಾರಣ, ತಮ್ಮ ವಾಸಸ್ಥಳದಿಂದ ನಗರದ ಇನ್ನೊಂದು ಮೂಲೆಯಲ್ಲಿರುವ ಮತಗಟ್ಟೆಗೆ ಬಿರುಬಿಸಿಲಿನಲ್ಲಿ ಪಯಣಿಸಿ, ಮತ ಚಲಾವಣೆ ಮಾಡದೇ ಇರುವ ಸಾಧ್ಯತೆಯೂ ಇರುತ್ತದೆ. ತಮ್ಮ ಮತಗಟ್ಟೆಗಳ ವಿವರ ಆನ್‌ಲೈನ್‌ನಲ್ಲಿ ಲಭ್ಯವಿದ್ದಾಗ್ಯೂ ಮತಗಟ್ಟೆ ಇರುವ ವಿಳಾಸವನ್ನು ಹುಡುಕುವುದೂ ಮಹಾನಗರಗಳಲ್ಲಿ ಕಷ್ಟಸಾಧ್ಯವೇ ಸರಿ. ಈ ಎಲ್ಲ ಅಂಶಗಳಿಗೂ ಪರಿಹಾರಾತ್ಮಕ ಕ್ರಮಗಳನ್ನು ತೆಗೆದುಕೊಳ್ಳಲು ಮುಂದಾಗಬೇಕಿದೆ.



ಮಹಾನಗರಗಳಲ್ಲಿ ಗಣನೀಯ ಪ್ರಮಾಣದ ನಿವಾಸಿಗಳು ಬೃಹತ್ ವಸತಿ ಸಮುಚ್ಚಯಗಳಲ್ಲಿ ವಾಸಿಸುತ್ತಾರೆ. ಇಂತಹ ಕಡೆ ಮತ ಚಲಾವಣೆಯ ಪ್ರಮಾಣ ಹೆಚ್ಚಿಸಲು ನಿವಾಸಿಗಳ ಸಂಘದ ನೆರವು ಪಡೆಯುವುದು ಸಹಕಾರಿಯಾಗಬಲ್ಲದು. ಈ ದಿಸೆಯಲ್ಲಿ ಬೆಂಗಳೂರಿನ ಕೆಂಗೇರಿ ಉಪನಗರದಲ್ಲಿನ ಅಪಾರ್ಟ್‌ಮೆಂಟೊಂದರಲ್ಲಿ ಕೈಗೊಂಡ ಪ್ರಯತ್ನ ಮಾದರಿ ಆಗುವಂತಿದೆ. ಸಮಾಜಮುಖಿ ಚಿಂತನೆಯ ಆಸಕ್ತ ಕೆಲವು ನಿವಾಸಿಗಳು ಸಂಘಟಿತರಾಗಿ ಮತದಾನದ ದಿನ ಎಲ್ಲರನ್ನೂ ಮತ ಚಲಾಯಿಸಲು ಪ್ರೇರೇಪಿಸಿದರು. ಅಪಾರ್ಟ್‌ಮೆಂಟ್‌ನ ಪ್ರವೇಶ ದ್ವಾರದಲ್ಲಿ ಒಂದು ಸಹಾಯವಾಣಿ ತೆರೆದು, ಮತ ಚಲಾಯಿಸಿ ಬಂದ ನಿವಾಸಿಗಳ ಫೋಟೊ ತೆಗೆದು ನಿವಾಸಿಗಳ ವಾಟ್ಸ್‌ಆ್ಯಪ್ ಗುಂಪಿನಲ್ಲಿ ಹಾಕುತ್ತಿದ್ದರು. ಅಪಾರ್ಟ್‌ಮೆಂಟ್‌ನ ಯಾವ ಮನೆಯಲ್ಲಿ ಎಷ್ಟು ಮತಗಳಿವೆ ಮತ್ತು ಯಾವ ವೇಳೆಗೆ ಎಷ್ಟು ಮತಗಳು ಚಲಾವಣೆ ಆಗಿವೆ ಎಂಬ ಕುರಿತು ನಿರಂತರ ನಿಗಾ ವಹಿಸಲಾಯಿತು. ಮತ ಹಾಕದೇ ಇದ್ದವರಿಗೆ ಫೋನ್ ಕರೆ ಮಾಡಿ ವಿಚಾರಿಸುವುದು, ಮನೆ ಮನೆಗೆ ಭೇಟಿ ನೀಡಿ ಮತ ಹಾಕಲು ಮನವಿ ಮಾಡುವಂತಹ ಕೆಲಸ ನಡೆದಿದೆ. ‘ನೀವು ಯಾವ ಪಕ್ಷಕ್ಕೆ ಬೇಕಾದರೂ ಮತ ಹಾಕಿ, ಒಟ್ಟಿನಲ್ಲಿ ಮತ ಚಲಾಯಿಸಿ’ ಎಂದು ಪಕ್ಷಾತೀತವಾಗಿ ನಿರಂತರವಾಗಿ ಮನವಿ ಮಾಡಿದ್ದರ ಫಲವಾಗಿ, ಒಟ್ಟು 335 ಮತಗಳಲ್ಲಿ 314 ಮತಗಳು (ಶೇ 94ರಷ್ಟು) ಚಲಾವಣೆ ಆಗಿವೆ. ಮತ ಚಲಾವಣೆಗೆ ಜಡತ್ವ ತೋರುವ ಮಹಾನಗರಗಳ ಜನರಿಗೆ ಈ ರೀತಿ ನವಿರಾಗಿ ಬಿಸಿ ಮುಟ್ಟಿಸಬೇಕು.

ಮಹಾನಗರಗಳಲ್ಲಿ ಸ್ಥಳೀಯವಾಗಿ ಸಕ್ರಿಯವಾಗಿರುವ, ಪಕ್ಷಾತೀತವಾಗಿ ನಡೆದುಕೊಳ್ಳುವಂತಹ ಸಮಾಜಮುಖಿ ವ್ಯಕ್ತಿಗಳನ್ನು ಗುರುತಿಸಿ, ಒಂದು ನಿರ್ದಿಷ್ಟ ಪ್ರದೇಶದಲ್ಲಿ ಮತ ಚಲಾವಣೆ ಪ್ರಮಾಣ ಹೆಚ್ಚಳಕ್ಕೆ ಅವರಿಂದ ನೆರವು ಪಡೆಯಬಹುದು. ಬೇರೆ ಬೇರೆ ಕ್ಷೇತ್ರಗಳ ಸಾಧಕರನ್ನೂ ಈ ಕಾರ್ಯದಲ್ಲಿ ತೊಡಗಿಸಿಕೊಳ್ಳಬಹುದು. ಇಂತಹ ಉಪಕ್ರಮಗಳು ನಗರ ಪ್ರದೇಶಗಳಲ್ಲಿ ಮತ ಚಲಾವಣೆ ಪ್ರಮಾಣ ಹೆಚ್ಚಿಸಲು ನೆರವಾಗಬಲ್ಲವು.

ವಾಚಕರ ವಾಣಿ

ಅತ್ತೆಯ ದೂರಿಗಿಲ್ಲ ಪ್ರಾಶಸ್ತ್ಯ!

ಪ್ರಜ್ವಲ್ ರೇವಣ್ಣ ಅವರ ಲೈಂಗಿಕ ದೌರ್ಜನ್ಯ ಪ್ರಕರಣಕ್ಕೆ ಸಂಬಂಧಿಸಿದಂತೆ, ದೂರುದಾರ ಮಹಿಳೆಯ ಅತ್ತೆ ಪತ್ರಿಕಾಗೋಷ್ಠಿ ನಡೆಸಿ, ‘ದೂರು ನೀಡಿರುವ ಮಹಿಳೆ ಸರಿಯಿಲ್ಲ’ ಎಂದು ಹೇಳಿಕೆ ನೀಡಿರುವುದು ವರದಿಯಾಗಿದೆ (ಪ್ರ.ವಾ., ಏ. 30). ಭಾರತೀಯ ಸಮಾಜದ ಕುಟುಂಬ ವ್ಯವಸ್ಥೆಯಲ್ಲಿ ಅತ್ತೆಗೆ ಸೊಸೆ ಮತ್ತು ಸೊಸೆಗೆ ಅತ್ತೆ ಸರಿಯಾಗಿ ಕಾಣುವ ಉದಾಹರಣೆಗಳು ವಿರಳ. ಸೊಸೆಯ ಬಗ್ಗೆ ಅತ್ತೆ ಮತ್ತು ಅತ್ತೆಯ ಬಗ್ಗೆ ಸೊಸೆ ಹೊರಿಸುವ ಆಪಾದನೆಗಳನ್ನು ಜನರು ಈ ಕಿವಿಯಿಂದ ಕೇಳಿ ಆ ಕಿವಿಯಲ್ಲಿ ಬಿಟ್ಟುಬಿಡುತ್ತಾರೆ. ಆ ಆಪಾದನೆಗಳನ್ನು ಯಾರಾದರೂ ಗಂಭೀರವಾಗಿ ಪರಿಗಣಿಸಿದರೆ, ಅಂಥವರಿಗೆ ನಮ್ಮ ಕುಟುಂಬ ವ್ಯವಸ್ಥೆಯ ಸರಿಯಾದ ಜ್ಞಾನ ಇಲ್ಲವೆಂದೇ ಅರ್ಥ.

ಅದೇ ಪತ್ರಿಕಾಗೋಷ್ಠಿಯಲ್ಲಿ ಅತ್ತೆ, ದೂರುದಾರ ಮಹಿಳೆ ಸುಳ್ಳು ಹೇಳುತ್ತಿರುವುದನ್ನು ಮಂಜುನಾಥ ಸ್ವಾಮಿ ಮೇಲೆ ಪ್ರಮಾಣ ಮಾಡಿ ಸಾಬೀತುಪಡಿಸಲು ಸಿದ್ಧವಿರುವುದಾಗಿ ಹೇಳಿದ್ದಾರೆ. ಆದರೆ ದೂರುದಾರ ಸೊಸೆಯು ಸರಿಯಿಲ್ಲ ಎಂಬುದನ್ನಾಗಲೀ ಮತ್ತು ಆಕೆ ಸುಳ್ಳು ಹೇಳುತ್ತಿದ್ದಾಳೆ ಎಂಬುದನ್ನಾಗಲೀ ಸಾಬೀತುಪಡಿಸಬೇಕಿರುವುದು ಮಂಜುನಾಥ ಸ್ವಾಮಿಯ ಮೇಲೆ ಪ್ರಮಾಣ ಮಾಡಿ ಅಲ್ಲ, ಬದಲಿಗೆ ಸೂಕ್ತ ದಾಖಲೆಗಳೊಂದಿಗೆ ನ್ಯಾಯಾಲಯದಲ್ಲಿ, ನ್ಯಾಯಾಧೀಶರ ಸಮ್ಮುಖದಲ್ಲಿ ಎಂಬುದನ್ನು ತಿಳಿದವರು ಅತ್ತೆಯ ಗಮನಕ್ಕೆ ತರಬೇಕಿದೆ.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ಮತ ಎಣಿಕೆ: ಕಾಲೇಜಿನಲ್ಲೇ ಏಕೆ?

ಲೋಕಸಭಾ ಚುನಾವಣೆಯ ಮತ ಎಣಿಕೆಗಾಗಿ ಜಾಗ ಬಿಟ್ಟುಕೊಟ್ಟಿರುವ ರಾಜ್ಯದ ಕಾಲೇಜುಗಳಲ್ಲಿ ಎರಡು ತಿಂಗಳು ತರಗತಿಗಳಿಗೆ ಕುತ್ತು ಉಂಟಾಗಲಿದೆ ಎಂಬ ವರದಿಯು (ಪ್ರ.ವಾ., ಏ. 30) ತರಗತಿ ನಷ್ಟದ ಬಗ್ಗೆ ಬೆಳಕು ಚೆಲ್ಲಿದೆ. ಮತಯಂತ್ರಗಳನ್ನು ಭದ್ರತಾ ಕೊಠಡಿಯಲ್ಲಿ ಇರಿಸುವ ಸಲುವಾಗಿ ಕಾಲೇಜುಗಳನ್ನೇ ಆಯ್ಕೆ ಮಾಡಿಕೊಳ್ಳುವುದು ಏಕೆ? ಈಗಾಗಲೇ ಒಂದರಿಂದ ಹತ್ತನೇ ತರಗತಿ ವಿದ್ಯಾರ್ಥಿಗಳಿಗೆ ಪರೀಕ್ಷೆ ಮುಗಿದು ಬೇಸಿಗೆ ರಜೆ ಆರಂಭವಾಗಿದೆ. ಇನ್ನು ಶಾಲೆ ಪ್ರಾರಂಭವಾಗುವುದು ಜೂನ್ ಮೊದಲ ವಾರದಲ್ಲಿ. ಈ ಶಾಲೆಗಳನ್ನು ಮತಯಂತ್ರ ಸಂರಕ್ಷಣೆಗೆ ಬಳಸಿಕೊಂಡರೆ ಮಕ್ಕಳಿಗೆ ಒಂದು ವಾರ ರಜೆ ನೀಡಿದರಷ್ಟೇ ಸಾಕಾಗುತ್ತದೆ. ಹೇಗೂ ಪಠ್ಯಪುಸ್ತಕ, ಮಕ್ಕಳ ದಾಖಲಾತಿ ಎಂದು ತರಗತಿಗಳು ಸರಿಯಾಗಿ ಪ್ರಾರಂಭವಾಗುವುದೇ ಜೂನ್ ಮಧ್ಯಭಾಗದಲ್ಲಿ. ಈ ದಿಸೆಯಲ್ಲಿ ಚುನಾವಣಾ ಆಯೋಗ ಯೋಚಿಸಲಿ.

ವಿನುತ ಮುರಳೀಧರ, ಬಾಳೆಬೈಲು, ತೀರ್ಥಹಳ್ಳಿ

ನೀರಿನ ದುರ್ಬಳಕೆ: ವಂಚನೆಯೇ ಹೌದು

ಬಿಸಿಲ ಬೇಗೆಯಲ್ಲಿ ನೀರಿನ ಅಭಾವದ ನಡುವೆಯೂ ಹಳ್ಳಿಯೊಂದರ ಜಾತ್ರೆಯಲ್ಲಿ ದೇವರ ಉತ್ಸವದ ಹಿಂದೆ ಸರತಿ ಸಾಲಿನಲ್ಲಿ ಮೂರ್ನಾಲ್ಕು ಕಿ.ಮೀ. ದೂರದವರೆಗೂ ಡಾಂಬರು ರಸ್ತೆಯಲ್ಲಿ ನೂರಾರು ಜನ ಮಲಗುವುದನ್ನು, ಅವರ ಮೇಲೆ ಯಥೇಚ್ಛವಾಗಿ ನೀರು ಸುರಿಸುತ್ತಾ ಹೋಗುವ ಟ್ಯಾಂಕರುಗಳನ್ನು ನೋಡಿದಾಕ್ಷಣ, ‘ಕುಡಿಯಲು ನೀರಿಲ್ಲದೆ ಜೀವಬಿಟ್ಟ ನವಿಲು’ ಎಂಬ ಸುದ್ದಿಯನ್ನು ಸಾಮಾಜಿಕ ಜಾಲತಾಣದಲ್ಲಿ ಓದಿದ್ದು ನೆನಪಾಯಿತು. ಭೂಮಿಯ ಮೇಲಿನ ಸಂಪನ್ಮೂಲಗಳು ಸಕಲ ಜೀವರಾಶಿಗಳಿಗೂ ಸೇರಿದವು ಎಂಬುದನ್ನು ಮರೆತಿರುವ ಮನುಷ್ಯ, ಬಿಸಿಲ ಬೇಗೆಯಿಂದ ಪ್ರಾಣಿ ಪಕ್ಷಿಗಳು ನೀರಿಗಾಗಿ ಪರಿತಪಿಸುತ್ತಾ ಜನವಸತಿ ಪ್ರದೇಶಗಳಿಗೆ ವಲಸೆ ಬರುತ್ತಿರುವ ಈ ಹೊತ್ತಿನಲ್ಲೂ ಪರಿಸರ ಸಂರಕ್ಷಣೆಯ ಬಗ್ಗೆಯಾಗಲಿ, ಸಹ ಜೀವಸಂಕುಲಗಳ ಬಗ್ಗೆಯಾಗಲಿ ಕನಿಷ್ಠ ಕಳಕಳಿಯನ್ನೂ ತೋರದೆ ತನಗೆ ತೋಚಿದಂತೆ ಬದುಕುತ್ತಿದ್ದಾನೇನೊ ಎಂದೆನಿಸಿತು.

ಭಕ್ತಿ, ಆಡಂಬರ, ಮೋಜುಮಸ್ತಿಯ ಹೆಸರಿನಲ್ಲಿ ನೀರಿನಂತಹ ನೈಸರ್ಗಿಕ ಸಂಪನ್ಮೂಲಗಳನ್ನು ವ್ಯರ್ಥ ಮಾಡುವುದು ನಾವು ಸಹಜೀವಿಗಳಿಗೆ ಮಾಡುವ ವಂಚನೆ. ಕೆಲವು ರಾಷ್ಟ್ರಗಳಲ್ಲಿ ನೀರಿನ ರೇಷನ್ ಪದ್ಧತಿ ಶುರುವಾಗಿರುವಂತೆ, ನಮ್ಮಲ್ಲೂ ಆಗಬಾರದೆಂದರೆ ಪರಿಸರ ದಿನ, ಜಲಸಾಕ್ಷರತಾ ದಿನದ ಆಚರಣೆಗಷ್ಟೇ ನಮ್ಮ ಕಳಕಳಿ ಸೀಮಿತ ಆಗಬಾರದು. ಮನೆಗಳು, ಶಾಲಾಕಾಲೇಜುಗಳಲ್ಲಿ ನೀರಿನ ಬಳಕೆ, ಉಳಿತಾಯದ ಕುರಿತು ಅರಿವು ಮೂಡಿಸುವಂತೆ ಆಗಬೇಕು.

ರೇವಣ್ಣ ಎಂ.ಜಿ., ಕೃಷ್ಣರಾಜಪೇಟೆ, ಮಂಡ್ಯ

ಮಿಕ್ಸಿ ಮೋಟರ್: ಶಬ್ದರಹಿತವಾಗಲಿ

ಮೊದಲೆಲ್ಲ ಸ್ಕೂಟರ್, ಕಾರು, ಬಸ್ಸುಗಳು ಸಂಚರಿಸಬೇಕಾದರೆ ಬಹಳಷ್ಟು ಸದ್ದು ಮಾಡುತ್ತಿದ್ದವು. ತಂತ್ರಜ್ಞಾನ ಉತ್ತಮಗೊಂಡಂತೆ ಈಗ ಇಂತಹ ವಾಹನಗಳ ಮೋಟರುಗಳ ಸದ್ದು ಗಣನೀಯವಾಗಿ ಕಡಿಮೆಯಾಗಿದೆ. ಆದರೆ ಎಲ್ಲರ ಮನೆಗಳಲ್ಲೂ ಬೆಳಿಗ್ಗೆ ಬೇಗನೆ ಅಥವಾ ರಾತ್ರಿ ಹೊತ್ತಲ್ಲಿ ತಿರುಗುವ ಮಿಕ್ಸಿಗಳ ಸದ್ದು ಮಾತ್ರ ಕಡಿಮೆಯಾಗಿಯೇ ಇಲ್ಲ. ಇವುಗಳ ಕರ್ಕಶ ಸದ್ದಿನಿಂದ ಮನೆಯಲ್ಲಿರುವ ಹಾಗೂ ಪಕ್ಕದ ಮನೆಯಲ್ಲಿರುವ ವೃದ್ಧರಿಗೆ, ರೋಗಿಗಳಿಗೆ, ಚಿಕ್ಕ ಮಕ್ಕಳಿಗೆ, ನಿದ್ರಿಸುವವರಿಗೆ ತೊಂದರೆ ಉಂಟಾಗುತ್ತದೆ. ಇವನ್ನು ತಯಾರು ಮಾಡುವ ಕಂಪನಿಗಳು, ಎಂಜಿನಿಯರ್‌ಗಳು ಈ ದಿಸೆಯಲ್ಲಿ ಗಮನಹರಿಸಿ ಮಿಕ್ಸಿ ಮೋಟರುಗಳ ಸದ್ದನ್ನು ಕಡಿಮೆಗೊಳಿಸಿದರೆ ಶಬ್ದಮಾಲಿನ್ಯವನ್ನು ಕಡಿಮೆ ಮಾಡಬಹುದು.

ಬಿ.ಎನ್.ಭರತ್, ಬೆಂಗಳೂರು

ನೈತಿಕ ಮಹಾಪತನಕ್ಕೆ ಕೊನೆಯೆಂದು?

ವಿಧಾನಸಭೆಯಲ್ಲಿ ವಿರೋಧ ಪಕ್ಷಗಳ ಶಾಸಕರನ್ನು ಬೇಟೆಯಾಡಿ, ಬಹುಮತವನ್ನು ಅಕ್ರಮವಾಗಿ ಸೃಷ್ಟಿಸಿಕೊಳ್ಳುವ ಅನೈತಿಕ ರಾಜಕಾರಣದ ಒಂದು ಮಾದರಿಯನ್ನು ಕರ್ನಾಟಕವು ದೇಶಕ್ಕೆ ನೀಡಿದಾಗಲೇ ನಾವು ತಲೆ ತಗ್ಗಿಸಬೇಕಾಯಿತು. ಮುಖ್ಯಮಂತ್ರಿ ಆಗಿದ್ದವರೊಬ್ಬರು ಭ್ರಷ್ಟಾಚಾರದ ಆರೋಪದ ಮೇಲೆ ಜೈಲಿಗೆ ಹೋದಾಗಲೂ ನಾವು ದೇಶದ ಮುಂದೆ ತಲೆ ತಗ್ಗಿಸಿದೆವು. ಸುಮಾರು ಅದೇ ಅವಧಿಯಲ್ಲಿ ಮಂತ್ರಿಗಳು ಭ್ರಷ್ಟಾಚಾರ ಸೇರಿದಂತೆ ವಿವಿಧ ಪ್ರಕರಣಗಳಲ್ಲಿ ಸಾಲು ಸಾಲಾಗಿ ಜೈಲು ಪಾಲಾದಾಗಲೂ ಮತ್ತೆ ತಲೆ ತಗ್ಗಿಸಿದೆವು. ವಿಧಾನಸಭೆಯಲ್ಲಿ ಕೆಲವು ಶಾಸಕರು ಅಶ್ಲೀಲ ಚಿತ್ರಗಳನ್ನು ನೋಡಿದಾಗ, ಮಠಾಧಿಪತಿಯೊಬ್ಬರು ಎಳೆ ಹೆಣ್ಣುಮಕ್ಕಳ ಮೇಲಿನ ಅತ್ಯಾಚಾರ ಆರೋಪದ ಮೇಲೆ ಜೈಲಿಗೆ ಹೋದಾಗಲೂ ನಾವು ದೇಶದ ಮುಂದೆ ನಾಚಿಕೆಯಿಂದ ತಲೆ ತಗ್ಗಿಸದೆ ಬೇರೆ ದಾರಿಯೇ ಇರಲಿಲ್ಲ. ಈಗ ಒಬ್ಬ ಯುವ ಸಂಸದನ ಲೈಂಗಿಕ ದೌರ್ಜನ್ಯ ಪ್ರಕರಣದಿಂದಾಗಿ ದೇಶದ ಮಟ್ಟದಲ್ಲಿ ರಾಜ್ಯದ ಮಾನ ಹರಾಜಾಗಿದೆ. ಈ ನೈತಿಕ ಮಹಾಪತನಗಳ ಸರಣಿಗೆ ಕೊನೆಯೆಂದು?

ರುದ್ರಪ್ಪ ಸಿ., ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಕೋವಿಡ್ ಲಸಿಕೆ ಅಭಿವೃದ್ಧಿಪಡಿಸಿದ ಕಂಪನಿಯಿಂದಲೇ ಮಾಹಿತಿ

ಕೋವಿಶೀಲ್ಡ್ ಲಸಿಕೆಯಿಂದ ಗಂಭೀರ ಅಡ್ಡಪರಿಣಾಮ

ಭಾರತದಲ್ಲಿ ಕೋವಿಡ್ ಲಸಿಕಾ ಕಾರ್ಯಕ್ರಮದ ನಂತರ ಯುವಕರು, ಮಧ್ಯವಯಸ್ಕರು ಕುಸಿದುಬಿದ್ದು ಮೃತಪಡುವ ಘಟನೆಗಳು ಹೆಚ್ಚಾದವು. ಲಸಿಕೆಯ ಅಡ್ಡಪರಿಣಾಮದಿಂದಲೇ ಹೀಗಾಗುತ್ತಿದೆ ಎಂದು ಹಲವು ತಜ್ಞರು ಹೇಳಿದ್ದರು. ಆದರೆ ಕೇಂದ್ರ ಸರ್ಕಾರವು ಇದನ್ನು ನಿರಾಕರಿಸುತ್ತಲೇ ಇತ್ತು. ಆದರೆ ಈಗ ಕೋವಿಡ್ ಲಸಿಕೆ–ಕೋವಿಶೀಲ್ಡ್ ಅನ್ನು ಅಭಿವೃದ್ಧಿಪಡಿಸಿದ್ದ ಕಂಪನಿಯೇ, ಆ ಲಸಿಕೆಯಿಂದ ಮಾರಣಾಂತಿಕ ಅಡ್ಡಪರಿಣಾಮ ಉಂಟಾಗುತ್ತದೆ ಎಂದು ಲಂಡನ್‌ನ ನ್ಯಾಯಾಲಯದ ಎದುರು ಒಪ್ಪಿಕೊಂಡಿದೆ. ಭಾರತದಲ್ಲಿ ಸುಮಾರು 80 ಕೋಟಿ ಜನರಿಗೆ ಈ ಕೋವಿಶೀಲ್ಡ್ ಲಸಿಕೆ ನೀಡಲಾಗಿದೆ

ಟಿಟಿಎಸ್ ಎಂದರೆ...

ತ್ರಾಂಬೋಸಿಸ್ ವಿತ್ ತ್ರಾಂಬೋಸೈಟೋಪೀನಿಯಾ ಸಿಂಡ್ರೋಮ್ ಎನ್ನುವುದು ಟಿಟಿಎಸ್‌ನ ವಿಸ್ತೃತ ರೂಪ. ತ್ರಾಂಬೋಸಿಸ್ ಎಂದರೆ, ರಕ್ತ ಹೆಪ್ಪುಗಟ್ಟುವಿಕೆ ಎಂದರ್ಥ. ತ್ರಾಂಬೋಸೈಟೋಪೀನಿಯಾ ಎಂದರೆ, ರಕ್ತದಲ್ಲಿನ ಪ್ಲೇಟ್‌ಲೆಟ್‌ಗಳ ಸಂಖ್ಯೆಯು ಕಡಿಮೆಯಾಗುವುದು ಎಂದರ್ಥ. ಹೀಗೆ ರಕ್ತವು ಹೆಪ್ಪುಗಟ್ಟುವ ಜೊತೆಗೆ ಪ್ಲೇಟ್‌ಲೆಟ್ ಸಂಖ್ಯೆಯೂ ಕಡಿಮೆಯಾಗುವುದೇ ಟಿಟಿಎಸ್. ಲಸಿಕೆ ತೆಗೆದುಕೊಳ್ಳದಿದ್ದರೂ ಮನುಷ್ಯನಲ್ಲಿ ಈ ಸ್ಥಿತಿ ತಲೆದೋರುತ್ತದೆ. ಆದರೆ, ಲಸಿಕೆ ಪಡೆದ ನಂತರ ಲಸಿಕೆಯ ಅಡ್ಡ ಪರಿಣಾಮವಾಗಿ ಕಾಣಿಸಿಕೊಳ್ಳುವುದನ್ನು 'ವ್ಯಾಕ್ಸಿನ್ ಇನ್‌ಡ್ಯೂಸ್ಡ್ ಪ್ರೊತ್ರೊಂಬೊಟಿಕ್ ಇಮ್ಯೂನ್ ತ್ರಾಂಬೊಸೈಟೊಪೀನಿಯಾ (ವಿಐಪಿಐಟಿ) ಅಥವಾ 'ವ್ಯಾಕ್ಸಿನ್ ಇನ್‌ಡ್ಯೂಸ್ಡ್ ತ್ರೊಂಬೊಟಿಕ್ ತ್ರಾಂಬೋಸೈಟೊಪೀನಿಯಾ (ವಿಐಟಿಟಿ) ಎನ್ನುತ್ತಾರೆ. ರೋಗವು ಹೇಗೆ ಬಂತು ಎನ್ನುವುದನ್ನು ಅರ್ಥ ಮಾಡಿಕೊಳ್ಳಲು ಈ ವರ್ಗೀಕರಣ ಮಾಡಲಾಗಿದೆಯಷ್ಟೆ. ರೋಗಲಕ್ಷಣ ಮತ್ತು ಪರಿಣಾಮಗಳು ಮೂರರದ್ದೂ ಒಂದೇ



ಮಿದುಳು ಹಾಗೂ ಅನ್ನನಾಳ ಭಾಗಗಳಲ್ಲಿ ಸಾಮಾನ್ಯವಾಗಿ ರಕ್ತಹೆಪ್ಪುಗಟ್ಟುವುದಿಲ್ಲ. ಅಪಘಾತದಂಥ ಹೊರಗಿನ ಪ್ರಭಾವದಿಂದ ಈ ಭಾಗಗಳಲ್ಲಿ ರಕ್ತಹೆಪ್ಪುಗಟ್ಟುತ್ತದೆ. ಆದರೆ, ಟಿಟಿಎಸ್‌ನಲ್ಲಿ ಮಿದುಳು ಹಾಗೂ ಅನ್ನನಾಳ ಭಾಗಗಳಲ್ಲಿ ರಕ್ತವು ಹೆಪ್ಪುಗಟ್ಟುತ್ತದೆ ಮತ್ತು ಪ್ಲೇಟ್‌ಲೆಟ್ಸ್ ಸಂಖ್ಯೆಯು ಇಳಿಮುಖ ಆಗುತ್ತದೆ. ಇದು ಈ ರೋಗದ ಮುಖ್ಯ ಲಕ್ಷಣ

ರಕ್ತನಾಳಗಳಲ್ಲಿ ರಕ್ತವು ಹೆಪ್ಪುಗಟ್ಟುತ್ತದೆ

- ತೀವ್ರತರವಾದ ನೋವು ಮತ್ತು ಊತ, ಎದೆನೋವು, ದೇಹದ ಒಂದು ಪಾರ್ಶ್ವದಲ್ಲಿ ಮರಗಟ್ಟುವುದು ಮತ್ತು ಬಲಹೀನತೆಯ ಅನುಭವ, ಸ್ಥಿರವಾಗಿರದ ಮನಸ್ಸು– ಇವು ರೋಗಲಕ್ಷಣಗಳು
- ದೇಹಚಲನೆಯು ತ್ರಾಸದಾಯಕವಾಗುವುದು, ಆನುವಂಶಿಕ ರೋಗಗಳು ಉಲ್ಬಣ, ತೂಕ ಹೆಚ್ಚುವುದು, ಗರ್ಭಧಾರಣೆಯಲ್ಲಿ ತೊಂದರೆ, ಕ್ಯಾನ್ಸರ್
- ಹಾರ್ಮೋನ್‌ಗಳು ಉತ್ಪತ್ತಿ ಕುಂಠಿತ, ಆಗ ಬಾಹ್ಯವಾಗಿ ಹಾರ್ಮೋನ್‌ಗಳನ್ನು ನೀಡುವಂತಾಗಬಹುದು
- ದೇಹದ ಪ್ರತಿಕಾಯಗಳನ್ನು ದುರ್ಬಲಗೊಳಿಸುವಂಥ ರೋಗಗಳು ಕಾಣಿಸಿಕೊಳ್ಳುತ್ತವೆ, ಉದಾ: ಸಕ್ಕರೆ ಕಾಯಿಲೆ. ಇವು ಟಿಟಿಎಸ್‌ನ ಅಪಾಯಗಳು
- ಎಂಆರ್‌ಐ ಮತ್ತು ಸಿ.ಟಿ. ಸ್ಕ್ಯಾನ್‌ಗಳ ಮೂಲಕ ರಕ್ತಹೆಪ್ಪುಗಟ್ಟಿರುವುದನ್ನು ಪತ್ತೆ ಹಚ್ಚಬಹುದು

ಪ್ಲೇಟ್‌ಲೆಟ್ ಸಂಖ್ಯೆ ಕಡಿಮೆಯಾಗುವುದು

- ಒಂದು ಮೈಕ್ರೊಲೀಟರ್‌ನಲ್ಲಿ 1.5 ಲಕ್ಷದಿಂದ 4.5 ಲಕ್ಷದವರೆಗೂ ಪ್ಲೇಟ್‌ಲೆಟ್ ಸಂಖ್ಯೆ ಇರಬೇಕು
- ಟಿಟಿಎಸ್ ತಲೆದೋರಿದಾಗ ಮನುಷ್ಯನೊಬ್ಬನಲ್ಲಿ 1.5 ಲಕ್ಷಕ್ಕಿಂತ ಕಡಿಮೆ ಸಂಖ್ಯೆಯ ಪ್ಲೇಟ್‌ಲೆಟ್ ಇರುತ್ತವೆ
- ಒಂದು ವೇಳೆ 10 ಸಾವಿರಕ್ಕಿಂತ ಕಡಿಮೆ ಸಂಖ್ಯೆಯ ಪ್ಲೇಟ್‌ಲೆಟ್ ಇದ್ದರೆ, ಇದು ಅಪಾಯಕಾರಿ ಸ್ಥಿತಿ. ಆಂತರಿಕ ರಕ್ತಸ್ರಾವವಾಗುವ ಸಂಭವ ಇರುತ್ತದೆ.ವಿರಳ ಸಂದರ್ಭಗಳಲ್ಲಿ ಮಿದುಳಿನಲ್ಲಿಯೂ ರಕ್ತಸ್ರಾವವಾಗಬಹುದು
- ಪಿಎಫ್4 ಎಲಿಸಾ ಪರೀಕ್ಷೆಯು ಪ್ಲೇಟ್‌ಲೆಟ್ಸ್ ಸಂಖ್ಯೆಯನ್ನು ಪತ್ತೆಹಚ್ಚುತ್ತದೆ

ಪ್ರಜಾವಾಣಿ ವಾರ್ತೆ

ಕೋವಿಡ್ ನಿಯಂತ್ರಣಕ್ಕಾಗಿ ತಾನು ಅಭಿವೃದ್ಧಿಪಡಿಸಿದ್ದ 'ಕೋವಿಶೀಲ್ಡ್' ಲಸಿಕೆಯಿಂದ ಮಾರಣಾಂತಿಕ ಆರೋಗ್ಯದ ಸಮಸ್ಯೆ ಉಂಟಾಗುತ್ತದೆ ಎಂದು ಆಸ್ಟ್ರಾ ಜೆನೆಕಾ ಕಂಪನಿ ಇದೇ ಮೊದಲ ಬಾರಿಗೆ ಒಪ್ಪಿಕೊಂಡಿದೆ. ಈ ಲಸಿಕೆಯ ಅಡ್ಡಪರಿಣಾಮಕ್ಕೆ ಒಳಗಾದವರು ಹೂಡಿದ್ದ ಮೊಕದ್ದಮೆಯ ವಿಚಾರಣೆಯ ಭಾಗವಾಗಿ ಕಂಪನಿಯು ಲಂಡನ್ ನ್ಯಾಯಾಲಯಕ್ಕೆ ಸಲ್ಲಿಸಿರುವ ಪ್ರಮಾಣ-ಪತ್ರದಲ್ಲಿ ಈ ಮಾಹಿತಿ ಇದೆ ಎಂದು 'ದಿ ಡೈಲಿ ಟೆಲಿಗ್ರಾಫ್' ವರದಿ ಮಾಡಿದೆ. ಕೋವಿಶೀಲ್ಡ್ ಪಡೆದುಕೊಂಡವರಲ್ಲಿ ಅಪರೂಪದ ಪ್ರಕರಣಗಳಲ್ಲಿ ಮಾತ್ರ ರಕ್ತಹೆಪ್ಪುಗಟ್ಟುವಿಕೆ ಮತ್ತು ಪ್ಲೇಟ್‌ಲೆಟ್ ಸಂಖ್ಯೆ ಇಳಿಕೆಯ (ಟಿಟಿಎಸ್) ಸಮಸ್ಯೆ ತಲೆದೋರುತ್ತದೆ ಎಂದು ಕಂಪನಿ ಪ್ರಮಾಣಪತ್ರದಲ್ಲಿ ವಿವರಿಸಿದೆ. ಆದರೆ ಇದು ಅಪರೂಪದ ಅಡ್ಡಪರಿಣಾಮವಾದರೂ ಮಾರಣಾಂತಿಕ ಸಮಸ್ಯೆ ಎಂದು ವಿಶ್ವ ಆರೋಗ್ಯ ಸಂಸ್ಥೆಯು ಹೇಳಿದೆ.



ಬ್ರಿಟನ್‌ನ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ಮತ್ತು ಆಸ್ಟ್ರಾ ಜೆನೆಕಾ ಕಂಪನಿ ಜಂಟಿಯಾಗಿ ಕೋವಿಶೀಲ್ಡ್ ಲಸಿಕೆಯನ್ನು ಅಭಿವೃದ್ಧಿಪಡಿಸಿದ್ದವು. ಭಾರತದ 'ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ' (ಎಸ್‌ಐಐ) ಕಂಪನಿಯು ಈ ಲಸಿಕೆಗಳನ್ನು ತಯಾರಿಸುವ ಗುತ್ತಿಗೆ ಪಡೆದುಕೊಂಡಿತ್ತು. ಬ್ರಿಟನ್, ಐರೋಪ್ಯ ದೇಶಗಳು, ದಕ್ಷಿಣ ಏಷ್ಯಾ ದೇಶಗಳು ಮತ್ತು ಕೆರೀಬಿಯನ್‌ನ ಕೆಲವು ದೇಶಗಳಲ್ಲಿ ಈ ಲಸಿಕೆಯ ಬಳಕೆಯನ್ನು ಜಾರಿಗೆ ತರಲಾಗಿತ್ತು. ಆದರೆ ಆಸ್ಟ್ರಿಯಾದಲ್ಲಿ, ಈ ಲಸಿಕೆ ಪಡೆದು-ಕೊಂಡವರಲ್ಲಿ ಇಬ್ಬರು ರಕ್ತಹೆಪ್ಪುಗಟ್ಟುವಿಕೆಯಿಂದ ಮೃತಪಟ್ಟಿದ್ದರು. ಹೀಗಾಗಿ 2021ರ ಮಾರ್ಚ್‌ನಲ್ಲಿ ಆಸ್ಟ್ರಿಯಾ ಸರ್ಕಾರವು ಈ ಲಸಿಕೆಯ ಬಳಕೆಯನ್ನು ನಿಷೇಧಿಸಿತು. ನಂತರದ ದಿನಗಳಲ್ಲಿ ಐರೋಪ್ಯ ಒಕ್ಕೂಟದ 19 ದೇಶಗಳು ಈ ಲಸಿಕೆಯನ್ನು ನಿಷೇಧಿಸಿದವು. ಅಮೆರಿಕವೂ ಈ ಲಸಿಕೆ ಬಳಸದಂತೆ ಎಚ್ಚರಿಕೆ ನೀಡಿತ್ತು. ಆದರೆ ಈ ಎಲ್ಲವನ್ನೂ ನಿರಾಕರಿಸಿದ್ದ ಆಸ್ಟ್ರಾ ಜೆನೆಕಾ, ಕೋವಿಶೀಲ್ಡ್ ಸುರಕ್ಷಿತ ಎಂದು ಹೇಳಿತ್ತು.

ಆಸ್ಟ್ರಿಯಾ, ಬ್ರಿಟನ್ ಮತ್ತು ಆಸ್ಟ್ರೇಲಿಯಾದ ಆರೋಗ್ಯ ಸಚಿವಾಲಯದ ಸಂಶೋಧನಾ ಸಂಸ್ಥೆಗಳೂ ಅಡ್ಡಪರಿಣಾಮವನ್ನು ದೃಢಪಡಿಸಿದ್ದವು. ಈ ಮೂರೂ ದೇಶಗಳ ಸಂಸ್ಥೆಗಳು ನೀಡಿದ್ದ ವರದಿಯ ಪ್ರಕಾರ ಕೋವಿಶೀಲ್ಡ್ ಪಡೆದುಕೊಂಡ ಪ್ರತಿ 50,000 ಮಂದಿಯಲ್ಲಿ ಒಬ್ಬರಲ್ಲಿ ಟಿಟಿಎಸ್‌ನಂತಹ ಮಾರಣಾಂತಿಕ ಅಡ್ಡಪರಿಣಾಮ ಉಂಟಾಗುತ್ತದೆ ಎಂದು ಹೇಳಿದ್ದವು. 2020ರ ಡಿಸೆಂಬರ್‌ನಲ್ಲಿ ತುರ್ತುಸಮಯದಲ್ಲಷ್ಟೇ ಕೋವಿಶೀಲ್ಡ್ ಬಳಕೆಗೆ ಅನುಮತಿ ದೊರೆತಿತ್ತು. ಆಗ ಬ್ರಿಟನ್ ಸರ್ಕಾರವು ಸುಮಾರು 5 ಕೋಟಿ ಡೋಸ್‌ಗಳನ್ನು ತನ್ನ ನಾಗರಿಕರಿಗೆ ನೀಡಿತ್ತು. ಆ ಸಂದರ್ಭದಲ್ಲಿ ಸಂಭವಿಸಿದ ಕೋವಿಡ್ ಸಾವುಗಳಲ್ಲಿ, 81 ಮಂದಿ ರಕ್ತಹೆಪ್ಪುಗಟ್ಟುವಿಕೆಯ ಸಮಸ್ಯೆಯಿಂದ ಮೃತಪಟ್ಟಿದ್ದರು ಮತ್ತು ಅಷ್ಟೂ ಮಂದಿ ಕೋವಿಶೀಲ್ಡ್ ಲಸಿಕೆ ಪಡೆದುಕೊಂಡಿದ್ದರು ಎಂದು ಬ್ರಿಟನ್‌ನ 'ಮೆಡಿಸನ್ ಆ್ಯಂಡ್ ಹೆಲ್ತ್‌ಕೇರ್ ಪ್ರಾಡಕ್ಟ್ಸ್ ರೆಗ್ಯುಲೇಟರಿ ಏಜೆನ್ಸಿ' ವರದಿ ನೀಡಿತ್ತು. ಟಿಟಿಎಸ್‌ನಿಂದ ಮೃತಪಟ್ಟವರು ಒಂದೆಡೆಯಾದರೆ, ಲಸಿಕೆ ಪಡೆದುಕೊಂಡವರಲ್ಲಿ ಸುಮಾರು 50,000 ಮಂದಿಯಲ್ಲಿ ಟಿಟಿಎಸ್ ಸಮಸ್ಯೆ ತಲೆದೋರಿತ್ತು ಎಂದೂ ಆ ಏಜೆನ್ಸಿ ಮಾಹಿತಿ ನೀಡಿತ್ತು.

ವಿಶ್ವದಾದ್ಯಂತ ಹಲವು ದೇಶಗಳು ಕೋವಿಡ್ ಲಸಿಕೆಯ ಬಳಕೆಯನ್ನು ತಡೆ-ಗಟ್ಟಿದ್ದವು. ಆದರೆ ಭಾರತವೂ ಸೇರಿದಂತೆ ಹಲವು ದೇಶಗಳಲ್ಲಿ ಈ ಲಸಿಕೆಯನ್ನೇ ಪ್ರಧಾನವಾಗಿ ಬಳಸಲಾಯಿತು. ಈ ಅಡ್ಡಪರಿಣಾಮಗಳ ಬಗ್ಗೆ ಆಕ್ಷೇಪಗಳು ಬಂದರೂ, ಲಸಿಕೆ ನೀಡಿಕೆ ಕಾರ್ಯಕ್ರಮ ಮುಂದುವರಿಯಿತು. ಆದರೆ ಬ್ರಿಟನ್‌ನಲ್ಲಿ ಕೋವಿಶೀಲ್ಡ್ ಲಸಿಕೆ ಪಡೆದುಕೊಂಡು ಮೃತಪಟ್ಟ ಮತ್ತು ಶಾಶ್ವತ ಅನಾರೋಗ್ಯಕ್ಕೆ ತುತ್ತಾದ 51 ಮಂದಿಯ ಕುಟುಂಬದವರು 2023ರಲ್ಲಿ ಆಸ್ಟ್ರಾ ಜೆನೆಕಾ ವಿರುದ್ಧ ನ್ಯಾಯಾಲಯದ ಮೊರೆ ಹೋಗಿದ್ದರು. ಈ 51ರಲ್ಲಿ 39 ಮಂದಿ ತಮಗೆ ಉಂಟಾಗಿರುವ ಆರೋಗ್ಯದ ಸಮಸ್ಯೆಗಳಿಗೆ ಕಂಪನಿಯಿಂದ ಪರಿಹಾರ ಕೇಳಿದ್ದರೆ, 12 ಮಂದಿ ಕೋವಿಶೀಲ್ಡ್ ಪಡೆದುಕೊಂಡ ನಂತರ ಮೃತಪಟ್ಟ ತಮ್ಮ ಕುಟುಂಬದ ಸದಸ್ಯರ ಪರವಾಗಿ ಪರಿಹಾರ ಕೇಳಿದ್ದರು. ಆರಂಭದ ವಿಚಾರಣೆ ವೇಳೆ ಅರ್ಜಿದಾರರ ವಾದವನ್ನು ಕಂಪನಿ ನಿರಾಕರಿಸಿತ್ತು. ಆದರೆ ವೈಜ್ಞಾನಿಕ ಪರಿಶೀಲನಾ ವರದಿಗಳು ಮತ್ತು ಕೋವಿಶೀಲ್ಡ್‌ನಿಂದಲೇ ಟಿಟಿಎಸ್ ಸಮಸ್ಯೆ ತಲೆದೋರಿತು ಎಂಬುದನ್ನು ಸಾಬೀತುಮಾಡುವ ವೈದ್ಯಕೀಯ ದಾಖಲಾತಿಗಳನ್ನು ಅರ್ಜಿದಾರರು ಒದಗಿಸಿದ್ದರು.

ಕೋವಿಡ್ ಹರಡುವುದನ್ನು ತಡೆಯುವಲ್ಲಿ ಮತ್ತು ಅದರ ತೀವ್ರತೆಯನ್ನು ಕಡಿಮೆ ಮಾಡುವಲ್ಲಿ ಕೋವಿಶೀಲ್ಡ್ ಲಸಿಕೆಯು ಶೇ 65ರಷ್ಟು ಪರಿಣಾಮಕಾರಿ. ಆದರೆ ಈ ಲಸಿಕೆ ಪಡೆದುಕೊಂಡವರಲ್ಲಿ ಟಿಟಿಎಸ್ ಸಮಸ್ಯೆ ತಲೆದೋರುತ್ತದೆ. ಅದರ ಪರಿಣಾಮವಾಗಿ ಸಾವೂ ಸಂಭವಿಸಬಹುದು ಎಂದು ವಿಶ್ವ ಆರೋಗ್ಯ ಸಂಸ್ಥೆ 2023ರಲ್ಲಿ ವರದಿ ಬಿಡುಗಡೆ ಮಾಡಿತ್ತು.

ಇಷ್ಟೆಲ್ಲಾ ಬೆಳವಣಿಗೆಯ ನಂತರ ಆಸ್ಟ್ರಾ ಜೆನೆಕಾ ಕಂಪನಿಯು, ಕೋವಿಶೀಲ್ಡ್‌ನಿಂದ ಅಪರೂಪಕ್ಕೆ ಟಿಟಿಎಸ್ ಅಡ್ಡಪರಿಣಾಮ ಉಂಟಾಗುತ್ತದೆ ಎಂದು ಇದೇ ಮೊದಲ ಬಾರಿಗೆ ಒಪ್ಪಿಕೊಂಡಿದೆ. ಆದರೆ 51 ಅರ್ಜಿದಾರರಲ್ಲಿ ಎಲ್ಲರಿಗೂ ಲಸಿಕೆಯ ಕಾರಣದಿಂದಲೇ ಟಿಟಿಎಸ್ ತಲೆದೋರಿದೆ ಎಂದು ಹೇಳಲಾಗದು. ಅದನ್ನು ಪರಿಶೀಲಿಸಿ ಪರಿಹಾರ ಒದಗಿಸಬಹುದು ಎಂದು ಕಂಪನಿಯ ವಕೀಲರು ಹೇಳಿದ್ದಾರೆ. ಈಗ ಪ್ರಕರಣವು ಲಂಡನ್ ಹೈಕೋರ್ಟ್‌ಗೆ ಹೋಗಿದೆ. ಕಾನೂನು ಪ್ರಕ್ರಿಯೆ ಏನೇ ಇರಲಿ, ಕೋವಿಶೀಲ್ಡ್ ಲಸಿಕೆ ಪಡೆದು-ಕೊಂಡವರಲ್ಲಿ ರಕ್ತಹೆಪ್ಪುಗಟ್ಟುವಿಕೆಯಂತಹ ಮಾರಣಾಂತಿಕ ಅಡ್ಡಪರಿಣಾಮ ಉಂಟಾಗುತ್ತದೆ ಎಂಬುದಂತೂ ಸಾಬೀತಾಗಿದೆ.

ಆಧಾರ: ಪಿಟಿಐ, ದಿ ಡೈಲಿ ಟೆಲಿಗ್ರಾಫ್, ನ್ಯೂಯಾರ್ಕ್ ಪೋಸ್ಟ್ ವರದಿಗಳು, ಚುನಾವಣಾ ಆಯೋಗದ ದಾಖಲೆಗಳು, 'ಸೆಂಟರ್ ಫಾರ್ ಡಿಸೀಸ್ ಕಂಟ್ರೋಲ್ ಆ್ಯಂಡ್ ಪ್ರಿವೆನ್ಷನ್' ವರದಿ

ಹಠಾತ್ ಕುಸಿದುಬಿದ್ದು ಸಾವು...

ಹಠಾತ್ ಕುಸಿದುಬಿದ್ದು ಮೃತಪಡುವವರ ಸಂಖ್ಯೆ ಕೋವಿಡ್ ಸಾಂಕ್ರಾಮಿಕದ ನಂತರ ಭಾರತದಲ್ಲಿ ಬಹಳ ಏರಿಕೆಯಾಗಿದೆ. ಕಾಲೇಜು ವಿದ್ಯಾರ್ಥಿಗಳು, ಯುವಕರು, ಮಧ್ಯವಯಸ್ಕರಲ್ಲಿ ಇಂತಹ ಸಾವು ಹೆಚ್ಚು ಸಂಭವಿಸಿವೆ. ಕೋವಿಡ್ ಲಸಿಕೆಯ ಕಾರಣದಿಂದಲೇ ಇಂತಹ ಸಾವುಗಳು ಹೆಚ್ಚಾಗುತ್ತಿವೆ ಎಂದು ದೇಶದ ಹಲವು ವೈದ್ಯರು, ಸಾಮಾಜಿಕ ಕಾರ್ಯಕರ್ತರು ಆಕ್ಷೇಪ ವ್ಯಕ್ತಪಡಿಸಿದ್ದರು.

ಕೋವಿಡ್ ಲಸಿಕೆಗಳ ಅಡ್ಡಪರಿಣಾಮಗಳನ್ನು ಪರಿಶೀಲಿಸದೆಯೇ ಲಸಿಕೆಗಳನ್ನು ಜನರಿಗೆ ನೀಡಲಾಗುತ್ತಿದೆ. ಇದರಿಂದಲೇ ಹಲವರು ಮೃತಪಡುತ್ತಿದ್ದಾರೆ ಎಂದು ವಿರೋಧ ಪಕ್ಷಗಳೂ ಆರೋಪಿಸಿದ್ದವು. ಕೋವಿಶೀಲ್ಡ್ ಲಸಿಕೆ ಪಡೆದುಕೊಂಡ ತಮಿಳುನಾಡಿನ ವ್ಯಕ್ತಿಯೊ-ಬ್ಬರ ಮಿದುಳಿನಲ್ಲಿ ರಕ್ತ ಹೆಪ್ಪುಗಟ್ಟಿ, ಶಾಶ್ವತ ಆರೋಗ್ಯದ ಸಮಸ್ಯೆ ಉಂಟಾಗಿತ್ತು. ಈ ಬಗ್ಗೆ ಮಾಧ್ಯಮಗಳಿಗೆ ಹೇಳಿಕೆ ನೀಡಿದ್ದರು. ಆ ಕುಟುಂಬದ ವಿರುದ್ಧ ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ–ಎಸ್‌ಐಐ ಕಂಪನಿಯು ಮಾನಹಾನಿ ಪ್ರಕರಣ ದಾಖಲಿಸಿತ್ತು.

ಕೇಂದ್ರ ಸರ್ಕಾರವೂ ಇಂತಹ ಅಡ್ಡಪರಿಣಾಮದ ಸಾಧ್ಯತೆಯನ್ನು ನಿರಾಕರಿಸಿತ್ತು. ಕೋವಿಡ್ ಲಸಿಕೆ ಕಾರ್ಯಕ್ರಮವನ್ನು ವಿಫಲಗೊಳಿಸಲು ವಿರೋಧ ಪಕ್ಷಗಳು ಸಂಚುಹೂಡುತ್ತಿವೆ ಎಂದು ಆರೋಪಿಸಿತ್ತು. ಆದರೆ ಆ ಲಸಿಕೆಯನ್ನು ಅಭಿವೃದ್ಧಿಪಡಿಸಿದ ಕಂಪನಿಯೇ ಅಂತಹ ಅಡ್ಡಪರಿಣಾಮ ನಿಜ ಎಂದು ಒಪ್ಪಿಕೊಂಡಿದೆ. ಲಸಿಕೆಯ ಅಡ್ಡಪರಿಣಾಮಗಳಿಗೆ ಒಳಗಾದವರನ್ನು ಸರ್ಕಾರ ಹೇಗೆ ರಕ್ಷಿಸುತ್ತದೆ ಎಂದು ವಿರೋಧ ಪಕ್ಷಗಳು ಪ್ರಶ್ನಿಸಿವೆ.

50,000 ಮಂದಿಯಲ್ಲಿ ಒಬ್ಬರಲ್ಲಷ್ಟೇ ಟಿಟಿಎಸ್ ಅಡ್ಡಪರಿಣಾಮ ತಲೆದೋರುವ ಸಾಧ್ಯತೆ ಇರುತ್ತದೆ

ಕೋಟ್ಯಂತರ ಭಾರತೀಯರಿಗೆ ಕೋವಿಶೀಲ್ಡ್

ಆಸ್ಟ್ರಾ ಜೆನೆಕಾ ಕಂಪನಿಯ ಕೋವಿಶೀಲ್ಡ್ ಲಸಿಕೆಯನ್ನು ತಯಾರಿಸಿ, ವಿತರಿಸುವ ಪ್ರಧಾನ ಗುತ್ತಿಗೆ ಪಡೆದುಕೊಂಡಿದ್ದದ್ದು ಪುಣೆಯ ಎಸ್‌ಐಐ. ಭಾರತದಲ್ಲಿ ಈವರೆಗೆ ಒಟ್ಟು 200 ಕೋಟಿ ಡೋಸ್‌ಗಳಷ್ಟು ಕೋವಿಡ್ ಲಸಿಕೆಗಳನ್ನು ನೀಡಲಾಗಿದೆ. ಅದರಲ್ಲಿ 176 ಕೋಟಿ ಡೋಸ್‌ಗಳು ಕೋವಿಶೀಲ್ಡ್‌ನದ್ದು.

200+ ಕೋಟಿ ಭಾರತೀಯರಿಗೆ ನೀಡಲಾದ ಕೋವಿಡ್ ಲಸಿಕೆಗಳ ಒಟ್ಟು ಡೋಸ್‌ಗಳು

176+ ಕೋಟಿ ಭಾರತೀಯರಿಗೆ ನೀಡಲಾದ ಕೋವಿಶೀಲ್ಡ್ ಲಸಿಕೆಯ ಡೋಸ್‌ಗಳು

ಕೋವಿಡ್ ತೀವ್ರವಾಗಿದ್ದ ಸಂದರ್ಭದಲ್ಲಿ ಕೋಟ್ಯಂತರ ಭಾರತೀಯರಿಗೆ ಕೊವಿಶೀಲ್ಡ್ ನೀಡಲಾಗಿದೆ. ಕೋವಿಶೀಲ್ಡ್‌ನ ಈ ಅಡ್ಡಪರಿಣಾಮಗಳಿಂದ ಜನರನ್ನು ರಕ್ಷಿಸುವ ಸಂಬಂಧ ಕೇಂದ್ರ ಸರ್ಕಾರವು ತಕ್ಷಣವೇ ಕ್ರಮ ತೆಗೆದುಕೊಳ್ಳಬೇಕು

ಸೌರವ್ ಭಾರದ್ವಾಜ್, ದೆಹಲಿ ಆರೋಗ್ಯ ಸಚಿವ

ಕೇಂದ್ರ ಸರ್ಕಾರವು ಕೋವಿಶೀಲ್ಡ್ ತಯಾರಕರಿಂದ ಕಮಿಷನ್ ಪಡೆದುಕೊಂಡಿತ್ತು. ಹೀಗಾಗಿಯೇ ಅಪಾಯಕಾರಿ ಎಂದು ಗೊತ್ತಿದ್ದರೂ ದೇಶದ ಜನರಿಗೆ ಬಲವಂತವಾಗಿ ಲಸಿಕೆ ನೀಡಿತು. ಈ ಕಾರಣದಿಂದಲೇ ಜನರು ಸಾಯುತ್ತಿದ್ದಾರೆ

ಡಿಂಪಲ್ ಯಾದವ್, ಮೈನ್‌ಪುರಿ ಲೋಕಸಭಾ ಕ್ಷೇತ್ರದ ಎಸ್‌ಪಿ ಅಭ್ಯರ್ಥಿ

ಮೇ 3ಕ್ಕೆ 'ಕಾಂಗರೂ' ಬಿಡುಗಡೆ




ಆದಿತ್ಯ, ರಂಜನಿ ರಾಘವನ್

ಕಿಶೋರ್ ಮೇಗಳಮನೆ ನಿರ್ದೇಶನದಲ್ಲಿ 'ಡೆಡ್ಲಿ ಸೋಮ' ಖ್ಯಾತಿಯ ಆದಿತ್ಯ ನಾಯಕರಾಗಿ ನಟಿಸಿರುವ 'ಕಾಂಗರೂ' ಚಿತ್ರ ಮೇ 3ರಂದು 150 ಚಿತ್ರಮಂದಿರ-ಗಳಲ್ಲಿ ಬಿಡುಗಡೆಯಾಗಲಿದೆ.

ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಯಾಗಿದ್ದು, ನಾಯಕಿಯಾಗಿ ರಂಜನಿ ರಾಘವನ್ ಅಭಿನಯಿಸಿದ್ದಾರೆ. ಈ ಚಿತ್ರದ ಕಥೆಗೆ 'ಯೂ ಟರ್ನ್' ಸಿನಿಮಾ ಸ್ಫೂರ್ತಿ ಎಂದಿರುವ ಕಿಶೋರ್, 'ಒಂದು ಸಣ್ಣ ತಪ್ಪಿನಿಂದ ಮುಂದೆ ಏನೇನೆಲ್ಲ ಆಗಬಹುದೆಂದು ಚಿತ್ರದಲ್ಲಿ ತೋರಿಸಿದ್ದೇವೆ' ಎಂದರು.

'ಥ್ರಿಲ್ಲರ್, ಹಾರರ್ ಅಂಶಗಳು ಈ ಸಿನಿಮಾದಲ್ಲಿವೆಯಾದರೂ ಇದೊಂದು ಪಕ್ಕಾ ಭಾವನಾತ್ಮಕ ಸಿನಿಮಾ. 'ಡೆಡ್ಲಿ ಸೋಮ' ಸಿನಿಮಾವನ್ನು ತನ್ನ ಸಂಗೀತದಿಂದಲೇ ಸಾಧು ಕೋಕಿಲ ಅವರು ಬೇರೆ ಮಟ್ಟಕ್ಕೆ ತೆಗೆದುಕೊಂಡು ಹೋಗಿದ್ದರು. ಈ ಸಿನಿಮಾಗೂ ಅವರದ್ದೇ ಸಂಗೀತವಿದೆ. ನಾನು ಈ ಚಿತ್ರದಲ್ಲಿ ತನಿಖಾಧಿಕಾರಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಮೇ 4 ನನ್ನ ಜನ್ಮದಿನ. ಮೇ 3ರಂದು ನಮ್ಮ ಚಿತ್ರ ಬಿಡುಗಡೆಯಾಗಲಿದೆ' ಎಂದರು ಆದಿತ್ಯ. 'ಒಬ್ಬ ಪ್ರೇಕ್ಷಕಳಾಗಿ ನಾನು ಸಿನಿಮಾವನ್ನು ನೋಡಿದ್ದೇನೆ. ನಿರ್ದೇಶಕರು ಪ್ರತಿ ಪಾತ್ರವನ್ನು ಅಚ್ಚುಕಟ್ಟಾಗಿ ತೆರೆಗೆ ತಂದಿದ್ದಾರೆ' ಎನ್ನುತ್ತಾರೆ ರಂಜನಿ ರಾಘವನ್.

'777 ಚಾರ್ಲಿ' ಜಪಾನ್‌ನಲ್ಲಿ ಬಿಡುಗಡೆ



69ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪಡೆದುಕೊಂಡಿದ್ದ ರಕ್ಷಿತ್ ಶೆಟ್ಟಿ ನಟನೆಯ '777 ಚಾರ್ಲಿ' ಸಿನಿಮಾವು ಜಪಾನ್ ದೇಶದ ಪ್ರಮುಖ ನಗರಗಳಲ್ಲಿ ತೆರೆಕಾಣಲಿದೆ.

ಪರಂವಃ ಸ್ಟುಡಿಯೊಸ್ ನಿರ್ಮಾಣದ ಈ ಚಿತ್ರವನ್ನು ಕಿರಣ್‌ರಾಜ್ ಕೆ. ನಿರ್ದೇಶಿಸಿದ್ದಾರೆ. ಜೂನ್ 28ರಂದು ಸಿನಿಮಾ ಜಪಾನ್‌ನಲ್ಲಿ ಸಿನಿಮಾ ರಿಲೀಸ್ ಆಗಲಿದೆ. ಜಪಾನಿನ ಅತೀ ದೊಡ್ಡ ಹಾಗೂ ಜಪಾನ್ ಚಿತ್ರರಂ-ಗದಲ್ಲಿ 100 ವರ್ಷಕ್ಕೂ ಅಧಿಕ ಅನುಭವ ಹೊಂದಿರುವ 'ಶೋಚಿಕೋ ಮೂವೀ' ಎಂಬ ಸಂಸ್ಥೆ '777 ಚಾರ್ಲಿ' ಚಿತ್ರವನ್ನು ಜಪಾನಿನಲ್ಲಿ ವಿತರಣೆ ಮಾಡಲಿದೆ. ವಿಶೇಷವೇನೆಂದರೆ ಇದೇ ಸಂಸ್ಥೆಯು ಈ ಹಿಂದೆ ಹಾಲಿವುಡ್‌ನ ಹಿಟ್ ಸಿನಿಮಾ 'ಹಾಚಿ: ಎ ಡಾಗ್ಸ್ ಟೇಲ್' ಅನ್ನು ಜಪಾನಿನಲ್ಲಿ ವಿತರಣೆ ಮಾಡಿತ್ತು.

ಕಳೆದ ವರ್ಷ ಥಾಯ್ಲೆಂಡ್‌ನಲ್ಲಿ ಡಬ್ ಆಗಿ ಬಿಡುಗಡೆಗೊಂಡ ಈ ಚಿತ್ರ, ಮುಂದಿನ ದಿನಗಳಲ್ಲಿ ಜಪಾನ್ ಸೇರಿದಂತೆ ರಷ್ಯಾ, ಲ್ಯಾಟಿನ್ ಅಮೆರಿಕ, ತೈವಾನ್, ಜರ್ಮನಿ ಹಾಗೂ ಇನ್ನಿತರ ದೇಶಗಳಲ್ಲಿ ಆಯಾ ಭಾಷೆಗಳಲ್ಲಿ ಡಬ್ ಆಗಿ ಬಿಡುಗಡೆಯಾಗಲಿದೆ.

ಗುಂಡಣ್ಣ



ಅನ್ನದಾತನ ಜ್ಞಾನ ಸಂಗತಿಗಳು

ನುಡಿ ಬೆಳಗು



ಕಲೀಮ್ ಉಲ್ಲಾ, ಕನ್ನಡ ಉಪನ್ಯಾಸಕ

ಅವರು ಪಟ್ಟಣದ ರಸ್ತೆ ಬದಿಯ ಟೀ ಅಂಗಡಿಯಲ್ಲಿ ಚಾ ಕುಡಿಯುತ್ತಿದ್ದರು. ಪಕ್ಕದಲ್ಲೇ ದೊಡ್ಡ ಚರಂಡಿ ಹರಿಯುತ್ತಿತ್ತು. ಅದರ ಬದಿಯಲ್ಲೇ ಕಾಂಕ್ರೀಟಿನ ಇಕ್ಕಟ್ಟಿನಲ್ಲಿ ಎತ್ತರಕ್ಕೆ ಬೆಳೆದ ನೂರು ವರ್ಷದ ತೆಂಗಿನ ಮರವಿತ್ತು. ಮರವನ್ನೊಮ್ಮೆ ಕತ್ತೆತ್ತಿ ನೋಡಿದರು, ಅದರ ತುಂಬಾ ತೆಂಗು ರಾಶಿ ರಾಶಿ ತೂಗುತ್ತಿದ್ದವು. ನಮ್ಮ ತೋಟದ ತೆಂಗಿನ ಮರಗಳಿಗೆ ಏನು ಬಂದಿದೆ ರೋಗ. ಅಷ್ಟೊಂದು ಫಲವತ್ತಾದ ಮಣ್ಣು ಗೊಬ್ಬರ, ನೀರು ಎಲ್ಲಾ ಕೊಟ್ಟರೂ ಇಷ್ಟೊಂದು ಫಲ ಬಿಡುವುದಿಲ್ಲವಲ್ಲ. ಯಾವ ಆರೈಕೆಯೂ ಇಲ್ಲದ ಈ ಮರ ಅದು ಹೇಗೆ ಇಷ್ಟೊಂದು ಸಮೃದ್ಧವಾಗಿ ಬೆಳೆಯುತ್ತಿದೆ. ಜೊತೆಗೆ ಅಸಂಖ್ಯಾತ ಫಲಗಳ ಫಸಲು ಕೊಡುತ್ತಿದೆ ಎಂದು ಚಿಂತಿಸಿದರು. ಈ ಚರಂಡಿಯ ಕೊಳಚೆ ನೀರೇ ಇದಕ್ಕೆ ಮುಖ್ಯ ಪ್ರಾಣ ಧಾತು ಆಗಿರಬಹುದೇ ಎಂದೂ ಯೋಚಿಸಿದರು.

ತಮ್ಮ ತೋಟಕ್ಕೆ ಹೋಗಿ ಘನ ಗೊಬ್ಬರ ಕೊಡುವ ಪದ್ಧತಿ ನಿಲ್ಲಿಸಿದರು. ಬದಲಿಗೆ ಎಲ್ಲಾ ಪೋಷಕಾಂಶಗಳನ್ನೂ ದ್ರವದ ರೂಪದಲ್ಲಿ ತೆಂಗಿನ ಮರಗಳಿಗೆ ಉಣಿಸಿದರು. ಎರಡು ವರ್ಷಗಳಲ್ಲಿ ಈ ಪ್ರಯೋಗ ಯಶಸ್ಸು ಕಂಡಿತು. ತೆಂಗಿನ ಮರಗಳ ಫಸಲು ಮೊದಲಿಗಿಂತ ಅಧಿಕ ಇಳುವರಿ ನೀಡತೊಡಗಿದವು.

ಮತ್ತೊಂದು ದಿನ ತೆಂಗಿಗೆ ಮಂಗಗಳ ಕಾಟ ಅತಿಯಾದಾಗ ಮನೆಯಲ್ಲಿದ್ದ ಬಂದೂಕು ತಂದು ಗಾಳಿಯಲ್ಲಿ ಗುಂಡು ಹಾರಿಸಿದರು. ಆಗ ಒಂದು ಮಂಗದ ಕಾಲಿಗೆ ಪೆಟ್ಟಾಯಿತು. ರಕ್ತ ಸೋರ ತೊಡಗಿತು. ಅದು ಕಿರುಚುತ್ತಾ ಮರದಿಂದ ಮರಕ್ಕೆ ನೆಗೆದು ಓಡ ತೊಡಗಿತು. ಅದು ಪೆಟ್ಟಾದ ತನ್ನ ಗಾಯಕ್ಕೆ ಏನು ಚಿಕಿತ್ಸೆ ಮಾಡಿಕೊಳ್ಳಬಹುದೆಂಬ ಕುತೂಹಲ ಇವರಲ್ಲಿ ಹುಟ್ಟಿತು. ಅದೇ ಸಮಯಕ್ಕೆ ತಮ್ಮ ಬಲಕಿವಿಯ ಭಾಗದಲ್ಲೂ ರಕ್ತ ಸೋರುವ ಸಂಗತಿ ಇವರ ಅರಿವಿಗೆ ಬಂತು. ಮಂಗನಿಗೆ ಗುಂಡು ಹಾರಿಸುವ ಸಂದರ್ಭದಲ್ಲಿ ಅದರ ಚರೆಗಳು ಹಾರಿ ಇವರ ಕಿವಿಗೂ ಗಾಯವಾಗಿತ್ತು. ಮಂಗ ಮುಂದೆ ಏನು ಮಾಡಬಹುದೆಂಬ ಕುತೂಹಲದಲ್ಲಿ ಅದನ್ನೇ ಹಿಂಬಾಲಿಸಿದರು.

ಮುಂದೆ ಸಾಗಿ ನೋಡಿದಾಗ ಮಂಗ ಒಂದು ಬಳ್ಳಿಯ ಸೊಪ್ಪನ್ನು ತರಿದು ತಿನ್ನುತ್ತಿತ್ತು. ಬಾಯ ತುಂಬಾ ಸೊಪ್ಪನ್ನು ಜಗಿದ ನಂತರ ಅದನ್ನು ಹೊರ ತೆಗೆದು ತನ್ನ ಅಂಗೈಯಲ್ಲಿ ಇಟ್ಟುಕೊಳ್ಳುವುದನ್ನು ಇವರು ನೋಡಿದರು. ಅಚ್ಚರಿ ಹೆಚ್ಚಾಗಿ ಮುಂದೆ ಗಮನಿಸಿದಾಗ ಆ ಮಂಗ ಆ ನುರಿದ ಸೊಪ್ಪನ್ನು ತನ್ನ ಗಾಯಕ್ಕೆ ಹಚ್ಚಿಕೊಳ್ಳುತ್ತಿತ್ತು. ನಂತರ ಅದೇ ಸೊಪ್ಪನ್ನು ಇವರೂ ಮನೆಗೆ ತಂದು ರಸ ಹಿಂಡಿ ತಮ್ಮ ಗಾಯಕ್ಕೆ ಸವರಿಕೊಂಡರು. ಕಿವಿಗಾದ ಗಾಯ ಮತ್ತು ನೋವು ಒಂದೇ ದಿನದಲ್ಲಿ ವಾಸಿಯಾಗಿತ್ತು.

ತಮ್ಮ ಈ ಅನುಭವಗಳನ್ನು ನನಗೆ ಹೇಳಿದ್ದು ಒಬ್ಬ ಪ್ರಗತಿಪರ ರೈತರು. ಅವರು ಹೆಚ್ಚು ಓದಿದವರಲ್ಲ. ಹೀಗೆ ಪ್ರಕೃತಿಯನ್ನು ನೋಡುತ್ತಾ, ಸೂಕ್ಷ್ಮವಾಗಿ ಎಲ್ಲವನ್ನೂ ಗಮನಿಸುತ್ತಾ ಅನೇಕ ಪ್ರಯೋಗಗಳನ್ನು ಮಾಡಿದವರು. ಆ ಮೂಲಕ ಒಂದಿಷ್ಟು ತಮ್ಮದೇ ಹೊಸ ಜ್ಞಾನಶೈಲಿ ಹುಡುಕಿಕೊಂಡವರು. ಈ ಬಗೆಯ ನೈಪುಣ್ಯ ಗಳಿಸಿದ ಸಾವಿರಾರು ಉಳುವ ಯೋಗಿಗಳು ನಮ್ಮ ನಡುವೆ ಇದ್ದಾರೆ. ಹೆಚ್ಚು ಕಲಿತು ಡಿಗ್ರಿಗಳ ಇಟ್ಟುಕೊಂಡ ನಾವು ಮಾತ್ರ ಜಾಣರೆಂಬ ಸುಳ್ಳು ಭ್ರಮೆ ನಮಗಿದೆ. ನಿಸರ್ಗದ ಸಂಗಡ ದಿನವೂ ಮಾತನಾಡುವ, ಮಳೆ, ಬೆಳೆಗಳ ಬಗ್ಗೆ ಅಪಾರ ಜ್ಞಾನ ಗಳಿಸಿರುವ ಹಳ್ಳಿ ಬದುಕಿನ ಅನುಭವ ಲೋಕವೆಂದರೆ ನಮಗೆ ಅಸಡ್ಡೆ. ವಿಜ್ಞಾನಿಗಳಂತೆ ಪ್ರಯೋಗ ಮಾಡುವ, ಸೋತು ಗೆದ್ದು ಹೊಸ ಮಾಹಿತಿ ಪಡೆಯುವ ರೈತರ ಕ್ರಿಯಾಶೀಲತೆ ಮತ್ತು ವಿವೇಕಗಳೇ ನಮ್ಮ ಅನ್ನದ ರೂಪಗಳು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಮೇ 1, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಕೃಷ್ಣ ಸಪ್ತಮಿ ಗಂ. 5-47 ನಂತರ ಅಷ್ಟಮಿ ಗಂ. 28-02 ನಕ್ಷತ್ರ ಶ್ರವಣ ಗಂ. 27-11 ಯೋಗ: ಶುಭ ಗಂ. 20-01 ಕರಣ: ಬವ ಗಂ. 5-47, ಮೇಷ ಮಾಸದ 19 ನೇ ದಿನ, ಮಳೆನಕ್ಷತ್ರ: ಭರಣಿ 2.
ರಾಹುಕಾಲ : ಮಧ್ಯಾಹ್ನ 12 - 1.30
ಸೂರ್ಯೋದಯ : 06-13 ಸೂರ್ಯಾಸ್ತ : 06-42
ಮುಸ್ಲಿಂ ದಿನಾಂಕ : 21 ಶವ್ವಾಲ್
ಅದೃಷ್ಟ ಸಂಖ್ಯೆ : 2, 7

ಮೇಷ: ಇನ್ನೊಬ್ಬರೊಂದಿಗೆ ಮಾತನಾಡುವಾಗ ತುಂಬಾ ಅಳೆದು ತೂಗಿ ಮಾತನಾಡುವ ಪ್ರವೃತ್ತಿಯು ಎದುರಿನ ವ್ಯಕ್ತಿಗಳಿಗೆ ತಮ್ಮನ್ನು ದೂರವಿಟ್ಟಿದ್ದಾರೆ ಎಂಬ ಭಾವನೆಯನ್ನು ತರಬಹುದು. ಈ ಬಗ್ಗೆ ಗಮನ ಹರಿಸಿ.

ವೃಷಭ: ನಿಮ್ಮ ನಡುವಳಿಕೆಯು ಇತರರಿಗೆ ಗೊಂದಲಮಯವಾಗಿ ಕಂಡರೂ ಅಸಹಾಯಕತೆಯಿಂದ ನಿಲ್ಲುವ ಕಾರ್ಯವನ್ನು ಬಿಡುವುದಕ್ಕಿಂತ ಉಳಿಸಿಕೊಳ್ಳಲು ಪ್ರಯತ್ನ ಬೇಕಾಗುವುದರಿಂದ ನೀವು ಧೈರ್ಯದಿಂದ ಮಾಡಿ.

ಮಿಥುನ: ಗ್ರಹಗಳ ಚಲನೆಯು ಸುಖಮಯವಾಗಿ ಜೀವನ ನಡೆಸಲು ಅನುಕೂಲವಾಗಿದೆ. ಮಕ್ಕಳ ಮೂಲಕ ಕೆಲವು ಸಮಸ್ಯೆಗಳಿಗೆ ಪರಿಹಾರವು ದೊರೆಯುತ್ತದೆ. ತಂಪುಪಾನೀಯಗಳ ಉತ್ಪಾದಕರಿಗೆ ಲಾಭ ಸಿಗುತ್ತದೆ.

ಕರ್ಕಾಟಕ: ಗುರು ಹಿರಿಯರ ಅಣತಿಯಂತೆ ವಿವಾಹ ಸಂಬಂಧಿ ವಿಷಯಗಳಿಗೆ ನಿರಾಕರಣೆಯನ್ನು ಮಾಡದೆ ಒಪ್ಪಿಕೊಳ್ಳುವುದು ಉತ್ತಮ. ಏನನ್ನಾದರೂ ಸಾಧಿಸಲೇಬೇಕೆಂದಿರುವಾಗ ಆತ್ಮವಿಶ್ವಾಸದ ಕೊರತೆ ಕಾಣಿಸದು.

ಸಿಂಹ: ದೇಹಾಲಸ್ಯದಿಂದ ಹಲವು ದಿನಗಳಿಂದ ತಳ್ಳುತ್ತ ಬಂದಿದ್ದ ಕಾರ್ಯಗಳನ್ನು ಮುಂದು ಹಾಕುವುದು ಒಳ್ಳೆಯದಲ್ಲ. ಸ್ವಾಭಾವಿಕವಾಗಿ ಬಂದ ಕಾಯಿಲೆ ಸಹಜವಾಗಿ ಪರಿಹಾರವಾಗುವುದು.

ಕನ್ಯಾ: ಸಂಶೋಧನೆಯಲ್ಲಿ ತೊಡಗಿರುವ ರಾಸಾಯನಿಕ ಸಂಶೋಧನಾ ವಿದ್ಯಾ-ರ್ಥಿಗಳಿಗೆ ಉತ್ತಮ ಫಲಿತಾಂಶ ದೊರೆಯಲಿದೆ. ಅಂದುಕೊಂಡ ಕೆಲಸಗಳು ಪ್ರಯತ್ನದಿಂದ ಆಗುತ್ತದೆ.

ತುಲಾ: ದಿನಾಂತ್ಯದಲ್ಲಿ ಬಿರುಸಿನ ಕಾರ್ಯ ಚಟುವಟಿಕೆಗಳಿಂದ ಬಿಡುವು ಮಾಡಿಕೊಂಡು ಮನೆಯವರೊಡನೆ ಕಾಲ ಕಳೆಯಲು ಅಪೇಕ್ಷಿಸುವಿರಿ. ಮಕ್ಕಳ ರೋಗತಜ್ಞರಿಗೆ ವಿಶೇಷ ಸವಾಲೊಂದು ಎದುರಾಗುವ ಸಂಭವ ಈ ದಿನವಿದೆ.

ವೃಶ್ಚಿಕ: ಅವಿವಾಹಿತರು ಆದಷ್ಟು ಬೇಗ ವಿವಾಹದ ವಿಚಾರದಲ್ಲಿ ತೀರ್ಮಾನ ತೆಗೆದುಕೊಳ್ಳಿ. ಮುಖ ಕಪ್ಪಗಾಗುವಂತಹ ಪರಿಸ್ಥಿತಿಗಳನ್ನು ತಂದೊಡ್ಡಿಕೊಳ್ಳ-ಬೇಡಿ. ತಂದೆ ತಾಯಿಯ ಮಾತನ್ನು ಮೀರಿ ಇಂದು ಪ್ರಯಾಣ ಕೈಗೊಳ್ಳಬೇಡಿ.

ಧನು: ನಾಯಕತ್ವದ ಪಟ್ಟ ಹೊರುವ ನಿಮ್ಮ ಸಾಮರ್ಥ್ಯವು ಕೆಲವರ ಕಣ್ಣನ್ನು ಕೆಂಪಗೆ ಮಾಡುತ್ತದೆ, ಭಯ ಬೇಡ ಮುನ್ನುಗ್ಗಿ ಕಾರ್ಯ ನಿರ್ವಹಿಸಿ. ಮಧ್ಯಾಹ್ನದ ನಂತರದ ಪ್ರಯಾಣವನ್ನು ಮಾಡದಿರುವುದು ಉತ್ತಮವೆನಿಸಲಿದೆ.

ಮಕರ: ಸುದ್ದಿಗೋಷ್ಠಿಗಳಲ್ಲಿ ಭಾಗವಹಿಸುವಂತಾಗಲಿದೆ. ಮಗನ ವಿಷಯ ಮನೆಯಲ್ಲಿ ಚರ್ಚೆಗೆ ಬರುವುದು. ಸಂಗಾತಿಯೊಂದಿಗೆ ಭಾವನಾತ್ಮಕ ಪ್ರಕ್ಷುಬ್ಧತೆಗೆ ಒಳಗಾಗುವಂತಹ ಸಾಧ್ಯತೆ ಇದೆ.ಸಂತೋಷದ ದಿನವಾಗಿದೆ.

ಕುಂಭ: ಇಂದು ಮಾಡುವ ಸಹಾಯವು ಮುಂದಿನ ಜೀವನಕ್ಕೆ ಸಹಕಾರಿ-ಯಾಗಲಿದೆ. ಇಷ್ಟ ಕ್ಷೇತ್ರದಲ್ಲಿ ಹೊಸ ಉದ್ಯೋಗ ಪಡೆಯುವವರಿಗೆ ಕೆಲಸ ದೊರೆಯುತ್ತದೆ. ರಾಜಕೀಯ ಕ್ಷೇತ್ರದಲ್ಲಿರುವವರಿಗೆ ಅನುಕೂಲವಾಗಲಿದೆ.

ಮೀನ: ಸಿದ್ಧ ಉಡುಪಗಳ ವ್ಯಾಪಾರಸ್ಥರು ರಫ್ತು ವ್ಯಾಪಾರದಿಂದ ಹೇರಳ ಲಾಭ ಪಡೆಯುವಿರಿ. ಬಲವಾದ ಕಾರಣವಿಲ್ಲದೆ ಇಂದು ಯಾರ ಮೇಲೂ ಕೋಪಿಸಿ-ಕೊಳ್ಳಬೇಡಿ. ಮನಃಪೂರ್ವಕವಾಗಿ ಮಾಡಿದ ಕೆಲಸಕ್ಕೆ ಶ್ಲಾಘನೆ ದೊರಕಲಿದೆ.

ಪದಬಂಧ 5667


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಸೋಲು ಹೀಗೆ ಬಂದಿದೆಯಲ್ಲಾ? (4)
3.ಜ್ಞಾನವನ್ನು ಬೋಧಿಸುವುದು (4)
5.ಸಮಾಧಾನ ಈ ರೀತಿ ಬಂದಿದೆ (3)
6.ಅತಿಯಾದ ಬಯಕೆ (3)
8.ಮರದ ಹತ್ತಿರ ನಿಂತಿರುವ ಹೆಡ್ಡ (3)
9.ವಿನಿಯೋಗದಲ್ಲಿ ಕಾಡಿದ ವಿರಹ! (3)
10.ಮಲಗುವಾಗ ಕಾಣಿಸಿದ ಸೇವಕ (3)
12.ಕುಣಿಯುತ್ತಾ ಹಾಕಿದ ಜೀರುಗಂಟು (3)
14.ಕರದಲ್ಲಿರುವ ಮೃತದೇಹ (4)
15.ವಾಡಿಕೆಯಂತೆ ಹಾಲು ಮಾರುವವ ಬಂದಿದ್ದಾನೆ (4)

ಮೇಲಿಂದ ಕೆಳಕ್ಕೆ

1.ಉತ್ತಮ ಕುಲದಲ್ಲಿ ಹುಟ್ಟಿದವನು (4)
2.ವರ್ತಕನ ರೂಢಿ! (3)
3.ನಾದಿನಿ ಹಾಕಿರುವ ಅಡಿಪಾಯ (3)
4.ದರದೊಳಗಿರುವ ಅಗತ್ಯ ಗೊತ್ತಾಯಿತೇ? (4)
7.ಕೈ ಮೊದಲಿದ್ದಾಗ ಕಾಣಿಸಿದ ಉತ್ಸವ (3)
8.ಹೀಗೆ ತಪ್ಪಿಸಿಕೊಳ್ಳು (3)
9.ಗಣಪತಿಯ ಇನ್ನೊಂದು ಹೆಸರು (4)
11.ಲಗ್ನವಾಗುತ್ತಿರುವ ಗಂಡು (4)
12.ವಠಾರದವರು ಹಿಡಿದಿರುವ ಕೊಡಲಿ (3)
13.ಕೇಡು ಮಾಡುವವನು (3)



5666ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 2.ಅವಗಾಹನೆ 4.ತಾಮಸ 5.ಪನ್ನೀರು 7.ಮನೆ 10.ಮಂದ್ರ 11.ನಗರ 12.ವೇನಾ 13.ಮಗ 15.ಲಶುನ 18.ಮಾಸಿಕ 19.ವನಸಂಚಾರ

ಮೇಲಿಂದ ಕೆಳಕ್ಕೆ: 1.ಅಂಗಾಲು 2.ಅಸಮ 3.ನೆಪ 4.ತಾರಾಮಂಡಲ 6.ರುದ್ರನಾಟಕ 8.ನೆನಪು 9.ಪರಮ 14.ಗಮಾರ 16.ನವ 17.ವಸಂತ

ಸುಡೊಕು 6052

	4				1		2	
8		7		3				9
		5			9		8	3
	6					3		8
	7	4	1	8	3			
3						5		1
	8		3		4		1	5
		1		9		8		4
4	3		5			2		

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6051 ಸುಡೊಕು

8	3	1	6	7	2	5	4	9
6	9	2	5	4	1	8	7	3
5	4	7	3	8	9	2	1	6
4	7	8	9	6	5	3	2	1
3	6	9	2	1	8	4	5	7
2	1	5	4	3	7	9	6	8
1	5	6	8	2	3	7	9	4
7	2	3	1	9	4	6	8	5
9	8	4	7	5	6	1	3	2




ಎಂಥಾ ಮಾತು!



ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಕಾಂಗ್ರೆಸ್ ತ್ಯಾಗ, ಬಲಿದಾನ ಮಾಡಿದೆ. ಆದರೆ, ಬಿಜೆಪಿ ಮನಃಸ್ಥಿತಿಯವರು ಬ್ರಿಟಿಷರ ಪರ ಇದ್ದರು. ಭಾರತದೊಂದಿಗೆ ಸ್ವಾತಂತ್ರ್ಯ ಹೊಂದಿದ ಹಲವು ರಾಷ್ಟ್ರಗಳು ಅಭಿವೃದ್ಧಿ ಆಗದೇ ಹೆಣಗಾಡುತ್ತಿವೆ. ಆದರೆ, ಸ್ವಾತಂತ್ರ್ಯದ ನಂತರ ಕಾಂಗ್ರೆಸ್ ದೇಶದ ಅಭಿವೃದ್ಧಿಗೆ ಭದ್ರ ಬುನಾದಿ ಹಾಕಿತು. ಹೀಗಾಗಿ ಭಾರತ ಸದೃಢವಾಗಿದೆ. ದೇಶದ ಸಮಗ್ರ ಏಳ್ಗೆಗೆ ಕಾಂಗ್ರೆಸ್ ಕಾರಣವೇ ಹೊರತು ಬಿಜೆಪಿಯಲ್ಲ

ಎಂ.ಬಿ.ಪಾಟೀಲ, ಸಚಿವ

ಮತ ಆಮಿಷ: ಆಯೋಗದ ವಶ

₹96.19 ಕೋಟಿ ನಗದು

ಉಚಿತ ಉಡುಗೊರೆ	₹81.19 ಕೋಟಿ
ಮದ್ಯ	₹178.84 ಕೋಟಿ (1.47ಲಕ್ಷ ಲೀ)
ಮಾದಕವಸ್ತು	₹11.54 ಕೋಟಿ (616.48ಕೆ.ಜಿ.)
ಚಿನ್ನ	₹76.75 ಕೋಟಿ (137.25ಕೆ.ಜಿ.)
ಬೆಳ್ಳಿ	₹1.18 ಕೋಟಿ (302.37ಕೆ.ಜಿ.)

ಮೊದಲ ಮತದ ಸಂಭ್ರಮ



ಖುಷಿ ಪ್ರಭು ಕುಂದೂರ, ಬ್ಯಾಡಗಿ, ಹಾವೇರಿ

ಸಂಸದರನ್ನು ಆಯ್ಕೆ ಮಾಡುವ ಅವಕಾಶ ಸಿಕ್ಕಿರುವುದು ನನಗೆ ತುಂಬಾ ಖುಷಿ ತಂದಿದೆ. ಇದು ನನ್ನ ಜೀವನದ ಮೊದಲ ಮತದಾನವಾಗಲಿದ್ದು, ತುಂಬಾ ಉತ್ಸುಕಳಾಗಿದ್ದೇನೆ. ಬೆಂಗಳೂರಿನಲ್ಲಿ ವೈದ್ಯಕೀಯ ಶಿಕ್ಷಣ ಪಡೆಯುತ್ತಿದ್ದರೂ ಮತ ಚಲಾವಣೆಗೆಂದೇ ಬ್ಯಾಡಗಿಗೆ ಹೋಗುವೆ. ಯಾವುದೇ ಆಸೆ, ಆಮಿಷಗಳಿಗೆ ಒಳಗಾಗದೆ ಮತ ಚಲಾಯಿಸುವೆ. ಸೂಕ್ತ ಜನಪ್ರತಿನಿಧಿಯ ಆಯ್ಕೆಗೆ ಆದ್ಯತೆ ನೀಡುವೆ.

ಕಾಂಗ್ರೆಸ್ 'ಗ್ಯಾರಂಟಿ'ಗೆ ಕವಡೆ ಕಾಸಿನ ಕಿಮ್ಮತ್ತಿಲ್ಲ

• ವೆಂಕಟೇಶ ಜಿ.ಎಚ್.

ಪ್ರಜಾವಾಣಿ ಸಂದರ್ಶನ

ಬಿ.ಎಸ್. ಯಡಿಯೂರಪ್ಪ

ರಾಜ್ಯದಾದ್ಯಂತ ಚುನಾವಣಾ ಪ್ರಚಾರ ಸಭೆಗಳ ತರಾತುರಿ ನಡುವೆಯೇ ಹಿರಿಯ ಪುತ್ರ, ಶಿವಮೊಗ್ಗ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಿ.ವೈ.ರಾಘವೇಂದ್ರ ಪರ ಜಿಲ್ಲೆಯಾದ್ಯಂತ ಆಯೋಜಿಸಲಾದ ಪ್ರಚಾರ ಸಭೆಗಳಲ್ಲಿ ಪಾಲ್ಗೊಂಡಿದ್ದ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ 'ಪ್ರಜಾವಾಣಿ'ಗೆ ಮಾತಿಗೆ ಸಿಕ್ಕರು.

• **ಕರ್ನಾಟಕದ ಜನತೆ ಬಿಜೆಪಿಯನ್ನೇ ಏಕೆ ಗೆಲ್ಲಿಸಬೇಕು?**

ಮೊದಲನೆಯದ್ದು ಕಾಂಗ್ರೆಸ್ ಸರ್ಕಾರದಲ್ಲಿನ ವ್ಯಾಪಕ ಭ್ರಷ್ಟಾಚಾರ. ಎರಡನೇಯದ್ದು ಅಭಿವೃದ್ಧಿ ಯೋಜನೆಗಳು ಸಂಪೂರ್ಣ ಸ್ಥಗಿತಗೊಂಡಿರುವುದು. ಈ ಸರ್ಕಾರ ಬಂದ ಮೇಲೆ ರಾಜ್ಯದ ಯಾವುದೇ ಭಾಗದಲ್ಲಿ ಹೊಸದಾಗಿ ಒಂದು ಕಿ.ಮೀ ರಸ್ತೆ ಕೂಡ ನಿರ್ಮಾಣ ಆಗಿಲ್ಲ. ಮೂರನೆಯದ್ದು ಅನುದಾನ ದೊರೆಯದೇ ನೀರಾವರಿ ಯೋಜನೆಗಳು ಸ್ಥಗಿತಗೊಂಡಿವೆ. ಈ ಎಲ್ಲ ಅಂಶಗಳು ಕಾಂಗ್ರೆಸ್ ಸರ್ಕಾರದ ವಿರುದ್ಧ ಜನರಲ್ಲಿ ಆಕ್ರೋಶ ಮೂಡಿಸಿವೆ. ಈ ಸರ್ಕಾರ ಕೇವಲ 10 ತಿಂಗಳಲ್ಲಿಯೇ ರಾಜ್ಯದ ಜನರ ನಂಬಿಕೆ, ವಿಶ್ವಾಸ ಕಳೆದುಕೊಂಡಿದೆ.

ಸಿದ್ದರಾಮಯ್ಯ ಇಲ್ಲವೇ ಕಾಂಗ್ರೆಸ್‌ನವರು ತಮ್ಮ ಪ್ರಧಾನಿ ಅಭ್ಯರ್ಥಿಯ ಹೆಸರು ಹೇಳಲಿ ನೋಡೋಣ. ಅವರ ಮುಂದೆ ಯಾರ ಹೆಸರೂ ಇಲ್ಲ. ಆದರೆ, ನರೇಂದ್ರ ಮೋದಿ ಇಡೀ ವಿಶ್ವವೇ ಕೊಂಡಾಡುತ್ತಿರುವ ವ್ಯಕ್ತಿ. ಮೋದಿ ಕೇಂದ್ರದಲ್ಲಿ ಮತ್ತೆ ಸರ್ಕಾರ ರಚಿಸುವುದನ್ನು ಜನರು ಕಾತರದಿಂದ ಕಾಯುತ್ತಿದ್ದಾರೆ.

• **ಬಿಜೆಪಿಗೆ ಕರ್ನಾಟಕದಲ್ಲಿ ಅನುಕೂಲಕರ ಪರಿಸ್ಥಿತಿ ಇದೆಯೇ?**


ಖಂಡಿತಾ ಇದೆ. ಬೇರೆ ಎಲ್ಲ ಕಡೆಗಿಂತ ಪ್ರಧಾನಿ ಮೋದಿ ಅವರ ಗಾಳಿ ಕರ್ನಾಟಕದಲ್ಲಿ ಹೆಚ್ಚಾಗಿ ಬೀಸುತ್ತಿದೆ. ಹಿಂದಿನ ಎರಡು ಚುನಾವಣೆಗಳಿಗಿಂತ ಈ ಬಾರಿ ಕರ್ನಾಟಕದಲ್ಲಿ ಮೋದಿ ಅಲೆ 10 ಪಟ್ಟು ಹೆಚ್ಚಾಗಿದೆ. ಅದರ ನೆರವಿನಿಂದ ರಾಜ್ಯದ ಎಲ್ಲಾ 28 ಲೋಕಸಭಾ ಕ್ಷೇತ್ರಗಳಲ್ಲೂ ಗೆಲುವು ಸಾಧಿಸುತ್ತೇವೆ. ದಾಖಲೆಯ ಗೆಲುವಿನೊಂದಿಗೆ ಬಿಜೆಪಿ–ಜೆಡಿಎಸ್ ಮೈತ್ರಿಯ ಲೋಕಸಭಾ ಸದಸ್ಯರನ್ನು ದೆಹಲಿಗೆ ಕರೆದೊಯ್ದು ಮೋದಿ ಅವರ ಮುಂದೆ ನಿಲ್ಲಿಸುವೆ.

• **ಮುಖ್ಯಮಂತ್ರಿ ಸಿದ್ದರಾಮಯ್ಯ ಕರ್ನಾಟಕದಲ್ಲಿ ಮೋದಿ ಅಲೆ ಇಲ್ಲವೇ ಇಲ್ಲ. ಇಲ್ಲಿರೋದು ಗ್ಯಾರಂಟಿ ಅಲೆ ಮಾತ್ರ ಅನ್ನುತ್ತಿದ್ದಾರೆ?**

ಆ ಸಿದ್ದರಾಮಯ್ಯನವರು ಏನು ಬೇಕಾದರೂ ಮಾತಾಡಲಿ. ರಾಜ್ಯದ ಜನರು ಗ್ಯಾರಂಟಿ ಮತ್ತೊಂದನ್ನು ಲೆಕ್ಕಕ್ಕೆ ಇಟ್ಟಿಲ್ಲ. ಅದಕ್ಕೆಲ್ಲ ಕವಡೆ ಕಾಸಿನ ಕಿಮ್ಮತ್ತಿಲ್ಲ. ಈ ಚುನಾವಣೆ ವಿಧಾನಸಭೆಯದ್ದಲ್ಲ. ಬದಲಿಗೆ, ಲೋಕಸಭೆಗೆ ನಡೆಯುತ್ತಿದೆ. ನರೇಂದ್ರ ಮೋದಿ ಅವರನ್ನು ಮತ್ತೊಮ್ಮೆ ಪ್ರಧಾನಿ ಮಾಡಬೇಕು ಎಂಬ ಆಶಯ ಮಾತ್ರ ಈ ಚುನಾವಣೆಯಲ್ಲಿ ಕೆಲಸ ಮಾಡಲಿದೆ. 'ಗ್ಯಾರಂಟಿ' ಯೋಜನೆಗಳಿಂದ ಯಾವುದೇ ಪರಿಣಾಮ ಆಗುವುದಿಲ್ಲ. ಅಲೆ ಮೋದಿಯದ್ದೋ, ಗ್ಯಾರಂಟಿಯದ್ದೋ ಎಂದು ತಿಳಿಯಲು ಫಲಿತಾಂಶ ಬರುವವರೆಗೂ ಕಾಯಿರಿ.

• **ಕಳೆದ ಚುನಾವಣೆಯಲ್ಲಿ ಜೆಡಿಎಸ್ ಜೊತೆ ಹೊಂದಾಣಿಕೆ ಮಾಡಿಕೊಂಡು ಕಾಂಗ್ರೆಸ್ ಕೈ ಸುಟ್ಟುಕೊಂಡಿತ್ತು ಎಂದೇ ವಿಶ್ಲೇಷಿಸಲಾಯಿತು. ಈ ಬಾರಿ ಜೆಡಿಎಸ್ ಜೊತೆಗಿನ ಹೊಂದಾಣಿಕೆ ಬಿಜೆಪಿಗೆ ಯಾವ ರೀತಿಯ ಅನುಭವ ತಂದುಕೊಡಲಿದೆ?**

ಪ್ರಧಾನಿ ಮೋದಿ ಅವರೊಂದಿಗೆ ದೇವೇಗೌಡರ ಸಂಬಂಧ ಹೇಗಿದೆ ಎಂಬುದು ಎಲ್ಲರಿಗೂ ಗೊತ್ತಿದೆ. ಹೀಗಾಗಿಯೇ ಈ ಹೊಂದಾಣಿಕೆ ಸಾಧ್ಯವಾಗಿದೆ. ಇದು ರಾಜ್ಯದ 28 ಕ್ಷೇತ್ರಗಳಲ್ಲೂ ಗೆಲುವು ಸಾಧಿಸಲು ದೊಡ್ಡ ಶಕ್ತಿ ತಂದುಕೊಟ್ಟಿದೆ. ಈ ಮೈತ್ರಿ ಬರೀ ಲೋಕಸಭಾ ಚುನಾವಣೆಗೆ ಸೀಮಿತವಲ್ಲ. ಮುಂದೆಯೂ ಇರಲಿದೆ. ಮುಂಬರುವ ದಿನಗಳಲ್ಲಿ ರಾಜ್ಯದ ಅಭಿವೃದ್ಧಿಯ ದೃಷ್ಟಿಯಿಂದ ಎಚ್.ಡಿ.ಕುಮಾರಸ್ವಾಮಿ, ದೇವೇಗೌಡರು ಸೇರಿದಂತೆ ನಾವೆಲ್ಲರೂ ಒಟ್ಟಾಗಿ ಕೆಲಸ ಮಾಡುತ್ತೇವೆ.



• **ರಾಜ್ಯದಲ್ಲಿ ಅಧಿಕಾರದಲ್ಲಿದ್ದ ಬಿಜೆಪಿ ಕಳೆದ ವಿಧಾನಸಭಾ ಚುನಾವಣೆಯಲ್ಲಿ 65 ಸ್ಥಾನಕ್ಕೆ ಕುಸಿದಿದೆ. ವರ್ಷದೊಳಗೆ ಆ ನಷ್ಟ ಹೇಗೆ ಕಟ್ಟಿಕೊಳ್ಳುತ್ತೀರಿ?**

ಬೇರೆ ಬೇರೆ ಕಾರಣಕ್ಕೆ ವಿಧಾನಸಭೆ ಚುನಾವಣೆ ವೇಳೆ ಹಿನ್ನಡೆ ಆಗಿದ್ದು ನಿಜ. ಈಗ ಆ ಪರಿಸ್ಥಿತಿ ಇಲ್ಲ. 28 ಲೋಕಸಭಾ ಕ್ಷೇತ್ರಗಳಲ್ಲೂ ಗೆದ್ದು ತೋರಿಸುತ್ತೇವೆ. ಫಲಿತಾಂಶ ಬರುವವರೆಗೂ ಕಾದು ನೋಡಿ. ವಿಧಾನಸಭಾ ಚುನಾವಣೆಯಲ್ಲಿ ಆದ ನಷ್ಟವನ್ನು ಹೇಗೆ ಕಟ್ಟಿಕೊಂಡಿದ್ದೇವೆ ಎಂಬುದು ಗೊತ್ತಾಗಲಿದೆ.

• **ಚುನಾವಣೆ ನಂತರ ರಾಜ್ಯ ಘಟಕದ ಅಧ್ಯಕ್ಷ ಸ್ಥಾನದಿಂದ ವಿಜಯೇಂದ್ರ ಅವರನ್ನು ಕೆಳಗಿಳಿಸಲಾಗುತ್ತದೆ ಎಂದು ಬಿಜೆಪಿ ಮುಖಂಡರೇ ಹೇಳುತ್ತಿದ್ದಾರೆ?**

ಯಾರು ಹೇಳುತ್ತಿದ್ದಾರೆ. ಯಾರೋ ತಲೆಕೆಟ್ಟವರು ಹೇಳಿದ ಮಾತಿಗೆ ನೀವು ನನಗೆ ಪ್ರಶ್ನೆ ಕೇಳಿದರೆ ಏನು ಉತ್ತರ ಕೊಡಲಿ. ವಿಜಯೇಂದ್ರ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಆಗಿ ಯಶಸ್ವಿಯಾಗಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ರಾಜ್ಯದ ಜನರು ಇಷ್ಟೊಂದು ಪ್ರೀತಿ–ವಿಶ್ವಾಸ, ಗೌರವ ತೋರುತ್ತಿದ್ದಾರೆ. ಅವರು ಅಧ್ಯಕ್ಷರಾದ ಮೇಲೇ ಪಕ್ಷ ಇವತ್ತು ರಾಜ್ಯದಲ್ಲಿ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಬೆಳೆಯಲು ಕಾರಣವಾಗಿದೆ. ಯಾರೋ ಅಲ್ಲೊಬ್ಬರು ಇಲ್ಲೊಬ್ಬರು ಮಾತಾಡಿದರೆ ಅದಕ್ಕೆ ಕವಡೆ ಕಾಸಿನ ಕಿಮ್ಮತ್ತು ಇಲ್ಲ.

• **ಕಾಂಗ್ರೆಸ್ 136 ಸ್ಥಾನಗಳೊಂದಿಗೆ ಸುಭದ್ರವಾಗಿದೆ. ಲೋಕಸಭಾ ಚುನಾವಣೆ ನಂತರ ಸರ್ಕಾರ ಬೀಳಲಿದೆ ಎಂದು ನೀವು ಹೇಳುತ್ತಿದ್ದೀರಿ. ಮತ್ತೆ ಆಪರೇಷನ್ ಕಮಲ ಆರಂಭಿಸುವಿರಾ?**

ಇಲ್ಲ. ಆಪರೇಷನ್ ಕಮಲ ಮಾಡುವ ಅಗತ್ಯವೇ ಇಲ್ಲ. ಲೋಕಸಭಾ ಚುನಾವಣೆಯಲ್ಲಿ 28 ಸ್ಥಾನಗಳಲ್ಲೂ ಸೋತ ಮೇಲೆ ನೈತಿಕ ಹೊಣೆ ಹೊತ್ತು ಸಹಜವಾಗಿಯೇ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ರಾಜೀನಾಮೆ ಕೊಡುವ ವಾತಾವರಣ ಸೃಷ್ಟಿಯಾಗಲಿದೆ. ಆಗ ಸರ್ಕಾರ ತಾನಾಗಿಯೇ ಪತನವಾಗಲಿದೆ. ಎಲ್ಲದಕ್ಕೂ ಕಾದು ನೋಡೋಣ. ನಾವಂತೂ (ಬಿಜೆಪಿ) ಯಾವ ಕಾರಣಕ್ಕೂ ಈ ಸರ್ಕಾರ ಬೀಳಿಸಲು ಪ್ರಯತ್ನ ಮಾಡುವುದಿಲ್ಲ.

• **ಶಿವಮೊಗ್ಗದಲ್ಲಿ ಕೆ.ಎಸ್.ಈಶ್ವರಪ್ಪ ನಿಮ್ಮ ಕುಟುಂಬದ ವಿರುದ್ಧ ಬಂಡಾಯ ಎದ್ದಿದ್ದಾರಲ್ಲ?**

ನಾನು ಆ ಬಗ್ಗೆ ಏನೂ ಪ್ರತಿಕ್ರಿಯೆ ವ್ಯಕ್ತಪಡಿಸೊಲ್ಲ. ಅವರ (ಕೆ.ಎಸ್.ಈಶ್ವರಪ್ಪ) ಹೆಸರು ಹೇಳಲು ಇಷ್ಟಪಡುವುದಿಲ್ಲ.

• **ಕರ್ನಾಟಕಕ್ಕೆ ಬರ ಪರಿಹಾರ ಬಿಡುಗಡೆ ಮಾಡುವ ವಿಚಾರದಲ್ಲಿ ಕೇಂದ್ರ ಸರ್ಕಾರದ ಧೋರಣೆ ಸರಿಯೇ?**

ಬರ ಪರಿಹಾರಕ್ಕೆ ಅನುದಾನ ಬಿಡುಗಡೆ ವಿಚಾರವನ್ನು ಕಾಂಗ್ರೆಸ್ ಸರ್ಕಾರ ರಾಜಕೀಯಕ್ಕೆ ಬಳಸಿಕೊಳ್ಳುವುದು ಸರಿಯಲ್ಲ. ನಾನು ಮುಖ್ಯಮಂತ್ರಿ ಆಗಿದ್ದಾಗಲೂ ಕೆಲವೊಂದು ಆಡಳಿತಾತ್ಮಕ ಪ್ರಕ್ರಿಯೆಗಳ ಕಾರಣಕ್ಕೆ ಕೇಂದ್ರದಿಂದ ಅನುದಾನ ಬಿಡುಗಡೆ ವಿಳಂಬವಾಗಿತ್ತು. ಆಗ ರಾಜ್ಯದ ಖಜಾನೆಯಿಂದಲೇ ರೈತರಿಗೆ ಪರಿಹಾರ ಕೊಟ್ಟು ನೆರವಾಗಿದ್ದೆ. ನಂತರ ಕೇಂದ್ರ ಅನುದಾನ ಬಿಡುಗಡೆ ಮಾಡಿತ್ತು.

• **ಮಹಿಳೆಯರ ಮಾಂಗಲ್ಯ, ಆಸ್ತಿ ಹಂಚಿಕೆ ವಿಚಾರದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಹೇಳಿಕೆ ಸಮರ್ಥಿಸುವಿರಾ?**

ನಾನು ಆ ಬಗ್ಗೆ ಪ್ರತಿಕ್ರಿಯಿಸಲು ಹೋಗುವುದಿಲ್ಲ. ಮೋದಿ ಅವರು ಎರಡೂ ವಿಷಯಗಳ ಬಗ್ಗೆ ಗಂಭೀರವಾಗಿ ತಮ್ಮದೇ ಧಾಟಿಯಲ್ಲಿ ಹೇಳಿದ್ದಾರೆ. ಅದನ್ನು ಯಾರೂ ಅಪಾರ್ಥ ಮಾಡಿಕೊಳ್ಳುವ ಅಗತ್ಯವಿಲ್ಲ.

• **ಶಿವಮೊಗ್ಗದಲ್ಲಿ ತ್ರಿಕೋನ ಸ್ಪರ್ಧೆಯಿಂದ ಬಿಜೆಪಿಗೆ ಹಿನ್ನಡೆ ಆಗಲಿದೆಯೇ?**

ಇಲ್ಲ. ಶಿವಮೊಗ್ಗದಲ್ಲಿ ಪುತ್ರ ಬಿ.ವೈ.ರಾಘವೇಂದ್ರ ಗೆಲುವು ಸಾಧಿಸಲಿದ್ದಾರೆ. ಸಂಸದರಾಗಿ ಕಳೆದ 10 ವರ್ಷಗಳಲ್ಲಿ ಅತಿ ಹೆಚ್ಚು ಅಭಿವೃದ್ಧಿ ಕೆಲಸ ಮಾಡಿದ್ದಾರೆ. ನಾವೂ ಭದ್ರಾವತಿಯ ವಿಐಎಸ್ಎಲ್ ಉಳಿಸಲು ಪ್ರಾಮಾಣಿಕ ಪ್ರಯತ್ನ ಮಾಡಿದ್ದೇವೆ. ಅದನ್ನು ಶಾಶ್ವತವಾಗಿ ಉಳಿಸಲು ಇನ್ನೂ ಶಕ್ತಿ ಮೀರಿ ಪ್ರಯತ್ನ ಮುಂದುವರೆಸಲಿದ್ದೇವೆ. ಮೀಸಲಾತಿ ಕಾರಣಕ್ಕೆ ಜಿಲ್ಲೆಯಲ್ಲಿ ಕಳೆದ ವಿಧಾನಸಭೆ ಚುನಾವಣೆ ವೇಳೆ ಮುನಿಸಿಕೊಂಡಿದ್ದ ಲಂಬಾಣಿ, ಬೋವಿ ಸಮಾಜದವರೂ ನಮ್ಮೊಂದಿಗೆ ಇದ್ದಾರೆ. ಈಗ ಅವರಿಗೂ ವಾಸ್ತವ ಅರ್ಥವಾಗಿದೆ. ❖

ನನ್ನ ಮಗ ಸತ್ತಾಗ ಮೋದಿ ನೆರವು ಸುಳ್ಳು: ಸಿ.ಎಂ

ಗೋಕಾಕ (ಬೆಳಗಾವಿ ಜಿಲ್ಲೆ): 'ನನ್ನ ಮಗ ಸತ್ತಾಗ ನನಗೆ ನರೇಂದ್ರ ಮೋದಿ, ಸುಷ್ಮಾ ಸ್ವರಾಜ್ ಬಹಳ ಸಹಾಯ ಮಾಡಿದ್ದಾರೆ ಎಂಬುದು ಸುಳ್ಳು. ನಾನು ಇವರ‍್ಯಾರನ್ನೂ ಸಂಪರ್ಕಿಸಿಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

'ಸಿದ್ದರಾಮಯ್ಯ ಮಗ ಸತ್ತಾಗ ಮೋದಿ ಅವರು ಮಾಡಿದ ನೆರವನ್ನು ಸಿದ್ದರಾಮಯ್ಯ ಮರೆಯಬಾರದು' ಎಂಬ ಎಚ್.ಡಿ. ಕುಮಾರಸ್ವಾಮಿ ಅವರ ಮಾತಿಗೆ ಗೋಕಾಕದಲ್ಲಿ ಮಂಗಳವಾರ ಪ್ರತಿಕ್ರಿಯಿಸಿದ ಅವರು, 'ನನ್ನ ಮಗ ವಿದೇಶದಲ್ಲಿ ಸತ್ತ. ಮೃತದೇಹ ತಂದು ಇಲ್ಲಿ ಅಂತ್ಯಕ್ರಿಯೆ ಮಾಡಿದ್ದೇನೆ ಅಷ್ಟೆ. ಆ ಸಂದರ್ಭದಲ್ಲಿ ಸಹಾಯಕ್ಕಾಗಿ ಮೋದಿ ಅಥವಾ ಬೇರೆ ಯಾರನ್ನೂ ಸಂಪರ್ಕಿಸುವ ಪ್ರಮೇಯವೇ ಬಂದಿಲ್ಲ. ಅವರೆಲ್ಲ ಸುಳ್ಳು ಹೇಳುತ್ತಿದ್ದಾರೆ' ಎಂದರು.

'ರಾಜ್ಯದ ಕಾನೂನು ಸುವ್ಯವಸ್ಥೆ ಟೀಕಿಸುವ ಮೋದಿ ಅವರು, 'ಮಣಿಪುರದಲ್ಲಿನ ದೌರ್ಜನ್ಯ, ಹಿಂಸಾಚಾರದ ಬಗ್ಗೆ ಏಕೆ ಮಾತನಾಡಲಿಲ್ಲ' ಎಂದೂ ಪ್ರಶ್ನಿಸಿದರು.



ಮುಖ್ಯಮಂತ್ರಿ ಸಿದ್ದರಾಮಯ್ಯ ಚುನಾವಣಾ ಪ್ರಚಾರ ಭಾಷಣ ಮಾಡಿದರು

ರಾಜಕೀಯ ತೆವಲು: ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಮಾತನಾಡಿ, 'ಪೆನ್‌ಡ್ರೈವ್ ಪ್ರಕರಣದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕೈವಾಡ ಇದೆ ಎಂದು ಕುಮಾರಸ್ವಾಮಿ ಆರೋಪಿಸಿದ್ದಾರೆ. ಅದನ್ನು ವಿಶೇಷ ತನಿಖಾ ತಂಡ ತನಿಖೆ ಮಾಡಲಿದೆ. ಯಾರು ಏನೇ ಹೇಳಿದರೂ ಆರೋಪವಷ್ಟೆ. ತನಿಖಾ ವರದಿ ನಂತರ ಸತ್ಯ ಗೊತ್ತಾಗಲಿದೆ' ಎಂದರು.

'ಹುಬ್ಬಳ್ಳಿಯ ನೇಹಾ ಹಿರೇಮಠ ಅವರ ಕೊಲೆ ವಿಚಾರದಲ್ಲಿ ಧ್ವನಿ ಎತ್ತಿದ ಬಿಜೆಪಿಯವರು ಪ್ರಜ್ವಲ್ ರೇವಣ್ಣ ವಿಚಾರದಲ್ಲಿ ಏಕೆ ಮೌನವಾಗಿದ್ದಾರೆ? ಸಾವಿರಕ್ಕೂ ಹೆಚ್ಚು ಹೆಣ್ಣುಮಕ್ಕಳ ಮಾನ ಹರಾಜಾಗಿದೆ. ಪ್ರಧಾನಿ ಅಥವಾ ಬಿಜೆಪಿ ಅಭ್ಯರ್ಥಿ ಏಕೆ ಬಾಯಿ ಬಿಡುತ್ತಿಲ್ಲ. ನೇಹಾ ಕೊಲೆಯನ್ನೂ ಇವರು ತಮ್ಮ ರಾಜಕೀಯ ತೆವಲಿಗೆ ಬಳಸಿಕೊಳ್ಳುತ್ತಿದ್ದಾರೆ' ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ದೂರಿದರು.

'ಮುಖ್ಯಮಂತ್ರಿ ಕುಟುಂಬದ ಮರ್ಯಾದೆ ಉಳಿಸಿದ್ದ ಪ್ರಧಾನಿ'

ಹುಬ್ಬಳ್ಳಿ: 'ಮುಖ್ಯಮಂತ್ರಿಯವರೇ ನಿಮ್ಮ ಕುಟುಂಬದಲ್ಲಿ ದುರ್ಘಟನೆಯೊಂದು ನಡೆದಾಗ ಪ್ರಧಾನಿ ನರೇಂದ್ರ ಮೋದಿ ಅವರು ಮಾನ, ಮರ್ಯಾದೆ ಉಳಿಸಿದ್ದರು. ಈಗ ಅವರನ್ನು ಪ್ರಶ್ನಿಸುತ್ತೀರಾ? ಪ್ರಜ್ವಲ್‌ಗೂ ಮೋದಿಗೂ ಏನು ಸಂಬಂಧ? ಪ್ರಜ್ವಲ್‌ಗೆ ಟಿಕೆಟ್ ಕೊಟ್ಟಿದ್ದು ನಮ್ಮ ಪಕ್ಷವೇ ಹೊರತು ಬಿಜೆಪಿ ಅಲ್ಲ' ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

'ನಿಮ್ಮ ಮಾನ ಉಳಿಸಿರುವ ಮೋದಿ ಅವರ ಹೆಸರನ್ನು ಈ ಪ್ರಕರಣದಲ್ಲಿ ತರಬೇಡಿ. ನಾವು– ನೀವು ಹೋರಾಟ ಮಾಡೋಣ' ಎಂದು ಅವರು ಹೇಳಿದರು.

ಕಾರ್ಯಕರ್ತರ ನಡುವೆ ವಾಗ್ವಾದ ಲಾಠಿ ಬೀಸಿದ ಪೊಲೀಸರು

ಪ್ರಜಾವಾಣಿ ವಾರ್ತೆ

ರಾಯಚೂರು: ನಗರದ ನಿಜಲಿಂಗಪ್ಪ ಕಾಲೊನಿಯ ಎಟಿಎಂ ಸರ್ಕಲ್ ಬಳಿ ಮಂಗಳವಾರ ಮತಯಾಚನೆ ವೇಳೆ ಕಾಂಗ್ರೆಸ್ ಮತ್ತು ಬಿಜೆಪಿ ಕಾರ್ಯಕರ್ತರ ನಡುವೆ ವಾಗ್ವಾದ ನಡೆದು ಕೈ–ಕೈ ಮಿಲಾಯಿಸುವ ಹಂತ ತಲುಪಿದಾಗ ಪೊಲೀಸರು ಲಾಠಿ ಬೀಸಿ ಕಾರ್ಯಕರ್ತರನ್ನು ಚದುರಿಸಿದ್ದಾರೆ.

ಸಚಿವ ಎನ್.ಎಸ್.ಬೋಸರಾಜು ನಿವಾಸದ ಎದುರು ವಾರ್ಡ್ ಸಂಖ್ಯೆ–1ರ ನಗರಸಭೆ ಸದಸ್ಯೆಯ ಮಗ, ಬಿಜೆಪಿ ಕಾರ್ಯಕರ್ತ ಸನ್ನಿ ರೊನಾಲ್ಡ್ ತಮ್ಮ ಬೆಂಬಲಿಗರೊಂದಿಗೆ ಬ್ಯಾಂಡ್–ಬಾಜಾದೊಂದಿಗೆ ಮೆರವಣಿಗೆ ಮೂಲಕ ಪ್ರಚಾರ ಮಾಡಿದರು.


ಸ್ವಲ್ಪ ಸಮಯದ ನಂತರ ಎರಡೂ ಪಕ್ಷಗಳ ಕಾರ್ಯಕರ್ತರ ನಡುವೆ ವಾಗ್ವಾದ ನಡೆದು ಕೈ–ಕೈ ಮಿಲಾಯಿಸುವ ಹಂತ ತಲುಪಿತು. ನಂತರ ಪೊಲೀಸರು ಮಧ್ಯ ಪ್ರವೇಶಿಸಿ ಎರಡೂ ಪಕ್ಷಗಳ ಕಾರ್ಯಕರ್ತರನ್ನು ಸಮಾಧಾನ ಪಡಿಸಿ ಕಳಿಸಲು ಪ್ರಯತ್ನಿಸಿದರು. ಸಚಿವರ ಪುತ್ರ, ಮುಖಂಡ ರವಿ ಬೋಸರಾಜು ಕಾಂಗ್ರೆಸ್ ಕಾರ್ಯಕರ್ತರನ್ನು ಸಮಾಧಾನ ಪಡಿಸಿದರೂ ವಾತಾವರಣ ತಿಳಿಗೊಳ್ಳಲಿಲ್ಲ. ಪರಿಸ್ಥಿತಿ ವಿಕೋಪಕ್ಕೆ ತಿರುಗಿದಾಗ ಪೊಲೀಸರು ಕಾರ್ಯಕರ್ತರತ್ತ ಲಾಠಿ ಬೀಸಿ ಗುಂಪನ್ನು ಚದುರಿಸಿದರು.


ಎರಡು ದಿನಗಳಿಂದ ಪ್ರಚಾರದ ವೇಳೆ ಕಾರ್ಯಕರ್ತರ ನಡುವೆ ವಾಗ್ವಾದ ನಡೆಯುತ್ತಿದೆ. ಸೋಮವಾರ ನಗರದ ಸ್ಟೇಷನ್ ಏರಿಯಾದಲ್ಲೂ ಕಾಂಗ್ರೆಸ್ ಮುಖಂಡ ರವಿ ಬೋಸರಾಜು ಹಾಗೂ ಬಿಜೆಪಿ ಕಾರ್ಯಕರ್ತ ಸನ್ನಿ ರೊನಾಲ್ಡ್ ನಡುವೆ ವಾಗ್ವಾದ ನಡೆದಿತ್ತು. ಪೊಲೀಸರು ಮಧ್ಯ ಪ್ರವೇಶಿಸಿ ಸಮಾಧಾನ ಪಡಿಸಿದ್ದರು. ಸನ್ನಿ ಅವರು ಶಾಸಕ ಡಾ.ಶಿವರಾಜ ಪಾಟೀಲ ಆಪ್ತರಲ್ಲಿ ಒಬ್ಬರಾಗಿದ್ದಾರೆ.

ಕ್ಷೇತ್ರ ಸಮೀಕ್ಷೆ

ಬಿಜೆಪಿ ಓಟಕ್ಕೆ ಬೀಳುವುದೇ ಲಗಾಮು?

ಕಳೆದ ಚುನಾವಣೆಯಲ್ಲಿ ಮತದಾನವಾದ ಪ್ರಮಾಣ 70.29%





ಶಾಸಕರ ಬಲಾಬಲ
- ಕಾಂಗ್ರೆಸ್ 4
- ಬಿಜೆಪಿ 4

1. ನವಲಗುಂದ
2. ಕುಂದಗೋಳ
3. ಧಾರವಾಡ
4. ಹುಬ್ಬಳ್ಳಿ–ಧಾರವಾಡ ಪಶ್ಚಿಮ
5. ಹುಬ್ಬಳ್ಳಿ–ಧಾರವಾಡ ಕೇಂದ್ರ
6. ಹುಬ್ಬಳ್ಳಿ–ಧಾರವಾಡ ಪೂರ್ವ
7. ಕಲಘಟಗಿ
8. ಶಿಗ್ಗಾವಿ (ಹಾವೇರಿ ಜಿಲ್ಲೆ)



ಕ್ಷೇತ್ರದಲ್ಲಿ ಕಾಡುವ ವಿಷಯಗಳು....
- ಮಹದಾಯಿ ಯೋಜನೆ ಇನ್ನೂ ನನಸಾಗದಿರುವುದು
- ರೈಲು ಮಾರ್ಗ, ವರ್ತುಲ ರಸ್ತೆ ಯೋಜನೆ ನನೆಗುದಿಗೆ
- ಕೊನೆಗಾಣದ ಕುಡಿಯುವ ನೀರಿನ ಸಮಸ್ಯೆ
- ಯುವಜನರಿಗೆ ಸಿಗದ ಉದ್ಯೋಗಾವಕಾಶ
- ನಗರ, ಗ್ರಾಮೀಣ ಪ್ರದೇಶದಲ್ಲಿ ಮೂಲಸೌಲಭ್ಯ ಕೊರತೆ



ಮೋದಿ ಗ್ಯಾರಂಟಿ ಕೈಹಿಡಿಯಲಿವೆ. ರಾಜ್ಯದಲ್ಲಿ ಕಾಂಗ್ರೆಸ್ ಬೆಲೆ ಏರಿಕೆ ಮಾಡಿ, ವಂಚಿಸಿದೆ ಎಂಬುದನ್ನು ಎಲ್ಲರಿಗೂ ತಿಳಿಸುತ್ತೇವೆ
ಪ್ರಲ್ಹಾದ ಜೋಶಿ, ಬಿಜೆಪಿ

- 👍 ಧಾರವಾಡದಲ್ಲಿ ಐಐಟಿ, ಐಐಐಟಿ ಸ್ಥಾಪನೆ, ವಂದೇ ಭಾರತ್ ಎಕ್ಸ್‌ಪ್ರೆಸ್ ಸಂಚಾರ
- 👍 ನರೇಂದ್ರ ಮೋದಿ ನಿಕಟ ಸಂಪರ್ಕ, ಕೇಂದ್ರ ಸಚಿವರಾಗಿ ವಿವಿಧ ಖಾತೆ ನಿರ್ವಹಣೆ
- 👎 ಗ್ರಾಮೀಣ ಭಾಗದ ಜನರ ಜೊತೆ ಭೇಟಿ, ಒಡನಾಟ, ಕ್ಷೇತ್ರ ಪರ್ಯಟನೆ ಕಡಿಮೆ
- 👎 'ಮಹದಾಯಿ' ಕಾರ್ಯಗತ ಆಗಿಲ್ಲ, ಒಳ ಏಟು, ದಿಂಗಾಲೇಶ್ವರ ಸ್ವಾಮೀಜಿ ಕೆಂಗಣ್ಣು



ಕಾಂಗ್ರೆಸ್‌ನ ಗ್ಯಾರಂಟಿ ಕಾರ್ಯಕ್ರಮಗಳೇ ನನಗೆ ಶ್ರೀರಕ್ಷೆ. ಕಾಂಗ್ರೆಸ್‌ನ ಶಾಸಕರು ಮಾಡಿದ ಅಭಿವೃದ್ಧಿ ಕಾರ್ಯ ಕೈ ಹಿಡಿಯಲಿವೆ
ವಿನೋದ ಅಸೂಟಿ, ಕಾಂಗ್ರೆಸ್

- 👍 ಕಾಂಗ್ರೆಸ್‌ನ ಪಂಚ ಗ್ಯಾರಂಟಿ ಕಾರ್ಯಕ್ರಮಗಳು, ಸಿ.ಎಂ ಸಿದ್ದರಾಮಯ್ಯ ಬೆಂಬಲ
- 👍 ಕ್ಷೇತ್ರದಲ್ಲಿನ ಕಾಂಗ್ರೆಸ್ ನಾಯಕರ ಬಲ, ಒಗ್ಗಟ್ಟಿನ ನಡೆ
- 👎 ಹೊಸ ಮುಖ, ಇಡೀ ಕ್ಷೇತ್ರದ ಜನರ ಒಡನಾಟ, ಪರಿಚಯ ಕಡಿಮೆ
- 👎 ಮಾತಿನ ಮೋಡಿ, ಎದುರಾಳಿ 'ಅಸ್ತ್ರ'ಕ್ಕೆ ಪ್ರತ್ಯಸ್ತ್ರ ಪ್ರಯೋಗದ ಜಾಣ್ಮೆ ಕೊರತೆ

• ಬಿ.ಜೆ.ಧನ್ಯಪ್ರಸಾದ್

ಧಾರವಾಡ

ಧಾರವಾಡ: ಧಾರವಾಡ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ನೇರಾ ಹಣಾಹಣಿ ಏರ್ಪಟ್ಟಿದೆ. ಸತತ ನಾಲ್ಕು ಸಲ ಗೆದ್ದು ಐದನೇ ಸಲಕ್ಕೆ ಸ್ಪರ್ಧಿಸಿರುವ ಬಿಜೆಪಿಯ ಪ್ರಲ್ಹಾದ ಜೋಶಿ ಅವರಿಗೆ ಕಾಂಗ್ರೆಸ್ ಹೊಸಮುಖ ವಿನೋದ ಅಸೂಟಿ ಎದುರಾಳಿ ಆಗಿದ್ದಾರೆ. ಪ್ರಲ್ಹಾದ ಜೋಶಿ ಅವರಿಗೆ ದೀರ್ಘಕಾಲದ ರಾಜಕೀಯ ಅನುಭವವಿದ್ದರೆ, ವಿನೋದ ಅಸೂಟಿ ಕೆಲ ವರ್ಷಗಳಿಂದ ರಾಜಕಾರಣದಲ್ಲಿ ಇದ್ದಾರೆ. ಅವರು ಮೊದಲ ಬಾರಿಗೆ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದ್ದಾರೆ.

ಒಟ್ಟು 17 ಅಭ್ಯರ್ಥಿಗಳು ಚುನಾವಣಾ ಕಣದಲ್ಲಿದ್ದಾರೆ. ಪಕ್ಷೇತರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದ ಗದಗ ಜಿಲ್ಲೆ ಶಿರಹಟ್ಟಿಯ ಭಾವೈಕ್ಯ ಪೀಠದ ಫಕೀರ ದಿಂಗಾಲೇಶ್ವರ ಸ್ವಾಮೀಜಿ ಅವರು ಸ್ಪರ್ಧೆಯಿಂದ ಹಿಂದೆ ಸರಿದಿದ್ದಾರೆ. ಆದರೆ, ಜೋಶಿ ಮೇಲಿನ ಕೋಪ ಇನ್ನೂ ಶಮನಗೊಂಡಿಲ್ಲ. ಕಣದಲ್ಲಿ ಇಲ್ಲದಿದ್ದರೂ ಸೋಲಿಸಲು ಪಣತೊಟ್ಟಿದ್ದಾರೆ.

ಜೋಶಿ ಬ್ರಾಹ್ಮಣ ಸಮುದಾದವರು, ಅಸೂಟಿ ಕುರುಬರು. ಕ್ಷೇತ್ರದ ಲೋಕಸಭಾ ಚುನಾವಣಾ ಚರಿತ್ರೆಯಲ್ಲಿ ಮತದಾರರು ಜಾತಿ ಮೀರಿ ಪ್ರೀತಿ ತೋರಿದ ನಿದರ್ಶನಗಳು ಇವೆ.1951ರಿಂದ 1991ರವರೆಗೆ (ಧಾರವಾಡ ಉತ್ತರ ಕ್ಷೇತ್ರ) ನಡೆದ ಚುನಾವಣೆಗಳಲ್ಲಿ ಸತತ ಗೆಲುವು ದಾಖಲಿಸಿದ ಕಾಂಗ್ರೆಸ್, 1996ರಿಂದ ಸತತ ಸೋಲುಂಡಿತು. 1996ರಿಂದ ಬಿಜೆಪಿ ಗೆಲುವಿನ ಅಲೆಯಲ್ಲಿದೆ.

ಹಾವೇರಿ ಜಿಲ್ಲೆಯ ಶಿಗ್ಗಾವಿ ಸಹಿತ 8 ವಿಧಾನಸಭಾ ಕ್ಷೇತ್ರಗಳು ಧಾರವಾಡ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಇವೆ. ಬಿಜೆಪಿ ಮತ್ತು ಕಾಂಗ್ರೆಸ್ ಶಾಸಕರು ತಲಾ 4 ಕ್ಷೇತ್ರಗಳಲ್ಲಿ ಇದ್ದಾರೆ.

ಕಾಂಗ್ರೆಸ್ ಮನೆಯೊಳಗೆ ಕಾಲಿಟ್ಟು, ಪುನಃ ಬಿಜೆಪಿಗೆ ಮರಳಿದ ಜಗದೀಶ ಶೆಟ್ಟರ್ ಅವರು ಧಾರವಾಡ ಕ್ಷೇತ್ರದ ಬಿಜೆಪಿ ಟಿಕೆಟ್ ಮೇಲೆ ಕಣ್ಣಿಟ್ಟಿದ್ದರು. ಅದು ಸಾಧ್ಯವಾಗದ ಕಾರಣ ಲಿಂಗಾಯತ ಸಮುದಾಯದ ಶೆಟ್ಟರ್ ಅವರನ್ನು ಬೆಳಗಾವಿ ಕ್ಷೇತ್ರದಿಂದ ಕಣಕ್ಕಿಳಿಸಲಾಯಿತು. ಇದು ಕ್ಷೇತ್ರದಲ್ಲಿ ಬಿಜೆಪಿ ಪಾಳಯದಲ್ಲಿ 'ಏಕ ಚಕ್ರಾಧಿಪತ್ಯ'ದ ಚರ್ಚೆ ಹುಟ್ಟುಹಾಕಿದೆ.

ಕಾಂಗ್ರೆಸ್ ಪಕ್ಷವು ಸಾಮಾಜಿಕ ನ್ಯಾಯ ಪಠಿಸುತ್ತಿದೆ. 'ಟಿಕೆಟ್ ವಿಚಾರದಲ್ಲೂ ಅದನ್ನು ಪಾಲಿಸಿದ್ದೇವೆ' ಎಂಬುದು ಆ ಪಕ್ಷದ ಹೇಳಿಕೆ. ವಿನೋದ ಅವರು ಮೊದಲ ಪ್ರಯತ್ನದಲ್ಲೇ ವಿಜಯಮಾಲೆ ಹಾಕಿಕೊಳ್ಳಲು ಬೆವರಿಳಿಸುತ್ತಿದ್ದಾರೆ. 2013ರಿಂದ ಕಾಂಗ್ರೆಸ್‌ನಲ್ಲಿರುವ ಅವರು 2018ರಲ್ಲಿ ನವಲಗುಂದ ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಸೋಲುಂಡರು.

ನಾಲ್ಕು ಅವಧಿಯ ಅಭಿವೃದ್ಧಿ ಕಾರ್ಯ, ನರೇಂದ್ರ ಮೋದಿ ಪ್ರಭೆಯನ್ನು ಜೋಶಿ ನಂಬಿದ್ದಾರೆ. ಕಾಂಗ್ರೆಸ್‌ನ ಪಂಚ ಗ್ಯಾರಂಟಿ ಕಾರ್ಯಕ್ರಮಗಳು ಕೈಹಿಡಿಯಲಿವೆ ಎಂಬ ನಿರೀಕ್ಷೆಯಲ್ಲಿ ವಿನೋದ ಅಸೂಟಿ ಇದ್ದಾರೆ.

ಈ ಎಲ್ಲದರ ಮಧ್ಯೆ ಹುಬ್ಬಳ್ಳಿಯ ಬಿವಿಬಿ ಕಾಲೇಜಿನ ವಿದ್ಯಾರ್ಥಿನಿ ನೇಹಾ ಹಿರೇಮಠ ಕೊಲೆ ಪ್ರಕರಣವು ರಾಜಕೀಯ ಚದುರಂಗದ 'ದಾಳ' ವಾಗಿ ಬಳಸಿಕೊಳ್ಳುವ ಸಾಧ್ಯತೆ ಹೆಚ್ಚಿದೆ. ಬಿಜೆಪಿ, ಕಾಂಗ್ರೆಸ್ ಮುಖಂಡರು ಅಲ್ಲದೇ ವಿವಿಧ ಸಂಘಸಂಸ್ಥೆಗಳ ಪ್ರತಿನಿಧಿಗಳು ನಿರಂತರವಾಗಿ ನೇಹಾ ಮನೆಗೆ ಭೇಟಿ ನೀಡಿ, ಸಾಂತ್ವನ ಹೇಳುತ್ತಿದ್ದಾರೆ. ಇದು ಮತದಾರರ ಮೇಲೆ ಪರಿಣಾಮ ಬೀರಬಹುದೇ ಎಂಬ ಚರ್ಚೆ ರಾಜಕೀಯ ವಲಯದಲ್ಲಿ ನಡೆದಿದೆ.

ಗಣಿನಾಡಿನಲ್ಲಿ ಗೆಲುವಿಗಾಗಿ ತಡಕಾಟ

• ಹರಿಶಂಕರ್ ಆರ್.

ಬಳ್ಳಾರಿ

ಬಳ್ಳಾರಿ: 'ವಿಧಾನಸಭಾ ಚುನಾವಣೆಯಲ್ಲಿ ಸೋತು ರಾಜಕೀಯ ಅಜ್ಞಾತವಾಸ ಅನುಭವಿಸಿದ್ದೇನೆ. ಲೋಕಸಭೆ ಚುನಾವಣೆಯಲ್ಲಿ ಗೆಲ್ಲಿಸಿ ರಾಜಕೀಯ ಪುನರ್ಜನ್ಮ ನೀಡಿ' ಎಂಬುದು ಬಿಜೆಪಿ ಅಭ್ಯರ್ಥಿ ಬಿ. ಶ್ರೀರಾಮುಲು ಮನವಿ. 'ನಮ್ಮ ಪಕ್ಷದ ಅಧಿನಾಯಕಿ ಸೋನಿಯಾ ಗಾಂಧಿ ಅವರಿಗೆ ಗೆಲುವಿನ ಉಡುಗೊರೆ ಕೊಡಬೇಕಿದೆ. ಕಾಂಗ್ರೆಸ್ ಅಭ್ಯರ್ಥಿ ಇ. ತುಕಾರಾಮ್ ಅವರನ್ನೇ ಗೆಲ್ಲಿಸಿ' ಎನ್ನುವುದು ಕಾಂಗ್ರೆಸ್ ಶಾಸಕರ ವಿನಂತಿ.

ರಾಜಕೀಯ ಪುನರ್ಜನ್ಮ ಮತ್ತು ಉಡುಗೊರೆಗಳ ಈ ಚರ್ಚೆಯಲ್ಲಿ ಕ್ಷೇತ್ರದ ಸಮಸ್ಯೆಗಳೇ ಮರೆಗೆ ಸರಿದಿವೆ. ಆದರೂ, ಕಾಂಗ್ರೆಸ್‌ಗೆ ಹೋದಲೆಲ್ಲ 'ಜೀನ್ಸ್ ಪಾರ್ಕ್' ಎಲ್ಲಿ ಎಂಬ ಪ್ರಶ್ನೆ ಕಾಡುತ್ತಿದೆ. 'ಈ 20 ವರ್ಷಗಳಲ್ಲಿ ನೀವೇನು ಮಾಡಿದ್ದೀರಿ' ಎಂಬ ಪ್ರಶ್ನೆ ಬಿಜೆಪಿ ಕಡೆಗೂ ತೂರಿ ಬರುತ್ತಿದೆ.

ಇದರ ಮಧ್ಯೆ, ಅಭ್ಯರ್ಥಿಗಳ ಗೆಲುವಿನಲ್ಲಿ ಪ್ರಧಾನ ಪಾತ್ರ ನಿರ್ವಹಿಸಬಲ್ಲ ಜಾತಿ ಓಲೈಕೆ ಕಸರತ್ತು ನಡೆದಿದೆ. ಬಿಜೆಪಿಯಿಂದ ವಾಲ್ಮೀಕಿ ಮತ್ತು ಲಿಂಗಾಯತ ಸಮುದಾಯದ ಮತಗಳನ್ನು ಗಟ್ಟಿ ಮಾಡಿಕೊಳ್ಳುವ ಪ್ರಯತ್ನಗಳೂ ಸಾಗಿವೆ. ಜತೆಗೆ, ಹಿಂದುತ್ವದ ಮತಗಳನ್ನು ಕ್ರೋಡೀಕರಿಸುವ ಕೆಲಸವೂ ನಡೆದಿದೆ.


ಬಿಜೆಪಿಯ ಪ್ರತಿಭಟನೆಗಳೇ ಜಾತ್ಯತೀತ ಮತಗಳನ್ನು ಕ್ರೋಡೀಕರಿಸಲಿವೆ ಎಂಬ ನಂಬಿಕೆ ಕಾಂಗ್ರೆಸ್ ನಾಯಕರಲ್ಲಿದೆ. ಲಿಂಗಾಯತ ಮತಗಳನ್ನು ಸೆಳೆಯಲು ಇತ್ತೀಚೆಗೆ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸ್ಥಾನವನ್ನು ಅಲ್ಲಂ ವೀರಭದ್ರಪ್ಪ ಅವರ ಪುತ್ರ ಅಲ್ಲಂ ಪ್ರಶಾಂತ್ ಅವರಿಗೆ ವಹಿಸಲಾಗಿದೆ.


ಪರಿಶಿಷ್ಟ ಪಂಗಡಕ್ಕೆ ಮೀಸಲಾಗಿರುವ ಕ್ಷೇತ್ರದಲ್ಲಿ ಶೇ 18ರಿಂದ 20ರಷ್ಟು ಇರುವ ವಾಲ್ಮೀಕಿ ಸಮುದಾಯದ ವೋಟುಗಳು ಏನಾಗಬಹುದು ಎಂಬ ಕುತೂಹಲ ಈ ಬಾರಿ ಎಲ್ಲರಲ್ಲೂ ಮನೆ ಮಾಡಿದೆ. ಒಂದು ಕಾಲಕ್ಕೆ ಶ್ರೀರಾಮುಲು ವಾಲ್ಮೀಕಿ ಸಮುದಾಯದ ಮುಂಚೂಣಿ ನಾಯಕ ಎಂಬ ಭಾವನೆ ಇತ್ತು. ಆದರೆ, 10 ವರ್ಷಗಳಲ್ಲಿ ಸಚಿವ ಬಿ. ನಾಗೇಂದ್ರ ಈ ಸ್ಥಾನಕ್ಕೆ ಬರುವ ಪ್ರಯತ್ನ ಮಾಡಿದ್ದಾರೆ.

ಜನಾರ್ದನ ರೆಡ್ಡಿ ಅವರ ಕೆಆರ್‌ಪಿಪಿ ಪಕ್ಷ ಬಿಜೆಪಿಯಲ್ಲಿ ವಿಲೀನಗೊಂಡಿರುವುದು, ಮೋದಿ ಅಲೆ, ವಿಧಾನಸಭೆ ಚುನಾವಣೆ ಸೋತಿದ್ದರಿಂದ ವಾಲ್ಮೀಕಿ ಸಮುದಾಯದಲ್ಲಿ ತಮ್ಮ ಪರವಾಗಿ ಇರಬಹುದಾದ ಸಹಾನುಭೂತಿ, ಲಿಂಗಾಯತ ಮತಗಳು, ಹಿಂದುತ್ವ ತಮ್ಮನ್ನು ಗೆಲುವಿನ ದಡ ಸೇರಿಸಬಹುದು ಎಂದು ಶ್ರೀರಾಮುಲು ನಂಬಿದ್ದಾರೆ. ಆದರೆ, ವಿಧಾನಸಭಾ ಚುನಾವಣೆ ವೇಳೆ ಕಾಂಗ್ರೆಸ್ ಪಕ್ಷ ಕ್ಷೇತ್ರ ವ್ಯಾಪ್ತಿಯಲ್ಲಿ ಬಿಜೆಪಿಗಿಂತ 2.70 ಲಕ್ಷಕ್ಕೂ ಅಧಿಕ ಮತ ಪಡೆದಿತ್ತು. ಇದನ್ನು ಸರಿದೂಗಿಸಿ ಗೆಲ್ಲುವುದು ಸವಾಲೇ ಸರಿ ಎಂಬುದು ಅವರಿಗೂ ಗೊತ್ತು.

ಗ್ಯಾರಂಟಿ ಯೋಜನೆಗಳು, ಜಾತ್ಯತೀತ ಮತಗಳು, ಕ್ಷೇತ್ರ ವ್ಯಾಪ್ತಿಯಲ್ಲಿ ಅಧಿಕ ಸಂಖ್ಯೆಯಲ್ಲಿರುವ ಕಾಂಗ್ರೆಸ್ ಶಾಸಕರು, ಸಚಿವರ ದಂಡು, ಸಿದ್ದರಾಮಯ್ಯ ಪ್ರಭಾವ ಪಕ್ಷದ ಕೈ ಹಿಡಿಯುತ್ತವೆ ಎಂದು ಕಾಂಗ್ರೆಸ್ ನಾಯಕರು ನಂಬಿದ್ದಾರೆ. ಆದರೆ, ಸಂಡೂರು ಕ್ಷೇತ್ರದಿಂದ ಆಚೆಗೆ ತುಕಾರಾಂ ಅಷ್ಟಾಗಿ ಪ್ರಭಾವಿಯಲ್ಲ ಎಂಬ ಕೊರಗು ಕಾಂಗ್ರೆಸ್‌ಗೆ ಕಾಡುತ್ತಿದೆ. ❖


ಕಳೆದ ಚುನಾವಣೆಯಲ್ಲಿ ಮತದಾನವಾದ ಪ್ರಮಾಣ 69.60%





ಶಾಸಕರ ಬಲಾಬಲ
- ಕಾಂಗ್ರೆಸ್ 6
- ಬಿಜೆಪಿ 1
- ಜೆಡಿಎಸ್ 1

1. ಬಳ್ಳಾರಿ ನಗರ
2. ಬಳ್ಳಾರಿ ಗ್ರಾಮಾಂತರ
3. ಸಂಡೂರು
4. ಕಂಪ್ಲಿ
5. ವಿಜಯನಗರ (ಹೊಸಪೇಟೆ)
6. ಕೂಡ್ಲಿಗಿ,
7. ಹೂವಿನಹಡಗಲಿ
8. ಹಗರಿಬೊಮ್ಮನಹಳ್ಳಿ



ಕ್ಷೇತ್ರದಲ್ಲಿ ಕಾಡುವ ವಿಷಯಗಳು....
- ಕ್ಷೇತ್ರದ ಪ್ರತಿ ಹಳ್ಳಿಗಳಲ್ಲೂ ಕುಡಿಯುವ ನೀರಿನ ಸಮಸ್ಯೆ
- ತುಂಗಭದ್ರಾ ಜಲಾಶಯಕ್ಕೆ ಪರ್ಯಾಯ ಜಲಾಶಯ ನಿರ್ಮಾಣದ ಪ್ರಸ್ತಾವ ನನೆಗುದಿಗೆ
- ಕುಂಟುತ್ತಾ ಸಾಗಿರುವ ಬಳ್ಳಾರಿ–ಹೊಸಪೇಟೆ ಹೆದ್ದಾರಿ ಕಾಮಗಾರಿ
- ಕೈಗಾರಿಕೆಗಳಿಗೆ ಭೂಮಿ ಕೊಟ್ಟವರಿಗೆ ಪರಿಹಾರ ಸಿಗದಿರುವುದು
- ಗಣಿ ಬಾಧಿತ ಪ್ರದೇಶಗಳಲ್ಲಿ ಮೂಲಸೌಕರ್ಯ ಕೊರತೆ



ಈ ಚುನಾವಣೆ ನನಗೆ ಅತ್ಯಂತ ಸವಾಲಿನದ್ದು. ಮೋದಿ ಅವರ ವರ್ಚಸ್ಸು, ಜನರೊಂದಿಗಿನ ಒಡನಾಟ ಈ ಬಾರಿ ನನ್ನ ಕೈ ಹಿಡಿಯಲಿದೆ. ಗೆಲ್ಲುವ ವಿಶ್ವಾಸವಿದೆ
ಬಿ. ಶ್ರೀರಾಮುಲು, ಬಿಜೆಪಿ ಅಭ್ಯರ್ಥಿ

- 👍 ವಿಧಾನಸಭೆ ಸೋಲಿನಿಂದ ಸೃಷ್ಟಿಯಾಗಿರುವ ಸಹಾನುಭೂತಿ
- 👍 ಕೆಆರ್‌ಪಿಪಿ ಪಕ್ಷ ಬಿಜೆಪಿಯಲ್ಲಿ ವಿಲೀನಗೊಂಡಿರುವುದರಿಂದ ಬಂದ ಬಲ
- 👎 ಜನರ ಸಂಪರ್ಕಕ್ಕೆ ಸುಲಭವಾಗಿ ಸಿಗುವುದಿಲ್ಲ ಎಂಬ ಆರೋಪ
- 👎 ಮೋದಿ, ಹಿಂದುತ್ವದ ಅಲೆಯ ಮೇಲೆ ಅತಿಯಾದ ನಂಬಿಕೆ



ಬಳ್ಳಾರಿಯ ಭವಿಷ್ಯಕ್ಕಾಗಿ ಒಳ್ಳೆ ಅಭ್ಯರ್ಥಿ ಸಿಕ್ಕಿದ್ದಾರೆ ಎಂಬ ಭಾವನೆ ಜನರಲ್ಲಿದೆ. ಜತೆಗೆ ಕಾಂಗ್ರೆಸ್ ಕಾರ್ಯಕ್ರಮಗಳು ನನ್ನನ್ನು ಗೆಲ್ಲಿಸಲಿವೆ
ಇ.ತುಕಾರಾಂ, ಕಾಂಗ್ರೆಸ್ ಅಭ್ಯರ್ಥಿ

- 👍 ಶಾಸಕನಾಗಿ ಕೆಲಸಗಾರ ಎಂಬ ಇಮೇಜ್ ಹೊಂದಿರುವುದು
- 👍 'ಗ್ಯಾರಂಟಿ' ಯೋಜನೆಗಳ ಕುರಿತು ಜನರಲ್ಲಿರುವ ಮೆಚ್ಚುಗೆ
- 👎 ಸಂಡೂರು ಬಿಟ್ಟರೆ ಕ್ಷೇತ್ರ ವ್ಯಾಪ್ತಿಯಲ್ಲಿ ಅಷ್ಟೇನೂ ಪ್ರಭಾವಿಯಲ್ಲ
- 👎 ಹೆಚ್ಚಿನ ಸಂಖ್ಯೆಯ ಶಾಸಕರಿದ್ದೇವೆಂಬ ಅತಿಯಾದ ಆತ್ಮವಿಶ್ವಾಸ





ಮಹಾರಾಷ್ಟ್ರದಲ್ಲಿ ಪ್ರಧಾನಿ ನರೇಂದ್ರ ಮೋದಿ ಬಿರುಸಿನ ಪ್ರಚಾರ • ಶರದ್ ಪವಾರ್ ವಿರುದ್ಧ ಕಟು ಟೀಕೆ

‘ಉಗ್ರರ ಮನೆಗೆ ನುಗ್ಗಿ ಹೊಡೆಯುತ್ತೇವೆ’

ಲಾತೂರ್/ಮಾಲ್‌ಶಿರಸ್ (ಮಹಾರಾಷ್ಟ್ರ) (ಪಿಟಿಐ): ಕಾಂಗ್ರೆಸ್ ಸರ್ಕಾರದ ಅವಧಿಗೆ ಹೋಲಿಸಿದರೆ ಭಯೋತ್ಪಾದನೆಯ ನಿಗ್ರಹದ ವಿಚಾರದಲ್ಲಿ ಅಗಾಧ ಬದಲಾವಣೆ ಆಗಿದೆ ಎಂದು ಪ್ರಧಾನಿ ಮೋದಿ ಮಂಗಳವಾರ ಪ್ರತಿಪಾದಿಸಿದರು.

ಮಹಾರಾಷ್ಟ್ರದ ಲಾತೂರ್‌ನಲ್ಲಿ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ ಅವರು, ‘ಕಾಂಗ್ರೆಸ್ ಅವಧಿಯಲ್ಲಿ ಭಯೋತ್ಪಾದನಾ ಚಟುವಟಿಕೆ-ಗಳಿಗೆ ಸಂಬಂಧಿಸಿದಂತೆ ಮತ್ತೊಂದು ಕಡತ ಪಾಕಿಸ್ತಾನಕ್ಕೆ ಸಲ್ಲಿಸಲಾಯಿತು ಎಂದು ಮಾಧ್ಯಮಗಳಲ್ಲಿ ತಲೆಬರಹಗಳು ಪ್ರಕಟವಾಗುತ್ತಿದ್ದವು. ಅಂತಹ ಕಡತ ರವಾನಿಸಿದ ಬಳಿಕ ಮಾಧ್ಯಮಗಳ ನಮ್ಮ ಕೆಲವು ಮಿತ್ರರು ಚಪ್ಪಾಳೆ ಹೊಡೆಯುತ್ತಿದ್ದರು. ಇಂದು, ಭಾರತ ಕಡತಗಳನ್ನು ರವಾನಿಸುವುದಿಲ್ಲ. ಭಯೋತ್ಪಾದಕರ ನೆಲೆಗಳಲ್ಲೇ ಅವರನ್ನು ಕೊಲ್ಲಲಾಗುತ್ತಿದೆ’ ಎಂದು ಹೇಳಿದರು.

ನಂತರ ಸೋಲಾಪುರದಲ್ಲಿ ನಡೆದ ರ‍್ಯಾಲಿಯಲ್ಲಿ ಪಾಲ್ಗೊಂಡ ಅವರು, ಎನ್‌ಸಿಪಿ ಮುಖಂಡ ಶರದ್ ಪವಾರ್ ವಿರುದ್ಧ ವಾಗ್ದಾಳಿ ನಡೆಸಿದರು. ‘ಕೇಂದ್ರ ಕೃಷಿ ಸಚಿವರಾಗಿ ರೈತರಿಗಾಗಿ ಹೆಚ್ಚೇನೂ ಕೆಲಸ ಮಾಡಲಿಲ್ಲ. ಈಗ ಅವರನ್ನು ಶಿಕ್ಷಿಸುವ ಸಮಯ ಬಂದಿದೆ’ ಎಂದರು.

ಸೋಮವಾರ ಶರದ್ ಪವಾರ್ ಅವರನ್ನು ‘ಅಲೆದಾಟದ ಆತ್ಮ’ ಎಂದು ಕರೆದಿದ್ದ ಮೋದಿ, ಮಂಗಳವಾರ ಅವರ ಹೆಸರು ಹೇಳದೇ ವಾಗ್ದಾಳಿ ಮುಂದುವರಿಸಿದರು. ‘15 ವರ್ಷಗಳ ಹಿಂದೆ ಒಬ್ಬ ನಾಯಕ ಚುನಾವಣೆಗೆ ಸ್ಪರ್ಧಿಸಲು ಇಲ್ಲಿಗೆ ಬಂದರು. ಇಲ್ಲಿನ ಬರಪೀಡಿತ ನೆಲಕ್ಕೆ ನೀರು ಹರಿಸುವುದಾಗಿ ಅವರು ಸೂರ್ಯಾಸ್ತದ ಸಮಯದಲ್ಲಿ ಶಪಥ ಮಾಡಿದರು. ಅವರು ಇಲ್ಲಿಗೆ ನೀರು ಹರಿಸಿದರೇ? ನಿಮಗೆ ಅದರ ನೆನಪಿದೆಯೇ? ಇದು ಆ ನಾಯಕನನ್ನು ಶಿಕ್ಷಿಸುವ ಸಮಯ’ ಎಂದು ಹೇಳಿದರು.

‘ರಿಮೋಟ್ ಕಂಟ್ರೋಲ್ ಸರ್ಕಾರದಲ್ಲಿ ಅವರು ಕೃಷಿ ಮಂತ್ರಿಯಾಗಿದ್ದಾಗ ಕಬ್ಬಿನ ಎಫ್‌ಆರ್‌ಪಿ ₹200 ಆಗಿತ್ತು. ಈಗ ಮೋದಿಯ ‘ಸೇವಾಕಾಲ’ದಲ್ಲಿ ಅದು ₹340 ಆಗಿದೆ. ಅವರ ಕಾಲದಲ್ಲಿ ರೈತರು ಕಬ್ಬಿನ ಬಾಕಿ ಪಡೆಯಲು ಕಂಬದಿಂದ ಕಂಬ ಸುತ್ತಬೇಕಾಗಿತ್ತು. ಈಗ ಶೇ 100ರಷ್ಟು ಬಾಕಿ ಪಾವತಿ ಆಗುತ್ತಿದೆ. ಅವರ ಕಾಲದಲ್ಲಿ ಸರ್ಕಾರವು ₹7.5 ಲಕ್ಷ ಕೋಟಿ ಮೌಲ್ಯದ ಬೆಳೆಗಳನ್ನು ಖರೀದಿ ಮಾಡಿದ್ದರೆ, ಕಳೆದ 10 ವರ್ಷಗಳಲ್ಲಿ ₹20 ಲಕ್ಷ ಕೋಟಿ ಮೌಲ್ಯದ ಬೆಳೆಗಳನ್ನು ಖರೀದಿ ಮಾಡಲಾಗಿದೆ’ ಎಂದು ವಿವರಿಸಿದರು.

‘ಜಗತ್ತಿನ ಇತರೆ ದೇಶಗಳು 60 ವರ್ಷಗಳಲ್ಲಿ ತಮ್ಮನ್ನು ಬದಲಿಸಿಕೊಂಡಿದ್ದರೆ, ಭಾರತವನ್ನು 60 ವರ್ಷ ಆಳಿದ ಕಾಂಗ್ರೆಸ್ ಪಕ್ಷವು ರೈತರ ಹೊಲಗಳಿಗೆ ನೀರು ಹರಿಸುವುದರಲ್ಲಿಯೂ ವಿಫಲವಾಯಿತು’ ಎಂದು ಆರೋಪಿಸಿದರು.

‘2014ರಲ್ಲಿ ದೇಶದಲ್ಲಿ ಸ್ಥಗಿತಗೊಂಡಿದ್ದ ಸುಮಾರು 100 ನೀರಾವರಿ ಯೋಜನೆಗಳಿದ್ದವು. ಅವುಗಳಲ್ಲಿ 35 ಮಹಾರಾಷ್ಟ್ರದವು. ಇಂದು ಅವುಗಳ ಪೈಕಿ 66 ಯೋಜನೆಗಳು ಪೂರ್ಣಗೊಂಡಿವೆ. ಪ್ರತಿಯೊಂದು ಮನೆ ಮತ್ತು ಜಮೀನಿಗೂ ನೀರು ಕೊಡುವುದು ನನ್ನ ಗುರಿ’ ಎಂದು ತಿಳಿಸಿದರು.

ರೈತ ಉತ್ಪಾದನಾ ಸಂಘಗಳನ್ನು ಶ್ಲಾಘಿಸಿದ ಅವರು, 2019ರಲ್ಲಿ ನಾವು ಅಧಿಕಾರಕ್ಕೆ ಬಂದ ನಂತರ ಪ್ರತ್ಯೇಕ ಕೇಂದ್ರ ಸಹಕಾರಿ ಸಚಿವಾಲಯ-ವನ್ನು ಸ್ಥಾಪಿಸಿದೆವು ಎಂದು ಹೇಳಿದರು.

‘ಬಹುಮತಕ್ಕೆ ಬೇಕಾಗುವಷ್ಟು ಅಭ್ಯರ್ಥಿ ಕಾಂಗ್ರೆಸ್ ಬಳಿ ಇಲ್ಲ’



ಬಹುಮತಕ್ಕೆ ಬೇಕಾದಷ್ಟು ಅಭ್ಯರ್ಥಿಗಳನ್ನು ಕಣಕ್ಕಿಳಿಸಿಲ್ಲ ಎಂದು ಪ್ರಧಾನಿ ಮೋದಿ ಅವರು ಕಾಂಗ್ರೆಸ್‌ಅನ್ನು ಅಣಕ ಮಾಡಿದರು.

‘ಒಂದು ಕಾಲದಲ್ಲಿ ಕಾಂಗ್ರೆಸ್ 400 ಸಂಸದರನ್ನು ಹೊಂದಿತ್ತು. ಆದರೆ, ಈಗ ಪಕ್ಷಕ್ಕೆ 250–275 ಅಭ್ಯರ್ಥಿಗಳನ್ನು ನಿಲ್ಲಿಸಲು ಸಾಧ್ಯವಾಗಿಲ್ಲ. ಸರ್ಕಾರ ರಚಿಸಬೇಕು ಎಂದರೆ, 272 ಸಂಸದರ ಬಲ ಬೇಕು. ಅಷ್ಟು ಸ್ಥಾನಗಳಲ್ಲಿ ಅವರು ಸ್ಪರ್ಧಿಸಿಯೇ ಇಲ್ಲ. ಅವರು ಬಹುಮತ ಗಳಿಸಲು ಹೇಗೆ ಸಾಧ್ಯ. ಅಂತಹ ಪಕ್ಷಕ್ಕೆ ಮತ ಚಲಾವಣೆ ಮಾಡುವ ಮೂಲಕ ನಿಮ್ಮ ಮತವನ್ನು ವ್ಯರ್ಥ ಮಾಡಿಕೊಳ್ಳಬೇಡಿ’ ಎಂದು ಮೋದಿ ಹೇಳಿದರು.

ನಾನು ಬದುಕಿರುವವರೆಗೆ ಎಸ್‌ಸಿ, ಎಸ್‌ಟಿ, ಒಬಿಸಿ ಸಮುದಾಯಗಳ ಮೀಸಲಾತಿ ಕಸಿದು ಧರ್ಮದ ಆಧಾರದ ಮೇಲೆ ಮುಸ್ಲಿಮರಿಗೆ ಮೀಸಲಾತಿ ನೀಡಲು ಅವಕಾಶ ನೀಡುವುದಿಲ್ಲ

ನರೇಂದ್ರ ಮೋದಿ, ಪ್ರಧಾನಿ

ಅಭ್ಯರ್ಥಿಗಳಿಗೆ ಪತ್ರ

ನವದೆಹಲಿ (ಪಿಟಿಐ): ಎಸ್‌ಸಿ, ಎಸ್‌ಟಿ, ಒಬಿಸಿಗಳಿಂದ ಮೀಸಲಾತಿ ಕಸಿದು ತನ್ನ ಮತಬ್ಯಾಂಕ್‌ಗೆ ನೀಡುವ ಕಾಂಗ್ರೆಸ್‌ನ ಉದ್ದೇಶದ ಬಗ್ಗೆ ಮತದಾರರಲ್ಲಿ ಪ್ರಚಾರ ಮಾಡುವಂತೆ ಬಿಜೆಪಿ ನೇತೃತ್ವದ ಎನ್‌ಡಿಎ ಲೋಕಸಭಾ ಅಭ್ಯರ್ಥಿಗಳಿಗೆ ಪ್ರಧಾನಿ ನರೇಂದ್ರ ಮೋದಿ ಸೂಚಿಸಿದ್ದಾರೆ.

ಈ ಬಗ್ಗೆ ಅಭ್ಯರ್ಥಿಗಳಿಗೆ ವೈಯಕ್ತಿಕವಾಗಿ ಪತ್ರ ಬರೆದಿರುವ ಮೋದಿ, ಇದು ಸಾಮಾನ್ಯ ಚುನಾವಣೆ ಅಲ್ಲ ಎಂದು ಒತ್ತಿ ಹೇಳಿದ್ದು, ಧರ್ಮ ಆಧಾರಿತ ಮೀಸಲಾತಿ ಅಸಾಂವಿಧಾನಿಕ ಆಗಿದ್ದರೂ ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷಗಳು ವಿಭಜಕ ಮತ್ತು ತಾರತಮ್ಯದ ಉದ್ದೇಶ ಹೊಂದಿವೆ ಎಂದು ಉಲ್ಲೇಖಿಸಿದ್ದಾರೆ.

ಗೃಹ ಸಚಿವ ಅಮಿತ್ ಶಾ ಅವರಿಗೆ ಬರೆದಿರುವ ಪತ್ರದಲ್ಲಿ ಪ್ರಧಾನಿ ಮೋದಿ, ಪಕ್ಷಕ್ಕೆ ಹಾಗೂ ದೇಶಕ್ಕೆ ಅವರು ನೀಡಿದ ಕೊಡುಗೆಯನ್ನು ಶ್ಲಾಘಿಸಿದ್ದಾರೆ.

‘ಟೀಕಿಸುವುದು ಬಿಟ್ಟು ಮೋದಿ ಏನು ಮಾಡಿದ್ದಾರೆ’

ಪುಣೆ (ಪಿಟಿಐ): ತಮ್ಮನ್ನು ‘ಅಲೆದಾಟದ ಆತ್ಮ’ ಎಂದು ಟೀಕಿಸಿದ್ದ ಪ್ರಧಾನಿ ಮೋದಿ ಅವರಿಗೆ ತಿರುಗೇಟು ನೀಡಿರುವ ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್, ತನ್ನ ಆತ್ಮವು ಜನರಿಗಾಗಿ, ರೈತರಿಗಾಗಿ ‘ಅವಿಶ್ರಾಂತ’ವಾಗಿ ಶ್ರಮಿಸುತ್ತಿದ್ದು, ಅವರಿಗಾಗಿ ಇನ್ನೂ ‘ನೂರು ಪಟ್ಟು’ ಅವಿಶ್ರಾಂತವಾಗಿ ಶ್ರಮಿಸಲು ಸಿದ್ಧ ಎಂದು ಹೇಳಿದ್ದಾರೆ.

ಜುನ್ನಾರ್‌ನಲ್ಲಿ ನಡೆದ ಪಕ್ಷದ ಕಾರ್ಯಕ್ರಮದಲ್ಲಿ ಭಾಗವಹಿಸಿದ ಅವರು ಮೋದಿ ಹೇಳಿಕೆ ಕುರಿತು ಪ್ರತಿಕ್ರಿಯೆ ನೀಡಿದರು. ‘ಇಷ್ಟು ವರ್ಷ ಏನು ಮಾಡಿದ್ದಾರೆ ಎಂದು ಮೋದಿ ನನ್ನ ಬಗ್ಗೆ ಪ್ರಶ್ನಿಸಿದ್ದಾರೆ. ಈ ಪ್ರಶ್ನೆ ಅವರಿಗೇ ಅನ್ವಯಿಸುತ್ತದೆ. ಹತ್ತು ವರ್ಷದಿಂದ ಅಧಿಕಾರದಲ್ಲಿರುವ ಮೋದಿ, ಬೇರೆಯವರನ್ನು ಟೀಕಿಸುವ ಒಂದು ಅಂಶದ ಕಾರ್ಯಸೂಚಿ ಬಿಟ್ಟು ಬೇರೇನು ಮಾಡಿದ್ದಾರೆ’ ಎಂದು ಪ್ರಶ್ನಿಸಿದರು.

ಅನಂತನಾಗ್–ರಜೌರಿ ಮತದಾನ ಮುಂದೂಡಿಕೆ

ಶ್ರೀನಗರ (ಪಿಟಿಐ): ಮೇ 7ರಂದು ನಡೆಯಬೇಕಿದ್ದ ಜಮ್ಮು ಕಾಶ್ಮೀರದ ಅನಂತನಾಗ್–ರಜೌರಿ ಕ್ಷೇತ್ರದ ಮತದಾನವನ್ನು ಚುನಾವಣಾ ಆಯೋಗವು ಮೇ 25ಕ್ಕೆ ಮುಂದೂಡಿದೆ.




ವ್ಯತಿರಿಕ್ತ ಹವಾಮಾನದ ಕಾರಣಕ್ಕೆ ಮತದಾನ ಮುಂದೂಡಬೇಕೆಂದು ಜಮ್ಮು ಕಾಶ್ಮೀರ ಬಿಜೆಪಿ ಘಟಕದ ಅಧ್ಯಕ್ಷ ರವೀಂದರ್ ರೈನಾ, ಜಮ್ಮು ಕಾಶ್ಮೀರ್ ಅಪ್ನಿ ಪಕ್ಷದ ಮುಖ್ಯಸ್ಥ ಅಲ್ತಾಫ್ ಬುಖಾರಿ, ಪೀಪಲ್ಸ್ ಕಾನ್ಫರೆನ್ಸ್ ಮುಖಂಡ ಇಮ್ರಾನ್ ಅನ್ಸಾರಿ ಮತ್ತು ಇತರರು ಚುನಾವಣಾ ಆಯೋಗಕ್ಕೆ ಮನವಿ ಸಲ್ಲಿಸಿದ್ದರು. ಜಮ್ಮು ಮತ್ತು ಕಾಶ್ಮೀರದ ಮಾಜಿ ಮುಖ್ಯಮಂತ್ರಿಗಳಾದ ಒಮರ್ ಅಬ್ದುಲ್ಲಾ ಮತ್ತು ಮೆಹಬೂಬಾ ಮುಫ್ತಿ ಚುನಾವಣಾ ಮುಂದೂಡದಂತೆ ಒತ್ತಾಯಿಸಿದ್ದರು.

ಮುಸ್ಲಿಮರಷ್ಟೇ ಗುರಿ ಏಕೆ: ಖರ್ಗೆ ಪ್ರಶ್ನೆ

ಜಂಜಗೀರ್– ಚಂಪಾ (ಛತ್ತೀಸಗಢ) (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಮುಸ್ಲಿಮರನ್ನು ಮಾತ್ರ ಗುರಿಯಾಗಿಸುತ್ತಿದ್ದಾರೆ ಎಂದು ಮಂಗಳವಾರ ಟೀಕಿಸಿದ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಬಡವರು ತಮ್ಮ ಆರ್ಥಿಕ ಪರಿಸ್ಥಿತಿಯಿಂದಾಗಿ ಹೆಚ್ಚು ಮಕ್ಕಳನ್ನು ಹೊಂದಿರುತ್ತಾರೆ ಎಂದು ಹೇಳಿದ್ದಾರೆ.

ಛತ್ತೀಸಗಢದ ಜಂಜಗೀರ್– ಚಂಪಾ ಜಿಲ್ಲೆಯಲ್ಲಿ ಚುನಾವಣಾ ಪ್ರಚಾರ ಸಭೆಯಲ್ಲಿ ಪಾಲ್ಗೊಂಡ ಅವರು, ‘ಇಂಡಿಯಾ’ ಮೈತ್ರಿಕೂಟವು ಅಧಿಕಾರ-ಕ್ಕೇರುವ ಸೂಚನೆ ಲಭಿಸಿದ್ದರಿಂದ ಪ್ರಧಾನಿ ಹತಾಶರಾಗಿದ್ದಾರೆ. ಆದ್ದರಿಂದ ‘ಮಂಗಳಸೂತ್ರ ಮತ್ತು ಮುಸ್ಲಿಮರ’ ಬಗ್ಗೆ ಮಾತನಾಡುತ್ತಿದ್ದಾರೆ ಎಂದು ದೂರಿದರು.

‘ಕಾಂಗ್ರೆಸ್ ಪಕ್ಷವು ನಿಮ್ಮ ಸಂಪತ್ತನ್ನು ಕಸಿದು ಹೆಚ್ಚು ಮಕ್ಕಳನ್ನು ಹೊಂದಿರುವವರಿಗೆ ಹಂಚುತ್ತದೆ ಎಂದು ಮೋದಿ ಹೇಳುತ್ತಾರೆ. ಬಡವರು ಯಾವಾಗಲೂ ಹೆಚ್ಚು ಮಕ್ಕಳನ್ನು ಹೊಂದಿರುತ್ತಾರೆ. ಮುಸ್ಲಿಮರಷ್ಟೇ ಹೆಚ್ಚು ಮಕ್ಕಳನ್ನು ಹೊಂದಿದ್ದಾರೆಯೇ’ ಎಂದು ಪ್ರಶ್ನಿಸಿದರು.



ಬಿಜೆಪಿಯು 400 ಕ್ಕೂ ಹೆಚ್ಚು ಲೋಕಸಭಾ ಸ್ಥಾನಗಳನ್ನು ಗೆಲ್ಲಲು ಪ್ರಯತ್ನಿಸುತ್ತಿರುವುದು ಬಡವರ ಕಲ್ಯಾಣಕ್ಕಾಗಿ ಅಲ್ಲ, ಅವರ ಹಕ್ಕುಗಳನ್ನು ಕಸಿದುಕೊಳ್ಳಲಿಕ್ಕಾಗಿ

ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ

‘ಬಡವರ ಬಳಿ ಸಂಪತ್ತು ಇಲ್ಲ. ಆದ್ದರಿಂದ ಅವರು ಹೆಚ್ಚು ಮಕ್ಕಳನ್ನು ಹೊಂದುವರು. ಆದರೆ ನೀವು (ಮೋದಿ) ಮುಸ್ಲಿಮರ ಬಗ್ಗೆ ಮಾತ್ರ ಮಾತನಾಡುವುದು ಏಕೆ? ಮುಸ್ಲಿಮರು ಈ ದೇಶಕ್ಕೆ ಸೇರಿದವರು. ನಾವು ಎಲ್ಲರನ್ನೂ ಜತೆಗೆ ಸೇರಿಸಿಕೊಂಡು ದೇಶವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವೆವು. ಅವರಂತೆ (ಬಿಜೆಪಿ) ದೇಶವನ್ನು ಒಡೆಯುವ ಮೂಲಕ ಅಲ್ಲ’ ಎಂದು ತಿಳಿಸಿದರು.

‘ಎಸ್‌ಸಿ, ಎಸ್‌ಟಿ ಮತ್ತು ಒಬಿಸಿಗಳ ಆರ್ಥಿಕ ಸ್ಥಿತಿಯನ್ನು ತಿಳಿಯಲು ಜಾತಿಗಣತಿ ಮತ್ತು ಆರ್ಥಿಕ ಸಮೀಕ್ಷೆ ನಡೆಸುವುದಾಗಿ ನಾವು ಹೇಳುತ್ತಿದ್ದರೆ, ಮೋದಿ ಅವರು ಅದನ್ನು ಲೇವಡಿ ಮಾಡುತ್ತಿದ್ದಾರೆ. ಇಂತಹ ಪ್ರಧಾನಿ ಇನ್ನೂ ಐದು ವರ್ಷ ಅಧಿಕಾರದಲ್ಲಿದ್ದರೆ ದೇಶವೇ ನಾಶವಾಗಲಿದೆ’ ಎಂದು ಎಚ್ಚರಿಸಿದರು.

‘ಸಂವಿಧಾನದ ಪ್ರತಿ ಜತೆಗಿರಲಿ’

ನವದೆಹಲಿ: ನಾಮಪತ್ರ ಸಲ್ಲಿಸುವ ಸಂದರ್ಭ, ಸಾರ್ವಜನಿಕರ ಸಭೆ ಮತ್ತು ಮತದಾರರ ಬಳಿ ತೆರಳುವಾಗ ಸಂವಿಧಾನದ ಪ್ರತಿಯನ್ನು ಜತೆಗೆ ಇಟ್ಟುಕೊಳ್ಳುವಂತೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಪಕ್ಷದ ಅಭ್ಯರ್ಥಿಗಳಿಗೆ ಸೂಚಿಸಿದ್ದಾರೆ.

ಕಾಂಗ್ರೆಸ್ ಇರುವವರೆಗೂ ಬಿಜೆಪಿಗೆ ಮಾತ್ರವಲ್ಲ, ಜಗತ್ತಿನ ಯಾವ ಶಕ್ತಿಗೂ ಸಂವಿಧಾನವನ್ನು ಕಿತ್ತುಹಾಕಲು ಸಾಧ್ಯವಿಲ್ಲ ಎಂಬುದನ್ನು ಜನರಿಗೆ ತಿಳಿಸುವಂತೆಯೂ ಅವರು ಕೇಳಿಕೊಂಡಿದ್ದಾರೆ.

ಗುಜರಾತ್‌ನ ಪಠಾಣ್, ಛತ್ತೀಸಗಢದ ಬಿಲಾಸ್‌ಪುರ ಮತ್ತು ಮಧ್ಯಪ್ರದೇಶದ ಭಿಂಡ್‌ನಲ್ಲಿ ಚುನಾವಣಾ ಪ್ರಚಾರ ಸಭೆಯಲ್ಲಿ ಪಾಲ್ಗೊಂಡ ಸಮಯದಲ್ಲಿ ರಾಹುಲ್ ಅವರು ಸಂವಿಧಾನದ ಪ್ರತಿಯನ್ನು ತಮ್ಮ ಜತೆಗೆ ಇಟ್ಟುಕೊಂಡಿದ್ದರು.

ಚುನಾವಣಾ ಕಣದಲ್ಲಿ...

‘ಬಿಜೆಪಿ ಅಭ್ಯರ್ಥಿಗಳಿಗೆ ವಿರೋಧ’

ಚಂಡೀಗಢ (ಪಿಟಿಐ): ಲೋಕಸಭಾ ಚುನಾವಣೆಗೆ ಮತಯಾಚಿಸಲು ಬರುವ ಬಿಜೆಪಿ ಅಭ್ಯರ್ಥಿಗಳನ್ನು ವಿರೋಧಿಸಲು ಪಂಜಾಬ್‌ನ ಗ್ರಾಮಸ್ಥರನ್ನು ಸಜ್ಜುಗೊಳಿಸಲಾಗುವುದು ಎಂದು ಸಂಯುಕ್ತ ಕಿಸಾನ್ ಮೋರ್ಚಾದ ಮುಖಂಡ ಹರಿಂದರ್ ಸಿಂಗ್ ಲಖೋವಲ್ ಮಂಗಳವಾರ ತಿಳಿಸಿದರು.

ಬಿಜೆಪಿ ಮುಖಂಡರಲ್ಲಿ ಪ್ರಶ್ನೆಗಳನ್ನು ಕೇಳುವುದನ್ನು ರೈತರು ಮುಂದುವರಿಸ-ಲಿದ್ದಾರೆ ಮತ್ತು ಅವರಿಗೆ ಕಪ್ಪು ಬಾವುಟ ಪ್ರದರ್ಶಿಸಲಿದ್ದಾರೆ ಎಂದು ಹೇಳಿದರು.

ಫರೀದ್‌ಕೋಟ್‌ನ ಬಿಜೆಪಿ ಅಭ್ಯರ್ಥಿ ಹನ್ಸ್‌ರಾಜ್ ಹನ್ಸ್, ಅಮೃತಸರದ ಅಭ್ಯರ್ಥಿ ತರಣ್‌ಜಿತ್ ಸಿಂಗ್ ಸಂಧು, ಗುರುದಾಸ್‌ಪುರದ ಅಭ್ಯರ್ಥಿ ದಿನೇಶ್ ಸಿಂಗ್ ಮೊದಲಾದವರು ರೈತರ ಪ್ರತಿಭಟನೆಯನ್ನು ಎದುರಿಸುತ್ತಿದ್ದಾರೆ.

ಔಟರ್ ಮಣಿಪುರ: ಶೇ 81 ಮತದಾನ

ಇಂಫಾಲ್ (ಪಿಟಿಐ): ಔಟರ್ ಮಣಿಪುರ ಲೋಕಸಭಾ ಕ್ಷೇತ್ರದ ಆರು ಮತಗಟ್ಟೆಗಳಲ್ಲಿ ಮಂಗಳವಾರ ನಡೆದ ಮರುಮತದಾನದಲ್ಲಿ ಶೇ 81.16 ರಷ್ಟು ಮತದಾನ ಆಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮತದಾನದ ವೇಳೆ ಯಾವುದೇ ಅಹಿತಕರ ಘಟನೆಗಳು ನಡೆದಿಲ್ಲ. ಎಲ್ಲಾ ರೀತಿಯ ಭದ್ರತಾ ವ್ಯವಸ್ಥೆಗಳನ್ನು ಮಾಡಲಾಗಿತ್ತು ಎಂದು ವಿವರಿಸಿದರು.

ಏಪ್ರಿಲ್ 26ರಂದು ಈ ಮತಗಟ್ಟೆಗಳಲ್ಲಿ ನಡೆದಿದ್ದ ಮತದಾನದ ವೇಳೆ ದುಷ್ಕರ್ಮಿಗಳು ಇವಿಎಂ ಮತ್ತು ವಿವಿಪ್ಯಾಟ್‌ಗಳಿಗೆ ಹಾನಿ ಎಸಗಿದ್ದರು. ಒಂದು ಮತಗಟ್ಟೆಯಲ್ಲಿ ಇವಿಎಂನಲ್ಲಿ ತಾಂತ್ರಿಕ ದೋಷ ಕಂಡುಬಂದಿತ್ತು ಎಂದು ಹೇಳಿದರು.

ಬಿಜೆಪಿ ಗೆಲುವಿಗಾಗಿ ಅಮೆರಿಕದಲ್ಲಿ ಹವನ


ವಾಷಿಂಗ್ಟನ್ (ಪಿಟಿಐ): ಲೋಕಸಭಾ ಚುನಾವಣೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಆಡಳಿತಾರೂಢ ಬಿಜೆಪಿ ಮತ್ತೆ ಜಯ ಸಾಧಿಸಲಿ ಎಂದು ಪ್ರಾರ್ಥಿಸಿ ಬಿಜೆಪಿಯ ನೂರಾರು ಮಂದಿ ಬೆಂಬಲಿಗರು ಅಮೆರಿಕದ ವಿವಿಧ ನಗರಗಳಲ್ಲಿ ವಾರಾಂತ್ಯದಲ್ಲಿ ಹವನ ನಡೆಸಿದ್ದಾರೆ.

‘ಬಿಜೆಪಿಯ ಸಾಗರೋತ್ತರ ಸ್ನೇಹಿತರು’ ಸಂಘಟನೆಯ ಅಮೆರಿಕ ಘಟಕವು ಈ ಹವನಗಳನ್ನು ಆಯೋಜಿಸಿತ್ತು. ನ್ಯೂಜೆರ್ಸಿ, ನ್ಯೂಯಾರ್ಕ್, ವರ್ಜಿನಿಯಾ, ಮೇರಿಲ್ಯಾಂಡ್ ಮತ್ತು ಷಿಕಾಗೊ ನಗರಗಳಲ್ಲಿ ಭಾನುವಾರ ಹವನಗಳು ನಡೆದಿವೆ ಎಂದು ಸಂಘಟನೆಯು ಸೋಮವಾರ ತಿಳಿಸಿದೆ.

‘ಈ ಪವಿತ್ರ ಕಾರ್ಯವು ಆಧ್ಯಾತ್ಮಿಕ ಶಕ್ತಿಯನ್ನು ಆವಾಹಿಸುವ ಕೆಲಸ ಮಾಡುತ್ತದೆ. ಬಿಜೆಪಿಯು ಪ್ರಧಾನಿ ಮೋದಿ ಅವರ ನಾಯಕತ್ವದಲ್ಲಿ ಸಮೃದ್ಧ ಭಾರತಕ್ಕಾಗಿ ಹೊಂದಿರುವ ದೃಷ್ಟಿಕೋನಕ್ಕೆ ನಮ್ಮೆಲ್ಲರ ಬೆಂಬಲದ ದ್ಯೋತಕ ಇದು’ ಎಂದು ಸಂಘಟನೆಯು ಹೇಳಿಕೆಯಲ್ಲಿ ತಿಳಿಸಿದೆ.

ಹವನ ಕಾರ್ಯಕ್ರಮದಲ್ಲಿ ಭಾಗಿಯಾಗಲು ಅಮೆರಿಕದಲ್ಲಿ ಇರುವ ಭಾರತ ಮೂಲದ ವೃತ್ತಿಪರರು, ಉದ್ಯಮಿಗಳು, ಷಿಕಾಗೊ ನಗರದ ನಿವಾಸಿಗಳು ನಗರದ ಹೊರವಲಯದಲ್ಲಿ ಇರುವ ದೇವಸ್ಥಾನವೊಂದರಲ್ಲಿ ಸೇರಿದ್ದರು.

ಪಂಜಾಬ್: ಮಾಜಿ ಎಡಿಜಿಪಿ ಕಾಂಗ್ರೆಸ್‌ಗೆ



ನವದೆಹಲಿ (ಪಿಟಿಐ): ಪಂಜಾಬ್‌ನ ಮಾಜಿ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ (ಎಡಿಜಿಪಿ) ಗುರಿಂದರ್ ಸಿಂಗ್ ಧಿಲ್ಲೋನ್ ಅವರು ತಮ್ಮ ಪತ್ನಿ ಜೊತೆ ಮಂಗಳವಾರ ಇಲ್ಲಿ ಕಾಂಗ್ರೆಸ್ ಸೇರಿದರು.

ಪಂಜಾಬ್ ಪೊಲೀಸ್ ಸೇವೆಯಿಂದ ಈಚೆಗಷ್ಟೇ ಸ್ವಯಂ ನಿವೃತ್ತಿಯಾಗಿದ್ದ ಗುರಿಂದರ್ ಅವರನ್ನು ಎಐಸಿಸಿ ಪಂಜಾಬ್ ಉಸ್ತುವಾರಿ ದೇವೇಂದ್ರ ಯಾದವ್ ಅವರು ಪಕ್ಷಕ್ಕೆ ಬರಮಾಡಿಕೊಂಡರು.

‘ಒಬ್ಬ ಪೊಲೀಸ್ ಅಧಿಕಾರಿಯಾಗಿ ಸುಮಾರು ಎರಡು ದಶಕಗಳ ಕಾಲ ನಾನು ನನ್ನ ರಾಜ್ಯದಲ್ಲಿ ಸೇವೆ ಸಲ್ಲಿಸಿದ್ದೇನೆ. ರಾಹುಲ್ ಗಾಂಧಿ ಅವರ ಆಶೀರ್ವಾದದಿಂದ ಇದೀಗ ಕಾಂಗ್ರೆಸ್ ಸೇರಿದ್ದೇನೆ’ ಎಂದು ಧಿಲ್ಲೋನ್ ಹೇಳಿದರು.



ಹವನ

ನವದೆಹಲಿ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಾನ್ಸುರಿ ಸ್ವರಾಜ್ ಅವರು ಮಂಗಳವಾರ ನಾಮಪತ್ರ ಸಲ್ಲಿಕೆಗೂ ಮುನ್ನ ‘ಹವನ’ದಲ್ಲಿ ಪಾಲ್ಗೊಂಡರು –ಪಿಟಿಐ ಚಿತ್ರ

ಪೀಯೂಷ್ ಗೋಯಲ್ ನಾಮಪತ್ರ ಸಲ್ಲಿಕೆ

ಮುಂಬೈ (ಪಿಟಿಐ): ಕೇಂದ್ರ ಸಚಿವ, ಮುಂಬೈ ಉತ್ತರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಪೀಯೂಷ್ ಗೋಯಲ್ ಅವರು ಮಂಗಳವಾರ ನಾಮಪತ್ರ ಸಲ್ಲಿಸಿದರು.

ಬಾಂದ್ರಾದಲ್ಲಿ ಚುನಾವಣಾ ಅಧಿಕಾರಿಗೆ ನಾಮಪತ್ರ ಸಲ್ಲಿಸುವ ವೇಳೆ ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಅವರು ಜತೆಗಿದ್ದರು. ರಾಜ್ಯಸಭಾ ಸದಸ್ಯರಾಗಿರುವ ಗೋಯಲ್ ಅವರು ಲೋಕಸಭೆ ಚುನಾವಣೆ ಕಣಕ್ಕಿಳಿದಿರು-ವುದು ಇದೇ ಮೊದಲು.

ರವೀಂದ್ರ ವಾಯ್ಕರ್ ಕಣಕ್ಕೆ: ಶಿವಸೇನಾ (ಶಿಂದೆ ಬಣ) ಪಕ್ಷವು ಮುಂಬೈ ವಾಯವ್ಯ ಕ್ಷೇತ್ರದಿಂದ ರವೀಂದ್ರ ವಾಯ್ಕರ್ ಅವರನ್ನು ಕಣಕ್ಕಿಳಿಸಿದೆ. ಉದ್ಧವ್ ಠಾಕ್ರೆಗೆ ಆಪ್ತರಾಗಿದ್ದ ವಾಯ್ಕರ್, ಆ ಬಳಿಕ ಶಿಂದೆ ಬಣ ಸೇರಿದ್ದರು. ಅವರು ಇಲ್ಲಿ ಶಿವಸೇನಾ (ಯುಬಿಟಿ) ಅಭ್ಯರ್ಥಿ ಅಮೋಲ್ ಕೀರ್ತಿಕರ್ ವಿರುದ್ಧ ಪೈಪೋಟಿ ನಡೆಸುವರು.

ಮಹಿಳೆಯರಿಗೆ ಮಾಸಿಕ ₹1,500: ಎನ್‌ಡಿಎ ಭರವಸೆ



ಅಮರಾವತಿ (ಪಿಟಿಐ): ಅರ್ಹ ಮಹಿಳೆಯರಿಗೆ ಪ್ರತಿ ತಿಂಗಳು ₹1,500 ಪಿಂಚಣಿ ನೀಡುವ ಭರವಸೆಯನ್ನೊಳಗೊಂಡಿರುವ ಪ್ರಣಾಳಿಕೆಯನ್ನು ಆಂಧ್ರಪ್ರದೇಶದಲ್ಲಿ ಮಂಗಳವಾರ ಎನ್‌ಡಿಎ ಬಿಡುಗಡೆಗೊಳಿಸಿದೆ.

ಟಿಡಿಪಿ, ಜನಸೇನಾ ಮತ್ತು ಬಿಜೆಪಿಯ ಜಂಟಿ ಪ್ರಣಾಳಿಕೆಯಲ್ಲಿ ನಿರುದ್ಯೋಗಿ ಯುವಜನರಿಗೆ ತಿಂಗಳಿಗೆ ₹3,000 ಆರ್ಥಿಕ ನೆರವು ಒದಗಿಸುವ ಭರವಸೆಯನ್ನೂ ನೀಡಲಾಗಿದೆ.

ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ, ಪ್ರತಿ ಕುಟುಂಬಕ್ಕೆ ಮೂರು ಎಲ್‌ಪಿಜಿ ಸಿಲಿಂಡರ್ ಉಚಿತ, ಶಾಲೆಗೆ ಹೋಗುವ ಪ್ರತಿ ಮಗುವಿಗೆ ವಾರ್ಷಿಕ ₹15,000 ಸೇರಿದಂತೆ ‘ಸೂಪರ್ ಸಿಕ್ಸ್’ ಭರವಸೆಗಳನ್ನು ಟಿಡಿಪಿ ಈಚೆಗೆ ಘೋಷಿಸಿತ್ತು.

ಆಂಧ್ರಪ್ರದೇಶದಲ್ಲಿ ಟಿಡಿಪಿಯು 144 ವಿಧಾನಸಭಾ ಕ್ಷೇತ್ರಗಳು ಹಾಗೂ 17 ಲೋಕಸಭಾ ಕ್ಷೇತ್ರಗಳಲ್ಲಿ ಸ್ಪರ್ಧಿಸುತ್ತಿದೆ. ಬಿಜೆಪಿಯು ಆರು ಲೋಕಸಭಾ ಮತ್ತು 10 ವಿಧಾನಸಭಾ ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಸ್ಪರ್ಧೆಗಿಳಿಸಿದೆ.

ಜನಸೇನಾವು ಎರಡು ಲೋಕಸಭಾ ಕ್ಷೇತ್ರಗಳು ಮತ್ತು 21 ವಿಧಾನಸಭಾ ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ.

ಆಂಧ್ರಪ್ರದೇಶದಲ್ಲಿ ಲೋಕಸಭೆ ಮತ್ತು ವಿಧಾನಸಭಾ ಕ್ಷೇತ್ರಗಳಿಗೆ ಮೇ 13ರಂದು ಮತದಾನ ನಡೆಯಲಿದೆ.

‘ವೋಟ್ ಜಿಹಾದ್’ಗೆ ಎಸ್‌ಪಿ ನಾಯಕಿ ಕರೆ

ಫರೂಖಾಬಾದ್ (ಉತ್ತರ ಪ್ರದೇಶ) (ಪಿಟಿಐ): ‘ಇಂಡಿಯಾ’ ಮೈತ್ರಿಕೂಟದ ಫರೂಖಾಬಾದ್ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಪರ ಮತ ಯಾಚನೆ ಮಾಡುವ ವೇಳೆ ‘ವೋಟ್ ಜಿಹಾದ್’ಗೆ ಕರೆ ನೀಡಿದ ಸಮಾಜವಾದಿ ಪಕ್ಷದ ನಾಯಕಿ ಮರಿಯಾ ಆಲಂ, ಪ್ರಸ್ತುತ ಸನ್ನಿವೇಶದಲ್ಲಿ ಬಿಜೆಪಿಯನ್ನು ಅಧಿಕಾರದಿಂದ ಕೆಳಕ್ಕಿಳಿಸಲು ಅಲ್ಪಸಂಖ್ಯಾತ ಸಮುದಾಯಕ್ಕೆ ಇದು ಅನಿವಾರ್ಯ ಎಂದಿದ್ದಾರೆ.

ಮರಿಯಾ ಆಲಂ, ಕಾಂಗ್ರೆಸ್‌ನ ಹಿರಿಯ ಮುಖಂಡರಾದ ಸಲ್ಮಾನ್ ಖುರ್ಷಿದ್ ಅವರ ಸೋದರ ಸಂಬಂಧಿ. ಸೋಮವಾರ ಚುನಾವಣಾ ಸಭೆಯೊಂದರಲ್ಲಿ ಭಾಗವಹಿಸಿದ್ದ ಮರಿಯಾ, ಸಲ್ಮಾನ್ ಖುರ್ಷಿದ್ ಅವರ ಉಪಸ್ಥಿತಿಯಲ್ಲಿಯೇ ವೋಟ್ ಜಿಹಾದ್‌ಗೆ ಕರೆ ನೀಡಿದ್ದರು.

‘ಇಂಡಿಯಾ’ ಕೂಟದ ಅಭ್ಯರ್ಥಿ ನವಲ್ ಕಿಶೋರ್ ಪರ ಪ್ರಚಾರ ಮಾಡುವ ವೇಳೆ ಕಾಯಂಗಂಜ್‌ನಲ್ಲಿ ಮಾತನಾಡುತ್ತಿದ್ದ ಅವರು, ‘ಜತೆಯಾಗಿ, ಬುದ್ಧಿವಂತಿಕೆಯಿಂದ, ಭಾವುಕರಾಗದೇ, ಮೌನವಾಗಿ ವೋಟ್ ಜಿಹಾದ್ ಮಾಡಿ. ಸಂಘಿ ಸರ್ಕಾರವನ್ನು ಕೆಳಗಿಳಿಸಲು ನಮಗಿರುವುದು ವೋಟ್ ಜಿಹಾದ್ ಮಾತ್ರ’ ಎಂದು ಹೇಳಿದ್ದಾರೆ.

‘ಸಂವಿಧಾನ ಮತ್ತು ಪ್ರಜಾಪ್ರಭುತ್ವ ಅಪಾಯದಲ್ಲಿವೆ ಎಂದು ಜನ ಹೇಳುತ್ತಾರೆ. ಆದರೆ, ಮಾನವಕುಲವೇ ಅಪಾಯದಲ್ಲಿದೆ ಎಂದು ನಾನು ಹೇಳುತ್ತೇನೆ’ ಎಂದರು.

ಆಲಂ ಅವರ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ವ್ಯಾಪಕವಾಗಿ ಹರಿದಾಡುತ್ತಿದೆ.

ಆಲಂ ಹೇಳಿಕೆಯ ಬಗ್ಗೆ ಸಲ್ಮಾನ್ ಖುರ್ಷಿದ್ ಅವರನ್ನು ಪ್ರಶ್ನಿಸಿದಾಗ, ಆ ಪದದ ಅಕ್ಷರಶಃ ಅರ್ಥವನ್ನು ತಪ್ಪಾಗಿ ವ್ಯಾಖ್ಯಾನಿಸಲಾಗುವುದರಿಂದ ತಾನು ಸಾಮಾನ್ಯವಾಗಿ ಅದನ್ನು ಬಳಸುವುದಿಲ್ಲ ಎಂದು ಹೇಳಿದರು.

‘ಜಿಹಾದ್ ಎಂದರೆ, ಒಂದು ಸಂದರ್ಭದ ವಿರುದ್ಧ ಹೋರಾಡುವುದು. ಸಂವಿಧಾನವನ್ನು ರಕ್ಷಿಸಲು ವೋಟ್ ಜಿಹಾದ್ ಕಾರ್ಯರೂಪಕ್ಕೆ ತನ್ನಿ ಎನ್ನುವುದು ಆಕೆಯ ಉದ್ದೇಶವಿರಬಹುದು’ ಎಂದು ಅಭಿಪ್ರಾಯಪಟ್ಟರು.

ಮರಿಯಾ, ಖುರ್ಷಿದ್ ವಿರುದ್ಧ ಪ್ರಕರಣ ದಾಖಲು

ವೋಟ್ ಜಿಹಾದ್ ಹೇಳಿಕೆ ಸಂಬಂಧ, ಉತ್ತರ ಪ್ರದೇಶದ ಪೊಲೀಸರು ಮಂಗಳವಾರ ಸಮಾಜವಾದಿ ಪಕ್ಷದ ನಾಯಕಿ ಮರಿಯಾ ಆಲಂ ಮತ್ತು ಕಾಂಗ್ರೆಸ್ ನಾಯಕ ಸಲ್ಮಾನ್ ಖುರ್ಷಿದ್ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಫ್ಲೈಯಿಂಗ್ ಸ್ಕ್ವಾಡ್ ದೂರಿನ ಆಧಾರದ ಮೇಲೆ ಭಾರತೀಯ ದಂಡ ಸಂಹಿತೆ (ಐಪಿಸಿ) ಮತ್ತು ಜನಪ್ರಾತಿನಿಧ್ಯ ಕಾಯ್ದೆ ಅಡಿ ಪ್ರಕರಣ ದಾಖಲಿಸಿದ್ದಾಗಿ ಪೊಲೀಸರು ತಿಳಿಸಿದ್ದಾರೆ. ಕಾಯಂಗಂಜ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಮರಿಯಾ ಆಲಂ ‘ವೋಟ್ ಜಿಹಾದ್’ ಹೇಳಿಕೆ ನೀಡಿದರೆ, ಸಲ್ಮಾನ್ ಖುರ್ಷಿದ್ ಆ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಆಲಂ ಅವರ ಹೇಳಿಕೆ ಖಂಡಿಸಿದ್ದ ಬಿಜೆಪಿಯು, ವಿರೋಧ ಪಕ್ಷಗಳು ಲೋಕಸಭಾ ಚುನಾವಣೆಯನ್ನು ಜಿಹಾದಿಗಳ ಬೆಂಬಲದೊಂದಿಗೆ ಎದುರಿಸುತ್ತಿವೆ ಎಂದು ಆರೋಪಿಸಿತ್ತು. ಚುನಾವಣಾ ಆಯೋಗವು ಈ ಸಂಬಂಧ ಸ್ವಯಂಪ್ರೇರಿತವಾಗಿ ದೂರು ದಾಖಲಿಸಿಕೊಂಡು ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿತ್ತು.

ಚುಟುಕು

ಗುರುಗ್ರಾಮ: ರಾಜ್ ಬಬ್ಬರ್ ‘ಕೈ’ ಅಭ್ಯರ್ಥಿ



ಚಂಡೀಗಢ (ಪಿಟಿಐ) ಕಾಂಗ್ರೆಸ್ ಹಿರಿಯ ನಾಯಕ ರಾಜ್ ಬಬ್ಬರ್ ಅವರು ಗುರುಗ್ರಾಮ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಎಂದು ಪಕ್ಷ ಮಂಗಳವಾರ ಘೋಷಿಸಿದೆ. ಅವರು ಕ್ಷೇತ್ರದಲ್ಲಿ ಬಿಜೆಪಿ ಹಿರಿಯ ನಾಯಕ ಮತ್ತು ಕೇಂದ್ರ ಸಚಿವ ರಾವ್ ಇಂದರ್‌ಜಿತ್ ಸಿಂಗ್ ವಿರುದ್ಧ ಸ್ಪರ್ಧಿಸುತ್ತಿದ್ದಾರೆ.

ಇದರೊಂದಿಗೆ ಹರಿಯಾಣದಲ್ಲಿ ತಾನು ಸ್ಪರ್ಧಿಸುತ್ತಿರುವ ಎಲ್ಲ 9 ಕ್ಷೇತ್ರಗಳಿಗೆ ಕಾಂಗ್ರೆಸ್ ಪಕ್ಷವು ಅಭ್ಯರ್ಥಿಗಳನ್ನು ಘೋಷಿಸಿದಂತಾಗಿದೆ. ರಾಜ್ಯದ 10 ಕ್ಷೇತ್ರಗಳ ಪೈಕಿ ಒಂದು ಕ್ಷೇತ್ರವನ್ನು ಅದು ಮಿತ್ರಪಕ್ಷವಾದ ಎಎಪಿಗೆ ಬಿಟ್ಟುಕೊಟ್ಟಿದೆ.

ಮಾಜಿ ಕೇಂದ್ರ ಸಚಿವ ಆನಂದ್ ಶರ್ಮಾ ಅವರು ಹಿಮಾಚಲ ಪ್ರದೇಶದ ಕಾಂಗ್ರಾ ಕ್ಷೇತ್ರದಿಂದ, ಮಾಜಿ ಶಾಸಕ ಸತ್ಪಾಲ್ ರಾಯ್‌ಜಾದಾ ಅವರು ಹಮೀರ್‌ಪುರ್ ಲೋಕಸಭಾ ಕ್ಷೇತ್ರದಿಂದ, ಭೂಷಣ್ ಪಾಟೀಲ್ ಮುಂಬೈ ಉತ್ತರ ಕ್ಷೇತ್ರದಿಂದ ಕಣಕ್ಕಿಳಿಯಲಿದ್ದಾರೆ ಎಂದು ಪಕ್ಷ ಪ್ರಕಟಿಸಿದೆ.

ಸತ್ಪಾಲ್ ಅವರು ಕೇಂದ್ರ ಸಚಿವ ಅನುರಾಗ್ ಠಾಕೂರ್ ಅವರನ್ನು ಎದುರಿಸಲಿದ್ದಾರೆ.

ಆದರೆ, ನಾಮಪತ್ರ ಸಲ್ಲಿಕೆಗೆ ಇನ್ನು ಕೇವಲ ಮೂರು ದಿನ ಬಾಕಿ ಇರುವ ಅಮೇಠಿ ಮತ್ತು ರಾಯ್‌ಬರೇಲಿ ಕ್ಷೇತ್ರಗಳಲ್ಲಿ ಪಕ್ಷದ ಅಭ್ಯರ್ಥಿಗಳು ಯಾರು ಎನ್ನುವುದು ಗುಟ್ಟಾಗಿದ್ದು, ಕುತೂಹಲ ತೀವ್ರಗೊಂಡಿದೆ.

ಜಿಗಿ–ನೆಗೆದಾಟ

ಕಾಂಗ್ರೆಸ್ ಶಾಸಕ ಬಿಜೆಪಿಗೆ

ಭೋಪಾಲ್ (ಪಿಟಿಐ): ಕಾಂಗ್ರೆಸ್ ಮುಖಂಡ ಹಾಗೂ ಮಧ್ಯಪ್ರದೇಶದ ಶಾಸಕ ರಾಮ್‌ನಿವಾಸ್ ರಾವತ್ ಅವರು ಮಂಗಳವಾರ ಬಿಜೆಪಿಗೆ ಸೇರ್ಪಡೆಗೊಂಡರು.

ಇಂದೋರ್ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ನಾಮಪತ್ರ ವಾಪಸ್ ತೆಗೆದುಕೊಂಡ ಮರುದಿನ ಈ ಬೆಳವಣಿಗೆ ನಡೆದಿದೆ.

ಮಧ್ಯಪ್ರದೇಶ ಮುಖ್ಯಮಂತ್ರಿ ಮೋಹನ್ ಯಾದವ್ ಅವರ ಸಮ್ಮುಖದಲ್ಲಿ ರಾಮ್‌ನಿವಾಸ್ ಅವರು ಪಕ್ಷಕ್ಕೆ ಸೇರಿದರು.

ಮೊರೆನಾ ಮೇಯರ್ ಶಾರದಾ ಸೋಲಂಕಿ ಅವರೂ ಬಿಜೆಪಿಗೆ ಸೇರ್ಪಡೆಗೊಂಡರು. ರಾಮ್‌ನಿವಾಸ್ ಅವರು ವಿಜಯ್‌ಪುರ ಕ್ಷೇತ್ರದ ಶಾಸಕರಾಗಿದ್ದಾರೆ.

ಎಂಥಾ ಮಾತು!



ಅಪೌಷ್ಟಿಕತೆ ಮತ್ತು ಬಡತನ ಕುರಿತ ಜಾಗತಿಕ ಸೂಚ್ಯಂಕದಲ್ಲಿ ಭಾರತದ ಸ್ಥಾನ ಎಲ್ಲಿದೆ ಎಂಬುದು ಜನರಿಗೆ ತಿಳಿದಿದೆ. ಲೋಕಸಭಾ ಚುನಾವಣೆಯಲ್ಲಿ ಗೆದ್ದು, ಬಿಜೆಪಿಯು ಮತ್ತೆ ಅಧಿಕಾರಕ್ಕೆ ಬಂದರೆ ದೇಶವು 15 ವರ್ಷಗಳಷ್ಟು ಹಿಂದಕ್ಕೆ ಹೋಗಲಿದೆ. ನಿಜವಾದ ಸಮಸ್ಯೆಗಳಿಂದ ಜನರ ಗಮನವನ್ನು ಬೇರೆಡೆಗೆ ಸೆಳೆಯಲು ಆ ಪಕ್ಷವು ‘ವಿಭಜನೆಯ ರಾಜಕಾರಣ’ ಮಾಡುತ್ತಿದೆ. ಜನರು ಬದಲಾವಣೆಗಾಗಿ ಮತದಾನ ಮಾಡಲಿದ್ದಾರೆ. ಕೇಂದ್ರ ಸರ್ಕಾರವು ಸರ್ಕಾರಿ ಸಂಸ್ಥೆಗಳನ್ನು ದುರುಪಯೋಗ ಮಾಡುತ್ತಿದೆ

ಡಿಂಪಲ್ ಯಾದವ್, ಸಮಾಜವಾದಿ ಪಕ್ಷದ ಸಂಸದೆ



ಕಾಂಗ್ರೆಸ್ ಮುಳುಗುವ ಹಡಗಾಗಿದ್ದು, ಜಗತ್ತಿನ ಯಾವ ಶಕ್ತಿಗೂ ಅದನ್ನು ರಕ್ಷಿಸಲು ಸಾಧ್ಯವಾಗದು. ಸೂರತ್ ಮತ್ತು ಇಂದೋರ್‌ನ ಅಭಿವೃದ್ಧಿ ಕಾರ್ಯಗಳನ್ನು ಕಂಡು ಜನರು ಆಡಳಿತಾರೂಢ ಬಿಜೆಪಿಯ ಪರವಾಗಿದ್ದಾರೆ. ಸೂರತ್‌ನಲ್ಲಿ ಬಿಜೆಪಿ ಅಭ್ಯರ್ಥಿ ಅವಿರೋಧವಾಗಿ ಆಯ್ಕೆಯಾಗಿರುವುದೇ ಇದಕ್ಕೆ ಸಾಕ್ಷಿ. ಬಿಜೆಪಿ ಅಭ್ಯರ್ಥಿ ಅವಿರೋಧ ಆಯ್ಕೆಯಾದರೆ ಪ್ರಜಾಪ್ರಭುತ್ವ ಅಪಾಯದಲ್ಲಿದೆ ಎಂದು ಕಾಂಗ್ರೆಸ್ ಹೇಳುತ್ತದೆ. ಕಾಂಗ್ರೆಸ್‌ನ ಅಭ್ಯರ್ಥಿಗಳೂ ಈ ಹಿಂದೆ 20 ಸಲ ಅವಿರೋಧವಾಗಿ ಆಯ್ಕೆಯಾಗಿದ್ದರು. ಆಗ ಪ್ರಜಾಪ್ರಭುತ್ವಕ್ಕೆ ಅಪಾಯವಾಗಲಿಲ್ಲವೇ?

ರಾಜನಾಥ್ ಸಿಂಗ್, ರಕ್ಷಣಾ ಸಚಿವ

ಕ್ಷೇತ್ರ ಮಹಾತ್ಮೆ



ಪಶ್ಚಿಮ ಬಂಗಾಳದ ಬಿರ್‌ಭೂಮ್ ಲೋಕಸಭಾ ಕ್ಷೇತ್ರದಲ್ಲಿ ಚುನಾವಣಾ ಕಾವು ಏರಿಕೆಯಾಗಿದ್ದು, ಪ್ರಚಾರ ಬಿರುಸುಗೊಂಡಿದೆ. ಈ ಕ್ಷೇತ್ರದಿಂದ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಈ ಬಾರಿಯೂ ಶತಾಬ್ದಿ ರಾಯ್ ಅವರನ್ನೇ ಕಣಕ್ಕಿಳಿಸಿದೆ. ಅವರಿಗೆ ಪೈಪೋಟಿ ನೀಡಲು ಬಿಜೆಪಿಯು ದೇಬ್‌ತನು ಭಟ್ಟಾಚಾರ್ಯ ಅವರನ್ನು ಸ್ಪರ್ಧಿಯಾಗಿಸಿದೆ. ಇವರಿಬ್ಬರ ಜೊತೆಗಿನ ಹಣಾಹಣಿಗೆ ಕಾಂಗ್ರೆಸ್ ಪಕ್ಷವು ಮಿಲ್ಟನ್ ರಶೀದ್ ಅವರನ್ನು ಅಖಾಡಕ್ಕಿಳಿಸಿದೆ. ಈ ಕ್ಷೇತ್ರದಿಂದ ಮೂರು ಬಾರಿ ಗೆದ್ದಿರುವ ಶತಾಬ್ದಿ ಅವರು, 2019ರ ಚುನಾವಣೆಯಲ್ಲಿ 88,917 ಮತಗಳ ಅಂತರದಿಂದ ಬಿಜೆಪಿಯ ದೂದ್ ಕುಮಾರ್ ಮೊಂಡಲ್ ಅವರನ್ನು ಸೋಲಿಸಿದ್ದರು. ಬಂಗಾಳಿ ಚಿತ್ರರಂಗದಲ್ಲಿ ನಟಿ ಹಾಗೂ ನಿರ್ದೇಶಕಿಯಾಗಿ ಹೆಸರು ಮಾಡಿರುವ ಶತಾಬ್ದಿ ಅವರು ಈ ಬಾರಿಯೂ ಗೆಲ್ಲುತ್ತಾರೆಂಬ ವಿಶ್ವಾಸ ಟಿಎಂಸಿ ಮುಖಂಡರದ್ದಾಗಿದೆ. ಬಿಜೆಪಿಯು ಈ ಕ್ಷೇತ್ರಕ್ಕೆ ಆರಂಭದಲ್ಲಿ ಮಾಜಿ ಐಪಿಎಸ್ ಅಧಿಕಾರಿ ದೇಬಶಿಶ್ ಧರ್ ಅವರನ್ನು ಅಭ್ಯರ್ಥಿಯಾಗಿ ಘೋಷಿಸಿತ್ತು. ಅವರ ನಾಮಪತ್ರ ತಿರಸ್ಕೃತಗೊಂಡ ಕಾರಣ ದೇಬ್‌ತನು ಅವರನ್ನು ಕಣಕ್ಕಿಳಿಸಲಾಗಿತ್ತು. ತಮ್ಮ ನಾಮಪತ್ರ ತಿರಸ್ಕೃತಗೊಂಡಿರುವುದನ್ನು ಪ್ರಶ್ನಿಸಿ ದೇಬಶಿಶ್ ಅವರು ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು. ಈ ಅರ್ಜಿಯ ವಿಚಾರಣೆಗೆ ಸುಪ್ರೀಂ ಕೋರ್ಟ್ ನಿರಾಕರಿಸಿದೆ. ಶಾಸಕರಾಗಿಯೂ ಆಯ್ಕೆಯಾಗಿದ್ದ ರಶೀದ್ ಅವರು ಕಾಂಗ್ರೆಸ್‌ನ ಬಿರ್‌ಭೂಮ್ ಜಿಲ್ಲಾ ಘಟಕದ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು.

ಮುಖಾಮುಖಿ

ಮುಂಬೈ ನಾರ್ತ್ ಸೆಂಟ್ರಲ್



ಉಜ್ವಲ್ ನಿಕಂ
(ಬಿಜೆಪಿ)

ಮಹಾರಾಷ್ಟ್ರದ ಮುಂಬೈ ನಾರ್ತ್ ಸೆಂಟ್ರಲ್ ಲೋಕಸಭಾ ಕ್ಷೇತ್ರದಿಂದ ಹಿರಿಯ ವಕೀಲ ಉಜ್ವಲ್ ನಿಕಂ ಅವರನ್ನು ಬಿಜೆಪಿಯು ಅಭ್ಯರ್ಥಿಯಾಗಿ ಘೋಷಿಸುವ ಮೂಲಕ ಸ್ಪರ್ಧಾ ಕಣವು ರಂಗೇರಿದೆ. ಈ ಕ್ಷೇತ್ರದಿಂದ ಎರಡು ಬಾರಿ ಗೆದ್ದಿದ್ದ ಪೂನಂ ಮಹಾಜನ್ ಅವರಿಗೆ ಟಿಕೆಟ್ ನಿರಾಕರಿಸಿ, ಉಜ್ವಲ್ ಅವರನ್ನು ಅಖಾಡಕ್ಕಿಳಿಸಲಾಗಿದೆ. 2019ರ ಚುನಾವಣೆಯಲ್ಲಿ ಪೂನಂ ಅವರು, 1,30,005 ಮತಗಳ ಅಂತರದಿಂದ ಕಾಂಗ್ರೆಸ್‌ನ ಪ್ರಿಯಾ ದತ್ ಅವರನ್ನು ಪರಾಭವಗೊಳಿಸಿ-ದ್ದರು. ಉಜ್ವಲ್ ಅವರು ಮುಂಬೈ ಭಯೋತ್ಪಾದಕ ದಾಳಿ ಪ್ರಕರಣ-ದಲ್ಲಿ ಸರ್ಕಾರದ ಪರ ವಕೀಲರಾಗಿ ವಾದಿಸಿದ್ದರು. ಈ ಪ್ರಕರಣದಲ್ಲಿ ಉಗ್ರ ಅಜ್ಮಲ್ ಕಸಬ್‌ಗೆ ಗಲ್ಲು ಶಿಕ್ಷೆ ವಿಧಿಸಲಾಗಿತ್ತು. ಅಲ್ಲದೆ 1993ರ ಸರಣಿ ಸ್ಫೋಟ ಮತ್ತು ಬಾಲಿವುಡ್ ಚಿತ್ರ ನಿರ್ಮಾಪಕ ಗುಲ್ಶನ್ ಕುಮಾರ್ ಕೊಲೆ ಪ್ರಕರಣ ಸೇರಿದಂತೆ ಹಲವು ಪ್ರಕರಣಗಳಲ್ಲಿ ಇವರು ಸರ್ಕಾರದ ಪರ ವಕೀಲರಾಗಿದ್ದರು.

V/S



ವರ್ಷಾ ಗಾಯಕ್ವಾಡ್
(ಕಾಂಗ್ರೆಸ್)

ಮುಂಬೈ ನಾರ್ತ್ ಸೆಂಟ್ರಲ್ ಲೋಕಸಭಾ ಕ್ಷೇತ್ರದಿಂದ ಕಾಂಗ್ರೆಸ್ ಪಕ್ಷವು ಧಾರಾವಿ ಕ್ಷೇತ್ರದ ಶಾಸಕಿ ವರ್ಷಾ ಗಾಯಕ್ವಾಡ್ ಅವರನ್ನು ಸ್ಪರ್ಧೆಗಿಳಿಸಿದೆ. ವರ್ಷಾ ಅವರು ಪಕ್ಷದ ಮುಂಬೈ ನಗರ ಘಟಕದ ಅಧ್ಯಕ್ಷೆಯೂ ಹೌದು. ಅನುಭವಿ ರಾಜಕಾರಣಿ ಹಾಗೂ ಸ್ಥಳೀಯವಾಗಿ ಪ್ರಭಾವವಿರುವ ನಾಯಕಿಯಾಗಿರುವುದರಿಂದ ವರ್ಷಾ ಅವರು ಗೆಲ್ಲುತ್ತಾರೆಂಬ ವಿಶ್ವಾಸ ಕಾಂಗ್ರೆಸ್ ಮುಖಂಡರದ್ದಾಗಿದೆ. 2009ರಲ್ಲಿ ಈ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿ ಪ್ರಿಯಾ ದತ್ ಅವರು ಗೆದ್ದಿದ್ದರು. ‘ಮಹಾ ವಿಕಾಸ್ ಆಘಾಡಿ’ ಅಭ್ಯರ್ಥಿಯಾಗಿ ಕಣಕ್ಕಿಳಿದಿರುವುದು ವರ್ಷಾ ಅವರ ಗೆಲುವಿನ ವಿಶ್ವಾಸವನ್ನು ಇನ್ನಷ್ಟು ಹೆಚ್ಚಿಸಿದೆ. ವರ್ಷಾ ಅವರು ರಾಜ್ಯ ಸಚಿವೆಯಾಗಿಯೂ ಈ ಹಿಂದೆ ಕಾರ್ಯನಿರ್ವಹಿಸಿದ್ದು, ಕ್ಷೇತ್ರದ ಜನರಿಗೆ ಪರಿಚಿತರಾಗಿದ್ದಾರೆ. ವರ್ಷಾ ಅವರ ತಂದೆ ಏಕನಾಥ ಗಾಯಕ್ವಾಡ್ ಅವರು ಮೂರು ಬಾರಿ ಸಂಸದರಾಗಿ ಆಯ್ಕೆಯಾಗಿದ್ದರು.

196 ಲಕ್ಷ ಟನ್ ಗೋಧಿ ಖರೀದಿಗೆ ಕೇಂದ್ರ ನಿರ್ಧಾರ



ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು 2024–25ನೇ ಮಾರುಕಟ್ಟೆ ವರ್ಷದಲ್ಲಿ 196 ಲಕ್ಷ ಟನ್ ಗೋಧಿ ಖರೀದಿಸಲು ನಿರ್ಧರಿಸಿದೆ.

ರಾಷ್ಟ್ರೀಯ ಆಹಾರ ಭದ್ರತೆ ಕಾಯ್ದೆಯಡಿ ಸರ್ಕಾರದ ಜನ ಕಲ್ಯಾಣ ಕಾರ್ಯಕ್ರಮಗಳಿಗೆ ವಾರ್ಷಿಕ 186 ಲಕ್ಷ ಟನ್‌ನಷ್ಟು ಗೋಧಿಯ ಅವಶ್ಯಕತೆಯಿದೆ. ಇದಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಖರೀದಿಸಲು ತೀರ್ಮಾನಿಸಿದೆ.

ಭಾರತೀಯ ಆಹಾರ ನಿಗಮವು ಮುಕ್ತ ಮಾರುಕಟ್ಟೆಯಲ್ಲಿ ಆಹಾರ ಧಾನ್ಯಗಳ ಬೆಲೆ ಏರಿಕೆಯನ್ನು ನಿಯಂತ್ರಿಸುತ್ತದೆ. ಇದಕ್ಕಾಗಿ ಕಾಪು ದಾಸ್ತಾನು ಮಾಡುತ್ತದೆ. ಸದ್ಯ ನಿಗಮದಿಂದ ಗೋಧಿ ಸಂಗ್ರಹಣೆ ಕಾರ್ಯ ಆರಂಭವಾಗಿದ್ದು, ಮಾರುಕಟ್ಟೆ ವರ್ಷದಲ್ಲಿ 310 ಲಕ್ಷದಿಂದ 320 ಲಕ್ಷ ಟನ್‌ನಷ್ಟು ಸಂಗ್ರಹಣೆ ಮಾಡುವ ಗುರಿ ಹೊಂದಿದೆ.

ಗೋಧಿಯು ಚಳಿಗಾಲದ ಪ್ರಮುಖ ಬೆಳೆಯಾಗಿದ್ದು, ರಾಬಿ ಅವಧಿಯಲ್ಲಿ ಶೇ 11ರಷ್ಟು ಉತ್ಪಾದನೆ ಕುಸಿತವಾಗಿದೆ ಎಂದು ಸರ್ಕಾರದ ಅಂಕಿ–ಅಂಶ ತಿಳಿಸಿವೆ.

'ಪ್ರಧಾನ ಮಂತ್ರಿ ಗರೀಬಿ ಕಲ್ಯಾಣ ಅನ್ನ ಯೋಜನೆ ಸೇರಿ ಇತರೆ ಯೋಜನೆಯಡಿ ವಿತರಣೆಗಾಗಿ ಗೋಧಿ ಸಂಗ್ರಹಣೆ ಪ್ರಕ್ರಿಯೆಯು ಸಾಂಗವಾಗಿ ನಡೆಯುತ್ತಿದೆ' ಎಂದು ನಿಗಮದ ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕ ಅಶೋಕ್ ಕೆ. ಮೀನಾ ತಿಳಿಸಿದ್ದಾರೆ.

2023–24ನೇ ಮಾರುಕಟ್ಟೆ ವರ್ಷದಲ್ಲಿ (ಏಪ್ರಿಲ್–ಮಾರ್ಚ್) ಕೇಂದ್ರ ಸರ್ಕಾರವು 261.97 ಲಕ್ಷ ಟನ್‌ನಷ್ಟು ಗೋಧಿ ಸಂಗ್ರಹಣೆ ಮಾಡಿತ್ತು.

13ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಎಲ್. ನಾರಾಯಣಸ್ವಾಮಿಯವರು
(ಮಾಜಿ ಛೇರ್ಮನ್, ರಾಚೇನಹಳ್ಳಿ, ಬೆಂಗಳೂರು–77)
ನೀವು ನಮ್ಮನ್ನಗಲಿ ಇಂದಿಗೆ 13 ವರ್ಷಗಳು ಕಳೆದವು (01.05.2011)
ನಿಮ್ಮ ಮಾರ್ಗದರ್ಶನವೇ ನಮಗೆ ದಾರಿ ದೀಪವಾಗಿದೆ ನಿಮ್ಮ ಸವಿನೆನಪುಗಳು ನಮ್ಮ ಹೃದಯಗಳಲ್ಲಿಸದಾ ಅಚ್ಚಳಿಯದೇ ಉಳಿದಿದೆ
ಇಂತಿ ಸದಾ ನಿಮ್ಮ ನೆನಪಿನಲ್ಲಿ
–:: ಧರ್ಮಪತ್ನಿ ::–
ಶ್ರೀಮತಿ ಟಿ.ಎನ್. ನಾಗರತ್ನಮ್ಮ
ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬದವರು

ಮೊದಲನೇ ವರ್ಷದ ಪುಣ್ಯಸ್ಮರಣೆ



ದಿವಂಗತ ದೇವಮ್ಮನವರು
W/o ಲೇಟ್ ಆಡುವಳ್ಳಿ ಜವರಯ್ಯ, ಹಾಸನ
ಸದಾ ನಿಮ್ಮ ಸ್ಮರಣೆಯಲ್ಲಿರುವ
ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಮತ್ತು ಮರಿಮಕ್ಕಳು.

10ನೇ ವರ್ಷದ ಪುಣ್ಯಸ್ಮರಣೆ



ಎಸ್. ಶಾಂತ ಕುಮಾರ್
ಮೈನ್ಸ್ ಮ್ಯಾನೇಜರ್, NMDC
(15-01-1962 ರಿಂದ 01-05-2014)
ನೀವು ನಮಗೆ ದಾರಿದೀಪ, ಪ್ರೀತಿಯ ಸ್ವರೂಪ, ಕರುಣೆಯ ಸಾಕಾರ ವ್ಯಕ್ತಿ ಆಗಿದ್ದೀರಿ, ನಿಮ್ಮ ಜಾಣ್ಮೆ, ತಿಳುವಳಿಕೆ, ಧೈರ್ಯ, ಪ್ರಾಮಾಣಿಕತೆ, ಸಮಗ್ರತೆ, ನಮ್ಮಲ್ಲಿ ಸದಾ ಶಾಶ್ವತವಾಗಿ ನೆಲೆಸಿರುತ್ತೆ.
ಪ್ರೀತಿಯಿಂದ: ಲಲಿತಾ, ಸಂಜನಾ, ನಿತಿನ್.

13ನೇ ವರ್ಷದ ಚಿರಸ್ಮರಣೆ



ಶ್ರೀ ಕೆ. ರಾಮಯ್ಯನವರು
ಜನನ: 02.04.1933 ಮರಣ: 01.05.2011
ಮಾಜಿ ನಗರಸಭಾ ಸದಸ್ಯರು, ಬಿ.ಬಿ.ಎಂ.ಪಿ
ಸದ್ದುಗುಂಟೆಪಾಳ್ಯ, ಚಿಕ್ಕಆಡುಗೋಡಿ, ಬೆಂ.
ಸಂಸ್ಥಾಪಕರು:
ಶ್ರೀ ಲಕ್ಷ್ಮಿವೆಂಕಟೇಶ್ವರ ದೇವಸ್ಥಾನ, ಚಿಕ್ಕಆಡುಗೋಡಿ, ಬೆಂಗಳೂರು
ನೀವು ನಮ್ಮನ್ನಗಲಿದರೂ ನಿಮ್ಮ ಸರಳತೆ, ಪ್ರೀತಿ ಮತ್ತು ಆದರ್ಶಗಳೇ ನಮಗೆ ದಾರಿದೀಪ. ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ನೀಡಲೆಂದು ಪ್ರಾರ್ಥಿಸುತ್ತಾ ಸದಾ ನಿಮ್ಮ ನೆನಪಿನಲ್ಲಿರುವ....
ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಮರಿಮಕ್ಕಳು.

ಹತ್ತನೇ ವರ್ಷದ ಚಿರಸ್ಮರಣೆ



ಶ್ರೀಯುತ ಎಸ್.ಎನ್. ಬಚ್ಚಣ್ಣನವರು
(ಸಂಪಿಗೇಹಳ್ಳಿ)
ಜನನ: 18-01-1944 ನಿಧನ: 01-05-2014
ನೀವು ನಮ್ಮನ್ನಗಲಿ ಇಂದಿಗೆ ಹತ್ತು ವರ್ಷವಾಗಿದೆ, ನಿಮ್ಮ ಸವಿ ನೆನಪು ನಮ್ಮ ಮನದಂಗಳದಲ್ಲಿ ಸದಾ ಹಚ್ಚ ಹಸಿರಾಗಿದೆ. ನಿಮ್ಮ ದಿವ್ಯ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲಿ ಎಂದು ಪ್ರಾರ್ಥಿಸುವ.
ಶ್ರೀಮತಿ ರಾಧಮ್ಮ ಮತ್ತು ಮಕ್ಕಳು, ಅಳಿಯ, ಸೊಸೆಯಂದಿರು ಮತ್ತು ಮೊಮ್ಮಕ್ಕಳು
ಶ್ರೀಮತಿ/ಶ್ರೀ. ಎಸ್.ಎನ್.ಆನಂದಮೂರ್ತಿ ಮತ್ತು ಮಕ್ಕಳು

SAD DEMISE



It is with great sadness that we inform you that
Smt. Sarojamma Ashok Shinde
W/o Late Shri. Ashok Shinde
Has passed away and left to the heavenly adobe on Tuesday, 30th April, 2024 Funeral procession is on Wednesday 01-05-2024 (Today) @ 11 am onwards From our residence to Hindu Rudrabhoomi Yelahanka
Home Address:- No 208/47, 18th Main Road, Upper Palace Orchards, Sadashivnagar, Bengaluru-560080
Mournful: Smt Sangeeta Muntha, Smt H C Sachita, Late Shri Sudarshan Shinde, Late Shri Santosh Shinde with the entire Shinde Family
Mob: 9986822727, 9886300020

ಚಿರಸ್ಮರಣೆ



ಶ್ರೀಮತಿ. ಸರೋಜಿನಿ ಕಾರ್ಲೆ
ನಿಧನ: 01–05–2019
ನಿಮ್ಮ ಆದರ್ಶ ಜೀವನ ನಮಗೆ ಎಂದೆಂದೂ ಮಾರ್ಗದರ್ಶಕ, ನಿಮ್ಮ ನೆನಪು ನಮಗೆ ಸದಾ ಹಸಿರು ಮತ್ತು ಸ್ಫೂರ್ತಿದಾಯಕ.
ಸದಾ ಸ್ಮರಿಸುವ
ಕುಟುಂಬ ವರ್ಗದವರು

23ನೇ ವರ್ಷದ ಪುಣ್ಯಸ್ಮರಣೆ

ನಿಮ್ಮ ಪ್ರೀತಿ, ವಾತ್ಸಲ್ಯ ಮತ್ತು ಮಾರ್ಗದರ್ಶನವನ್ನು ಅತ್ಯಂತ ಗೌರವಾದರಗಳಿಂದ ಸ್ಮರಿಸುತ್ತೇವೆ



ಶ್ರೀ ಸಿ. ನಾರಾಯಣ ರೆಡ್ಡಿ ವಿಧಾನ ಪರಿಷತ್ ಸದಸ್ಯರಾಗಿದ್ದವರು
ಸಂಸ್ಥಾಪಕರು: ಶ್ರೀ ಮೀನಾಕ್ಷಿ ಸುಂದರೇಶ್ವರ ದೇವಾಲಯ, ಬನ್ನೇರುಘಟ್ಟ ರಸ್ತೆ, ಬೆಂಗಳೂರು.
ಇವರು ಸ್ವರ್ಗಸ್ಥರಾಗಿ ತಾ|| 01.05.2024ಕ್ಕೆ 23 ವರ್ಷಗಳಾದವು
"ಶರೀರದಲ್ಲಿರುವಷ್ಟು ಕಾಲ ಕರ್ಮಗಳನ್ನು (ಕೆಲಸಗಳನ್ನು) ಮಾಡುವುದು ಅನಿವಾರ್ಯ. ಆದ್ದರಿಂದ ಕರ್ಮ ನಡೆಸದೆ ಇರುವುದು ತ್ಯಾಗವಲ್ಲ. ಕರ್ಮಫಲವನ್ನು ಬಯಸದೆ ಕರ್ಮಗಳನ್ನು ನಡೆಸುವವರೇ ನಿಜವಾದ ತ್ಯಾಗಿಗಳು."
– ಅಧ್ಯಾಯ–18, ಶ್ಲೋಕ–11, ಶ್ರೀಮತ್ ಭಗವದ್ಗೀತಾ
ತಮ್ಮನ್ನು ಸದಾ ಸ್ಮರಿಸುವ :
ಶ್ರೀಮತಿ ವನಿತಾ ಮತ್ತು ಶ್ರೀ ಎನ್. ಸ್ವರೂಪ್ ಕುಮಾರ್,
ಶ್ರೀಮತಿ ಪ್ರಿಯಾಂಕ ಮತ್ತು ಶ್ರೀ ಎನ್. ಶಶಾಂಕ್ ಕುಮಾರ್,
ನಾರಾಯಣ್ ಸ್ವರೂಪ್, ನವರತನ್ ಸ್ವರೂಪ್,
ಆಯನ ಶಶಾಂಕ್, ಅರ್ಹ ವಿಹಾನ ಶಶಾಂಕ್,
ಬಂಧುಗಳು ಹಾಗೂ ಆಪ್ತರು

ಐಒಸಿ ಲಾಭ ಶೇ 49ರಷ್ಟು ಇಳಿಕೆ

ನವದೆಹಲಿ (ಪಿಟಿಐ): ಭಾರತೀಯ ತೈಲ ನಿಗಮವು (ಐಒಸಿ) 2023–24ನೇ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ₹4,837 ಕೋಟಿ ನಿವ್ವಳ ಲಾಭ ಗಳಿಸಿದೆ. ಹಿಂದಿನ ವರ್ಷದ ಇದೇ ಅವಧಿಗೆ ಹೋಲಿಸಿದರೆ ಲಾಭದಲ್ಲಿ ಶೇ49ರಷ್ಟು ಇಳಿಕೆಯಾಗಿದೆ.

2022–23ರಲ್ಲಿ ಇದೇ ಅವಧಿಯಲ್ಲಿ ₹10,058 ಕೋಟಿ ಲಾಭ ಗಳಿಸಿದ್ದರೆ, ಡಿಸೆಂಬರ್ ತ್ರೈಮಾಸಿಕದಲ್ಲಿ ₹8,063 ಕೋಟಿ ಲಾಭ ಗಳಿಸಿತ್ತು ಎಂದು ಕಂಪನಿಯು ಷೇರುಪೇಟೆಗೆ ತಿಳಿಸಿದೆ.

ಪೆಟ್ರೋಕೆಮಿಕಲ್ ವ್ಯವಹಾರದಲ್ಲಿ ನಷ್ಟವಾಗಿದೆ. ಉತ್ಪಾದನೆ ವೆಚ್ಚ ಹೆಚ್ಚುತ್ತಿದೆ. ಕಚ್ಚಾ ತೈಲದ ದರ ಏರುತ್ತಿದ್ದರೂ, ಚುನಾವಣಾ ಪೂರ್ವದಲ್ಲಿ ಇಂಧನ ಮಾರಾಟ ಬೆಲೆಯಲ್ಲಿ ₹2 ಕಡಿತಗೊಳಿಸಲಾಗಿತ್ತು. ಇದರಿಂದ ಲಾಭದಲ್ಲಿ ಇಳಿಕೆಯಾಗಿದೆ ಎಂದು ಹೇಳಿದೆ. ಅಲ್ಲದೆ ಗೃಹಬಳಕೆಯ ಅಡುಗೆ ಅನಿಲ ಬೆಲೆ ಹೆಚ್ಚಿಸಿಲ್ಲ. ಇದರಿಂದ ₹1,017 ಕೋಟಿ ನಷ್ಟವಾಗಿದ್ದು, ಸರ್ಕಾರದಿಂದ ಪರಿಹಾರ ನೀಡಿಲ್ಲ ಎಂದು ತಿಳಿಸಿದೆ.

ಪ್ರತಿ ಷೇರಿಗೆ ₹7 ಲಾಭಾಂಶ ನೀಡಲು ಕಂಪನಿ ನಿರ್ಧರಿಸಿದೆ.

ಷೇರು ಶೇ 4ರಷ್ಟು ಇಳಿಕೆ: ಲಾಭದಲ್ಲಿ ಇಳಿಕೆಯಾಗಿರುವುದರಿಂದ ನಿಗಮದ ಷೇರಿನ ಮೌಲ್ಯವು ಶೇ 4ಕ್ಕೂ ಹೆಚ್ಚು ಇಳಿಕೆಯಾಗಿದೆ. ಬಿಎಸ್‌ಇ ಮತ್ತು ಎನ್‌ಎಸ್‌ಇಯಲ್ಲಿ ಪ್ರತಿ ಷೇರಿನ ಬೆಲೆ ₹168 ಆಗಿದೆ.

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹302-447
ದ್ವಿತಳಿ (ಬಿ.ವಿ)	₹326-555

ಕೊಬ್ಬರಿ ಧಾರಣೆ



(ಕ್ವಿಂಟಲ್‌ಗೆ)

ಅರಸೀಕೆರೆ	₹8000-8900
ಮಧುಗಿರಿ	₹8000-9000
ಮಳವಳ್ಳಿ	₹9200-9200

ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,643
ಇಂದಿನ ಅಂತ್ಯ	22,604
▼	38
ದಿನದ ಕನಿಷ್ಠ	22,568

ಖಾದ್ಯ ತೈಲ ಮುಂಬೈ (10 ಕೆಜಿಗೆ)



(ಆವರಣದಲ್ಲಿ ಹಿಂದಿನ ದಿನದ ದರ)


ಶೇಂಗಾ (ರಿಫೈನ್ಡ್)	₹1490 (1490)
ಸೋಯಾ (ರಿಫೈನ್ಡ್)	₹917 (920)
ಸೂರ್ಯಕಾಂತಿ (ರಿಫೈನ್ಡ್)	₹910 (920)
ಪಾಮೋಲಿನ್	₹895 (910)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹450
12 ಕ್ಕೆ	₹60
ಮೈಸೂರು	
100ಕ್ಕೆ	₹455

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹177
ಆರ್‌ಎಸ್‌ಎಸ್-5	₹170
ಗುಡ್ ಲಾಟ್ (ಪ್ರತಿ ಕೆ.ಜಿಗೆ)	₹160

ವಿನಿಮಯ ದರ

$ ಡಾಲರ್	83.43
£ ಪೌಂಡ್	104.65

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಶಿವಾನಂದ ಕೆ., ಚಿಕ್ಕಬಳ್ಳಾಪುರ.

- **ಪ್ರಶ್ನೆ:** ನಾನು ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದೇನೆ. 2023-24ನೇ ಆರ್ಥಿಕ ವರ್ಷಕ್ಕೆ ಸಂಬಂಧಿಸಿ ಆದಾಯ ತೆರಿಗೆ ರಿಟರ್ನ್ಸ್ ಮುಂದಿನ ಜುಲೈ ತಿಂಗಳ ಗಡುವಿನೊಳಗೆ ಸಲ್ಲಿಸಬೇಕೆಂದಿದ್ದೇನೆ. ಆದರೆ, ಇತ್ತೀಚೆಗೆ ನನ್ನ ಪ್ಯಾನ್ ಖಾತೆಯಲ್ಲಿ ಸುಮಾರು ₹15 ಸಾವಿರ ಅಂದಾಜು ಮೊತ್ತವು ತಪ್ಪಾಗಿ ಜಮಾ ಆಗಿದೆ ಎಂದು ಕಾಣುತ್ತಿದೆ. ಇದನ್ನು ನಾನು ಯಾವ ಮೂಲದ ಆದಾಯವೆಂದು ತೆಗೆದುಕೊಳ್ಳಬೇಕು. ಈ ಮೊತ್ತ ನಾನು ಗೊತ್ತಿದ್ದು ಮಾಡಿದ ವ್ಯವಹಾರದ ಮೊತ್ತವಲ್ಲ ಎಂಬುದು ನನ್ನ ಊಹೆ. ಆದರೆ, ಈ ಮೊತ್ತವನ್ನು ನಾನು ರಿಫಂಡ್ ಪಡೆಯಬಹುದೇ. ಈ ಬಗ್ಗೆ ತಿಳಿಸಿ.

ಉತ್ತರ: ಯಾವುದೇ ಪ್ಯಾನ್ ಖಾತೆಯಲ್ಲಿ ಜಮಾ ಆದ ಮೊತ್ತವನ್ನು ತಮ್ಮ ಅರಿವಿಗೆ ಬಾರದ ಕಂಪನಿಯ ವ್ಯಕ್ತಿಗಳಿಂದ ಬಂದಿದ್ದಾದರೆ, ಅದನ್ನು ಮೊದಲು ಕೂಲಂಕಷವಾಗಿ ಪರಿಶೀಲಿಸಿ. ಕೆಲವೊಮ್ಮೆ ತಪ್ಪಾಗಿ ನಿಮ್ಮ ಖಾತೆಯಲ್ಲಿ ತೆರಿಗೆ ಜಮಾ ಬಂದಿರಬಹುದು. ಆದರೆ, ಅದನ್ನು ನಂತರದ ಹಂತದಲ್ಲಿ ತಪ್ಪೆಂದು ಒಪ್ಪಿಕೊಳ್ಳುವುದಕ್ಕಿಂತ ಮೊದಲ ಹಂತದಲ್ಲೇ ನಮ್ಮದಲ್ಲದ ತೆರಿಗೆ ಜಮಾ ಮೊತ್ತವನ್ನು ರಿಟರ್ನ್ಸ್ ಸಲ್ಲಿಕೆ ವೇಳೆ ತೆಗೆದುಕೊಳ್ಳದಿರುವುದು ಉತ್ತಮ. ಆದರೆ, ಈ ಬಗ್ಗೆ ಸರಿಯಾಗಿ ಖಚಿತಪಡಿಸಿಕೊಳ್ಳಬೇಕು.

ಸಾಮಾನ್ಯವಾಗಿ ತೆರಿಗೆ ಜಮಾ ಪಡೆದ ಮೂಲ ಆದಾಯವು ಒಂದಲ್ಲ ಒಂದು ಕಡೆ ಆದಾಯವೆಂದು ಘೋಷಿಸಬೇಕಾಗುತ್ತದೆ. ತಪ್ಪಾಗಿ ನಿಮ್ಮ ಖಾತೆಗೆ ಬಂದು ಜಮಾ ಆದರೂ ಅದನ್ನು ಪಡೆಯುವುದರಿಂದ ಮುಂದೆ ಸಮಸ್ಯೆಗೆ ಕಾರಣವಾಗಬಹುದು.

ಮುಂದಿನ ದಿನಗಳಲ್ಲಿ ಮೂಲ ತೆರಿಗೆ ಯಾರ ಹೆಸರಲ್ಲಿ ಕಡಿತವಾಗಿತ್ತೋ ಆತ ತನ್ನ ಖಾತೆಗೆ ಜಮಾ ಆಗದಿರುವ ಬಗ್ಗೆ ತಕರಾರು ಸಲ್ಲಿಸಿ ತನ್ನ ಸಮಸ್ಯೆ ಬಗೆಹರಿಸಿಕೊಳ್ಳಲು ಮುಂದಾಗಬಹುದು. ಆಗ ನಿಮ್ಮ ಪ್ಯಾನ್ ಖಾತೆಯಲ್ಲಿ ಆ ಮೊತ್ತವನ್ನು ಶೂನ್ಯ ಮಾಡಿ ಸರಿಯಾದ ವ್ಯಕ್ತಿಗೆ ಜಮಾ ನೀಡಲಾಗುತ್ತದೆ. ಅಂತಹ ಸಂದರ್ಭದಲ್ಲಿ ನಿಮ್ಮ ಖಾತೆಯಲ್ಲಿ ತೆರಿಗೆ ಬಾಕಿ ಇರುವ ವಿಚಾರವು ಸಮಸ್ಯೆಯಾಗಿ ಪರಿಣಮಿಸಬಹುದು. ಹೀಗಾಗಿ, ನಿಮ್ಮದಲ್ಲದ ಮೊತ್ತಕ್ಕೆ ಯಾವುದೇ ಕ್ರೆಡಿಟ್ ಪಡೆಯಬೇಡಿ. ಆ ಮೊತ್ತವನ್ನು ಹಾಗೆಯೇ ಬಿಟ್ಟುಬಿಡಿ.

ಕೆ. ಮದನ್, ಊರು ತಿಳಿಸಿಲ್ಲ.

- **ಪ್ರಶ್ನೆ:** ಎಜುಕೇಷನಲ್ ಚಾರಿಟಬಲ್ ಸಂಸ್ಥೆಗಳಿಗೆ ಹಣ ನೀಡಿದರೆ ಆ ಎಜುಕೇಷನಲ್ ಸಂಸ್ಥೆಯು ಯಾವ ಕಾಯ್ದೆ ಅಡಿಯಲ್ಲಿ ಬರಬೇಕು. ಯಾವ ಕಾಯ್ದೆಯಡಿ ಬಂದರೆ ಟ್ಯಾಕ್ಸ್ ಡಿಡಕ್ಷನ್ ಅನ್ನು ಹೆಚ್ಚಾಗಿ ತೋರಿಸಬಹುದು.

ಉತ್ತರ: ಯಾವುದೇ ಸಂಘ–ಸಂಸ್ಥೆಗಳಿಗೆ ದೇಣಿಗೆ ಕೊಟ್ಟಾಗ ಅಂತಹ ದೇಣಿಗೆಗೆ ಆದಾಯ ತೆರಿಗೆ ನಿಯಮದಡಿ ರಿಯಾಯಿತಿ ಪಡೆಯುವಂತಾಗಲು ಆಯಾ ಸಂಸ್ಥೆಗಳು ಆದಾಯ ತೆರಿಗೆ ಇಲಾಖೆಯಡಿ ಮಾನ್ಯತೆ ಪಡೆದಿರಬೇಕು. ಸೆಕ್ಷನ್ 80ಜಿ ಅಡಿ ದೇಣಿಗೆಗೆ ಪಡೆಯುವ ಅರ್ಹತೆ ಹೊಂದಿರಬೇಕು. ಮಾನ್ಯತಾ ಸಂಖ್ಯೆಯನ್ನು ರಸೀದಿಯಲ್ಲಿ ಕಡ್ಡಾಯವಾಗಿ ನೀಡಿರಬೇಕು. ಇದರಿಂದ ಯಾವುದೇ ದೇಣಿಗೆದಾರ ತೆರಿಗೆ ರಿಯಾಯಿತಿ ಪಡೆಯುವ ಉದ್ದೇಶದಿಂದ ಕೊಡುಗೆ ನೀಡಬೇಕೆ, ಬೇಡವೇ ಎನ್ನುವುದನ್ನು ಖಚಿತ ಮಾಡಿಕೊಳ್ಳಬಹುದು.

ಮಾನ್ಯತೆ ಇರದ ಸಂಸ್ಥೆಗಳಿಗೆ ನೀಡುವ ದೇಣಿಗೆಗೆ ತೆರಿಗೆ ರಿಯಾಯಿತಿ ಸಿಗುವುದಿಲ್ಲ. ಸಾಮಾನ್ಯವಾಗಿ ಯಾವುದೇ ಸಂಘ– ಸಂಸ್ಥೆಗಳು ಚಾರಿಟಬಲ್ ಮತ್ತು ಧಾರ್ಮಿಕ ಟ್ರಸ್ಟ್ ಕಾಯ್ದೆಯಡಿ ಬರುತ್ತವೆ. ಆದರೆ, ಆದಾಯ ತೆರಿಗೆಗೆ ಸಂಬಂಧಿಸಿ, ಆದಾಯ ತೆರಿಗೆ ಕಾಯ್ದೆಯೇ ಮುಖ್ಯ ಪಾತ್ರವಹಿಸುತ್ತದೆ.

ರುದ್ರಗೌಡ ಪಾಟೀಲ, ಪಗಡದಿನ್ನಿ, ಸಿಂಧನೂರು ತಾಲ್ಲೂಕು, ರಾಯಚೂರು ಜಿಲ್ಲೆ.

- **ಪ್ರಶ್ನೆ:** ನಾನು ಮೊದಲ ಬಾರಿಗೆ ಮೊಬೈಲ್ ಅಪ್ಲಿಕೇಶನ್‌ಗಳನ್ನು (ಗ್ರೋ, ಏಂಜೆಲ್ ಇತ್ಯಾದಿ) ಬಳಸಿಕೊಂಡು ಸ್ಟಾಕ್ ಮತ್ತು ಮ್ಯೂಚುವಲ್ ಫಂಡ್ ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಲು ಇಚ್ಛಿಸಿದ್ದೇನೆ. ದೀರ್ಘಾವಧಿ ಹೂಡಿಕೆಗೆ ಇವುಗಳು ಎಷ್ಟು ಸುರಕ್ಷಿತ ಹಾಗೂ ವೈಯಕ್ತಿಕ ಹೂಡಿಕೆ ನಿರ್ಧಾರ ಸೂಕ್ತವೋ ಅಥವಾ ಸ್ಟಾಕ್ ಬ್ರೋಕರ್ ಸಲಹೆ ಅವಶ್ಯಕವೋ? ಇದರಿಂದ ನಿಶ್ಚಿತ ಆದಾಯ ಹಾಗೂ ಆರ್ಥಿಕ ಅಭಿವೃದ್ಧಿ ಸಾಧ್ಯವೇ? ತಿಳಿಸಿ.

ಉತ್ತರ: ನಾವು ಇಂದು ತಾಂತ್ರಿಕ ಯುಗದಲ್ಲಿ ಬದುಕುತ್ತಿದ್ದೇವೆ ಎನ್ನುವುದು ಎಲ್ಲರೂ ಅನುಭವದಿಂದ ತಿಳಿದ ವಿಚಾರ. ಅದರಲ್ಲೂ ನಮ್ಮ ಬದುಕಿನ ಮೇಲೆ ಮೊಬೈಲ್ ಹಾಗೂ ಕಂಪ್ಯೂಟರ್‌ಗಳ ಪ್ರಭಾವ ನೇರವಾಗಿ ಹಾಗೂ ಪರೋಕ್ಷವಾಗಿ ಇದ್ದೇ ಇದೆ. ನೀವು ಪ್ರಸ್ತುತ ಕಾಲಘಟ್ಟದಲ್ಲಿ ಮೊಬೈಲ್ ಅಪ್ಲಿಕೇಶನ್ ಮೂಲಕ ಮಾಡುವ ಟ್ರೇಡಿಂಗ್ ಸುರಕ್ಷಿತವೇ ಎಂಬ ಬಗ್ಗೆ ಆತಂಕ ಭರಿತ ಅನುಮಾನವನ್ನು ಬಗೆಹರಿಸಿಕೊಳ್ಳುವ ಆಸಕ್ತಿ ತೋರಿದ್ದೀರಿ. ಈ ಸಂಸ್ಥೆಗಳ ಬಗ್ಗೆ ಆತಂಕ ಬೇಡ.

ಈ ವಿಚಾರದಲ್ಲಿ ಗಮನಿಸಬೇಕಾದ ಕೆಲವು ಸರಳ, ಆದರೆ ಅಗತ್ಯ ಮಾಹಿತಿಗಳನ್ನು ನೆನಪಿಡಿ;

ಸೆಬಿ ಮಾನ್ಯತೆ ಪಡೆದ ಬ್ರೋಕರ್‌ಗಳನ್ನು ಆಯ್ಕೆ ಮಾಡಿಕೊಳ್ಳಿ. ನಿಮ್ಮ ಪಾಸ್‌ವರ್ಡ್, ಒಟಿಪಿ ಇತ್ಯಾದಿ ಮಾಹಿತಿಯನ್ನು ಯಾರಿಗೂ ಹಂಚಿಕೊಳ್ಳಬೇಡಿ. ಪ್ರಸ್ತುತ ಎಲ್ಲ ಅಪ್ಲಿಕೇಶನ್‌ಗಳಿಗೆ ಪಾಸ್‌ವರ್ಡ್ ಅಲ್ಲದೆ, ಹೆಚ್ಚುವರಿ ನಿಮ್ಮ ಬೆರಳಚ್ಚು ಅಥವಾ ಒಟಿಪಿ ಮೂಲಕ ವ್ಯವಹರಿಸುವ ವ್ಯವಸ್ಥೆಯು ಕಡ್ಡಾಯವಾಗಿದೆ. ಹೀಗಾಗಿ ತಂತ್ರಾಂಶದ ಬಗ್ಗೆ ಯಾವುದೇ ಅನುಮಾನ ಬೇಡ. ಯಾವುದೇ ಅನಾಮಿಕ ಮಾಹಿತಿ ವಿನಿಮಯಕ್ಕೆ ಪ್ರತಿಕ್ರಿಯಿಸದಿರಿ.

ಇನ್ನು ಯಾವುದೇ ಸಲಹೆ ಪಡೆಯುವ ಬಗ್ಗೆ ಮಾಹಿತಿ ನೀಡುವುದಾದರೆ, ನಮ್ಮ ಎಲ್ಲ ನಿರ್ಧಾರಗಳನ್ನು ತೆಗೆದುಕೊಳ್ಳುವ ಮೊದಲು ನಾವು ನಮ್ಮದೇ ರೀತಿಯ ಕೆಲವು ಪೂರ್ವ ಸಿದ್ಧತೆ ಮಾಡಿರಬೇಕು. ನಾವು ಕೈಗೊಳ್ಳುವ ನಿರ್ಧಾರ ಕೆಲವೊಮ್ಮೆ ತಪ್ಪಾಗುವ ಸಾಧ್ಯತೆ ಇಲ್ಲವೆಂದಲ್ಲ. ಆದರೆ, ನಮ್ಮ ನಿರ್ಧಾರದ ಬಗೆಗಿನ ಕಾರಣಗಳನ್ನು ಗೊತ್ತು ಮಾಡಿಕೊಳ್ಳಬೇಕು. ಇದರಿಂದ ನಮ್ಮ ತಪ್ಪುಗಳನ್ನು ನಾವು ಸರಿಪಡಿಸುವುದರಲ್ಲಿ ಸಹಾಯವಾಗುತ್ತದೆ.

ಅದೇ ತಪ್ಪು ಉಚಿತ ಸಲಹೆ ಪಡೆದು ಮಾಡಿದರೆ ಬ್ರೋಕರ್‌ಗಳನ್ನು ಹಳಿಯುವ ಪ್ರಸಂಗ ಒದಗಬಾರದು. ಇದಕ್ಕಾಗಿ ಸಲಹೆಗಳನ್ನು ಯಾವ ಆಧಾರದ ಮೇಲೆ ನೀಡಲಾಗಿದೆ, ಅವರು ಯಾವ ಕಾರಣದಿಂದ ಖರೀದಿ, ಮಾರಾಟಕ್ಕೆ ಸೂಚಿಸಿದ್ದಾರೆ ಎನ್ನುವುದನ್ನೂ ಗೊತ್ತು ಮಾಡಿ. ಎಲ್ಲದಕ್ಕಿಂತ ಮೊದಲು ಆ ಬಗ್ಗೆ ದಿನೇ ದಿನೇ ಅರಿಯುವ ಪ್ರಯತ್ನ ಮಾಡಿ. ಲಾಭ ಬರುವುದು ನಮ್ಮ ನಿರ್ಧಾರದ ಮೇಲೆ ಎನ್ನುವುದು ತಿಳಿದಿರಲಿ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ–ಮೇಲ್: businessdesk@prajavani.co.in

ಮಾರುಕಟ್ಟೆ ಧಾರಣೆ

ಅಡಿಕೆ (ಬಂಟ್ವಾಳ)	
ಕೋಕ	18000-28500
ಹೊಸತು	28500-36500
ಹಳತು	36500-45000
ಸಾಗರ	
ಬಿಳಿಗೋಟು	25542-27399
ಚಾಲಿ	33811-34111
ಕೋಕ	21254-30245
ಕೆಂಪುಗೋಟು	30919-34109
ರಾಶಿ	32899-51329
ಸಿಪ್ಪೆಗೋಟು	17419-19319
ಶಿವಮೊಗ್ಗ	
ಬೆಟ್ಟೆ	46066-56399
ಗೊರಬಲು	18119-38399
ರಾಶಿ	31009-52310
ಸರಕು	43100-85730
ಸಿದ್ದಾಪುರ	
ಬಿಳಿಗೋಟು	26389-29689
ಚಾಲಿ	33209-35899
ಕೋಕ	25699-28599
ಹಳೆಚಾಲಿ	34299-36299
ಕೆಂಪುಗೋಟು	27600-30569
ರಾಶಿ	43899-47899
ತಟ್ಟಿಬೆಟ್ಟೆ	35689-45609
ಶಿರಸಿ	
ಬೆಟ್ಟೆ	31650-45101
ಬಿಳಿಗೋಟು	22099-30400
ಚಾಲಿ	32408-36848
ಕೆಂಪುಗೋಟು	28199-32199
ರಾಶಿ	44299-49609
ಕಾರ್ಕಳ	
ಹೊಸತು	25000-36500
ಹಳತು	30000-43500
ಯಲ್ಲಾಪುರ	
ಅಪಿ	55629-60629
ಬಿಳಿಗೋಟು	23612-31210
ಕೋಕ	12109-28109
ಹಳೆಚಾಲಿ	37777-38711
ಹೊಸಚಾಲಿ	32000-37099
ಕೆಂಪುಗೋಟು	24306-32706
ರಾಶಿ	42869-54852
ತಟ್ಟಿಬೆಟ್ಟೆ	36742-42500

ಮುಂಬೈ ಧಾರಣೆ

ಶೇಂಗಾ
30-4-2024

ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10800-10900
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10600-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1500 (1500)
ಒಂದು ವಾರದ ಡೆಲಿವರಿ	1495 (1495)
ಸೋಯಾ ಕಚ್ಚಾ	870 (880)
ಪಾಮ್ ವಾರದ ಡೆಲಿವರಿ	893 (908)
ಸೂರ್ಯಕಾಂತಿ ಎಣ್ಣೆ ಕಚ್ಚಾ	860 (860)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)
ಅಪರಂಜಿ ಚಿನ್ನ 10ಗ್ರಾಂ
₹71,130 (72,150)
ಬೆಳ್ಳಿ ಕೆ.ಜಿ ₹79,900 (81,150)
ಆವರಣದಲ್ಲಿ ಹಿಂದಿನ ದಿನದ ಧಾರಣೆ

ಈರುಳ್ಳಿ (ಕ್ವಿಂಟಲ್‌ಗೆ)




ದಪ್ಪ	₹1700-2100
ಮಧ್ಯಮ	₹1200-1700
ಸಣ್ಣ	₹500-1200

ಓಲಾ: ಶೇ 15ರಷ್ಟು ಉದ್ಯೋಗ ಕಡಿತ?

ನವದೆಹಲಿ (ಪಿಟಿಐ): ಓಲಾ ಕಂಪನಿಯ ಸಿಇಒ ಹೇಮಂತ್ ಬಕ್ಷಿ ಅವರು, ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಬಕ್ಷಿ ಅವರು ನಾಲ್ಕು ತಿಂಗಳ ಹಿಂದೆ ಕಂಪನಿಗೆ ಸೇರ್ಪಡೆಯಾಗಿದ್ದರು. ಎಎನ್‌ಐ ಟೆಕ್ನಾಲಜೀಸ್ ಒಡೆತನದ ಓಲಾ ವಿಭಾಗದಲ್ಲಿ ಅಂದಾಜು 900 ಸಿಬ್ಬಂದಿ ಇದ್ದಾರೆ. ಈ ಪೈಕಿ ಶೇ 10–15ರಷ್ಟು ಉದ್ಯೋಗಿಗಳನ್ನು ಕೆಲಸದಿಂದ ವಜಾಗೊಳಿಸಲು ಕಂಪನಿ ನಿರ್ಧರಿಸಿದೆ. 90–140 ಉದ್ಯೋಗಿಗಳು ಕೆಲಸ ಕಳೆದುಕೊಳ್ಳಲಿದ್ದಾರೆ ಎಂದು ತಿಳಿಸಿವೆ.

ಷೇರುಪೇಟೆ ವಹಿವಾಟು



ಸೆನ್ಸೆಕ್ಸ್, ನಿಫ್ಟಿ ಇಳಿಕೆ

ಮುಂಬೈ/ ನವದೆಹಲಿ (ಪಿಟಿಐ): ಬ್ಯಾಂಕಿಂಗ್, ಐ.ಟಿ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದ್ದರಿಂದ ಮಂಗಳವಾರ ಷೇರು ಸೂಚ್ಯಂಕಗಳು ಇಳಿಕೆ ಕಂಡಿವೆ.



ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 188 ಅಂಶ ಇಳಿಕೆ ಕಂಡು 74,482ಕ್ಕೆ ಕೊನೆಗೊಂಡಿತು. ವಹಿವಾಟಿನ ವೇಳೆ ಸೂಚ್ಯಂಕವು 440 ಅಂಶ ಏರಿಕೆಯಾಗಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 38 ಅಂಶ ಇಳಿಕೆಯಾಗಿ 22,604ಕ್ಕೆ ಸ್ಥಿರಗೊಂಡಿತು.

ಟೆಕ್ ಮಹೀಂದ್ರ, ಟಾಟಾ ಸ್ಟೀಲ್, ಜೆಎಸ್‌ಡಬ್ಲ್ಯು, ಎಚ್‌ಸಿಎಲ್ ಟೆಕ್ನಾಲಜೀಸ್, ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್, ಲಾರ್ಸೆನ್ ಆ್ಯಂಡ್ ಟೊಬ್ರೊ ಮತ್ತು ಕೋಟಕ್ ಮಹೀಂದ್ರ ಬ್ಯಾಂಕ್‌ನ ಷೇರಿನ ಮೌಲ್ಯ ಇಳಿಕೆಯಾಗಿದೆ. ಮಹೀಂದ್ರ ಆ್ಯಂಡ್ ಮಹೀಂದ್ರ, ಪವರ್‌ಗ್ರಿಡ್, ಬಜಾಜ್ ಫೈನಾನ್ಸ್, ಇಂಡಸ್‌ಇಂಡ್ ಬ್ಯಾಂಕ್ ಮತ್ತು ಮಾರುತಿ ಷೇರು ಗಳಿಕೆ ಕಂಡಿವೆ.

ಟಾಟಾ ಕೆಮಿಕಲ್ಸ್ ಷೇರು ಇಳಿಕೆ: ಟಾಟಾ ಕೆಮಿಕಲ್ಸ್ ಲಿಮಿಟೆಡ್ 2023–24ನೇ ಹಣಕಾಸು ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ₹818 ಕೋಟಿ ನಿವ್ವಳ ನಷ್ಟ ಕಂಡಿದೆ. ಇದರಿಂದ ಕಂಪನಿಯ ಷೇರಿನ ಮೌಲ್ಯ ಶೇ 2ರಷ್ಟು ಇಳಿಕೆಯಾಗಿದೆ.ಬಿಎಸ್‌ಇ ಮತ್ತು ಎನ್‌ಎಸ್‌ಇಯಲ್ಲಿ ಪ್ರತಿ ಷೇರಿನ ಬೆಲೆ ₹1,072ಕ್ಕೆ ಕುಸಿದಿದೆ. ದಿನದ ವಹಿವಾಟಿನ ಒಂದು ಸಂದರ್ಭದಲ್ಲಿ ಷೇರಿನ ಮೌಲ್ಯ ಶೇ 4.5ರಷ್ಟು ಇಳಿಕೆಯಾಗಿತ್ತು.

ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಷೇರು ಏರಿಕೆ: ಮಾರ್ಚ್ ತ್ರೈಮಾಸಿಕದ ನಿವ್ವಳ ಲಾಭದಲ್ಲಿ ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಹೆಚ್ಚು ಲಾಭಗಳಿಸಿದ್ದರಿಂದ ಷೇರಿನ ಮೌಲ್ಯ ಶೇ 20ರಷ್ಟು ಏರಿಕೆಯಾಗಿದೆ.

ಬಿಎಸ್‌ಇ ಮತ್ತು ಎನ್‌ಎಸ್‌ಇಯಲ್ಲಿ ಪ್ರತಿ ಷೇರಿನ ಬೆಲೆ ಕ್ರಮವಾಗಿ ₹599 ಮತ್ತು ₹600ಕ್ಕೆ ಏರಿಕೆಯಾಗಿದೆ.

ಇಂಡಿಯನ್ ಗ್ರ್ಯಾನ್ ಪ್ರಿ ಮೊದಲ ಲೆಗ್ • ನಡೆಯದ ಷಾಟ್‌ಪಟ್ ಸ್ಪರ್ಧೆ

ಜಾವೆಲಿನ್: ರಾಜ್ಯದ ಮನು ಪ್ರಥಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಡಿ.ಪಿ. ಮನು, ಮಂಗಳವಾರ ನಡೆದ ಗ್ರ್ಯಾನ್‌ಪ್ರೀ ಅಥ್ಲೆಟಿಕ್ ಕೂಟದ ಮೊದಲ ಲೆಗ್‌ನಲ್ಲಿ ನಿರೀಕ್ಷೆಯಂತೆ ಜಾವೆಲಿನ್ ಥ್ರೊ ಸ್ಪರ್ಧೆಯನ್ನು ನಿರಾಯಾಸವಾಗಿ ಗೆದ್ದು ಸ್ಥಳೀಯ ಪ್ರೇಕ್ಷಕರ ಮೆಚ್ಚುಗೆ ಪಡೆದರು.

ಆದರೆ ಪ್ರಮುಖ ಆಕರ್ಷಣೆ ಷಾಟ್‌ಪಟ್ ಸ್ಪರ್ಧೆ ನಡೆಯದೇ ಪ್ರೇಕ್ಷಕರು ನಿರಾಸೆ ಅನುಭವಿಸಿದರು.

ಏಷ್ಯನ್ ಗೇಮ್ಸ್ ಮತ್ತು ಏಷ್ಯನ್ ಚಾಂಪಿಯನ್ ಚಿನ್ನ ವಿಜೇತ ತಜಿಂದರ್‌ಪಾಲ್ ಸಿಂಗ್ ತೂರ್ ಸೇರಿ ಮೂವರು ಸ್ಪರ್ಧಿಗಳು ಕಂಠೀರವ ಕ್ರೀಡಾಂಗಣದಲ್ಲಿ ಸ್ಪರ್ಧೆ ವೇಳೆ ಹಾಜರಾಗಲಿಲ್ಲ.

‘ಸ್ಪರ್ಧೆಯ ವೇಳೆ ಕರೆ ನೀಡಿದರೂ, ನಿಗದಿಯಾದ ಸ್ಥಳದಲ್ಲಿ ಯಾರೂ ಬರಲಿಲ್ಲ’ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಪ್ಯಾರಿಸ್‌ನಲ್ಲಿ ನಡೆಯಲಿರುವ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯಲು ಇದು ತಜಿಂದರ್ ಅವರಿಗೆ ಈ ಕೂಟ ಅವಕಾಶ ಒದಗಿಸಿತ್ತು. ಆದರೆ 29 ವರ್ಷದ ಸ್ಪರ್ಧಿ ಈ ಅವಕಾಶದ ಲಾಭ ಪಡೆಯಲಿಲ್ಲ.

ಮನು ಮೊದಲ ಯತ್ನದಲ್ಲಿ 76.78 ಮೀ. ಎಸೆತದೊಡನೆ ಸ್ಪರ್ಧೆ ಆರಂಭಿಸಿದರು. ನಂತರ 73.46 ಮೀ. ಹಾಗೂ ಮೂರನೇ ಯತ್ನದಲ್ಲಿ ಜಾವೆಲಿನ್‌ಅನ್ನು 81.91 ಮೀ. ದೂರ ಎಸೆದರು. ಮುಂದಿನ ಮೂರು ಯತ್ನಗಳಲ್ಲಿ ವಿಫಲರಾದರೂ ಚಿನ್ನ ಕಟ್ಟಿಟ್ಟಬುತ್ತಿಯಾಗಿತ್ತು. ಮಹಾರಾಷ್ಟ್ರದ ಉತ್ತಮ್ ಬಾಳಾಸಾಹೇಬ್ ಪಾಟೀಲ್ (76.81 ಮೀ) ಹಾಗೂ ಉತ್ತರ ಪ್ರದೇಶದ ವಿಕಾಸ್ ಯಾದವ್ (75.99 ಮೀ.) ಹೆಚ್ಚು ಪೈಪೋಟಿ ನೀಡಲಿಲ್ಲ.

ಈ ಸ್ಪರ್ಧೆಯಲ್ಲಿ ಒಲಿಂಪಿಕ್ಸ್ ಅರ್ಹತಾ ಮಟ್ಟ 85.50 ಮೀ. ಆಗಿತ್ತು. ಮನು ಅವರ ವೈಯಕ್ತಿಕ ಶ್ರೇಷ್ಠ ಎಸೆತ 84.35 ಮೀ. ಆಗಿದೆ.

ಇತರ ಅಂತರರಾಷ್ಟ್ರೀಯ ಅಥ್ಲೀಟುಗಳೂ ಇಲ್ಲಿ ಪ್ಯಾರಿಸ್ ಕೂಟಕ್ಕೆ ನಿಗದಿಪಡಿಸಿದ್ದ ಅರ್ಹತಾ ಮಟ್ಟ ತಲುಪುವಲ್ಲಿ ವಿಫಲರಾದರು.

ಜೆಸ್ಸಿ ಸಂದೇಶ್ (ಪುರುಷರ ಹೈಜಂಪ್), ಅಭಿನಯಾ ಶೆಟ್ಟಿ (ಮಹಿಳೆಯರ ಹೈಜಂಪ್) ಅವರು ಚಿನ್ನ ಗೆದ್ದ ಕರ್ನಾಟಕದ ಇಬ್ಬರು ಅಥ್ಲೀಟುಗಳು. ಇದರ ಜೊತೆ ರಾಜ್ಯದ ಅಥ್ಲೀಟುಗಳು ಮೂರು ಬೆಳ್ಳಿ, ಎರಡು ಕಂಚಿನ ಪದಕ ಪಡೆದರು.



ಇಂಡಿಯನ್ ಗ್ರ್ಯಾನ್ ಪ್ರೀ ಅಥ್ಲೆಟಿಕ್ ಕೂಟದಲ್ಲಿ ಥ್ರೊ ಮಾಡಲು ಸಜ್ಜಾಗಿರುವ ಕರ್ನಾಟಕದ ಡಿ.ಪಿ. ಮನು. ಪ್ರಜಾವಾಣಿ ಚಿತ್ರ/ಬಿ.ಎಚ್.ಶಿವಕುಮಾರ್

ಫಲಿತಾಂಶಗಳು ಇಂತಿವೆ: ಪುರುಷರ ವಿಭಾಗ: 100 ಮೀಟರ್ ಓಟ: ಲಾಲು ಪ್ರಸಾದ್ ಭಾಯ್ (ಒಡಿಶಾ) –1, ಹಸನ್ ಸಾಯಿದ್ (ಮಾಲ್ದೀವ್ಸ್)–2, ಆರ್ಯನ್ ಮನೋಜ್ (ಕರ್ನಾಟಕ)–3, ಕಾಲ: 10.64 ಸೆ.; ರೇಸ್ ಬಿ: ಜಿಟ್ಸನ್ (ತಮಿಳುನಾಡು)–1, ಆರ್ಯನ್ ಎಕ್ಕಾ (ಒಡಿಶಾ)–2, 3.ಜೊನಾಥನ್ ಸ್ಯಾಮ್ಯುಯೆಲ್ ಜಾರ್ಜ್ (ಕರ್ನಾಟಕ)–3, ಕಾಲ: 10.69 ಸೆ.; ರೇಸ್ ಸಿ: 1. ಅನಿಮೇಶ್ (ಒಡಿಶಾ)–1, ಜಯ್ ಶಾ (ಮಹಾರಾಷ್ಟ್ರ)–2, ಸಾಹಿಬ್ ಸಿಂಗ್ (ಮಹಾರಾಷ್ಟ್ರ)–3, ಕಾಲ: 10.51 ಸೆ.; ರೇಸ್ ಡಿ. 1.ಅಕ್ಷಯ್ ಎಕೋಣಕರ್ (ಮಹಾರಾಷ್ಟ್ರ)–1, ಅರಿಜಿತ್ ರಾಣಾ (ಪಶ್ಚಿಮ ಬಂಗಾಲ)–2, ಸುಧಾಕರ್ ಚಿಂತಾ (ತೆಲಂಗಾಣ)–3, ಕಾಲ: 10.71 ಸೆ.

200 ಮೀಟರ್ ಓಟ: 1. ಅನಿಮೇಶ್ ಕುಜೂರ್ (ಒಡಿಶಾ)–1, ಜೈ ಶಾ (ಮಹಾರಾಷ್ಟ್ರ)–2, ನಲುಬೋತು ಷಣ್ಮುಗ (ಆಂಧ್ರಪ್ರದೇಶ)–3, ಕಾಲ: 20.97 ಸೆ.; ರೇಸ್ ಬಿ: ಕೆ.ಎಸ್.ಪ್ರಣವ್ (ಕೇರಳ)–1, ಸಿ.ಎಚ್.ರಿಹಾನ್ (ಕರ್ನಾಟಕ)–2, ಜಗತ್ ಗೌಡ (ಕರ್ನಾಟಕ)–3, ಕಾಲ: 21.90 ಸೆ.; 800 ಮೀಟರ್ ಓಟ: ರೇಸ್ ಎ: ಅಂಕೇಶ್ ಚೌಧರಿ (ಹಿಮಾಚಲ ಪ್ರದೇಶ)–1, ಮೊಹಮದ್ ಅಫ್ಜಲ್ (ಕೇರಳ)–2, ಶ್ರೀಕಿರಣ್ (ತಮಿಳುನಾಡು)–3; ಕಾಲ: 47.72 ಸೆ.; ರೇಸ್ ಬಿ: ಸಾಹಿಲ್ ಖಾನ್ (ರಾಜಸ್ಥಾನ)–1, ಹರ್ಜೋತ್ ಸಿಂಗ್ (ಪಂಜಾಬ್)–2, ರಾಹುಲ್ ಚೌಹಾನ್ (ಕರ್ನಾಟಕ)–3, ಕಾಲ: 1ನಿ.50.18 ಸೆ.

ಟ್ರಿಪಲ್ ಜಂಪ್: ಪ್ರವೀಣ್ ಚಿತ್ರವೇಲ್ (ತಮಿಳುನಾಡು)–1, ಎಲ್ದೋಸ್ ಪಾಲ್ (ಕೇರಳ) –2, ಮೊಹಮ್ಮದ್ ಸಲಾವುದ್ದೀನ್ (ತಮಿಳುನಾಡು)–3, ದೂರ: 17.12 ಮೀ.; ಹೈಜಂಪ್: ಜೆಸ್ಸಿ ಸಂದೇಶ್ (ಕರ್ನಾಟಕ)–1, ಆದರ್ಶ್‌ರಾಮ್ (ತಮಿಳುನಾಡು)–2, ಸುದೀಪ್ (ಕರ್ನಾಟಕ)–3, ಎತ್ತರ: 2.20 ಮೀ.; ಲಾಂಗ್‌ಜಂಪ್: ಆದಿತ್ಯ ಕುಮಾರ್ ಸಿಂಗ್ (ಮಧ್ಯಪ್ರದೇಶ)–1, ಇ.ಅರವಿಂತ್ (ತಮಿಳುನಾಡು)–2, 3.ಎಸ್.ಆರ್ಯ (ಕರ್ನಾಟಕ)–3, ದೂರ: 8.01 ಮೀ. **ಜಾವೆಲಿನ್:** ಮನು ಡಿ.ಪಿ. (ಕರ್ನಾಟಕ)–1, ಉತ್ತಮ್ ಬಾಳಾಸಾಹೇಬ ಪಾಟೀಲ (ಮಹಾರಾಷ್ಟ್ರ)–2, ವಿಕಾಸ್ ಯಾದವ್ (ಉತ್ತರ ಪ್ರದೇಶ)–3, ದೂರ: 81.91 ಮೀ.

ಮಹಿಳಾ ವಿಭಾಗ: 100 ಮೀಟರ್ ಓಟ: ರೇಸ್ ಎ: ನಿತ್ಯಾ ಗಂಧೆ (ತೆಲಂಗಾಣ) –1, 11.78, ಶ್ರಬಾನಿ ನಂದಾ (ಒಡಿಶಾ)–2, ವಿ ಸುದೀಕ್ಷಾ (ಕರ್ನಾಟಕ)–3, ಕಾಲ: 11.78 ಸೆ.; ರೇಸ್ ಬಿ. 1.ಮೇಧಾ ಆರ್. ಕಾಮತ್ (ಕರ್ನಾಟಕ)–1. ಕಾವೇರಿ ಎಲ್.ಪಾಟೀಲ (ಕರ್ನಾಟಕ)–2, ಸರೋಜ್ ಪುಷ್ಪರಾಜ್ ಶೆಟ್ಟಿ (ಮಹಾರಾಷ್ಟ್ರ)–3, ಕಾಲ: 12.16 ಸೆ.

200 ಮೀಟರ್ ಓಟ: ರೇಸ್ ಎ 1. ವಿಸ್ಮಯಾ ವಿ.ಕೆ. (ಕೇರಳ)–1, ನಿತ್ಯಾ ಗಂಧೆ (ತೆಲಂಗಾಣ)–2, ಶ್ರಬಾನಿ ನಂದಾ (ಒಡಿಶಾ)–3, ಕಾಲ: 23:96 ಸೆ.; ರೇಸ್ ಬಿ: ಚೆಲಿಮಿ (ಆಂಧ್ರಪ್ರದೇಶ)–1, ಕೆ.ಸ್ನೇಹಾ (ಕೇರಳ)–2, ದೇವಯಾನಿಬಾ ಮಹೇಂದ್ರಸಿನ್ (ಗುಜರಾತ್)–3. ಕಾಲ: 23.92 ಸೆ.; 800 ಮೀ. ಓಟ: ಲಕ್ಷ್ಮೀಪ್ರಿಯಾ ಕಿಸನ್ (ಒಡಿಶಾ)–1, ಅರ್ಪಿತಾ ಇ.ಬಿ. (ಕರ್ನಾಟಕ)–2, ಶಿವಾನಿ ಕುಮಾರಿ (ಬಿಹಾರ)–3, ಕಾಲ: 2ನಿ.10.88 ಸೆ.

3000 ಮೀ ಸ್ಟಿಪಲ್ ಚೇಸ್: ಸೋನಂ (ದೆಹಲಿ)–1, ನಿಕಿತ್ (ರಾಜಸ್ಥಾನ)–2, ಸುಶ್ಮಿತ್ ಟಿಗ್ಗ (ಒಡಿಶಾ)–3, ಕಾಲ: 10 ನಿ.43.65 ಸೆ.

ಹೈಜಂಪ್: 1.ಅಭಿನಯಾ ಶೆಟ್ಟಿ (ಕರ್ನಾಟಕ)–1, ಮೊಹರ್ ಮುಖರ್ಜಿ (ಪಶ್ಚಿಮ ಬಂಗಾಳ)–2. ಎತ್ತರ: 1.71 ಮೀ.; ಟ್ರಿಪಲ್ ಜಂಪ್: ಎನ್.ವಿ.ಶೀನಾ (ಕೇರಳ)–1, ಗಾಯತ್ರಿ ಶಿವಕುಮಾರ್ (ಕೇರಳ)–2, ಶಾರ್ವರಿ ಅವಿನಾಶ್ ಪರುಲೆ (ಮಹಾರಾಷ್ಟ್ರ)–3, ದೂರ: 13. 48 ಮೀ.; ಲಾಂಗ್ ಜಂಪ್: 1. ಶೈಲಿ ಸಿಂಗ್ (ಉತ್ತರ ಪ್ರದೇಶ)–1, ನಯನಾ ಜೇಮ್ಸ್ (ಕೇರಳ)–2, ಸುಶ್ಮಿತಾ (ರಾಜಸ್ಥಾನ)–3, ದೂರ: 6.52 ಮೀ. **ಶಾಟ್‌ಪಟ್:** ಅಭಾ ಖತುವಾ (ಮಹಾರಾಷ್ಟ್ರ)–1, ವಿ.ಅಂಬಿಕಾ (ಕರ್ನಾಟಕ)–2, ದೂರ: 16.59 ಮೀ.; ಜಾವೆಲಿನ್ ಥ್ರೊ: ಕೆ.ರೇಷ್ಮಾ (ಆಂಧ್ರ ಪ್ರದೇಶ) –1, 2.ರಮ್ಯಶ್ರೀ ಜೈನ್ (ಕರ್ನಾಟಕ)–2, ವಿಶಾಖಾ ಪನ್ವರ್ (ಉತ್ತರ ಪ್ರದೇಶ)–3, ದೂರ: 53.77 ಮೀ.

ಓಟ ಪೂರೈಸದ ಹಿಮಾ

ಉದ್ದೀಪನ ಮದ್ದು ಸೇವನೆ ನಿಷೇಧ ತೆರವು ನಂತರ ಮೊದಲ ಬಾರಿ 200 ಮೀಟರ್ ಓಟದಲ್ಲಿ ಹಿಮಾದಾಸ್ ಉತ್ಸಾಹದಿಂದ ಪಾಲ್ಗೊಂಡರು. ಆದರೆ, ಓಟ ಪೂರೈಸಲಾಗಲಿಲ್ಲ. ಅರ್ಧದಲ್ಲೇ ನೋವಿನಿಂದ ಹಿಂದೆ ಸರಿದಿದ್ದು ಪ್ರೇಕ್ಷಕರನ್ನು ಅಚ್ಚರಿಗೆ ಒಳಪಡಿಸಿತು. ನಂತರ ಅವರು ಉದ್ದೀಪನ ಮದ್ದು ಪರೀಕ್ಷೆಗೆ ಮಾದರಿ ನೀಡಿದರು. ಆದರೆ ಮಾಧ್ಯಮದವರ ಜತೆ ಮಾತನಾಡಲಿಲ್ಲ

ಸಂಜು ಸ್ಯಾಮ್ಸನ್, ಚಾಹಲ್‌ಗೆ ಸ್ಥಾನ

ಟಿ20 ವಿಶ್ವಕಪ್: ರಾಹುಲ್‌ಗಿಲ್ಲ ಅವಕಾಶ: ತಂಡಕ್ಕೆ ಹಾರ್ದಿಕ್ ಉಪನಾಯಕ

ನವದೆಹಲಿ (ಪಿಟಿಐ): ಮುಂದಿನ ತಿಂಗಳು ವೆಸ್ಟ್ ಇಂಡೀಸ್ ಮತ್ತು ಅಮೆರಿಕ ಜಂಟಿ ಆತಿಥ್ಯದಲ್ಲಿ ನಡೆಯುವ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡುವ ಭಾರತ ತಂಡದಲ್ಲಿ ವಿಕೆಟ್‌ಕೀಪರ್ ಸಂಜು ಸ್ಯಾಮ್ಸನ್ ಮತ್ತು ಸ್ಪಿನ್ನರ್ ಯಜುವೇಂದ್ರ ಚಾಹಲ್ ಸ್ಥಾನ ಗಳಿಸಿದ್ದಾರೆ.

ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ) ಕಾರ್ಯದರ್ಶಿ ಜಯ್ ಶಾ ಹಾಗೂ ಆಯ್ಕೆ ಸಮಿತಿ ಮುಖ್ಯಸ್ಥ ಅಜಿತ್ ಅಗರಕರ್ ಅವರ ಸಭೆ ನಡೆಯಿತು. ತದನಂತರ ಬುಧವಾರ ಹಂಗಾಮಿ ತಂಡವನ್ನು ಪ್ರಕಟಿಸಲಾಯಿತು. ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ (ಐಸಿಸಿ)ಗೆ ತಂಡದ ಪಟ್ಟಿ ಸಲ್ಲಿಸಲು ಬುಧವಾರ ಕೊನೆಯ ದಿನವಾಗಿದೆ.

ರೋಹಿತ್ ಶರ್ಮಾ ನಾಯಕ ಮತ್ತು ಹಾರ್ದಿಕ್ ಪಾಂಡ್ಯ ಅವರನ್ನು ಉಪನಾಯಕರನ್ನಾಗಿ ನೇಮಿಸಲಾಗಿದೆ. ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಉತ್ತಮವಾಗಿ ಆಡಿರುವ ಆಲ್‌ರೌಂಡರ್ ಶಿವಂ ದುಬೆ, ಅಕ್ಷರ್ ಪಟೇಲ್ ಕೂಡ ಸ್ಥಾನ ಗಿಟ್ಟಿಸಿದ್ದಾರೆ.



ಯಜುವೇಂದ್ರ ಚಾಹಲ್, ರಿಷಭ್ ಪಂತ್ ಮತ್ತು ರೋಹಿತ್ ಶರ್ಮಾ

ಆದರೆ ಕನ್ನಡಿಗ ಕೆ.ಎಲ್. ರಾಹುಲ್ ಅವರನ್ನು ಆಯ್ಕೆಗೆ ಪರಿಗಣಿಸಿಲ್ಲ. ರಿಷಭ್ ಪಂತ್ ವಿಕೆಟ್‌ಕೀಪರ್ ಆಗಿದ್ದು, ಎರಡನೇ ವಿಕೆಟ್‌ಕೀಪರ್ ಆಗಿ ಸಂಜು ಸ್ಥಾನ ಗಳಿಸಿದ್ದಾರೆ. ಇಶಾನ್ ಕಿಶನ್ ಅವರನ್ನೂ ಆಯ್ಕೆಗೆ ಪರಿಗಣಿಸಿಲ್ಲ.

ಶುಭಮನ್ ಗಿಲ್ ಮೀಸಲು ಪಟ್ಟಿಯಲ್ಲಿದ್ದಾರೆ. ರೋಹಿತ್ ಶರ್ಮಾ ಅವರೊಂದಿಗೆ ಯಶಸ್ವಿ ಜೈಸ್ವಾಲ್ ಇನಿಂಗ್ಸ್ ಆರಂಭಿಸುವುದು ಬಹುತೇಕ ಖಚಿತವಾಗಿದೆ. ಮೂರನೇ ಕ್ರಮಾಂಕದಲ್ಲಿ ವಿರಾಟ್ ಕೊಹ್ಲಿ ಬ್ಯಾಟಿಂಗ್ ಮಾಡುವ ಸಾಧ್ಯತೆ ಇದೆ.

ಮೂವರು ಎಡಗೈ ಸ್ಪಿನ್ನರ್‌ಗಳಾದ ರವೀಂದ್ರ ಜಡೇಜ, ಅಕ್ಷರ್ ಮತ್ತು ಕುಲದೀಪ್ ಯಾದವ್ ತಂಡದಲ್ಲಿದ್ದಾರೆ. ಎಡಗೈ ವೇಗಿ ಅರ್ಷದೀಪ್ ಕೂಡ ಸ್ಥಾನ ಪಡೆದಿದ್ದಾರೆ. ಭಾರತ ತಂಡವು ಜೂನ್ 5ರಂದು ನ್ಯೂಯಾರ್ಕ್‌ನಲ್ಲಿ ಐರ್ಲೆಂಡ್ ಎದುರಿನ ಪಂದ್ಯದಲ್ಲಿ ಆಡುವ ಮೂಲಕ ಅಭಿಯಾನ ಆರಂಭಿಸಲಿದೆ.

ತಂಡ: ರೋಹಿತ್ ಶರ್ಮಾ (ನಾಯಕ), ಹಾರ್ದಿಕ್ ಪಾಂಡ್ಯ (ಉಪನಾಯಕ), ಯಶಸ್ವಿ ಜೈಸ್ವಾಲ್, ವಿರಾಟ್ ಕೊಹ್ಲಿ, ಸೂರ್ಯಕುಮಾರ್ ಯಾದವ್, ರಿಷಭ್ ಪಂತ್ (ವಿಕೆಟ್ ಕೀಪರ್), ಸಂಜು ಸ್ಯಾಮ್ಸನ್ (ವಿಕೆಟ್ ಕೀಪರ್), ಶಿವಂ ದುಬೆ, ರವೀಂದ್ರ ಜಡೇಜ, ಅಕ್ಷರ್ ಪಟೇಲ್, ಕುಲದೀಪ್ ಯಾದವ್, ಯಜುವೇಂದ್ರ ಚಾಹಲ್, ಅರ್ಷದೀಪ್ ಸಿಂಗ್, ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಸಿರಾಜ್

ಮೀಸಲು ಆಟಗಾರರು: ಶುಭಮನ್ ಗಿಲ್, ರಿಂಕು ಸಿಂಗ್, ಖಲೀಲ್ ಅಹಮದ್, ಆವೇಶ್ ಖಾನ್.

ದಕ್ಷಿಣ ಆಫ್ರಿಕಾ: 2 ಹೊಸಮುಖ

ಜೊಹಾನೆಸ್‌ಬರ್ಗ್ (ಪಿಟಿಐ): ಗಾಯದಿಂದ ಚೇತರಿಸಿಕೊಂಡಿರುವ ವೇಗದ ಬೌಲರ್ ಆ್ಯನ್ರಿಚ್ ನಾಕಿಯಾ ಅವರನ್ನು, ಜೂನ್ ತಿಂಗಳಲ್ಲಿ ನಡೆಯುವ ಟಿ20 ವಿಶ್ವಕಪ್‌ನಲ್ಲಿ ಆಡುವ ದಕ್ಷಿಣ ಆಫ್ರಿಕಾ ತಂಡಕ್ಕೆ ಸೇರ್ಪಡೆ ಮಾಡಿಕೊಳ್ಳಲಾಗಿದೆ. ಮಂಗಳವಾರ ಪ್ರಕಟಿಸಿದ ತಂಡದಲ್ಲಿ ಎರಡು ಹೊಸಮುಖಗಳಿವೆ.

ಮಧ್ಯಮ ಸರದಿಯ ಬ್ಯಾಟರ್ ಏಡನ್ ಮರ್ಕರಂ ಮೊದಲ ಬಾರಿ ವಿಶ್ವಕಪ್ ತಂಡ ಮುನ್ನಡೆಸಲಿದ್ದಾರೆ. ವಿಕೆಟ್ ಕೀಪರ್ –ಬ್ಯಾಟರ್ ರ್‍ಯಾನ್ ರಿಕೆಲ್ಟನ್ ಮತ್ತು ವೇಗದ ಬೌಲರ್ ಒಟ್ನೀಲ್ ಬಾರ್ಟ್‌ಮನ್ ಮೊದಲ ಬಾರಿ ಅವಕಾಶ ಪಡೆದಿದ್ದಾರೆ.

ದೇಶೀಯ ಎಸ್‌ಎ20 ಲೀಗ್‌ಲ್ಲಿ ನೀಡಿದ ಅಮೋಘ ಪ್ರದರ್ಶನದಿಂದ ಇವರಿಬ್ಬರಿಗೆ ಅವಕಾಶ ದಕ್ಕಿದೆ. ರಿಕೆಲ್ಟನ್ 58.88 ಸರಾಸರಿಯಲ್ಲಿ 530 ರನ್ ಕಲೆಹಾಕಿದ್ದರು. ಹಾಲಿ ಚಾಂಪಿಯನ್ ಸನ್‌ರೈಸರ್ಸ್ ಈಸ್ಟರ್ನ್ ಕೇಪರ್ ತಂಡದ ಪರ ಬಾರ್ಟ್‌ಮನ್ ಅವರು ಎಂಟು ಪಂದ್ಯಗಳಿಂದ 18 ವಿಕೆಟ್ ಪಡೆದಿದ್ದರು.



ಆ್ಯನ್ರಿಚ್

ವೇಗದ ಬೌಲರ್‌ಗಳಾದ ನಾಂಡ್ರೆ ಬರ್ಗರ್ ಮತ್ತು ಲುಂಗಿ ಗಿಡಿ ಅವರು ‘ಟ್ರಾವೆಲಿಂಗ್ ರಿಸರ್ವ್’ಗಳಾಗಿ ತಂಡದ ಜೊತೆ ಇರಲಿದ್ದಾರೆ. ದಕ್ಷಿಣ ಆಫ್ರಿಕಾ ತಂಡ: ಏಡನ್ ಮರ್ಕರಂ (ನಾಯಕ), ಒಟ್ನೀಲ್ ಬಾರ್ಟ್‌ಮನ್, ಜೆರಾಲ್ಡ್ ಕೋಯೆಜಿ, ಕ್ವಿಂಟನ್ ಡಿಕಾಕ್, ಬ್ಯೋರ್ನ್ ಫೊರ್ಟೂನ್, ರೀಝಾ ಹೆಂಡ್ರಿಕ್ಸ್, ಮಾರ್ಕೊ ಯಾನ್ಸನ್, ಹೆನ್ರಿಚ್ ಕ್ಲಾಸೆನ್, ಕೇಶವ್ ಮಹಾರಾಜ್, ಡೇವಿಡ್ ಮಿಲ್ಲರ್, ಆ್ಯನ್ರಿಚ್ ನಾಕಿಯಾ, ಕಗಿಸೊ ರಬಾಡ, ರ್‍ಯಾನ್ ರಿಕೆಲ್ಟನ್, ತಬ್ರೇಜ್ ಸಂಶಿ ಮತ್ತು ಟ್ರಿಸ್ಟನ್ ಸ್ಟಬ್ಸ್.

ಇಂಗ್ಲೆಂಡ್ ತಂಡಕ್ಕೆ ಆರ್ಚರ್

ಲಂಡನ್ (ಎಎಫ್‌ಪಿ): ವೇಗದ ಬೌಲರ್ ಜೋಫ್ರಾ ಆರ್ಚರ್ ಅವರನ್ನು ಟಿ20 ವಿಶ್ವಕಪ್ ಆಡುವ ಇಂಗ್ಲೆಂಡ್ ತಂಡಕ್ಕೆ ಕರೆಸಿಕೊಳ್ಳಲಾಗಿದೆ. ಹಾಲಿ ಚಾಂಪಿಯನ್ ಇಂಗ್ಲೆಂಡ್ ತಂಡವನ್ನು ಜೋಸ್ ಬಟ್ಲರ್ ಮುನ್ನಡೆಸಲಿದ್ದಾರೆ.

29 ವರ್ಷದ ಆರ್ಚರ್ ಒಂದು ವರ್ಷದ ನಂತರ ಪುನರಾಗಮನ ಮಾಡುತ್ತಿದ್ದಾರೆ. ಬಲಮೊಣಕೈ ಗಾಯದಿಂದ ಅವರು ಚೇತರಿಸಿಕೊಂಡಿದ್ದಾರೆ. 2019ರಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ ನಂತರ ಅವರು ಇಂಗ್ಲೆಂಡ್ ಪರ 15 ಟಿ20 ಪಂದ್ಯಗಳನ್ನುಆಡಿದ್ದಾರೆ.

ಈ ವಿಶ್ವಕಪ್ ವೆಸ್ಟ್ ಇಂಡೀಸ್ ಮತ್ತು ಅಮೆರಿಕದಲ್ಲಿ ನಡೆಯಲಿದ್ದು, ಆರ್ಚರ್ ಅವರು ಬಾರ್ಬೆಡೋಸ್‌ನಲ್ಲಿ ಬೆಳೆದಿರುವುದು ಅವರಿಗೆ ಅನುಕೂಲಕರ ಅಂಶ. ತಂಡಕ್ಕೆ ಆಯ್ಕೆಯಾಗಿರುವ ವೇಗದ ಬೌಲರ್ ಕ್ರಿಸ್ ಜೋರ್ಡಾನ್ ಸಹ ಬಾರ್ಬೆಡೋಸ್ ಮೂಲದವರು.

ಇಂಗ್ಲೆಂಡ್ ತನ್ನ ಮೊದಲ ಪಂದ್ಯವನ್ನು ಜೂನ್ 4ರಂದು ಬಾರ್ಬಾಡೋಸ್‌ನಲ್ಲಿ ಸ್ಕಾಟ್ಲೆಂಡ್ ವಿರುದ್ಧ ಆಡಲಿದೆ.



ಜೋಫ್ರಾ ಆರ್ಚರ್ ಎಎಫ್‌ಪಿ ಚಿತ್ರ

ಇದೇ ತಂಡವು, ಪಾಕಿಸ್ತಾನ ವಿರುದ್ಧ ಮೇ 22 ರಂದು ಹೆಡಿಂಗ್ಲೆಯಲ್ಲಿ ಆರಂಭವಾಗುವ ನಾಲ್ಕು ಪಂದ್ಯಗಳ ಟಿ20 ಸರಣಿಯಲ್ಲೂ ಆಡಲಿದೆ. ಐಪಿಎಲ್‌ನಲ್ಲಿ ಆಡುತ್ತಿರುವ ಇಂಗ್ಲೆಂಡ್ ಆಟಗಾರರು ಆ ವೇಳೆಗೆ ತಂಡವನ್ನು ಸೇರಿಕೊಳ್ಳಲಿದ್ದಾರೆ.

15 ಆಟಗಾರರ ತಂಡ ಹೀಗಿದೆ: ಜೋಸ್ ಬಟ್ಲರ್ (ನಾಯಕ, ವಿಕೆಟ್ ಕೀಪರ್), ಮೊಯಿನ್ ಅಲಿ, ಜೋಫ್ರಾ ಆರ್ಚರ್, ಜಾನಿ ಬೇರ್ಸ್ಟೊ, ಹ್ಯಾರಿ ಬ್ರೂಕ್, ಸ್ಯಾಮ್ ಕರನ್, ಬೆನ್ ಡಕೆಟ್, ಟಾಮ್ ಹಾರ್ಟ್ಲಿ, ವಿಲ್ ಜಾಕ್ಸ್, ಕ್ರಿಸ್ ಜೋರ್ಡಾನ್, ಲಿಯಾಮ್ ಲಿವಿಂಗ್‌ಸ್ಟೋನ್, ಅದಿಲ್ ರಶೀದ್, ಫಿಲ್ ಸಾಲ್ಟ್, ರೀಸ್ ಟೋಪ್ಲಿ, ಮಾರ್ಕ್ ವುಡ್.

ಬ್ಯಾಡ್ಮಿಂಟನ್: ಚೀನಾಕ್ಕೆ ಮಣಿದ ಭಾರತ

ಚೆಂಗ್ಡು (ಚೀನಾ), (ಪಿಟಿಐ): ಪ್ರಮುಖ ಆಟಗಾರ್ತಿಯರಿಲ್ಲದೇ ಟೂರ್ನಿಗೆ ಬಂದಿದ್ದ ಭಾರತ ಬ್ಯಾಡ್ಮಿಂಟನ್ ತಂಡ ಉಬರ್ ಕಪ್ ಟೂರ್ನಿಯ ‘ಎ’ ಗುಂಪಿನ ಅಂತಿಮ ಪಂದ್ಯದಲ್ಲಿ ಮಂಗಳವಾರ 0–5 ರಿಂದ ಆತಿಥೇಯ ಚೀನಾಕ್ಕೆ ಮಣಿಯಿತು.

ಹದಿಹರೆಯದ ಪ್ರತಿಭಾನ್ವಿತೆ ಅನ್ಮೋಲ್ ಖಾರ್ಬ್ ಪಾದದ ಉಳುಕಿನಿಂದ ನೋವು ತಾಳಲಾಗದೇ ಕಣ್ಣೀರಿಡುತ್ತಾ ಅಂಕಣದಿಂದ ನಿರ್ಗಮಿಸಿದರು. ಈ ಹಿಂದಿನ ಪಂದ್ಯಗಳಲ್ಲಿ ಕೆನಡಾ ಮತ್ತು ಸಿಂಗಪುರ ಮೇಲೆ ಜಯಗಳಿಸಿದ್ದ ಭಾರತ ತಂಡ ಈಗಾಗಲೇ ಎಂಟರ ಘಟ್ಟಕ್ಕೆ ಸ್ಥಾನ ಕಾದಿರಿಸಿದೆ.

15 ಬಾರಿಯ ಚಾಂಪಿಯನ್ ತಂಡದ ವಿರುದ್ಧದ ಈ ಪಂದ್ಯಕ್ಕೆ ಅಸ್ಮಿತಾ ಚಾಲಿಹಾ ವಿಶ್ರಾಂತಿ ಪಡೆದರು. ಒಲಿಂಪಿಕ್ ಪದಕ ವಿಜೇತೆ ಪಿ.ವಿ.ಸಿಂಧು ಈ ಟೂರ್ನಿಯಲ್ಲಿ ಆಡುತ್ತಿಲ್ಲ. ಹೀಗಾಗಿ ಎಳೆಯರಿಂದ ಕೂಡಿದ ತಂಡಕ್ಕೆ ಇಲ್ಲಿ ಸತ್ವಪರೀಕ್ಷೆ ಎದುರಾಗಿದೆ.

ಒಲಿಂಪಿಕ್ ಚಾಂಪಿಯನ್ ಹಾಗೂ ವಿಶ್ವದ ಎರಡನೇ ನಂಬರ್ ಆಟಗಾರ್ತಿ ಚೆನ್ ಯು ಫೀ ಮೊದಲ ಸಿಂಗಲ್ಸ್‌ನಲ್ಲಿ 21–12, 21–10 ರಿಂದ 83ನೇ ಕ್ರಮಾಂಕದ ಇಶಾರಾಣಿ ಬರೂವಾ ಅವರ ಮೇಲೆ ಗೆಲ್ಲಲು ಕಷ್ಟಪಡಲಿಲ್ಲ.

ರಾಷ್ಟ್ರೀಯ ಚಾಂಪಿಯನ್ನರಾದ ಪ್ರಿಯಾ ಕೊಂಜೆಂಗ್‌ಬಮ್ ಮತ್ತು ಶ್ರುತಿ ಮಿಶ್ರಾ ಅವರು ಹಾಲಿ ವಿಶ್ವ ಚಾಂಪಿಯನ್ ಜೋಡಿಯಾದ ಚೆನ್ ಕ್ವಿಂಗ್ ಚೆನ್ –ಜಿಯಾ ಯಿ ಫಾನ್ ಜೋಡಿಗೆ ಸವಾಲಾಗಲಿಲ್ಲ. ಚೀನಾದ ಆಟಗಾರ್ತಿಯರು 21–13, 21–12ರಲ್ಲಿ ಜಯಪಡೆದರು.

ಹಾನ್ ಯು ಎದುರು ಮೊದಲ ಗೇಮ್‌ಅನ್ನು 9–21ರಲ್ಲಿ ಕಳೆದುಕೊಂಡಿದ್ದ ಅನ್ಮೋಲ್, ಎರಡನೇ ಗೇಮ್‌ನಲ್ಲಿ 1–4ರಿಂದ ಹಿಂದೆಯಿದ್ದಾಗ ಪಾದದ ಉಳುಕಿಗೆ ಒಳಗಾದರು. 17 ವರ್ಷದ ಆಟಗಾರ್ತಿ ವೈದ್ಯಕೀಯ ವಿರಾಮ ಪಡೆದರೂ ಆಟ ಮುಂದುವರಿಸಲು ಆಗಲಿಲ್ಲ. ಚೀನಾ ಆ ಮೂಲಕ 3–0 ಮುನ್ನಡೆ ಪಡೆಯಿತು.

ಉಳಿದ ಎರಡು ಪಂದ್ಯಗಳನ್ನೂ ಚೀನಾ ಆಟಗಾರ್ತಿಯರು ನೇರ ಗೇಮ್‌ಗಳಿಂದ ಗೆದ್ದುಕೊಂಡರು. ಲಿಯು ಶೆನ್ ಶು– ತಾನ್ ನಿಂಗ್ ಜೋಡಿ 21–9, 21–10 ರಿಂದ ಸಿಮ್ರಾನ್ ಸಿಂಗ್– ರಿತಿಕಾ ಠಕ್ಕರ್ ಅವರನ್ನು ಸೋಲಿಸಿತು. ತನ್ವಿ ಶರ್ಮಾ ಕೊನೆಯ ಸಿಂಗಲ್ಸ್‌ನಲ್ಲಿ 7–21, 16–21ರಲ್ಲಿ ವಾಂಗ್ ಝಿ ಯಿ ಅವರಿಗೆ ಮಣಿದರು. ‘ಎ’ ಗುಂಪಿನಲ್ಲಿ ಚೀನಾ ಮೊದಲ ಸ್ಥಾನ ಪಡೆದರೆ, ಭಾರತ ಎರಡನೇ ಸ್ಥಾನ ಪಡೆಯಿತು.

ಬ್ಯಾಡ್ಮಿಂಟನ್: ಏಳು ಮಂದಿಗೆ ಪ್ಯಾರಿಸ್ ಟಿಕೆಟ್

ನವದೆಹಲಿ (ಪಿಟಿಐ): ಮಾಜಿ ವಿಶ್ವ ಚಾಂಪಿಯನ್ ಪಿ.ವಿ. ಸಿಂಧು ಸೇರಿದಂತೆ ಭಾರತದ ಏಳು ಮಂದಿ ಬ್ಯಾಡ್ಮಿಂಟನ್ ಪಟುಗಳು, ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಭಾಗವಹಿಸುವ ಅರ್ಹತೆ ಪಡೆದಿದ್ದಾರೆ. ಒಲಿಂಪಿಕ್ ಗೇಮ್ಸ್ ಅರ್ಹತೆಗೆ ಬೇಕಾದ ರ‍್ಯಾಂಕಿಂಗ್ ಮಾನದಂಡಗಳ ಆಧಾರದಲ್ಲಿ ಅವರಿಗೆ ಅವಕಾಶ ದೊರಕಿದೆ.

ಮಹಿಳಾ ವಿಭಾಗದಲ್ಲಿ ಸಿಂಧು ಮತ್ತು ಪುರುಷರ ವಿಭಾಗದಲ್ಲಿ ಎಚ್.ಎಸ್.ಪ್ರಣಯ್ ಅವರು ರ‍್ಯಾಂಕಿಂಗ್ ಆಧಾರದಲ್ಲಿ ಅರ್ಹತೆ ಪಡೆಯುವುದು ಈ ಹಿಂದೆಯೇ ಖಚಿತಗೊಂಡಿತ್ತು.

ಒಲಿಂಪಿಕ್ ಅರ್ಹತೆ ಸಂಬಂಧದ ಪ್ರಕ್ರಿಯೆಗಳನ್ನು ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್ (ಬಿಡಬ್ಲ್ಯುಎಫ್) ಸೋಮವಾರ ಗಡುವಿನೊಳಗೆ ಪೂರ್ಣಗೊಳಿಸಿದೆ.

ಏಪ್ರಿಲ್ ರ‍್ಯಾಂಕಿಂಗ್ ಆಧಾರದಲ್ಲಿ ಪುರುಷರ ಮತ್ತು ಮಹಿಳಾ ವಿಭಾಗದ ಅಗ್ರ 16 ಆಟಗಾರರು ಮತ್ತು ಆಟಗಾರ್ತಿಯರು ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದಿದ್ದಾರೆ.



ಪಿ.ವಿ.ಸಿಂಧು ಪಿಟಿಐ ಚಿತ್ರ

ಮಾನದಂಡಗಳ ಪ್ರಕಾರ, ಮಹಿಳಾ ಸಿಂಗಲ್ಸ್ ರ‍್ಯಾಂಕಿಂಗ್‌ನಲ್ಲಿ ಸಿಂಧು 12ನೇ ಸ್ಥಾನ ಪಡೆದಿದ್ದರೆ, ಪುರುಷರ ಸಿಂಗಲ್ಸ್‌ನಲ್ಲಿ ಪ್ರಣಯ್ ಮತ್ತು ಲಕ್ಷ್ಯ ಸೇನ್ ಕ್ರಮವಾಗಿ 9 ಮತ್ತು 13ನೇ ಸ್ಥಾನ ಪಡೆದಿದ್ದಾರೆ. ಸಿಂಧು ಈ ಹಿಂದೆ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಮತ್ತು ಕಂಚಿನ ಪದಕ ಪಡೆದಿದ್ದಾರೆ.

ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಒಲಿಂಪಿಕ್ ಕ್ವಾಲಿಫಿಕೇಷನ್ ಅಂತ್ಯದಲ್ಲಿ ಡಬಲ್ಸ್ ವಿಭಾಗದಲ್ಲಿ ಮೂರನೇ ಕ್ರಮಾಂಕದಲ್ಲಿದ್ದಾರೆ. ಪದಕದ ಭರವಸೆಯೊಡನೆ ಇವರಿಬ್ಬರು ಪ್ಯಾರಿಸ್‌ಗೆ ತೆರಳಲಿದ್ದಾರೆ.

ಮಹಿಳಾ ಡಬಲ್ಸ್‌ನಲ್ಲಿ ತನಿಶಾ ಕ್ರಾಸ್ಟೊ ಮತ್ತು ಅಶ್ವಿನಿ ಪೊನ್ನಪ್ಪ 13ನೇ ಸ್ಥಾನ ಪಡೆದ ಕಾರಣ ಅವರೂ ಅರ್ಹತೆ ಸಂಪಾದಿಸಿದರು. ಆದರೆ ಟ್ರಿಸಾ ಜೋಳಿ ಮತ್ತು ಗಾಯತ್ರಿ ಗೋಪಿಚಂದ್ ಅವರಿಗೆ ಅವಕಾಶ ಕೈತಪ್ಪಿತು.



ಸ್ಟೊಯಿನಿಸ್ ಆಲ್‌ರೌಂಡ್ ಆಟ : ಮುಂಬೈ ಇಂಡಿಯನ್ಸ್‌ಗೆ ಏಳನೇ ಸೋಲು

ಲಖನೌಗೆ ಮಣಿದ ಮುಂಬೈ

ಲಖನೌ (ಪಿಟಿಐ): ಮಾರ್ಕಸ್ ಸ್ಟೊಯಿನಿಸ್ (19ಕ್ಕೆ 1 ಮತ್ತು 62, 45ಎ) ಅವರ ಆಲ್‌ರೌಂಡ್ ಆಟದ ನೆರವಿನಿಂದ ಲಖನೌ ಸೂಪರ್ ಜೈಂಟ್ಸ್ ತಂಡ ಮಂಗಳವಾರ ನಡೆದ ಐಪಿಎಲ್ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ತಂಡವನ್ನು ನಾಲ್ಕು ವಿಕೆಟ್‌ಗಳಿಂದ ಸೋಲಿಸಿತು.

ಏಕನಾ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಲಖನೌ ಬೌಲರ್‌ಗಳು ಮುಂಬೈ ತಂಡವನ್ನು 20 ಓವರ್‌ಗಳಲ್ಲಿ 7 ವಿಕೆಟ್‌ಗೆ 144 ರನ್‌ಗಳಿಗೆ ಕಟ್ಟಿ ಹಾಕಿದರು.

ನಂತರ ಲಖನೌ ತಂಡ 19.2 ಓವರ್‌ಗಳಲ್ಲಿ ಆರು ವಿಕೆಟ್‌ಗೆ 145 ರನ್ ಗಳಿಸಿತು. ಲೀಗ್ ನಲ್ಲಿ ಆರನೇ ಗೆಲುವಿನೊಡನೆ ಲಖನೌ ಮೂರನೇ ಸ್ಥಾನಕ್ಕೆ ಜಿಗಿದರೆ, ಮುಂಬೈ ತಂಡ ಏಳನೇ ಸೋಲಿನೊಡನೆ ಪ್ಲೇ ಆಫ್ ಹಾದಿ ತೀವ್ರ ಹಿನ್ನಡೆ ಅನುಭವಿಸಿತು.

ಲಖನೌ ತಂಡದ ಆರಂಭಿಕ ಆಟಗಾರ ಅರ್ಶಿನ್ ಕುಲಕರ್ಣಿ ಅವರಿಗೆ ತುಷಾರ್ ಖಾತೆ ತೆರೆಯಲು ಬಿಡಲಿಲ್ಲ. ಕುಲಕರ್ಣಿ ಅವರ ವಿಕೆಟ್ ಬೇಗನೆ ಕಳೆದುಕೊಂಡರೂ ನಾಯಕ ಕೆ.ಎಲ್. ರಾಹುಲ್ (28) ಮತ್ತು ಸ್ಟೊಯಿನಿಸ್ 53 ರನ್ ಜೊತೆಯಾಟದ ಮೂಲಕ ತಂಡಕ್ಕೆ ಒಳ್ಳೆಯ ಬುನಾದಿ ಒದಗಿಸಿದರು. ಸ್ಟೊಯಿನಿಸ್ ನಿರ್ಗಮಿಸಿದಾಗ ತಂಡದ ಮೊತ್ತ 99 ಆಗಿತ್ತು.

ಗುರಿ ದೊಡ್ಡದಿರದ ಕಾರಣ ಉಳಿದ ಬ್ಯಾಟರ್‌ಗಳ ಮೇಲೆ ಒತ್ತಡ ಇರಲಿಲ್ಲ. ದೀಪಕ್ ಹೂಡಾ (18) ಮತ್ತು ನಿಕೋಲಸ್ ಪೂರನ್ (ಔಟಾಗದೆ 14) ತಂಡದ ಗೆಲುವಿಗೆ ಕಾಣಿಕೆ ನೀಡಿದರು.

ಟಾಸ್ ಗೆದ್ದ ಕೆ.ಎಲ್. ರಾಹುಲ್ ಬಳಗವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಪವರ್ ಪ್ಲೇ ಅವಧಿಯಲ್ಲಿಯೇ ನಾಲ್ಕು ವಿಕೆಟ್ ಕಳೆದುಕೊಂಡ ಮುಂಬೈ ಇಂಡಿಯನ್ಸ್ ತಂಡವು ಸಾಧಾರಣ ಮೊತ್ತ ಗಳಿಸಿತು. ನೇಹಲ್ ವಧೇರಾ (46 ರನ್) ಮತ್ತು ಇಶಾನ್ ಕಿಶನ್ (32 ರನ್) ಅವರಿಬ್ಬರೂ ಐದನೇ ವಿಕೆಟ್ ಜೊತೆಯಾಟದಲ್ಲಿ 53 ರನ್ ರನ್ ಗಳಿಸಿದರು.

‘ಬರ್ತಡೆ ಬಾಯ್’ ರೋಹಿತ್ ಶರ್ಮಾ ಅವರು ಇನಿಂಗ್ಸ್‌ನ ಎರಡನೇ ಓವರ್‌ನಲ್ಲಿ ಮೊಹ್ಸಿನ್ ಖಾನ್ ಎಸೆತವನ್ನು ಆಡುವ ಭರದಲ್ಲಿ ಮಾರ್ಕಸ್ ಸ್ಟೋಯಿನಿಸ್‌ಗೆ ಕ್ಯಾಚಿತ್ತರು. ಅವರು 5 ಎಸೆತ ಎದುರಿಸಿ ಒಂದು ಬೌಂಡರಿ ಗಳಿಸಿದರು. ಸೂರ್ಯಕುಮಾರ್ ಯಾದವ್ ಒಂದು ಸಿಕ್ಸರ್ ಎತ್ತಿ ಭರ್ಜರಿ ಬ್ಯಾಟಿಂಗ್‌ನ ಮುನ್ಸೂಚನೆ ನೀಡಿದ್ದರು. ಆದರೆ ಸ್ಟೊಯಿನಿಸ್ ಎಸೆತವು ಸೂರ್ಯ ಕೈಗವಸು ಸವರಿ ಹಿಂದೆ ಹೋಯಿತು. ತಮ್ಮ ಎಡಕ್ಕೆ ಡೈವ್ ಮಾಡಿದ ರಾಹುಲ್ ಅದನ್ನು ವಶಕ್ಕೆ ಪಡೆದರು. ಯುಡಿಆರ್‌ಎಸ್ (ಅಂಪೈರ್ ತೀರ್ಪು ಮರುಪರಿಶೀಲನಾ ವ್ಯವಸ್ಥೆ) ಮನವಿ ಮಾಡಿ ಸಫಲರಾದರು.

ಕಳೆದ ಪಂದ್ಯದ ಹೀರೊ ತಿಲಕ್ ವರ್ಮಾ 11 ಎಸೆತದಲ್ಲಿ 7 ರನ್ ಗಳಿಸಿದ್ದಾಗ ರವಿ ಬಿಷ್ಣೋಯಿ ಮಾಡಿದ ಚುರುಕಾದ ಫೀಲ್ಡಿಂಗ್‌ನಲ್ಲಿ ರನ್‌ಔಟ್ ಆದರು. ಇದು ತಂಡಕ್ಕೆ ದೊಡ್ಡ ಪೆಟ್ಟು ನೀಡಿತು. ನಾಯಕ ಹಾರ್ದಿಕ್ ಪಾಂಡ್ಯ ಖಾತೆಯನ್ನೇ ತೆರೆಯದೇ ನವೀನ್ ಉಲ್ ಹಕ್ ಅವರಿಗೆ ವಿಕೆಟ್ ಒಪ್ಪಿಸಿದರು. ಕೇವಲ 27 ರನ್‌ಗಳಿಗೆ ನಾಲ್ವರು ಬ್ಯಾಟರ್‌ಗಳೂ ಡಗ್‌ಔಟ್‌ಗೆ ಮರಳಿದರು.

ಇದೆಲ್ಲದರ ನಡುವೆಯೂ ಇಶಾನ್ ಕಿಶನ್ ತಾಳ್ಮೆಯಿಂದ ಆಡುತ್ತಿದ್ದರು. 88.89ರ ಸ್ಟ್ರೈಕ್‌ರೇಟ್‌ನಲ್ಲಿ ಅವರು ರನ್ ಗಳಿಸಿದರು. 3 ಬೌಂಡರಿಗಳನ್ನು ಬಾರಿಸಿದರು. ಅವರೊಂದಿಗೆ ಜೊತೆಗೂಡಿದ ವಧೇರಾ ವಿಕೆಟ್ ಪತನಕ್ಕೆ ತಡೆಯೊಡ್ಡಿದರು. ವಧೇರಾ ಸ್ವಲ್ಪ ದಿಟ್ಟತನ ತೋರಿಸಿದರು. 14ನೇ ಓವರ್‌ನಲ್ಲಿ ಇಶಾನ್ ವಿಕೆಟ್ ಗಳಿಸಿದ ರವಿ ಬಿಷ್ಣೋಯಿ ಜೊತೆಯಾಟವನ್ನು ಮುರಿದರು. ವಧೇರಾ ಅವರೊಂದಿಗೆ ಸೇರಿದ ಟಿಮ್ ಡೇವಿಡ್ (ಔಟಾಗದೆ 35; 18ಎ, 4X3, 6X1) ತಂಡದ ಮೊತ್ತವನ್ನು ನೂರರ ಗಡಿ ದಾಟಿಸಿದರು.



ಲಖನೌ ಸೂಪರ್ ಜೈಂಟ್ಸ್ ತಂಡದ ಮಾರ್ಕಸ್ ಸ್ಟೊಯಿನಿಸ್ ಬ್ಯಾಟಿಂಗ್ ವೈಖರಿ. ಎಎಫ್‌ಪಿ ಚಿತ್ರ

ಸ್ಕೋರ್ ಕಾರ್ಡ್

ಮುಂಬೈ ಇಂಡಿಯನ್ಸ್: 7ಕ್ಕೆ144 (20 ಓವರುಗಳಲ್ಲಿ)

ರೋಹಿತ್ ಸಿ ಸ್ಟೊಯಿನಿಸ್ ಬಿ ಮೊಹ್ಸಿನ್ 4 (5ಎ, 4x1)
ಸೂರ್ಯಕುಮಾರ್ ಸಿ ರಾಹುಲ್ ಬಿ ಸ್ಟೊಯಿನಿಸ್ 10 (6ಎ, 6x1)
ತಿಲಕ್ ರನೌಟ್ (ಬಿಷ್ಣೋಯಿ) 7 (11ಎ, 4x1)
ಹಾರ್ದಿಕ್ ಸಿ ರಾಹುಲ್ ಬಿ ನವೀನ್ 0 (1ಎ)
ನೇಹಲ್ ಬಿ ಮೊಹ್ಸಿನ್ 46 (41ಎ, 4x4, 6x2)
ಡೇವಿಡ್ ಔಟಾಗದೇ 35 (19ಎ, 4x3, 6x1)
ನಬಿ ಬಿ ಯಾದವ್ 1 (2ಎ)
ಕೋಯಿಝಿ ಔಟಾಗದೇ 1 (2ಎ)
ಇತರೆ: 8 (ಲೆಗ್‌ಬೈ 2, ನೋಬಾಲ್ 2, ವೈಡ್ 4)
ವಿಕೆಟ್ ಪತನ: 1–7 (ರೋಹಿತ್ ಶರ್ಮಾ, 1.3), 2–18 (ಸೂರ್ಯಕುಮಾರ್ ಯಾದವ್, 2.4), 3–27 (ತಿಲಕ್ ವರ್ಮಾ, 5.1), 4–27 (ಹಾರ್ದಿಕ್ ಪಾಂಡ್ಯ, 5.2), 5–80 (ಇಶಾನ್ ಕಿಶನ್, 13.6), 6–112 (ನೇಹಲ್ ವಧೇರಾ, 17.1), 7–123 (ಮೊಹಮ್ಮದ್ ನಬಿ, 18.1).
ಬೌಲಿಂಗ್: ಮಾರ್ಕಸ್ ಸ್ಟೊಯಿನಿಸ್ 3–0–19–1; ಮೊಹ್ಸಿನ್ ಖಾನ್ 4–0–36–2; ನವೀನ್-ಉಲ್-ಹಕ್ 3.5–0–15–1; ಮಯಂಕ್ ಯಾದವ್ 3.1–0–35–1; ರವಿ ಬಿಷ್ಣೋಯಿ 4–0–28–1; ದೀಪಕ್ ಹೂಡ 2–0–13–0.

ಲಖನೌ ಸೂಪರ್ ಜೈಂಟ್ಸ್ 19.2 ಓವರ್‌ಗಳಲ್ಲಿ 6ಕ್ಕೆ145

ರಾಹುಲ್ ಸಿ ನಬಿ ಬಿ ಪಾಂಡ್ಯ 28 (22ಎ, 4X3, 6X1)
ಅರ್ಶಿನ್ ಎಲ್‌ಬಿಡಬ್ಲ್ಯು ಬಿ ತುಷಾರ್ 0 (1)
ಸ್ಟೊಯಿನಿಸ್ ಸಿ ತಿಲಕ್ ಬಿ ನಬಿ 62 (45ಎ, 4X7, 6X2)
ದೀಪಕ್ ಸಿ ಬೂಮ್ರಾ ಬಿ ಪಾಂಡ್ಯ 18 (18ಎ, 4X2)
ಪೂರನ್ ಔಟಾಗದೇ 14 (14ಎ, 4X1)
ಟರ್ನರ್ ಬಿ ಕೋಯಿಝಿ 5 (9ಎ)
ಆಯುಷ್ ಬಡೋನಿ ರನ್‌ಔಟ್ (ಸಬ್ ನಮನ್/ಇಶಾನ್ 6 (6ಎ, 4X1)
ಕೃಣಾಲ್ ಔಟಾಗದೇ 1 (1ಎ)
ಇತರೆ: 11 (ಲೆಗ್ ಬೈ 4, ವೈಡ್ 7)
ವಿಕೆಟ್ ಪತನ: 1-1 (ಅರ್ಶಿನ್ ಕುಲಕರ್ಣಿ, 0.4), 2-59 (ಕೆ. ಎಲ್. ರಾಹುಲ್, 7.2), 3-99 (ದೀಪಕ್ ಹೂಡಾ, 13.1), 4-115 (ಮಾರ್ಕಸ್ ಸ್ಟೊಯಿನಿಸ್, 14.5), 5-123 (ಆ್ಯಸ್ಟನ್ ಟರ್ನರ್, 17.1), 6-133 (ಆಯುಷ್ ಬಡೋನಿ, 18.1)
ಬೌಲಿಂಗ್: ನುವಾನ್ ತುಷಾರ್ 4–0–30–1, ಜಸ್‌ಪ್ರೀತ್ ಬೂಮ್ರಾ 4–0–17–0, ಜೆರಾಲ್ಡ್ ಕೋಯಿಝಿ 3–0–29–1, ಪಿಯೂಷ್ ಚಾವ್ಲಾ 3–0–23–0, ಹಾರ್ದಿಕ್ ಪಾಂಡ್ಯ 4–0–26–2, ಮೊಹಮ್ಮದ್ ನಬಿ 1.2–0–16–1

ಪಂದ್ಯ ಶ್ರೇಷ್ಠ: ಮಾರ್ಕಸ್ ಸ್ಟೊಯಿನಿಸ್

ಫಲಿತಾಂಶ: ಲಖನೌ ಸೂಪರ್ ಜೈಂಟ್ಸ್ ತಂಡಕ್ಕೆ 4 ವಿಕೆಟ್ ಗೆಲುವು

ಇಂಡಿಯನ್ ಪ್ರೀಮಿಯರ್ ಲೀಗ್ ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
ರಾಜಸ್ಥಾನ ರಾಯಲ್ಸ್	9	8	1	16	0.694
ಕೋಲ್ಕತ್ತ ನೈಟ್ ರೈಡರ್ಸ್	9	6	3	12	1.096
ಲಖನೌ ಸೂಪರ್ ಜೈಂಟ್ಸ್	10	6	4	12	0.094
ಚೆನ್ನೈ ಸೂಪರ್ ಕಿಂಗ್ಸ್	9	5	4	10	0.810
ಸನ್‌ರೈಸರ್ಸ್ ಹೈದರಾಬಾದ್	9	5	4	10	0.075
ಡೆಲ್ಲಿ ಕ್ಯಾಪಿಟಲ್ಸ್	11	5	6	10	-0.442
ಗುಜರಾತ್ ಟೈಟನ್ಸ್	10	4	6	8	-1.113
ಪಂಜಾಬ್ ಕಿಂಗ್ಸ್	9	3	6	6	-0.187
ಮುಂಬೈ ಇಂಡಿಯನ್ಸ್	10	3	7	6	-0.272
ಆರ್‌ಸಿಬಿ (ಬೆಂಗಳೂರು)	10	3	7	6	-0.415

ಆರೆಂಜ್ ಕ್ಯಾಪ್: ವಿರಾಟ್ ಕೊಹ್ಲಿ, ಆರ್‌ಸಿಬಿ (500 ರನ್)

ಪರ್ಪಲ್ ಕ್ಯಾಪ್: ಜಸ್‌ಪ್ರೀತ್ ಬೂಮ್ರಾ, ಹರ್ಷಲ್ ಪಟೇಲ್, ಮುಸ್ತಫಿಜುರ್ (14 ವಿಕೆಟ್)

ಸೂಪರ್ ಕಿಂಗ್ಸ್‌ಗೆ ‘ಕಿಂಗ್ಸ್’ ಸವಾಲು

ಋತುರಾಜ್ ಬಳಗಕ್ಕೆ ಮತ್ತೊಂದು ಗೆಲುವಿನ ತವಕ

ಚೆನ್ನೈ (ಪಿಟಿಐ): ಮಹೇಂದ್ರಸಿಂಗ್ ಧೋನಿ ಅವರ ಮಾರ್ಗದರ್ಶನದಲ್ಲಿ ಪಳಗುತ್ತಿರುವ ಋತುರಾಜ್ ಗಾಯಕವಾಡ ನಾಯಕತ್ವದ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಬುಧವಾರ ಪಂಜಾಬ್ ಕಿಂಗ್ಸ್ ತಂಡವನ್ನು ಎದುರಿಸಲಿದೆ.

ಅಂಕಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿರುವ ಚೆನ್ನೈ ತಂಡಕ್ಕೆ ಅಗ್ರ ನಾಲ್ಕರಲ್ಲಿ ಸ್ಥಾನ ಗಟ್ಟಿಗೊಳಿಸಿಕೊಳ್ಳುವ ಛಲ ಇದೆ. ಅದೇ ಎಂಟನೇ ಸ್ಥಾನದಲ್ಲಿರುವ ಪಂಜಾಬ್ ತಂಡವು ತನ್ನ ಪಾಲಿನಲ್ಲಿ ಉಳಿದಿರುವ ಐದು ಪಂದ್ಯಗಳನ್ನೂ ಗೆದ್ದು ಪ್ಲೇ ಆಫ್ ಅವಕಾಶ ಗಿಟ್ಟಿಸಿಕೊಳ್ಳುವತ್ತ ಚಿತ್ತ ನೆಟ್ಟಿದೆ. ಆದರೆ ಚೆನ್ನೈ ತಂಡವು ತನ್ನ ನೆಲದಲ್ಲಿ ಅಷ್ಟು ಸುಲಭವಾಗಿ ಶರಣಾಗುವ ತಂಡವಲ್ಲ.

ತನ್ನ ಕಳೆದ ಪಂದ್ಯದಲ್ಲಿ ಬಲಿಷ್ಠ ಬ್ಯಾಟಿಂಗ್ ಪಡೆ ಇರುವ ಸನ್‌ರೈಸರ್ಸ್ ಹೈದರಾಬಾದ್ ಎದುರು ಗೆದ್ದ ರೀತಿಯೇ ಇದಕ್ಕೆ ಸಾಕ್ಷಿ. ಟೂರ್ನಿಯಲ್ಲಿ ದೊಡ್ಡ ದೊಡ್ಡ ಮೊತ್ತಗಳನ್ನು ಕಲೆಹಾಕಿದ್ದ ಸನ್‌ರೈಸರ್ಸ್ ತಂಡಕ್ಕೆ ಚೆಪಾಕ್ ಪಂದ್ಯದಲ್ಲಿ ಅಬ್ಬರಿಸಲು ಸಾಧ್ಯವಾಗಲಿಲ್ಲ. ಮಧ್ಯಮವೇಗಿ ತುಷಾರ್ ದೇಶಪಾಂಡೆ, ಮಥೀಷ ಪಥಿರಾಣ ಹಾಗೂ ಮುಸ್ತಫಿಜುರ್ ರೆಹಮಾನ್ ಅವರ ಬೌಲಿಂಗ್ ಮುಂದೆ ಹೈದರಾಬಾದ್ ಆಟಗಾರರು ಶರಣಾಗಿದ್ದರು.

ಪಂಜಾಬ್ ತಂಡದಲ್ಲಿ ಕಳೆದ ಪಂದ್ಯದಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ಎದುರು ಜಾನಿ ಬೇಸ್ಟೊ ಲಯಕ್ಕೆ ಮರಳಿ, ಶತಕ ಗಳಿಸಿದ್ದರು. ಚೇಸಿಂಗ್‌ನಲ್ಲಿ (262 ರನ್) ವಿಶ್ವ ದಾಖಲೆಯನ್ನೂ ಮಾಡಿತ್ತು. ಅ ಪಂದ್ಯದಲ್ಲಿ ಪ್ರಭಸಿಮ್ರನ್ ಸಿಂಗ್, ಶಶಾಂಕ್ ಸಿಂಗ್ ಕೂಡ ಅಬ್ಬರಿಸಿದ್ದರು. ತಂಡದ ಆಶುತೋಷ್ ಶರ್ಮಾ ಕೂಡ ಉತ್ತಮ ಲಯದಲ್ಲಿದ್ದಾರೆ. ಇವರೆಲ್ಲರನ್ನು ಕಟ್ಟಿಹಾಕುವ ಸವಾಲು ಚೆನ್ನೈ ಬೌಲಿಂಗ್ ಪಡೆಗೆ ಇದೆ.

ಶಿಖರ್ ಧವನ್ ಅನುಪಸ್ಥಿತಿಯಲ್ಲಿ ತಂಡ ಮುನ್ನಡೆಸುತ್ತಿರುವ ಸ್ಯಾಮ್ ಕರನ್, ವಿಶ್ವಕಪ್ ತಂಡದಲ್ಲಿ ಸ್ಥಾನ ಗಿಟ್ಟಿಸಿರುವ ಅರ್ಷದೀಪ್ ಸಿಂಗ್, ಹರ್ಷಲ್ ಪಟೇಲ್ ಹಾಗೂ ಕಗಿಸೊ ರಬಾಡ ಅವರು ಪಂಜಾಬ್ ತಂಡದ ಬೌಲಿಂಗ್ ವಿಭಾಗದ ಶಕ್ತಿಯಾಗಿದ್ದಾರೆ. ಉತ್ತಮ ಲಯದಲ್ಲಿರುವ ಚೆನ್ನೈನ ಋತುರಾಜ್, ಡ್ಯಾರಿಲ್ ಮಿಚೆಲ್, ಶಿವಂ ದುಬೆ ಹಾಗೂ ರವೀಂದ್ರ ಜಡೇಜ ಅವರನ್ನು ಕಟ್ಟಿಹಾಕುವ ಸವಾಲು ಇದೆ. ಅಜಿಂಕ್ಯ ರಹಾನೆ ಹಾಗೂ ಮೋಯಿನ್ ಅಲಿ ಅವರು ಲಯಕ್ಕೆ ಮರಳಿದರೆ ಚೆನ್ನೈ ಬ್ಯಾಟಿಂಗ್ ಮತ್ತಷ್ಟು ಬಲಿಷ್ಠವಾಗಲಿದೆ. ಕೊನೆಯ ಓವರ್‌ನಲ್ಲಿ ಸಿಕ್ಸರ್, ಬೌಂಡರಿ ಸಿಡಿಸುವ ಧೋನಿಯ ಆಟಕ್ಕೂ ತಡೆಯೊಡ್ಡುವ ಸವಾಲು ಬೌಲರ್‌ಗಳಿಗೆ ಇದೆ.



ಮಹೇಂದ್ರಸಿಂಗ್ ಧೋನಿ

ಪಂದ್ಯ ಆರಂಭ: ರಾತ್ರಿ 7.30

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಸಿನಿಮಾ ಆ್ಯಪ್

ರಾಣಾಗೆ ಒಂದು ಪಂದ್ಯದಿಂದ ಅಮಾನತು

ಕೋಲ್ಕತ್ತ (ಪಿಟಿಐ): ಕೋಲ್ಕತ್ತ ನೈಟ್ ರೈಡರ್ಸ್ ತಂಡದ ವೇಗಿ ಹರ್ಷಿತ್ ರಾಣಾ ಅವರಿಗೆ ಪಂದ್ಯದ ಶೇ 100ರಷ್ಟು ಶುಲ್ಕದ ಮೊತ್ತಕ್ಕೆ ಸಮನಾದ ದಂಡ ಹಾಗೂ ಒಂದು ಪಂದ್ಯದಿಂದ ಅಮಾನತು ಮಾಡಲಾಗಿದೆ.



ಹರ್ಷಿತ್ ರಾಣಾ

ಡೆಲ್ಲಿ ಕ್ಯಾಪಿಟಲ್ಸ್ ಎದುರಿನ ಪಂದ್ಯದಲ್ಲಿ ಅವರು ಐಪಿಎಲ್ ನೀತಿಸಂಹಿತೆ ಉಲ್ಲಂಘಿಸಿದ್ದಕ್ಕಾಗಿ ಈ ದಂಡ ಮತ್ತು ಶಿಕ್ಷೆ ವಿಧಿಸಲಾಗಿದೆ.

ಸೋಮವಾರ ನಡೆದ ಪಂದ್ಯದಲ್ಲಿ ರಾಣಾ ಎಸೆತದಲ್ಲಿ ಡೆಲ್ಲಿಯ ಅಭಿಷೇಕ್ ಪೊರೆಲ್ ಔಟಾದರು.

ಆಗ ರಾಣಾ ಅವರು ಅಭಿಷೇಕ್ ಅವರತ್ತ ಕೈಬೆರಳು ತೋರಿಸಿ ಪೆವಿಲಿಯನ್‌ಗೆ ಹೋಗು ಎಂದು ಸಂಜ್ಞೆ ಮಾಡಿದರು. ಇದನ್ನು ಅಶಿಸ್ತು ಎಂದು ಪರಿಗಣಿಸಿರುವ ರೆಫರಿ ದಂಡನೆಗೊಳಪಡಿಸಿದ್ದಾರೆ.

ಇದೇ ಟೂರ್ನಿಯಲ್ಲಿ ಕೆಲವು ದಿನಗಳ ಹಿಂದೆ ನಡೆದಿದ್ದ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡದ ಮಯಂಕ್ ಅಗರವಾಲ್ ವಿಕೆಟ್ ಪಡೆದಾಗಲೂ ರಾಣಾ ಫ್ಲೈಯಿಂಗ್ ಕಿಸ್ ಮಾಡಿದ್ದರು.

ಆಗಲೂ ಅವರಿಗೆ ಪಂದ್ಯದ ಸಂಭಾವನೆಯ ಶೇ 60ರಷ್ಟನ್ನು ದಂಡವಾಗಿ ವಿಧಿಸಲಾಗಿತ್ತು.

ಟಿ20 ಕ್ರಿಕೆಟ್: ಭಾರತಕ್ಕೆ ಬಾಂಗ್ಲಾದೇಶ ವಿರುದ್ಧ ಜಯ

ಸಿಲ್ಹೆಟ್ (ಬಾಂಗ್ಲಾದೇಶ), (ಪಿಟಿಐ): ಎಡಗೈ ಸ್ಪಿನ್ನರ್ ರಾಧಾ ಯಾದವ್ (19ಕ್ಕೆ3) ಮತ್ತು ದಯಾಳನ್ ಹೇಮಲತಾ (ಔಟಾಗದೇ 41, 24ಎ, 4x5, 6x2) ಅವರ ಉತ್ತಮ ಪ್ರದರ್ಶನದ ನೆರವಿನಿಂದ ಭಾರತ ತಂಡ ಮಂಗಳವಾರ ನಡೆದ ಮಹಿಳೆಯರ ಎರಡನೇ ಟಿ20 ಪಂದ್ಯದಲ್ಲಿ ಬಾಂಗ್ಲಾದೇಶ ತಂಡವನ್ನು ಸೋಲಿಸಿತು. ಮಳೆಯಿಂದಾಗಿ ಡಕ್ವರ್ಥ್ ಲೂಯಿಸ್ ನಿಯಮದಡಿ ಇತ್ಯರ್ಥವಾದ ಪಂದ್ಯದಲ್ಲಿ ಭಾರತ 19 ರನ್‌ಗಳಿಂದ ಗೆಲುವು ಪಡೆಯಿತು.

ಮೊದಲು ಬ್ಯಾಟ್ ಮಾಡಲು ನಿರ್ಧರಿಸಿದ ಆತಿಥೇಯರು, ಭಾರತದ ಸ್ಪಿನ್ ದಾಳಿಗೆ ಸಿಲುಕಿ 20 ಓವರುಗಳಲ್ಲಿ 119 ರನ್‌ಗಳಿಗೆ ಆಲೌಟ್ ಆದರು. ರಾಧಾ ಅವರಿಗೆ ಬೆಂಬಲ ನೀಡಿದ ಆಫ್ ಸ್ಪಿನ್ನರ್‌ಗಳಾದ ದೀಪ್ತಿ ಶರ್ಮಾ ಮತ್ತು ಶ್ರೇಯಾಂಕಾ ಪಾಟೀಲ ಅವರು ತಲಾ ಎರಡು ವಿಕೆಟ್ ಪಡೆದರು.

ಬಾಂಗ್ಲಾ ಪರ ಆರಂಭ ಆಟಗಾರ್ತಿ ಮುರ್ಷಿದಾ ಖಾತುನ್ ಅತ್ಯಧಿಕ ರನ್– 49 ಎಸೆತಗಳಲ್ಲಿ 46 ರನ್ ಗಳಿಸಿದರು.

ಭಾರತ ತಂಡ, ಶಫಾಲಿ ವರ್ಮಾ ಅವರ ವಿಕೆಟ್ ಬೇಗನೇ ಕಳೆದುಕೊಂಡರೂ, ಹೇಮಲತಾ ಬಿರುಸಿನ ಆಟವಾಡಿ 24 ಎಸೆತಗಳಲ್ಲಿ 41 ರನ್ ಸಿಡಿಸಿದರು. ಭಾರತ 1 ವಿಕೆಟ್‌ಗೆ 47 ರನ್ ಗಳಿಸಿದ್ದಾಗ ಎರಡನೇ ಬಾರಿ ಮಳೆಯಿಂದ ಪಂದ್ಯಕ್ಕೆ ಅಡ್ಡಿಯಾಯಿತು. ನಂತರ ಆಟ ಮುಂದುವರಿಯಲಿಲ್ಲ. ಆ ವೇಳೆ ಭಾರತ ಡಕ್ವರ್ಥ್ –ಲೂಯಿಸ್ ನಿಯಮದ ಪ್ರಕಾರ 19 ರನ್‌ಗಳಿಂದ ಮುಂದಿತ್ತು.

ಭಾರತ ವನಿತೆಯರು ಐದು ಪಂದ್ಯಗಳ ಸರಣಿಯಲ್ಲಿ 2–0 ಮುನ್ನಡೆ ಸಾಧಿಸಿದರು.

ಸ್ಕೋರುಗಳು: ಬಾಂಗ್ಲಾದೇಶ: 20 ಓವರುಗಳಲ್ಲಿ 119 (ಮುರ್ಷಿದಾ ಖಾತುನ್ 46, ಶೋಭನಾ ಮೊಸ್ತಾರಿ 19, ರಿತು ಮೋನಿ 20; ದೀಪ್ತಿ ಶರ್ಮಾ 14ಕ್ಕೆ2, ಪೂಜಾ ವಸ್ತ್ರಾಕರ್ 21ಕ್ಕೆ1, ಶ್ರೇಯಾಂಕಾ ಪಾಟೀಲ 24ಕ್ಕೆ2, ರಾಧಾ ಯಾದವ್ 19ಕ್ಕೆ3); ಭಾರತ: (ಪರಿಷ್ಕೃತ ಗುರಿ: 5.2 ಓವರುಗಳಲ್ಲಿ 29) 5.2 ಓವರುಗಳಲ್ಲಿ 1 ವಿಕೆಟ್‌ಗೆ 47(ಸ್ಮೃತಿ ಮಂಧಾನ ಔಟಾಗದೇ 5, ಡಿ.ಹೇಮಲತಾ ಔಟಾಗದೇ 41; ಮರೂಫಾ ಅಖ್ತರ್ 11ಕ್ಕೆ1). **ಪಂದ್ಯದ ಆಟಗಾರ್ತಿ:** ಡಿ.ಹೇಮಲತಾ

ವಿಶ್ವ ಕೆಡೆಟ್ ಚೆಸ್: ಶರ್ವಾನಿಕಾಗೆ ಎರಡು ಪದಕ

ಚೆನ್ನೈ (ಪಿಟಿಐ): ಎಂಟು ವರ್ಷ ವಯಸ್ಸಿನ ಎ.ಎಸ್. ಶರ್ವಾನಿಕಾ, ಅಲ್ಬೇನಿಯಾದ ಡುರೆಸ್‌ನಲ್ಲಿ ಫಿಡೆ ನಡೆಸಿದ ವಿಶ್ವ ಕೆಡೆಟ್ ರ‍್ಯಾಪಿಡ್ ಮತ್ತು ಬ್ಲಿಟ್ಸ್ ಚೆಸ್ ಟೂರ್ನಿಯ ಬಾಲಕಿಯರ 10 ವರ್ಷದೊಳಗಿನವರ ವಿಭಾಗದಲ್ಲಿ ಚಿನ್ನ ಮತ್ತು ಬೆಳ್ಳಿಯ ಪದಕ ಗೆದ್ದುಕೊಂಡಿದ್ದಾಳೆ.

ಶರ್ವಾನಿಕಾ 10 ವರ್ಷದೊಳಗಿನ ಬಾಲಕಿಯರ ರ‍್ಯಾಪಿಡ್ ವಿಭಾಗದಲ್ಲಿ ಚಿನ್ನದ ಪದಕ ಮತ್ತು ಬ್ಲಿಟ್ಜ್ ವಿಭಾಗದಲ್ಲಿ ಬೆಳ್ಳಿ ಪದಕ ಗಳಿಸಿದ್ದಾಳೆ.

ಏಪ್ರಿಲ್ 25 ರಿಂದ 29ರವರೆಗೆ ನಡೆದ ಟೂರ್ನಿಯಲ್ಲಿ 43 ದೇಶಗಳ 375 ಮಂದಿ ಸ್ಪರ್ಧಿಗಳು ರ‍್ಯಾಪಿಡ್ ವಿಭಾಗದಲ್ಲಿ ಮತ್ತು 336 ಸ್ಪರ್ಧಿಗಳು ಬ್ಲಿಟ್ಜ್ ವಿಭಾಗದಲ್ಲಿ ಭಾಗವಹಿಸಿದ್ದರು.

ಈಕೆ, ಚೆನ್ನೈನ ಹಟ್ಸನ್ ಚೆಸ್ ಅಕಾಡೆಮಿಯಲ್ಲಿ ತರಬೇತಿಯಲ್ಲಿದ್ದಾಳೆ. ಗ್ರ್ಯಾಂಡ್ ಮಾಸ್ಟರ್ ವಿಷ್ಣು ಪ್ರಸನ್ನ ಇಲ್ಲಿ ಕೋಚ್ ಆಗಿದ್ದಾರೆ.